ಮಾನವಿಕ ಕರ್ಣಾಟಕ

ಸಂಪುಟ ೩೨

ಸಂಚಿಕೆ ೩ ಮತ್ತು ೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು ೫೭೦ ೦೦೬
೨೦೦೩

ಮಾನವಿಕ ಕರ್ಣಾಟಕ

ಸಂಪುಟ ೩೨ ಸಂಚಿಕೆ ೩ ಮತ್ತು ೪

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೨

MANAVIKA KARNATAKA : A Kannada Quarterly of the University of Mysore, Volume 32, No. 3 and 4 ; Edited by Prof. Ambalike Hiriyanna and Dr. R. Ramakrishna, Published by the Director, Prasaranga, University of Mysore, Manasagangotri, Mysore - 570 006.

ಪ್ರಧಾನ ಸಂಪಾದಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ,
ಮೈಸೂರು ೫೭೦೦೦೬

ಸಂಪಾದಕರು

ಪ್ರೊ. ಅಂಬಳಿಕೆ ಹಿರಿಯಣ್ಣ
ಡಾ. ಆರ್. ರಾಮಕೃಷ್ಣ

ಮುದ್ರಕರು
ನಿರ್ದೇಶಕರು
ಮೈ.ವಿ.ವಿ. ಮುದ್ರಣಾಲಯ, ಮಾನಸಗಂಗೋತ್ರಿ
ಮೈಸೂರು ೫೭೦೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ನಾಟಕ' ಪತ್ರಿಕೆಯ ಸಂಪುಟ -32, ಸಂಚಿಕೆ 3 ಮತ್ತು 4 ಇದೀಗ ಹೊರಬರುತ್ತಿದೆ. ಪ್ರಸಾರಾಂಗ ಪ್ರಕಟಿಸುತ್ತಿರುವ ಮೂರು ವಿದ್ವತ್ ಪತ್ರಿಕೆಗಳನ್ನು ಸಕಾಲದಲ್ಲಿ ಹೊರತಂದು ಆಸಕ್ತ ಓದುಗರಿಗೆ ಉಪಯುಕ್ತವೆನಿಸುವ ದಿಕ್ಕಿನಲ್ಲಿ ನಾವು ಪ್ರಯತ್ನ ಶೀಲರಾಗಿದ್ದೇವೆ. ಮಾನವಿಕ ಕರ್ನಾಟಕದ ಮೂಲಕ ವ್ಯಾಪಕವಾದ ಮಾನವಿಕ ವಿಷಯಗಳ ಕುರಿತು ಅನೇಕ ಬಗೆಯ ವಿದ್ವತ್ಪೂರ್ಣವಾದ ಲೇಖನಗಳು ಓದುಗರ ಕೈ ಸೇರುತ್ತಿರುವುದು ಸಂತೋಷದ ವಿಚಾರ.

ವಿಶ್ವವಿದ್ಯಾನಿಲಯದ ಸರ್ವತೋಮುಖ ಬೆಳವಣಿಗೆಯ ಬಗೆಗೆ ದೂರದೃಷ್ಟಿಯುಳ್ಳ, ಸಕಾರಾತ್ಮಕ ಚಿಂತನಶೀಲರಾದ ಮತ್ತು ನೆಚ್ಚಿನ ಕುಲಪತಿಗಳಾದ ಪ್ರೊ. ಎಸ್.ಎನ್.ಹೆಗ್ಡೆಯವರ ಕ್ರಿಯಾಶೀಲತೆ, ಆಡಳಿತಾತ್ಮಕ ವಿಚಾರಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಹಂತಗಳಲ್ಲೂ ವಿಶ್ವಾಸದಿಂದ ನೆರವಾಗುವ ಕುಲಸಚಿವರಾದ ಶ್ರೀ ಎನ್.ಡಿ. ತಿವಾರಿ ಅವರ ಪ್ರೋತ್ಸಾಹ ನಮ್ಮ ಪ್ರಸಾರಾಂಗದ ಕೆಲಸಕಾರ್ಯಗಳಿಗೆ ಚೇತೋಹಾರಿಯಾಗಿದೆ. ಈ ಇಬ್ಬರು ಮಹನೀಯರನ್ನು ಈ ಹೊತ್ತು ವಿಶೇಷವಾಗಿ ಸ್ಮರಿಸುವೆ.

ಈ ಸಂಚಿಕೆಗಳನ್ನು ಹೊರತರುವ ಹೊಣೆಗಾರಿಕೆ ಹೊತ್ತು ಕಾರ್ಯನಿರ್ವಹಿಸಿದ ಸಂಪಾದಕರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಮತ್ತು ಡಾ. ರಾಮಕೃಷ್ಣ ಅವರಿಗೂ, ಡಿ.ಟಿ.ಪಿ. ವಿನ್ಯಾಸ ಮಾಡಿಕೊಟ್ಟ ಯಶಸ್ ಗ್ರಾಫಿಕ್ಸ್‌ನ ಶ್ರೀಮತಿ ಎಸ್. ಆಶಾಲತಾ ಅವರಿಗೂ, ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ವಿಶ್ವವಿದ್ಯಾನಿಲಯ ಅಚ್ಚುಕೂಟದ ಸಿಬ್ಬಂದಿವರ್ಗದವರಿಗೂ, ಪ್ರಸಾರಾಂಗದ ಕಾರ್ಯ ಚಟುವಟಿಕೆಗಳನ್ನು ಶ್ರದ್ಧಾಸಕ್ತಿಗಳಿಂದ ನಿರ್ವಹಿಸುತ್ತಿರುವ ಕಾರ್ಯಭಾರಿ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಸಹೋದ್ಯೋಗಿ ಮಿತ್ರರಿಗೂ ನಾನು ಆಭಾರಿಯಾಗಿರುತ್ತೇನೆ.

ಪ್ರೊ. ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕ
ಪ್ರಸಾರಾಂಗ

ಸಂಪಾದಕೀಯ

ಮಾನವಿಕ ಕರ್ನಾಟಕದ ಈ ಸಂಚಿಕೆ ಮಾನವಿಕ ಹಾಗೂ ಸಾಮಾಜಿಕ ವಿಜ್ಞಾನ ವಿಷಯಗಳ ವಿವೇಚನೆ-ಮರು ವಿವೇಚನೆಗಳೊಡನೆ ನಿಮ್ಮ ಕೈಯಲ್ಲಿದೆ. ಕೌಟಿಲ್ಯನ ಆರ್ಥಿಕ ವಿಚಾರಗಳಿಂದ ತೊಡಗಿ ಹವ್ಯಕರು, ಮಹಮ್ಮದೀಯ ಶಾಸನಗಳು, ಜ್ಯೋತಿಷ ವಿಚಾರಗಳು, ಬೇಟೆ ಆಚರಣೆ ಇವೇ ಮುಂತಾದ ಮಹತ್ವದ ವಿಷಯಗಳ ಚರ್ಚೆ ಇಲ್ಲಿದೆ.

'ಕೌಟಿಲ್ಯನ ಆರ್ಥಿಕ ವಿಚಾರಗಳು' ಎಂಬ ಲೇಖನದಲ್ಲಿ ಎಂ.ಜಿ. ಬಸವರಾಜ ಅವರು ಕೌಟಿಲ್ಯನು ಪ್ರಸ್ತಾಪಿಸಿರುವ ಆರ್ಥಿಕ ವಿಚಾರಗಳ ಸ್ಥೂಲ ವಿಶ್ಲೇಷಣೆ ನಡೆಸಿದ್ದಾರೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ವಿಶೇಷವಾಗಿ ಚರ್ಚಿತವಾಗಿರುವ ಸಾರ್ವಜನಿಕ ಹಣಕಾಸಿನ ಬಗೆಗೆ ಕೌಟಿಲ್ಯನ ವಿಚಾರಗಳನ್ನು ವಿಶ್ಲೇಷಿಸುವ ಯತ್ನವೂ ಇಲ್ಲಿದೆ. ಇವತ್ತಿನ ಬದಲಾದ ಸನ್ನಿವೇಶದಲ್ಲೂ ಕೌಟಿಲ್ಯನ ಅರ್ಥಶಾಸ್ತ್ರ ಹೇಗೆ ಪ್ರಸ್ತುತ ಎಂಬುದನ್ನು ಲೇಖಕರು ವಿಚಾರ ಮಾಡಿರುವುದು ಗಮನಾರ್ಹ. ಕೌಟಿಲ್ಯನು ಅರ್ಥಶಾಸ್ತ್ರವನ್ನು ರಚಿಸಿರುವುದು ಆ ಕಾಲದ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಕಾಲದ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕಾಗಿ ಎಂಬುದನ್ನು ಮನಗಂಡಾಗ ಕೌಟಿಲ್ಯನ ಆರ್ಥಿಕ ವಿಚಾರಗಳ ಮಹತ್ವವೇನೆಂಬುದು ಗೊತ್ತಾಗುತ್ತದೆ.

ಮಾವಿನಕುಳಿ ಶ್ರೀನಿವಾಸ ಅವರ 'ಹವ್ಯಕ ಉಪಸಂಸ್ಕೃತಿ : ಒಂದು ಪರಿಚಯ' ಲೇಖನ ಹವ್ಯಕ ಪದದ ನಿಷ್ಪತ್ತಿ, ಹವ್ಯಕರ ಮೂಲ, ಹವ್ಯಕರ ವೃತ್ತಿ ಮತ್ತು ಪರಂಪರೆ ಕುರಿತು ಗಂಭೀರವಾಗಿ ಚರ್ಚಿಸುತ್ತದೆ. ಅದರಲ್ಲೂ ಹವ್ಯಕ ವ್ಯುತ್ಪತ್ತಿ ಕುರಿತು ಸ್ವಾರಸ್ಯಕರವಾಗಿರುವ ಹಲವಾರು ಅಂಶಗಳನ್ನು ಗುರುತಿಸುವ ಪ್ರಯತ್ನ ಸ್ತುತ್ಯಾರ್ಹ. ಹವ್ಯಕ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟಿರುವ ಈ ಬರಹದಲ್ಲಿ ಹವ್ಯಕ ಸಮುದಾಯದ ಚಾರಿತ್ರಿಕ ಮತ್ತು ಮೂಲ ಸಾಮಾಜಿಕ ಹಿನ್ನೆಲೆಯನ್ನು ವಿವೇಚಿಸಲಾಗಿದೆ.

ಆರ್. ರಾಮಕೃಷ್ಣ ಅವರ 'ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಹಂಪನಾ ಅವರ ಕೊಡುಗೆ' ಲೇಖನ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಗಂಭೀರ ಅಧ್ಯಯನ ನಡೆಸಿರುವ ಹಂಪನಾ ಅವರ ಭಾಷಾವಿಜ್ಞಾನ ಕೃತಿಗಳು ಮತ್ತು ಬರಹಗಳನ್ನು ಕುರಿತು ಸ್ಥೂಲವಾಗಿ ಪರಿಚಯಿಸುವ ಪ್ರಯತ್ನ ಮಾಡುತ್ತದೆ. ಹಂಪನಾ ಅವರ ದ್ರಾವಿಡ ಭಾಷಾವಿಜ್ಞಾನ(೧೯೬೬)ಭಾಷಾವಿಜ್ಞಾನ(೧೯೬೮)ಭಾರತದ ಭಾಷಾ ಸಮಸ್ಯೆ (೧೯೬೮) ದ್ರಾವಿಡ ಸಂಖ್ಯಾ ವಾಚಕಗಳು (೧೯೭೨)ಭಾಷೆ (೧೯೭೩) ಭಾಷಾ ವಿಜ್ಞಾನಿಗಳು (೧೯೮೦) - ಈ ಮುಂತಾದ ಗ್ರಂಥಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

ಕೆ. ಮೊಹಮ್ಮದ್ ಶರೀಫ್ ಅವರ 'ಮೈಸೂರು ಜಿಲ್ಲೆಯ ಮಹಮ್ಮದೀಯ ಶಾಸನಗಳು' ಬೇರೆ ಬೇರೆ ಭಾಷೆಗಳಲ್ಲಿ ಲಭ್ಯವಿರುವ ಮಹಮ್ಮದೀಯ ಶಾಸನಗಳ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಘಟನಾವಳಿಗಳ ಅಧ್ಯಯನಕ್ಕೆ ಈ ಶಾಸನಗಳು ಮಹತ್ವದ ಆಕರಗಳಾಗಿವೆ. ಇತರ ಭಾಷೆಗಳ ಶಾಸನಗಳಂತೆ ಮಹಮ್ಮದೀಯ ಶಾಸನಗಳು ಕೂಡ ಅಂದಿನ ಭಾಷೆ, ಜನಜೀವನ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಲು ಸಹಕಾರಿಯಾಗಿವೆ.

" 'ಮುದ್ರಾರಾಕ್ಷಸ' ದಲ್ಲಿ ಜ್ಯೋತಿಷದ ವಿಚಾರಗಳು" ಎಂಬ ಎಸ್.ಎನ್. ಭಟ್ಟ ಅವರ ಬರಹ ಸಂಸ್ಕೃತ ಕವಿ ವಿಶಾಖದತ್ತನು ಮುದ್ರಾರಾಕ್ಷಸ ನಾಟಕದಲ್ಲಿ ಪ್ರಸ್ತಾಪಿಸಿರುವ ಜ್ಯೋತಿಷ್ಯದ ಹಲವಾರು ಸಂಗತಿಗಳ ಸ್ಥೂಲ ಪರಿಚಯ ಮತ್ತು ವಿವೇಚನೆ ನಡೆಸುತ್ತದೆ. ವಿಶಾಖದತ್ತನು ತನ್ನ ನಾಟಕದಲ್ಲಿ ಜ್ಯೋತಿಃಶಾಸ್ತ್ರದ ಕೆಲವು ವಿಚಾರಗಳನ್ನು ಅಳವಡಿಸಿಕೊಂಡಿದ್ದುದು, ಅವನು ಸ್ವಯಂ ಜ್ಯೋತಿಷಿಯಾಗಿದ್ದುದು, ಜ್ಯೋತಿಷದ ಯಥಾರ್ಥ ಜ್ಞಾನವನ್ನು ಅವಲಂಬಿಸಿಯೇ ಆ ನಾಟಕವನ್ನು ರಚಿಸಿದ ಎಂಬುದನ್ನು ಮನಗಂಡಾಗ ಜ್ಯೋತಿಷ್ಯದ ಮಹತ್ವ ಏನೆಂಬುದು ತಿಳಿಯುತ್ತದೆ.

ಟಿ. ಗೋವಿಂದರಾಜು ಅವರ 'ಜಾಗತೀಕರಣವೂ ಬೇಟೆ ಆಚರಣೆಯೂ' ಎಂಬ ಬರಹ ಒಂದು ಗಮನಾರ್ಹ ಅಧ್ಯಯನವಾಗಿದ್ದು ಜಾಗತೀಕರಣದ ಈ ಸಂದರ್ಭದಲ್ಲಿ ಬೇಟೆ ಆಚರಣೆಯ ಪ್ರಸ್ತುತತೆ ಕುರಿತು ಚರ್ಚಿಸುತ್ತದೆ. ಬಹು ಹಿಂದಿನಿಂದಲೂ ಬೇಟೆ ಹೇಗೆ ವ್ಯಾಪಕವಾಗಿ ಆಚರಣೆಯಲ್ಲಿತ್ತು ಎಂಬುದನ್ನು ಪ್ರಸಕ್ತ ವಿದ್ಯಮಾನಗಳ ಹಿನ್ನೆಲೆಯಲ್ಲಿ ವಿವೇಚಿಸುತ್ತಾ ಲೇಖಕರು ಇವತ್ತಿನ ಸಂದರ್ಭದಲ್ಲಿ ಬೇಟೆ ಒಂದು ಆಚರಣೆಯಾಗಿ ಉಳಿದು ಬರುವುದು ಕೂಡ ದುಸ್ತರ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ನಾವು ತುರ್ತಾಗಿ ವಿದಾಯ ಹೇಳಬೇಕಾಗಿರುವ ಎಷ್ಟೋ ಕಲೆಗಳಿರುವಂತೆ ಪರಿಸರ ವಿರೋಧಿ, ಜೀವ ವಿರೋಧಿ ಮನೋಪ್ರವೃತ್ತಿಯ ಬೇಟೆ ಸಂಪ್ರದಾಯ ಕೂಡ ಉಳಿಯುವುದು ಅನಗತ್ಯ ಎಂದು ಇಲ್ಲಿ ಪ್ರತಿಪಾದಿಸಿರುವುದು ಸಮರ್ಪಕವಾಗಿಯೇ ಇದೆ.

೧೨ನೇ ಶತಮಾನದಲ್ಲಿ ನಡೆದಂಥ ಧಾರ್ಮಿಕ ಚಳವಳಿಯು ಸಮಾಜದ ನಾನಾ ವೃತ್ತಿಯ ಜನರನ್ನು ಈ ಚಳವಳಿ ಆಕರ್ಷಿಸಿದ ಫಲವಾಗಿ ಜನಪದ ಸಾಹಿತ್ಯದ ಮೇಲೆ ಅದರ ಪರಿಣಾಮವಾಯಿತು. ಇಂದಿಗೂ ಉತ್ತರ ಕರ್ನಾಟಕದ ಜನಪದರ ಭಾವಕೋಶದಲ್ಲಿ ಅಂದಿನ ಶರಣರ ಕ್ರಾಂತಿ ಸ್ಥಾಯಿಯಾಗಿದೆ. ಶರಣ ಶರಣೆಯರ ಕಥೆಗಳು - ಹಂತಿಯ ಹಾಡು, ಡೊಳ್ಳಿನ ಹಾಡು, ಬಯಲಾಟ, ದಪ್ಪಿನಾಟ ಮೊದಲಾದ ಸಂದರ್ಭಗಳಲ್ಲಿ ಸಾಹಿತ್ಯವಾಗಿ ಶೋಭಿಸಿವೆ. ವೈ.ಸಿ. ಭಾನುಮತಿ ಅವರ 'ಜನಪದ ಸಾಹಿತ್ಯದಲ್ಲಿ ಶರಣೆಯರು' ಎಂಬ ಅಭ್ಯಾಸಪೂರ್ಣ ಬರಹ ಜನಪದರು ಶರಣೆಯರನ್ನು ನಿರ್ವಚಿಸಿಕೊಂಡ ರೀತಿಯನ್ನು ತಿಳಿಯುವ ಒಂದು ಗಂಭೀರ ಪ್ರಯತ್ನವಾಗಿದೆ. ಶಿವಶರಣೆಯರ ಪೈಕಿ ಕೋಳೂರು ಕೊಡಗೂಸು, ಅಕ್ಕಮಹಾದೇವಿ, ನೀಲಾಂಬಿಕೆ, ಬಿಜ್ಜಮಹಾದೇವಿ, ಕಲ್ಯಾಣಮ್ಮ, ಮಲ್ಲಿಗಮ್ಮ, ಸಾತವ್ವ, ದಾನವ್ವ, ಕೇತಲದೇವಿ, ಗಂಗಾದೇವಿ, ಚಂಗಳವ್ವ, ಅನಲಾಯಿ, ನಂಬಿಯಕ್ಕ, ಅಕ್ಕನಾಗಮ್ಮ, ಮಲುಹಣಿ, ಹೇಮರೆಡ್ಡಿಮಲ್ಲಮ್ಮ-ಈ ಕೆಲವು ಶರಣೆಯರ ಬದುಕು ಮತ್ತು ವ್ಯಕ್ತಿತ್ವ ಜನಪದರಿಗೆ ಸ್ಫೂರ್ತಿ ನೀಡಿರುವುದು ಸ್ಪಷ್ಟ. ಜನಪದ ಸಾಹಿತ್ಯದಲ್ಲಿ ಶರಣೆಯರನ್ನು ಕುರಿತ ಅಧ್ಯಯನದಿಂದ ವೀರಶೈವ ಧರ್ಮವು ಸಮಾಜದ ಮೂಲೆ ಮುಡುಕಲುಗಳನ್ನು ತಲುಪಿದ ರೀತಿಯನ್ನು ಅರಿಯಬಹುದು.

ಸ್ಥಳನಾಮಗಳ ಅಧ್ಯಯನ ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಆಸಕ್ತರನ್ನು ಆಕರ್ಷಿಸುತ್ತಿದೆ. 'ಕುಡ್ಲು ಕುಂದೂರು:ಜಾನಪದೀಯ ಅಧ್ಯಯನ'ಚನ್ನರಾಯಪಟ್ಟಣದ ಕುಡ್ಲುಕುಂದೂರಿನ ಜನಪದ ನಂಬಿಕೆಗಳು, ಸ್ಥಳನಾಮ, ಐತಿಹ್ಯಗಳನ್ನು ದಾಖಲಿಸುವ ಒಂದು ಸ್ತುತ್ಯ ಪ್ರಯತ್ನ. ಈ ಪ್ರದೇಶದಲ್ಲಿರುವ ಇನ್ನೂ ಕೆಲವು ಸ್ಥಳಗಳ ಬಗೆಗಿನ ಜನರ ನಂಬಿಕೆ, ಅವುಗಳೊಂದಿಗೆ ಥಳಕು ಹಾಕಿಕೊಂಡ ಐತಿಹ್ಯಗಳನ್ನು ಇಲ್ಲಿ ಗಮನಿಸಲಾಗಿದೆ. ಚಾಮರಾಜಪುರ, ಹುಚ್ಚಮ್ಮನ ಬಾವಿ, ಕುಂದೂರಿನ ರಂಗಮಂಟಪ, ಕುಂದೂರಿನ

ಬಸವಣ್ಣನ ಗುಡಿ, ಚೆನ್ನಕೇಶವ ದೇವಸ್ಥಾನ, ಮಲ್ಲಿಕಾರ್ಜುನ ದೇವಾಲಯ, ಕುಂದೂರು ಮಠ, ಕುಂದೂರಿನ ಕುದುರೆ, ರಂಗನಾಥಸ್ವಾಮಿ ದೇವಾಲಯ, ಮೆಳೆಯಮ್ಮ, ವೀರಮಾಸ್ತಿಕಲ್ಲು, ಬೃಂದಾವನ - ಈ ಒಂದೊಂದರ ಬಗೆಗೂ ಜನಪದರು ನೀಡುವ ವಿವರಗಳನ್ನು ದಾಖಲಿಸಿ ಕುಂದೂರು ಸುತ್ತಿನ ಜನರು ಹಾಡುವ ಕೆಲವು ಆಯ್ದ ಗೀತೆಗಳನ್ನು ಸಂಕಲಿಸಿ ಕೊಡಲಾಗಿದೆ.

ನಂಜಯ್ಯನವರ 'ಜನಪದ ದಾಸ ಸಂಪ್ರದಾಯ' ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಳಿಗಿರಿ ರಂಗನ ದಲಿತ ಭಕ್ತರಲ್ಲಿ ಪ್ರಚಲಿತವಿರುವ ದಾಸ ಸಂಪ್ರದಾಯವನ್ನು ಪರಿಚಯ ಮಾಡಿಕೊಡುತ್ತದೆ. ದಾಸರು ತೀರಿಕೊಂಡಾಗ ನಡೆಸಲಾಗುವ ಸಂಸ್ಕಾರಗಳು, ಬಿಳಿಗಿರಿ ರಂಗಸ್ವಾಮಿ ಜಾತ್ರೆ ಮತ್ತು ಹರಿಸೇವೆ ಕುರಿತ ವಿವರಗಳು ಸಮಗ್ರವಾಗಿವೆ. ದಾಸ ಸಂಪ್ರದಾಯದ ಮೂಲಕ ಕಾಡು ಮತ್ತು ನಾಡಿನ ಸಮಾಜಗಳ ನಡುವೆ ನಡೆಯುವ ಸಾಂಸ್ಕೃತಿಕ ವಿನಿಮಯದ ಪ್ರಸ್ತಾಪವೂ ಇಲ್ಲಿದೆ.

ಎಚ್.ಟಿ. ಸರೋಜ ಅವರ 'ಮಕ್ಕಳ ಜನಪದ ಆಟಗಳು' ಇಂದಿನ ಮಕ್ಕಳು ವಿದ್ಯುನ್ಮಾನ ಆಟಗಳ ಸೆಳೆತಕ್ಕೆ ಬಲಿಯಾಗಿ ಜನಪದ ಆಟಗಳಿಂದ ದೂರ ಸರಿಯುತ್ತಿರುವ ಸಂದರ್ಭದಲ್ಲಿ ಜನಪದ ಆಟಗಳ ಪ್ರಸ್ತುತತೆಯನ್ನು ಕುರಿತು ಚರ್ಚಿಸುತ್ತದೆ. ಜನಪದ ಆಟಗಳ ಬಗೆಗೆ ಮಕ್ಕಳಲ್ಲಿ ತೀವ್ರ ಒಲವು ಮೂಡಿಸುವ ಯತ್ನ ನಡೆಯಬೇಕೆಂಬ ಕಳಕಳಿ ಇಲ್ಲಿದೆ.

ಒಟ್ಟಿನಲ್ಲಿ ಈ ಸಂಚಿಕೆಯ ಲೇಖನಗಳು ಸಮಾಜವಿಜ್ಞಾನಗಳ ನಿಕಾಯದ ವಿದ್ಯಾರ್ಥಿಗಳ ಅರಿವನ್ನು ವಿಸ್ತರಿಸುವ ಉತ್ತಮ ಪ್ರಯತ್ನಗಳು ಎಂದು ಹೇಳಬಹುದು.

ಅಂಬಳಿಕೆ ಹಿರಿಯಣ್ಣ
ಆರ್. ರಾಮಕೃಷ್ಣ

ಪರಿವಿಡಿ

ಈ ಸಂಚಿಕೆಯ ಬರಹಗಳು

ಕೌಟಿಲ್ಯನ ಆರ್ಥಿಕ ವಿಚಾರಗಳು

ಡಾ.ಎ.ಜೆ. ಬಸವರಾಜ

ಕೌಟಿಲ್ಯನ ಅರ್ಥಶಾಸ್ತ್ರವು, ಇಂದು ನಾವು ಅಧ್ಯಯನ ಮಾಡುತ್ತಿರುವ ಆರ್ಥಿಕ ಸಿದ್ಧಾಂತಗಳ, ಅಂಕಿ ಅಂಶಗಳ ಆಧಾರದ ಮೇಲೆ ವಿಶ್ಲೇಷಣೆ ಮಾಡಿರುವ ಆರ್ಥಿಕ ವಿಚಾರಗಳ ಅರ್ಥಶಾಸ್ತ್ರಕ್ಕಿಂತ ಭಿನ್ನವಾಗಿದೆ. ಆಡಂಸ್ಮಿತ್, ಆಲ್‌ಫ್ರೆಡ್ ಮಾರ್ಷಲ್ ಮುಂತಾದ ಕ್ಲಾಸಿಕಲ್ ಪಂಥದ ಮತ್ತು ನವ ಕ್ಲಾಸಿಕಲ್ ಪಂಥದ ಅರ್ಥಶಾಸ್ತ್ರಜ್ಞರು ರೂಪಿಸಿದ ರಾಜಕೀಯ ಆರ್ಥಿಕತೆ (Political Economy) ಯನ್ನು ಸ್ವಲ್ಪಮಟ್ಟಿಗೆ ಹೋಲುತ್ತದೆಯಾದರೂ ಅದಕ್ಕಿಂತಲೂ ಭಿನ್ನವಾಗಿದೆ. ಕೌಟಿಲ್ಯನ ಅರ್ಥಶಾಸ್ತ್ರವು ನೀತಿ, ರಾಜಕೀಯ, ನ್ಯಾಯಶಾಸ್ತ್ರ, ಧಾರ್ಮಿಕ, ತತ್ವಶಾಸ್ತ್ರ, ಸಾಮಾಜಿಕ, ಸಾಂಸ್ಕೃತಿಕ ವಿಷಯಗಳನ್ನೂ ಆರ್ಥಿಕ ವಿಷಯಗಳೊಂದಿಗೆ ಒಳಗೊಂಡಿದೆ. ಕೌಟಿಲ್ಯನ ಜೀವಿತದ ಕಾಲದಲ್ಲಿ ಆರ್ಥಿಕ ವಿಚಾರಗಳು ರಾಜಕೀಯ ವಿಚಾರದ ಭಾಗವಾಗಿದ್ದವು; ಅರ್ಥಶಾಸ್ತ್ರವು ಈಗಿರುವಂತೆ ಪ್ರತ್ಯೇಕವಾದ ಅಧ್ಯಯನದ ವಿಷಯವಾಗಿರಲಿಲ್ಲ. ರಾಜಕೀಯ ತಂತ್ರಗಳು, ಕೌಟುಂಬಿಕ ವಿಷಯಗಳು, ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಿಕೆ ಬಗ್ಗೆ ಅನೇಕ ವಿಚಾರಗಳು ಇಲ್ಲಿ ತುಂಬಿವೆ. ಈ ವಿಚಾರಗಳಿಗೆ ಕೌಟಿಲ್ಯನ ಅರ್ಥಶಾಸ್ತ್ರವು ಎಷ್ಟು ಪ್ರಸಿದ್ಧಿ ಪಡೆದಿದೆಯೋ ಹಾಗೆಯೇ ಸಾರ್ವಜನಿಕ ಹಣಕಾಸು, ಆರ್ಥಿಕ ಅಭಿವೃದ್ಧಿ, ದುರ್ಬಲವರ್ಗದ ಏಳಿಗೆಗೆ ರೂಪಿಸಬೇಕಾದ ಅನೇಕ ವಿಚಾರಗಳ ಬಗೆಗೂ ಪ್ರಸಿದ್ಧಿ ಪಡೆದಿದೆ.

ಅರ್ಥಶಾಸ್ತ್ರ ಒಂದು ನಿರಂತರ ಪ್ರಕ್ರಿಯೆ. ಆರ್ಥಿಕ ವಿಚಾರಗಳ ಸಿದ್ಧಾಂತ ಮತ್ತು ಪ್ರಯೋಗವಾಗಿದೆ ಎಂದು ಕೌಟಿಲ್ಯ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಪಟ್ಟಣ ಮತ್ತು ಹಳ್ಳಿಗಳ ಸರಕಾರ, ಕೋರ್ಟು ಕಛೇರಿಗಳು, ಮಹಿಳೆಯರ ಹಕ್ಕುಬಾಧ್ಯತೆಗಳು, ವೃದ್ಧರು ಮತ್ತು ಅನಾಥರ ರಕ್ಷಣೆ, ವಿವಾಹದ ವಿಧಿ ವಿಧಾನಗಳು ಹಾಗೂ ವಿವಾಹ ವಿಚ್ಛೇದನೆ, ರಕ್ಷಣಾ ಪಡೆಗಳು, ರಾಜತಾಂತ್ರಿಕತೆ, ಕೃಷಿ, ಕೈಗಾರಿಕೆಗಳ ವಿಚಾರಗಳು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿವೆ. ವಿಶೇಷವಾಗಿ ಸಾರ್ವಜನಿಕ ಹಣಕಾಸಿನ ಬಗ್ಗೆ ಅನೇಕ ವಿಚಾರಗಳನ್ನು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ಕೌಟಿಲ್ಯನು ಪ್ರಸ್ತಾಪಿಸಿರುವ ಮುಖ್ಯವಾದ ಆರ್ಥಿಕ ವಿಚಾರಗಳ ವಿಶ್ಲೇಷಣೆ ಮಾಡಲಾಗಿದೆ.

೧ ಭೌತಿಕ ಸಂಪತ್ತು

ಭೌತಿಕ ಸಂಪತ್ತು ಮತ್ತು ಇದರ ಸ್ವರೂಪ ಉದ್ದೇಶಗಳ ಬಗೆಗಿನ ಕೌಟಿಲ್ಯನ ವಿಶ್ಲೇಷಣೆ ಇಂದಿಗೂ ಪ್ರಸ್ತುತವೆನಿಸುತ್ತದೆ. ಕೌಟಿಲ್ಯನ ಪ್ರಕಾರ ಸಂಪತ್ತು ನಾಲ್ಕು ಲಕ್ಷಣಗಳನ್ನು ಹೊಂದಿರುತ್ತದೆ. ಅವುಗಳೆಂದರೆ ನೈಜತೆ, ಬಳಸಲ್ಪಡುವಿಕೆ, ವರ್ಗಾವಣೆ ಮತ್ತು ಬಳಕೆಯ ಶಕ್ತಿ. ಸರಕುಗಳ ಸಂಪತ್ತು, ಗಳಿಸಿದ ಸಂಪತ್ತು, ಬಳಸುವ ಸಂಪತ್ತು, ವ್ಯವಹಾರದ ಸಂಪತ್ತು, ವರ್ಗಾವಣೆ ಸಂಪತ್ತು ಎಂದು ವಿವಿಧ ಸಂಪತ್ತುಗಳ ವಿಶ್ಲೇಷಣೆಯನ್ನು ಕೌಟಿಲ್ಯ ಮಾಡುತ್ತಾನೆ. ಶ್ರಮ ಮತ್ತು ಅರಣ್ಯ

ಸಂಪನ್ಮೂಲಗಳು ಸಹ ಸಂಪತ್ತುಗಳೇ ಎನ್ನುತ್ತಾನೆ. ಸಂಪತ್ತಿನ ಉದ್ದೇಶವೇನು ? ಇದನ್ನು ಏಕೆ ಮತ್ತು ಹೇಗೆ ಗಳಿಸಬೇಕು ? ಎಂಬುದಕ್ಕೆ ಕೌಟಿಲ್ಯನ ಉತ್ತರ ಈ ರೀತಿಯಿದೆ. ವಿದ್ಯಾಭ್ಯಾಸವನ್ನು ಹೇಗೆ ಸತತವಾಗಿ ಮಾಡುತ್ತಾ ವಿದ್ಯಾವಂತರಾಗುತ್ತೇವೆಯೋ ಹಾಗೆಯೇ ಸಂಪತ್ತನ್ನು ಸಣ್ಣ ಕಣವೆಂದು ಉದಾಸೀನ ಮಾಡದೇ ಕಣ ಕಣವಾಗಿ ಸತತವಾಗಿ ಸಂಗ್ರಹಿಸಬೇಕು. ಪ್ರತಿ ಕಣಕ್ಕೂ ಗಮನ ನೀಡಿ ಸಂಪತ್ತು ಗಳಿಸಬೇಕು. ಸಂಪತ್ತಿನ ಗಳಿಕೆ ಯಾವಾಗಲೂ ಲಾಭದಾಯಕವಾದುದು ಮತ್ತು ಒಳ್ಳೆಯದು. ಒಳ್ಳೆಯ ಸ್ನೇಹಿತರಿರಬೇಕು, ಒಳ್ಳೆಯ ಹೆಂಡತಿಯಿರಬೇಕು, ಒಳ್ಳೆಯ ಮಕ್ಕಳಿರಬೇಕು, ಕೇಳಿದವರಿಗೆ ಸಾಕಷ್ಟು ಕೊಟ್ಟು, ಸಮಾಜದಲ್ಲಿ ಸ್ಥಾನಮಾನಗಳನ್ನು ಗಳಿಸಬೇಕು ಎಂಬ ಅಪೇಕ್ಷೆಯಿರುವುದು ಸಹಜ. ಇವುಗಳನ್ನು ಈಡೇರಿಸಿಕೊಳ್ಳಲು ಸಾಕಷ್ಟು ಸಂಪತ್ತು ಗಳಿಸಿಕೊಳ್ಳಬೇಕು. ಪುರುಷಾರ್ಥಗಳ ಸಾಧನೆಗಾಗಿಯೂ ಸಂಪತ್ತಿನ ಸಂಗ್ರಹವಿರಬೇಕು. ಅಷ್ಟೇ ಅಲ್ಲ, ದೇಶದಲ್ಲಿ ತಲೆದೋರುವ ಪ್ರಕೃತಿ ವಿಕೋಪಗಳಿಂದ ಕ್ಷಾಮ ಡಾಮರಗಳಿಂದ ಜನರನ್ನು ರಕ್ಷಿಸಲು ಸರಕಾರದ ಖಜಾನೆಯಲ್ಲಿ ಸಾಕಷ್ಟು ಸಂಪತ್ತು ಸಂಗ್ರಹವಾಗಿರಬೇಕು ಎಂಬುದು ಕೌಟಿಲ್ಯನ ಸಲಹೆ.

೨ ವರ್ತ

ಕೌಟಿಲ್ಯ ಅರ್ಥಶಾಸ್ತ್ರ ಬರೆಯುವ ವೇಳೆಯಲ್ಲಿ ಅರ್ಥಶಾಸ್ತ್ರಕ್ಕೆ ವರ್ತ ಎಂಬ ಹೆಸರಿತ್ತು. ವರ್ತವನ್ನು ಕೌಟಿಲ್ಯ ಅರ್ಥಶಾಸ್ತ್ರವೆಂದು ಕರೆದನು. ರಾಷ್ಟ್ರದ ಆರ್ಥಿಕತೆಯ ವಿಜ್ಞಾನವೇ ವರ್ತ. ವ್ಯವಸಾಯ, ಪಶುಸಂಗೋಪನೆ, ವ್ಯಾಪಾರ ವರ್ತದಲ್ಲಿ ಸೇರುತ್ತವೆ. ವರ್ತದ ಜೊತೆ ಕೌಟಿಲ್ಯ ಆರ್ಥಿಕ, ರಾಜಕೀಯ, ನೀತಿ, ನ್ಯಾಯ ಮತ್ತು ರಕ್ಷಣೆಗೆ ಸಂಬಂಧಪಟ್ಟ ವಿಚಾರಗಳನ್ನು ಸೇರಿಸಿ ಅರ್ಥಶಾಸ್ತ್ರ ರಚಿಸಿದ.

೩ ಕೃಷಿ ಮತ್ತು ಪಶುಸಂಗೋಪನೆ

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೃಷಿ ಮತ್ತು ಪಶುಸಂಗೋಪನೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಉತ್ತಮ ಬೆಳೆಯನ್ನು ಹೇಗೆ ಪಡೆಯಬಹುದು ಎಂಬುದರ ಬಗ್ಗೆ ತುಂಬಾ ಕ್ರಮಬದ್ಧವಾದ ವಿಶ್ಲೇಷಣೆ ದೊರೆಯುತ್ತದೆ. ಸುಧಾರಿತ ಬೀಜಗಳ ಆಯ್ಕೆ, ಗೊಬ್ಬರದ ಬಳಕೆ, ಬೆಳೆ ನಾಟಿಯ ಹದ, ಅಧಿಕ ಇಳುವರಿ ವಿಧಾನ, ಬೆಳೆಗಳ ಪರ್ಯಾಯದಂತಹ ವಿವರಗಳು ಇಂದಿಗೂ ಪ್ರಸ್ತುತವೆನಿಸುತ್ತವೆ. ಕೌಟಿಲ್ಯನ ಪ್ರಕಾರ ಕೃಷಿಯ ಅಭಿವೃದ್ಧಿಗೆ ಪಶುಸಂಗೋಪನೆ ಬಹಳ ಮುಖ್ಯ. ಕಾರಣ, ರೈತನಿಗೆ ಬೇಕಾದ ಪೌಷ್ಠಿಕ ಹಾಲು ಮತ್ತು ಹಾಲಿನ ಉತ್ಪನ್ನಗಳು, ಬೆಳೆಗಳಿಗೆ ಬೇಕಾದ ಗೊಬ್ಬರ, ಉಳಲು ಎತ್ತುಗಳು ಪಶುಸಂಗೋಪನೆಯಿಂದ ದೊರೆಯುತ್ತವೆ. ಹೆಚ್ಚುವರಿ ಆದಾಯವೂ ಪಶುಸಂಗೋಪನೆಯಿಂದ ದೊರೆಯುತ್ತದೆ. ಕೃಷಿ, ಪಶುಸಂಗೋಪನೆ ಜೊತೆಗೆ ಅರಣ್ಯಾಭಿವೃದ್ಧಿಗೂ ಕೌಟಿಲ್ಯ ಪ್ರಾಮುಖ್ಯತೆ ನೀಡುತ್ತಾನೆ. ಕೃಷಿ, ಪಶುಸಂಗೋಪನೆ ಹಾಗೂ ಅರಣ್ಯಾಭಿವೃದ್ಧಿಯಿಂದ ಹೇರಳವಾಗಿ ಚಿನ್ನ, ಬೆಳ್ಳಿ ಮತ್ತು ಇತರ ಅಮೂಲ್ಯ ಪದಾರ್ಥಗಳನ್ನು ಗಳಿಸಬಹುದು ಎಂದು ಕೌಟಿಲ್ಯ ತಿಳಿಸುತ್ತಾನೆ.

೪ ವ್ಯಾಪಾರ

ಚಿನ್ನ ಹಾಗೂ ಚಿನ್ನದ ಗಟ್ಟಿಗಳು ಉತ್ಪಾದನಾ ಸಂಪತ್ತಿನ ಮೂಲ ಸಾಧನ. ವ್ಯಾಪಾರವು

ಕೈಗಾರಿಕಾ ಬಂಡವಾಳದ ಮೂಲವಾಗಿದೆ. ದೇಶದಲ್ಲಿ ವ್ಯಾಪಾರ ಅಭಿವೃದ್ಧಿಯಾಗಬೇಕಾದರೆ ವಿವಿಧ ಉತ್ಪಾದನಾ ಕ್ಷೇತ್ರದಲ್ಲಿ ಅಧಿಕ ಉತ್ಪಾದನೆಯಾಗಬೇಕು. ವ್ಯಾಪಾರಿಗಳಿಗೆ ವಿವಿಧ ರೀತಿಯ ಪ್ರೋತ್ಸಾಹ ನೀಡಬೇಕು. ವ್ಯಾಪಾರವು ಅಧಿಕ ಪ್ರಮಾಣದಲ್ಲಿ ಬೆಳವಣಿಗೆ ಹೊಂದಲು ಸಾರಿಗೆ ಮತ್ತು ಸಂಪರ್ಕಸಾಧನಗಳು ಅವಶ್ಯಕ. ಸರಕುಗಳನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಗಾಣಿಕೆ ಮಾಡುವಾಗ ವ್ಯಾಪಾರಿಗಳಿಗೆ ರಕ್ಷಣೆ ಒದಗಿಸುವುದು ಆಡಳಿತಗಾರರ ಕರ್ತವ್ಯ. ಹಾಗೆಯೇ ದಾರಿಮಧ್ಯೆ ವ್ಯಾಪಾರಿಗಳು ವಿಶ್ರಮಿಸಿಕೊಳ್ಳಲು ವಿಶ್ರಾಂತಿ ಮಂದಿರಗಳನ್ನು ಕಟ್ಟಿಸಬೇಕು. ಸರಕುಗಳನ್ನು ಸಂಗ್ರಹಿಸಲು ಮಳಿಗೆಗಳೂ ಸಹ ಅವಶ್ಯಕವೆಂದಿದ್ದಾನೆ ಕೌಟಿಲ್ಯ. ವ್ಯಾಪಾರಿಗಳು ಸುಂಕದ ಕಟ್ಟೆಗಳಲ್ಲಿ ಸುಂಕದ ಅಧಿಕಾರಿಗಳಿಗೆ ಪ್ರವೇಶ ತೆರಿಗೆಗಳನ್ನು ನೀಡಬೇಕು. ಇಂಥ ತೆರಿಗೆಗಳ ಮೂಲಕ ಸರಕಾರವು ಅಧಿಕ ಪ್ರಮಾಣದಲ್ಲಿ ಆದಾಯ ಸಂಗ್ರಹಿಸಬೇಕು. ಯಾವ ವಸ್ತುಗಳಿಗೆ ಏಕಸ್ವಾಮ್ಯ ವ್ಯಾಪಾರದ ಅವಶ್ಯಕತೆ ಇದೆಯೋ ಅಂತಹ ವಸ್ತುಗಳನ್ನು ಸರಕಾರ ಉತ್ಪಾದಿಸಬೇಕು. ಆ ವಸ್ತುಗಳು ಜನರಿಗೆ ಅತೀ ಅವಶ್ಯಕವಾದುದರಿಂದ ಅವು ಜನರಿಗೆ ಸುಲಭವಾಗಿ ಲಭ್ಯವಾಗುವ ವ್ಯವಸ್ಥೆ ಮಾಡಬೇಕು. ಸ್ಥಳೀಯ ಜನರ ಅವಶ್ಯಕತೆಗಳು ಪೂರೈಸಿದ ನಂತರ ಉಳಿಕೆ ವಸ್ತುಗಳನ್ನು ಬೇರೆ ಕಡೆಯ ಪ್ರದೇಶಗಳಿಗೆ ಮಾರಾಟ ಮಾಡಲು ಅವಕಾಶ ಮಾಡಿಕೊಡಬಹುದು. ಮಾರಾಟವಾಗುವ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಅವುಗಳಿಗೆ ಬರುವ ಬೇಡಿಕೆ ಮತ್ತು ಮಾರಾಟ ಮಾಡುವವರು ಪೂರೈಸುವ ಪೂರೈಕೆಗಳಿಗೆ ಬೆಲೆ ನಿಗದಿ ಮಾಡಬೇಕು. ಬೇಡಿಕೆ ಮತ್ತು ಪೂರೈಕೆಗಳ ಮೇಲೆ ನಿರ್ಬಂಧವಿಲ್ಲದ ಮುಕ್ತ ಮಾರುಕಟ್ಟೆಗೆ ಅವಕಾಶವಿರಬೇಕು. ಸರಕಾರ ವಸ್ತುಗಳ ಬೆಲೆ ನಿಗದಿ ಮಾಡಬಾರದು ಎಂಬುದಾಗಿ ಕೌಟಿಲ್ಯ ಸಲಹೆ ನೀಡಿದ್ದಾನೆ.

೫ ಸಾರ್ವಜನಿಕ ಹಣಕಾಸು

ಆರ್ಥಿಕ ವಿಚಾರಗಳ ಸಂಬಂಧದಲ್ಲಿ ಕೌಟಿಲ್ಯನು ಸಾರ್ವಜನಿಕ ಹಣಕಾಸಿಗೆ ಹೆಚ್ಚಿನ ಗಮನ ನೀಡಿದ್ದಾನೆ. ಸರಕಾರದ ಆಡಳಿತ, ರಕ್ಷಣೆ, ಅಭಿವೃದ್ಧಿ ಕಾರ್ಯಗಳು ಮತ್ತು ಇತರ ಚಟುವಟಿಕೆಗಳಿಗೆ ಹಣಕಾಸು ಬೇಕು. ಸರಕಾರದ ಖಜಾನೆಯು ಹಣಕಾಸಿನಿಂದ ತುಂಬಿರಬೇಕು. ಇದರಿಂದ ಯಾವುದಕ್ಕೂ ಕೊರತೆ ಉಂಟಾಗುವುದಿಲ್ಲ. ಖಜಾನೆಗೆ ಸಾಕಷ್ಟು ಪ್ರಮಾಣದಲ್ಲಿ ವರಮಾನವು ಹರಿದು ಬರುವಂತಾಗಲು ಕೈಗಾರಿಕೆ, ಅರಣ್ಯ, ವ್ಯವಸಾಯ, ಗಣಿಗಾರಿಕೆ, ಮೀನುಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಬೇಕು. ಹಾಗೆಯೇ ವಿವಿಧ ಕ್ಷೇತ್ರಗಳ ಮೇಲೆ, ಜನವರ್ಗದ ಮೇಲೆ ಯೋಗ್ಯತೆಗೆ ತಕ್ಕಂತೆ ತೆರಿಗೆ ವಿಧಿಸಿ ವರಮಾನ ಸಂಗ್ರಹಿಸಬೇಕು. ತೆರಿಗೆಯ ಮೂಲಕ ಆದಾಯ ಸಂಗ್ರಹಣೆ ಮಾಡುವುದರಿಂದ ಸರಕಾರದ ಬೇರೆ ಬೇರೆ ಇಲಾಖೆಗಳ ಆಡಳಿತ ನಿರ್ವಹಣೆಗೆ ತಗಲುವ ವೆಚ್ಚವನ್ನು ಭರಿಸಲು ಸಾಧ್ಯವಾಗುತ್ತದೆ. ಆಡಳಿತಗಾರರು ಉಳಿತಾಯದ ಕಡೆಗೆ ಗಮನಹರಿಸಬೇಕು. ಕೊರತೆಯ ಹಣಕಾಸು ಉಂಟಾದಾಗ ಕಡ್ಡಾಯವಾಗಿ ಜನರಿಂದ ಹಣವನ್ನು ಸಾಲರೂಪದಲ್ಲಿ ಸಂಗ್ರಹಿಸಬಹುದು.

ವರಮಾನ ಸಂಗ್ರಹಣೆಯಲ್ಲಿ ತೆರಿಗೆ ಅತ್ಯಂತ ಮಹತ್ವವಾಗಿದ್ದು ಮೂರು ರೀತಿಯ ತೆರಿಗೆಗಳನ್ನು ವಿಧಿಸಬಹುದು. ಅವುಗಳೆಂದರೆ,

೧ ರಾಷ್ಟ್ರದಲ್ಲಿ ಉತ್ಪಾದಿಸಿದ ವಸ್ತುಗಳ ಮೇಲೆ ವಿಧಿಸಿದ ತೆರಿಗೆಗಳು.

೨ ರಾಜಧಾನಿಯಲ್ಲಿ ಉತ್ಪಾದಿಸಿದ ವಸ್ತುಗಳ ಮೇಲೆ ವಿಧಿಸಿದ ತೆರಿಗೆಗಳು.

೩ ರಫ್ತು ಮತ್ತು ಆಮದು ಸುಂಕಗಳು.

ಆಮದುಗಳ ಮೇಲೆ ತೆರಿಗೆ ವಿಧಿಸಬೇಕಾದರೆ ಆ ವಸ್ತುಗಳ ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳಬೇಕು. ಅದರ ಆಧಾರದ ಮೇಲೆ ತೆರಿಗೆ ವಿಧಿಸಬೇಕು. ಯಾವ ವಿದೇಶಿ ವಸ್ತುಗಳು ರಾಷ್ಟ್ರ ಜನತೆಯ ಯೋಗಕ್ಷೇಮಕ್ಕೆ ಹಾನಿಕರವಾಗುತ್ತವೆಯೋ ಮತ್ತು ಯಾವ ವಸ್ತುಗಳು ಅನಗತ್ಯವೋ ಅಂತಹ ವಸ್ತುಗಳ ಆಮದನ್ನು ನಿರುತ್ತೇಜನಗೊಳಿಸಲು ಅವುಗಳ ಮೇಲೆ ಅಧಿಕ ಭಾರದ ತೆರಿಗೆಯನ್ನು ವಿಧಿಸಬೇಕು. ಅಮೂಲ್ಯವಾದ ಮತ್ತು ಎಲ್ಲಿಯೂ ದೊರಕದ ವಿಶೇಷ ವಸ್ತುಗಳ ಮೇಲೆ ಅಧಿಕ ತೆರಿಗೆ ಹಾಕದೆ ಅವುಗಳ ಆಮದನ್ನು ಉತ್ತೇಜನಗೊಳಿಸಬಹುದು.

ತೆರಿಗೆಯನ್ನು ವಿಧಿಸುವ ಬಗೆಗೆ ಈ ಕೆಳಗಿನ ಮಾರ್ಗದರ್ಶಿ ತತ್ವಗಳನ್ನು ಕೌಟಿಲ್ಯ ನೀಡಿದ್ದಾನೆ

೧ ತೆರಿಗೆಯನ್ನು ವರ್ಷಕ್ಕೆ ಒಂದು ಸಾರಿ ವಿಧಿಸಬೇಕು. ತೆರಿಗೆಯು ಜನರ ಮೇಲೆ ಹೊರೆಯಾಗಬಾರದು.

೨ ತೆರಿಗೆ ನೀಡುವ ಸಾಮರ್ಥ್ಯವನ್ನು ನೋಡಿಕೊಂಡು ಜನರ ಮೇಲೆ ತೆರಿಗೆ ವಿಧಿಸಬೇಕು.

೩ ತೆರಿಗೆಯು, ಜನರನ್ನು ಆರ್ಥಿಕವಾಗಿ ದುರ್ಬಲರನ್ನಾಗಿ ಮಾಡಬಾರದು.

ತೆರಿಗೆಯು ಜನರ ಆರ್ಥಿಕ ಯೋಗ್ಯಾನುಸಾರವಾಗಿ ಎಲ್ಲರೂ ಹೊರುವಂತಿರಬೇಕು. ಸರಕಾರದ ವೆಚ್ಚವನ್ನು ಭರಿಸಲು ಅಧಿಕ ವರಮಾನದ ಅವಶ್ಯಕವಿರುತ್ತದೆ. ಆರ್ಥಿಕ ಶಕ್ತಿಯಿರುವ ಶ್ರೀಮಂತರು ಅಧಿಕ ತೆರಿಗೆ ಸರಕಾರಕ್ಕೆ ನೀಡುವುದರಿಂದ ಅವರಿಗೆ ಸಮಾಜದಲ್ಲಿ ಹೆಚ್ಚಿನ ಮನ್ನಣೆ ನೀಡಬೇಕು ಎನ್ನುತ್ತಾನೆ ಕೌಟಿಲ್ಯ.

ಸಾರ್ವಜನಿಕ ವೆಚ್ಚಗಳ ಪಟ್ಟಿಯನ್ನು ಕೌಟಿಲ್ಯ ಈ ರೀತಿ ಮಾಡುತ್ತಾನೆ. ೧. ರಾಷ್ಟ್ರೀಯ ರಕ್ಷಣೆ ೨. ಸಾರ್ವಜನಿಕ ಆಡಳಿತ ೩. ಸಚಿವರ ಸಂಬಳ ಸಾರಿಗೆಗಳು ೪. ದಾಸ್ತಾನು ಮಳಿಗೆಗಳ ನಿರ್ವಹಣಾ ವೆಚ್ಚಗಳು ೫. ಅಮೂಲ್ಯ ವಸ್ತುಗಳನ್ನು ಕೊಳ್ಳಲು ಸರಕಾರವು ಮಾಡುವ ವೆಚ್ಚ. ಈ ವೆಚ್ಚಗಳನ್ನು ಮಾಡಿದ ನಂತರವೂ ಹಣ ಉಳಿದರೆ ಅದನ್ನು ಯುದ್ಧದ ಪೆಟ್ಟಿಗೆಗೆ ಮತ್ತು ಖಜಾನೆಗೆ ಸಂದಾಯ ಮಾಡಬೇಕು.

ಬೆಲೆ ನಿಯಂತ್ರಣ

ಬೆಲೆ ನಿಯಂತ್ರಣ ಮುಕ್ತ ವ್ಯಾಪಾರವನ್ನು ನಿರ್ಬಂಧಿಸುವ ಉದ್ದೇಶವನ್ನು ಹೊಂದಿರುವಂತಿಲ್ಲ. ಇದರ ಮುಖ್ಯ ಉದ್ದೇಶ ಮೋಸಗಾರ, ದುರಾಸೆಯ ವರ್ತಕರನ್ನು ನಿರ್ಬಂಧಿಸುವುದಾಗಿದೆ. ಅನುಭೋಗೀ ವಸ್ತುಗಳ ಮೇಲೆ ವಿಪರೀತ ಲಾಭದ ಸೀಮಾಂತತೆಯನ್ನು ನಿಗದಿ ಮಾಡಿ ಅನುಭೋಗಿಗಳು ಅಧಿಕ ಬೆಲೆ ನೀಡುವಂತೆ ಮಾಡುವುದರಿಂದ ಅವರ ಯೋಗಕ್ಷೇಮ ಕುಂಠಿತವಾಗುತ್ತದೆ. ಇದನ್ನು ಸರಕಾರದ ಬೆಲೆ ನಿಯಂತ್ರಣ ನೀತಿ ನಿರ್ಬಂಧಿಸುತ್ತದೆ. ಆಹಾರ ಧಾನ್ಯಗಳು ಇತರೇ ಅಗತ್ಯವಸ್ತುಗಳ ವ್ಯಾಪಾರವನ್ನು ಸರಕಾರದಿಂದ ಅಂಗೀಕೃತಗೊಂಡ ವ್ಯಾಪಾರಿಗಳು ಮಾತ್ರ ಮಾಡಬೇಕು. ಲಾಭ ಸೀಮಾಂತತೆಯು ಶೇ. ೮ ರಷ್ಟಿರಬಹುದು. ಆಮದು ವಸ್ತುಗಳ

ಮೇಲೆ ಲಾಭ ಸೀಮಾಂತತೆ ಶೇ. ೧೦ ರವರೆಗೂ ಇರಬಹುದು. ಈ ಬೆಲೆ ನಿಯಂತ್ರಣ ಕಾಯಿದೆ ಉಲ್ಲಂಘಿಸುವವರಿಗೆ ಉಗ್ರ ಶಿಕ್ಷೆ ವಿಧಿಸಬೇಕು ಎನ್ನುತ್ತಾನೆ ಕೌಟಿಲ್ಯ.

ನಗರ ಯೋಜನೆ

ನಗರಗಳು ಶುಚಿತ್ವ, ಅಚ್ಚುಕಟ್ಟುತನವನ್ನು ಕಾಯ್ದುಕೊಳ್ಳಬೇಕು. ರಸ್ತೆಗಳು ವಿಶಾಲವಾಗಿರಬೇಕು. ಬೆಂಕಿ ಅನಾಹುತವನ್ನು ನಿಯಂತ್ರಿಸಲು ನಗರ ಯೋಜನೆಯಲ್ಲಿ ಬಿಗಿ ನಿಯಂತ್ರಣವಿರಬೇಕು. ಸಾಮ್ರಾಜ್ಯದ ರಾಜಧಾನಿ ಪಟ್ಟಣವನ್ನು ನಿರ್ಮಿಸಬೇಕಾದರೆ ಸಾಕಷ್ಟು ಎಚ್ಚರಿಕೆಗಳನ್ನು ತೆಗೆದುಕೊಂಡು ಮುನ್ನಡೆಯಬೇಕು. ರಕ್ಷಣೆಯ ದೃಷ್ಟಿಯಿಂದ ಮತ್ತು ಪರಸ್ಪರ ಅಗತ್ಯಗಳ ಪೂರೈಕೆಯ ದೃಷ್ಟಿಯಿಂದ ಗುಂಪಾಗಿರಬೇಕು.

ಜನಸಂಖ್ಯಾ ವಿಚಾರ

ಕೌಟಿಲ್ಯನ ಕಾಲದಲ್ಲಿ ಜನಸಂಖ್ಯೆ ಸ್ಫೋಟಗೊಂಡಿರಲಿಲ್ಲ. ಹುಟ್ಟಿದವರಲ್ಲಿ ಎಲ್ಲರೂ ಉಳಿಯುತ್ತಿರಲಿಲ್ಲ. ಅಪೌಷ್ಟಿಕತೆ, ಬಡತನ, ಆರೋಗ್ಯ ರಕ್ಷಣಾ ಕ್ರಮಗಳ ಕೊರತೆಗಳಿದ್ದವು. ವಿದ್ಯಾಭ್ಯಾಸ ಎಲ್ಲರಿಗೂ ದೊರೆಯುತ್ತಿರಲಿಲ್ಲ. ಶ್ರೀಮಂತರ ಜೀವನ ಚೆನ್ನಾಗಿದ್ದರೆ ಬಡವರದು ಈಗಿನಂತೆಯೇ ಶೋಚನೀಯವಾಗಿತ್ತು. ರೋಗರುಜಿನಗಳು, ಅಕಾಲ ಮರಣ, ಕ್ಷಾಮ ಡಾಮರಗಳು, ಪ್ರಕೃತಿಯ ವಿಕೋಪಗಳು, ಪದೇ ಪದೇ ಯುದ್ಧಗಳಾಗುತ್ತಿದ್ದುದರಿಂದ ಅಪಾರ ಸಾವು ನೋವುಗಳಾಗಿ ಜನಸಂಖ್ಯೆ ಕ್ಷೀಣಿಸುತ್ತಿತ್ತು. ಆದ್ದರಿಂದ ಆಗ ಜನಸಂಖ್ಯೆ ಹೆಚ್ಚಲು ಪ್ರೋತ್ಸಾಹವಿತ್ತು. ಜನಸಂಖ್ಯೆ ಹೆಚ್ಚಲು ಏನು ಮಾಡಬೇಕು ಎಂಬ ಬಗ್ಗೆ ಕೌಟಿಲ್ಯ ನಾನಾ ಸಲಹೆಗಳನ್ನು ನೀಡಿದ್ದಾನೆ.

ಗುಲಾಮಗಿರಿ

ಕೆಲಸದವರನ್ನು ಕೀಳಾಗಿ ನೋಡಬಾರದು ಎಂಬುದು ಕೌಟಿಲ್ಯನ ಅಭಿಮತ. ಸೇವಕರನ್ನು ಮನೆಯ ಮಕ್ಕಳಂತೆ ನೋಡಿಕೊಳ್ಳಬೇಕು. ಒಳ್ಳೆಯ ಸಂಭಾವನೆ ನೀಡಬೇಕು. ಇದು ನೈತಿಕತೆಯ ದೃಷ್ಟಿಯಿಂದ ಒಳ್ಳೆಯದು. ಸೇವಕರು ಸಹ ನೆಮ್ಮದಿ ಹೊಂದಿ ಶ್ರದ್ಧೆಯಿಂದ ಕೆಲಸ ಮಾಡಲು ಇದು ಸಹಾಯವಾಗುತ್ತದೆ ಎಂದು ಕೌಟಿಲ್ಯ ತಿಳಿಸುತ್ತಾನೆ.

ಸುಖೀ ರಾಜ್ಯ ಮತ್ತು ಸಾಮಾಜಿಕ ಸುಭದ್ರತಾ ಕಾರ್ಯಕ್ರಮಗಳು

ಸಮಸ್ತ ಪ್ರಜೆಗಳೂ ಸುಖಿ ಸಂತೋಷದಿಂದ ಇರುವಂತೆ ರಾಜ್ಯದ ನೀತಿ ಕಾರ್ಯಕ್ರಮಗಳು ರೂಪಿತವಾಗಬೇಕು. ಸಮಸ್ತಪ್ರಜೆಗಳಿಗೆ ಸಾಕಷ್ಟು ಪ್ರಮಾಣದಲ್ಲಿ ದವಸ ಧಾನ್ಯಗಳು ದೊರೆಯಬೇಕು. ಯಾರೂ ಸಹ ಆಹಾರ ಕೊರತೆಯಿಂದ ಬಳಲಬಾರದು. ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ರಾಷ್ಟ್ರದ ಸಂಪತ್ತು ವಿನಿಯೋಗವಾಗಬೇಕು. ಆಡಳಿತ ವ್ಯವಸ್ಥೆಯಲ್ಲಿ ವರ್ಗ ಸಂಘರ್ಷಕ್ಕೆ ಅವಕಾಶವಿರಬಾರದು. ಕೂಲಿಯು ಸಮಾನತೆ ಮತ್ತು ನ್ಯಾಯದ ಆಧಾರದ ಮೇಲೆ ನಿರ್ಧಾರವಾಗಬೇಕು. ಸಮಾಜದಲ್ಲಿ ಯಾವ ಹಂತದಲ್ಲೂ ಶೋಷಣೆಗೆ ಅವಕಾಶವಿರಬಾರದು. ಮಾಲೀಕನು ಕಾರ್ಮಿಕನನ್ನು ಜಮೀನುದಾರ ಉಳುವವನನ್ನು, ಬಂಡವಾಳದಾರ ಸಾಲಗಾರನನ್ನು ಶೋಷಿಸಬಾರದು. ಸಾಲದ ಮೇಲೆ ನ್ಯಾಯಯುತ ಬಡ್ಡಿ ವಿಧಿಸಬೇಕು. ಚಕ್ರಬಡ್ಡಿಗೆ ಸಮಾಜದಲ್ಲಿ ಅವಕಾಶವಿರಬಾರದು.

ಲಾಭವು ಉದ್ಯಮವನ್ನು ಕೈಗೊಂಡು ನಡೆಸುವ ಕಾರ್ಯಕ್ಕಾಗಿ ದೊರೆಯುವ ಸಂಭಾವನೆ, ಸಂಪತ್ತು ಕೆಲವೇ ಕೆಲವರಲ್ಲಿ ಕೇಂದ್ರೀಕೃತವಾಗಬಾರದು. ಜನರ ಯೋಗಕ್ಷೇಮವನ್ನು ವೃದ್ಧಿಪಡಿಸುವುದೇ ಸರಕಾರದ ಮುಖ್ಯ ಉದ್ದೇಶವಾಗಬೇಕು. ಯಾರಿಗೂ ಅನ್ಯಾಯವಾಗಬಾರದು. ಅಗತ್ಯವಿರುವವರಿಗೆ ಸಹಾಯಧನ ನೀಡಿ ಜನರ ವರಮಾನ ಹೆಚ್ಚಲು ಅನುಕೂಲವಾಗುವಂತೆ ಅವರು ವ್ಯಾಪಾರ, ವ್ಯವಸಾಯ, ಗಣಿಗಾರಿಕೆ, ಪಶುಸಂಗೋಪನೆಯಂತಹ ಚಟುವಟಿಕೆಗಳಲ್ಲಿ ತೊಡಗಲು ಪ್ರೋತ್ಸಾಹಿಸಬೇಕು.

ವ್ಯವಹಾರಗಳಲ್ಲಿ, ದೈನಂದಿನ ಚಟುವಟಿಕೆಗಳಲ್ಲಿ ಜನರ ಮಧ್ಯೆ ಉಂಟಾಗುವ ವಿವಾದಗಳನ್ನು ಪರಿಹರಿಸಲು ಪಂಚಾಯಿತಿಗಳು ಮತ್ತು ಗಿಲ್ಡ್ ಕೋರ್ಟ್‌ಗಳನ್ನು ರಚಿಸಬೇಕು. ನ್ಯಾಯವಂತರಿಗೆ ನ್ಯಾಯ ದೊರೆಯಬೇಕು. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ವೃಥಾ ಯಾರಿಗೂ ತೊಂದರೆಯಾಗಬಾರದು. ಹಣಕಾಸಿನ ವಹಿವಾಟುಗಳು, ಅಗತ್ಯ ಕೈಗಾರಿಕೆಗಳು, ಹಣ, ವಿನಿಮಯ, ಕಲಬೆರಕೆ, ವಂಚನೆಗಳು ಮುಂತಾದ ವಿಷಯಗಳ ಬಗೆಗೆ ಸರ್ಕಾರ ಕಾನೂನು ರಚಿಸಬೇಕು. ಜನರ ಆರ್ಥಿಕ ಸಮೃದ್ಧತೆಗೆ ರಾಜನೇ ಜವಾಬ್ದಾರನಾಗಬೇಕು.

ಕೌಟಿಲ್ಯನ ದೃಷ್ಟಿಯಲ್ಲಿ ಒಂದು ರಾಜ್ಯವೆಂದರೆ ಅಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಿರಬೇಕು. ಆ ರಾಜ್ಯದ ಉತ್ಪಾದನಾ ಕ್ಷೇತ್ರಗಳು ಮೂರು ಮಾರ್ಗದರ್ಶಿ ಸೂತ್ರಗಳ ಆಧಾರದ ಮೇಲೆ ಅಭಿವೃದ್ಧಿಯಾಗಬೇಕು. ಅವುಗಳೆಂದರೆ,

೧. ಸರಕಾರದ ಮಾಲೀಕತ್ವ ಮತ್ತು ನಿರ್ವಹಣೆಗೆ ಒಳಪಟ್ಟ ಕೈಗಾರಿಕೆಗಳು. ಉದಾಹರಣೆಗೆ : ಚಿನ್ನ, ಬೆಳ್ಳಿ, ಕಬ್ಬಿಣ ಮತ್ತು ಉಕ್ಕು, ಇತರ ಬೆಲೆ ಬಾಳುವ ಲೋಹಗಳು, ವಜ್ರದ ಕೈಗಾರಿಕೆಗಳು ಇತ್ಯಾದಿ. ಇವು ಒಂದು ರಾಜ್ಯವು ಸ್ವಾವಲಂಬೀ ರಾಜ್ಯವಾಗಲು ನೆರವಾಗುತ್ತವೆ.

೨. ಎರಡನೆಯದಾಗಿ ವ್ಯವಸಾಯ, ಜವಳಿ, ಪಶುಸಂಗೋಪನೆ, ಕರಕುಶಲ ಕೈಗಾರಿಕೆಗಳಂತಹವುಗಳನ್ನು ಖಾಸಗಿಯವರಿಗೆ ಬಿಡಬೇಕು.

೩. ಉತ್ಪಾದನೆ, ಹಂಚಿಕೆ, ಅನುಭೋಗ, ವಿನಿಮಯಗಳಂತಹ ಚಟುವಟಿಕೆಗಳು ನ್ಯಾಯೋಚಿತವಾಗಿ ನಡೆಯುತ್ತವೆಯೋ ಇಲ್ಲವೋ ಎಂಬುದನ್ನು ಆಡಳಿತಗಾರರು ನೋಡಿಕೊಳ್ಳಬೇಕು.

ರಾಜ್ಯದ ಆಡಳಿತದಲ್ಲಿ ದಕ್ಷತೆ ಇರಬೇಕು. ದಕ್ಷಯುತ ಮತ್ತು ಬಿಗಿ ಆಡಳಿತದಿಂದ ರಾಜ್ಯದ ಸಮಸ್ತ ಜನಕೋಟಿಯ ಆರ್ಥಿಕ ಯೋಗಕ್ಷೇಮ ಉತ್ತಮಗೊಳ್ಳುತ್ತದೆ. ಅರ್ಥಶಾಸ್ತ್ರವು ದೇಶದ ಸ್ವಾತಂತ್ರ್ಯವನ್ನು ನಿರ್ಧರಿಸುತ್ತದೆ ಎಂಬ ಪಾಠವನ್ನು ರಾಜ ಮೊದಲು ಕಲಿಯಬೇಕು. ಪುರುಷರು, ಮಹಿಳೆಯರು, ಸಾಧು ಸಂತರು, ಸಾಮಂತರು ಹಾಗೂ ರಾಜ ಹೀಗೆ ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡಬೇಕು. ಇವರೆಲ್ಲರ ಕರ್ತವ್ಯಗಳೇನು ಎಂಬುದನ್ನು ಕೌಟಿಲ್ಯ ಬಿಡಿ ಬಿಡಿಯಾಗಿ ವಿಶ್ಲೇಷಿಸಿದ್ದಾನೆ.

ಉಪಸಂಹಾರ

ಕೌಟಿಲ್ಯನು ಅರ್ಥಶಾಸ್ತ್ರವನ್ನು ರಚಿಸಿರುವುದು ಆ ಕಾಲದ ಸ್ಥಿತಿಗತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಆ ಕಾಲದ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕಾಗಿ ಎಂಬುದನ್ನು ನಾವು ಅರಿಯಬೇಕು. ಜೊತೆಗೆ ಆ ಅರ್ಥಶಾಸ್ತ್ರವು ಇಂದಿನ ಅರ್ಥಶಾಸ್ತ್ರಕ್ಕಿಂತ ಅತ್ಯಂತ ವಿಭಿನ್ನವಾದುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅಪರಾಧನ್ಯಾಯ, ನೀತಿ, ಧರ್ಮ, ವ್ಯವಹಾರ, ವ್ಯಾಪಾರ, ರಾಜಕೀಯ, ಸಾಮಾಜಿಕ, ಕೌಟುಂಬಿಕ, ರಕ್ಷಣಾ ಪಡೆ, ವ್ಯವಸಾಯ, ಜವಳಿ- ಹೀಗೆ ನಾನಾ ವಿಚಾರಗಳಿಗೆ ಸಂಬಂಧಪಟ್ಟ ರಾಶಿ ರಾಶಿ ವಿಚಾರಗಳು, ಸಲಹೆಗಳು, ತುಂಬಿ ಹೋಗಿವೆ. ಅನೇಕವು ಇಂದಿನ ರೀತಿ ನೀತಿಗಳಿಗೆ ಹೋಲಿಸಿದಾಗ ತಪ್ಪಾಗಿ ಕಾಣಬಹುದು. ಇದಕ್ಕೆ ಕಾರಣ ಇಂದಿನ ಸಂಸ್ಕೃತಿ ನಾಗರಿಕತೆಗಳು, ಉದ್ಯೋಗದ ವಿಧಾನಗಳು, ಸಾಂಸ್ಥಿಕ ಸ್ವರೂಪಗಳು, ಆಡಳಿತ ವಿಧಾನಗಳು, ರಕ್ಷಣಾ ತಂತ್ರಗಳು, ಉತ್ಪಾದನಾ ವಿಧಾನಗಳು -ಹೀಗೆ ಎಲ್ಲದರಲ್ಲೂ ಮಹತ್ತರ ಬದಲಾವಣೆಯಾಗಿದೆ. ಇಷ್ಟು ವಿಚಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೌಟಿಲ್ಯನ ಅರ್ಥಶಾಸ್ತ್ರವನ್ನು ಓದಬೇಕು. ಸಂಸ್ಕೃತಿ ನಾಗರಿಕತೆ ಎಷ್ಟೇ ಬದಲಾದರೂ ಮಾನವ ಮಾನವನೇ. ಅವನ ಮೂಲಭೂತ ಸ್ವರೂಪದ ಬದಲಾವಣೆಯಲ್ಲಿ ಅಂತಹ ಅಂತರವೇನಿಲ್ಲವಾದ್ದರಿಂದ ಅನೇಕ ವಿಚಾರಗಳಲ್ಲಿ ಕೌಟಿಲ್ಯನ ಅರ್ಥಶಾಸ್ತ್ರ ಇಂದಿಗೂ ಪ್ರಸ್ತುತವೆನಿಸುತ್ತದೆ.

* * * * *

ಹವ್ಯಕ ಸಂಸ್ಕೃತಿ : ಒಂದು ಪರಿಚಯ

ಮಾವಿನಕುಳಿ ಶ್ರೀನಿವಾಸ

ಒಂದು ಸಮುದಾಯದ ಇತಿಹಾಸ, ಭಾಷೆ, ಸಂಸ್ಕೃತಿ ಮುಂತಾದವು ಯಾವುದೇ ಒಂದು ಸಮಾಜದ ಅವಿಭಾಜ್ಯ ಅಂಶಗಳಾಗಿವೆ. ಸಮಾಜಶಾಸ್ತ್ರೀಯ ಸಂಶೋಧನೆಯ ಮೂಲಕ ಉಪಸಂಸ್ಕೃತಿಗಳನ್ನು ಕುರಿತು ಅಧ್ಯಯನ ಕಾರ್ಯಗಳು ನಡೆಯಬೇಕಾದ ಅವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿ ಕಂಡು ಬರುತ್ತದೆ. ಕರ್ನಾಟಕದಲ್ಲಿ ಕಂಡುಬರುವ ಉಪಸಂಸ್ಕೃತಿಗಳಲ್ಲಿ ಹವ್ಯಕ ಸಮುದಾಯವೂ ಒಂದಾಗಿದ್ದು, ಈ ಸಮುದಾಯದ ಸಮಾಜ ಶಾಸ್ತ್ರೀಯ ಅಧ್ಯಯನವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಸಹ್ಯಾದ್ರಿ ಬೆಟ್ಟಸಾಲು ಪ್ರದೇಶಗಳಲ್ಲಿ ನೆಲೆಸಿರುವ ಹವ್ಯಕ ಸಮುದಾಯ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದ್ದು, ಹೊಸ ಬದಲಾವಣೆಗಳಿಗೆ ತೆರೆದುಕೊಳ್ಳುತ್ತ ಅಂಚಿನಲ್ಲಿರುವ ಗುಂಪುಗಳಲ್ಲಿ ಒಂದಾಗಿ ರೂಪುಗೊಳ್ಳುತ್ತಿದೆ. ತಮ್ಮ ಸ್ವಯಂ ಶಿಸ್ತು, ನಿಷ್ಕಪಟತನ ಮತ್ತು ಪ್ರಾಮಾಣಿಕತೆಗಳ ಸಂಪ್ರದಾಯದ ಮೂಲಕ ಈ ಉಪಸಂಸ್ಕೃತಿಯ ಜನರು ವಿಶೇಷವಾಗಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮತ್ತು ಕೇರಳದ ಕಾಸರಗೋಡು ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ವಿಶ್ವವ್ಯಾಪಿ ಸಹೋದರತ್ವ, ಸತ್ಯ, ಒಳ್ಳೆಯ ನಡತೆ, ಸರಳತೆ, ನಿಸ್ವಾರ್ಥತೆ, ದೇವರಲ್ಲಿ ನಂಬಿಕೆ ಮತ್ತು ಸಸ್ಯಾಹಾರ ಹವ್ಯಕ ಉಪಸಂಸ್ಕೃತಿಯ ಮೂಲ ಸಿದ್ಧಾಂತಗಳಾಗಿವೆ. ದೇಶೀ ಶಬ್ದಗಳಿಂದ ಕೂಡಿದ ಹಳಗನ್ನಡ ಮತ್ತು ಪೂರ್ವದ ಹಳಗನ್ನಡದ ಹಲವು ಛಾಯೆಗಳನ್ನು ಒಳಗೊಂಡ ಹವ್ಯಕ ಭಾಷೆ ಕನ್ನಡದ ಆಡು ಭಾಷೆಗಳಲ್ಲಿ ಒಂದಾಗಿದೆ. ಹವ್ಯಕರು ಮೂಲತಃ ಹವ್ಯ ಕವ್ಯ ವೃತ್ತಿಯಿಂದ ವೈದಿಕರಾಗಿದ್ದು, ಪ್ರವೃತ್ತಿಯಿಂದ ಕೃಷಿಕರಾಗಿದ್ದಾರೆ. ಅಡಿಕೆ ಇವರ ಪ್ರಧಾನ ಬೆಳೆಯಾಗಿದ್ದು ಬಾಳೆ, ತೆಂಗು, ಕಾಫಿ, ಕಿತ್ತಳೆ ಇತ್ಯಾದಿ ಉಪಬೆಳೆಗಳಾಗಿವೆ. ಹವ್ಯಕರು ಇಂದು ದೇಶದಾದ್ಯಂತ ಮಹಾನಗರಗಳಲ್ಲಿ, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರಗಳಲ್ಲಿ, ವಿದೇಶಗಳಲ್ಲಿ ವಿವಿಧ ವೃತ್ತಿಗಳಲ್ಲಿ ಹರಡಿಕೊಂಡಿದ್ದಾರೆ. ಪೌರೋಹಿತ್ಯ ಮತ್ತು ಕೃಷಿ ಕ್ಷೇತ್ರಗಳಲ್ಲಿ ಎದುರಿಸಬೇಕಾಗಿ ಬಂದ ಕಷ್ಟನಷ್ಟಗಳು, ಪ್ರಕೃತಿ ವಿಕೋಪ, ಅರಣ್ಯ ಮತ್ತು ಪರಿಸರ ನಾಶಗಳಿಂದ ಉದ್ಭವಿಸಿರುವ ಬಿಕ್ಕಟ್ಟುಗಳು, ಮುಳುಗಡೆ ಯೋಜನೆಗಳು, ಭೂಸುಧಾರಣೆ, ಅಣು ಸ್ಥಾವರ ಕೇಂದ್ರಗಳು, ಗಣಿಗಾರಿಕೆ ಇತ್ಯಾದಿ ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಫಲವತ್ತಾದ ಜಮೀನುಗಳನ್ನು ಕಳೆದುಕೊಂಡಿರುವುದು ಇವುಗಳಿಂದ ಉಂಟಾಗಿರುವ ಪರಿಣಾಮಗಳು ಜೀವನ ನಿರ್ವಹಣೆಗಾಗಿ ಹೊಸ ನೆಲೆಯನ್ನು ಹುಡುಕಿಕೊಂಡು ಬೇರೆ ಬೇರೆ ಪ್ರದೇಶಗಳಿಗೆ ಹವ್ಯಕ ಸಮುದಾಯ ವಲಸೆ ಹೋಗಲು ಪ್ರಚೋದಿತವಾದ ಅಂಶಗಳಾಗಿ ಕಂಡುಬರುತ್ತವೆ. ಈ ಲೇಖನದಲ್ಲಿ ಹವ್ಯಕ ಸಮುದಾಯದ ಚಾರಿತ್ರಿಕ ಮತ್ತು ಮೂಲ ಸಾಮಾಜಿಕ ಹಿನ್ನೆಲೆಯನ್ನು ವಿವೇಚಿಸುವಾಗ, ಹವ್ಯಕ ವ್ಯುತ್ಪತ್ತಿ ಕುರಿತು ಸ್ವಾರಸ್ಯಕರವಾಗಿರುವ ಹಲವಾರು

ದಾಖಲೆಗಳನ್ನು ಗುರುತಿಸಲಾಗಿದೆ.

ಹವ್ಯಕ ಎಂಬ ಶಬ್ದದ ಉತ್ಪತ್ತಿಯನ್ನು ಹಾಗೂ ಹವ್ಯಕರ ಮೂಲವನ್ನು ಕುರಿತು ಬೇರೆ ಬೇರೆ ವಿದ್ವಾಂಸರು ಮಾಡಿರುವ ಚರ್ಚೆಗಳು ಬಹಳವಾಗಿವೆ. [೧]ಹವ್ಯಕರ ಮೂಲವು ಒಂದು ಯಕ್ಷಪ್ರಶ್ನೆ. [೨]ಪೌರಾಣಿಕ ಹಾಗೂ ಐತಿಹಾಸಿಕ ಎಂಬೆರಡೂ ಹಿನ್ನೆಲೆಗಳಿಂದ ಹವ್ಯಕೋತ್ಪತ್ತಿ ವಿಧಿತವಾಗುತ್ತದೆ.[೩] ಈ ಮೊದಲೇ ಸಮೀಕ್ಷಿಸಿದ ಪುರಾಣ, ಐತಿಹ್ಯ, ಶಾಸನ, ಪ್ರಾಚೀನ ಗ್ರಂಥ ಮತ್ತು ಇತರ ಹೇಳಿಕೆಗಳು, ಹವ್ಯಕರು ಹೊರಗಿನಿಂದ (ಅಹಿಚ್ಛತ್ರದಿಂದ)ಬಂದವರೆಂಬುದಕ್ಕೆ ಹೆಚ್ಚಿನ ಪುಷ್ಟಿ ನೀಡುವಂತಿವೆ.[೪] ಆ ಕಾಲದಲ್ಲಿ ದುಷ್ಟರಾದ ಕ್ಷತ್ರಿಯರನ್ನು ಪರಶುರಾಮನು ಇಪ್ಪತ್ತೊಂದು ಬಾರಿ ಹುಡುಕಿ ನಿಗ್ರಹ ಮಾಡಿ ಭೂಮಿಯನ್ನೆಲ್ಲ ಕಾಶ್ಯಪಾದಿ ಮುನಿಗಳಿಗೆ ದಾನ ಮಾಡಿ, ದಾನ ಕೊಟ್ಟ ಭೂಭಾಗದಲ್ಲಿ ತಾನಿರಬಾರದೆಂದು ಪಡುಗಡಲ ತೀರಕ್ಕೆ ಬಂದು, ಉತ್ತರದಲ್ಲಿ ನಾಸಿಕಾತ್ರಿಯಂಬಕದ ಸ್ಥಳದಿಂದ ದಕ್ಷಿಣದ ಕನ್ಯಾಕುಮಾರಿಯವರೆಗಿನ ನೆಲವನ್ನು ಸಮುದ್ರರಾಜನಿಂದ ಪಡೆದು ಅದನ್ನು ಏಳು ಭಾಗಗಳಾಗಿ ಪರಿಗಣಿಸಿದನು. ಖರಾಟಂ ಚ ವರಾಟಂ ಚ ಮರಾಟಂ ಕೊಂಕಣಂ ತಥಾ | ಹವ್ಯಕಂ (ಹವಿಗಂ)ತೌಳವಂ ಚೈವ ಕೇರಳಂ ಚೇತಿ ಸಪ್ತಮಂ || ಆ ಏಳರಲ್ಲಿ ಹವ್ಯಕವು ಒಂದಾಗಿರುವುದು ಹವ್ಯಕರ ಪ್ರಾಚೀನತೆಗೆ ಒಂದು ನಿದರ್ಶನ.[೫-೧೦] ಹವಿಗಕ್ಕೆ ಪಶುಕ ಎಂಬ ಹೆಸರಿರುವುದು ತಿಳಿದುಬರುತ್ತದೆ.[೧೧-೧೨] ಈ ಪರಶುರಾಮ ಕ್ಷೇತ್ರದಲ್ಲಿ ದೇವಯಜ್ಞ ಪಿತೃಯಜ್ಞಗಳನ್ನು ನೆರವೇರಿಸಲೆಂದೇ ಇವರು ರಾಜನಾದ ಮಯೂರವರ್ಮನ ಕಾಲದಲ್ಲಿ ಆದರಪೂರ್ವಕವಾಗಿ ಆಮಂತ್ರಿಸಲ್ಪಟ್ಟರು.[೧೩] ಪರಶುರಾಮನ ಭೂಮಿಯಾದ ಸಪ್ತಕೊಂಕಣ ಎಂದರೆ ಕೂಪಕ, ಕೇರಲ, ಮೂಷಿಕ, ಆಲುವ, ಪಶು, ಕೊಂಕಣ ಮತ್ತು ಪರಕೊಂಕಣ ಎಂದು ಏಳು ದೇಶಗಳಿವೆ ಎಂದು ಪ್ರಪಂಚ ಹೃದಯ ಸಂಸ್ಕೃತ ಗ್ರಂಥದಲ್ಲಿ ಉಲ್ಲೇಖಿಸಿದೆ.[೧೪-೧೫] ಉತ್ತರ ಕನ್ನಡ ಜಿಲ್ಲೆಯ ಬಹು ಭಾಗವನ್ನು ಹಿಂದಕ್ಕೆ ಪಶು ಇಲ್ಲವೆ ಹೈಗವೆಂದು ಕರೆಯುತ್ತಿದ್ದರು. ಈ ಪ್ರದೇಶಕ್ಕೆ ಗೋರಾಷ್ಟ್ರವೆಂಬ ಹೆಸರೂ ಇದೆ. [೧೯] ಬೇರೆಡೆಯಿಂದ ಈ ಪಶುನಾಡಿಗೆ ವಲಸೆ ಬಂದ ಬ್ರಾಹ್ಮಣರು ಇಲ್ಲಿಯೇ ನೆಲಸಿ ಪಶುಪಾಲನೆ, ತೋಟಗಾರಿಕೆ, ವ್ಯವಸಾಯಗಳನ್ನು ಕೈಕೊಂಡು ಪಶುಕ ಪಯಕ ಪೈಕ ಹೈಕ ಹೈಗರಾದಂತಿದೆ.[೨೦] ಪೂರ್ವದಲ್ಲಿ ಈ ನಾಡಿನಲ್ಲಿದ್ದ ಬ್ರಾಹ್ಮಣರು ಯಜ್ಞಯಾಗಾದಿಗಳನ್ನು ಮಾಡದೆ ಕರ್ಮಬಾಹಿರರಾಗುವುದಕ್ಕೆ ಜಮದಗ್ನಿಯ ಕುಮಾರ ಪರಶುರಾಮನ ಶಾಪವೆಂಬುದನ್ನು ಪುರಾಣಗಳಲ್ಲಿ ನೋಡಬಹುದು.[೨೧-೨೨]ಪರಶುರಾಮನ ಶಾಪದಿಂದ ಮತ್ತು ನಂತರದಲ್ಲಿ ಬಂದ ಜೈನಮತ ಪ್ರಭಾವದಿಂದ ಗೋರಾಷ್ಟ್ರ ದೇಶವು ಅಬ್ರಾಹ್ಮಣ್ಯವಾಗಿತ್ತು. ಅಲ್ಲಿನ ಬ್ರಾಹ್ಮಣರು ಯಜ್ಞಯಾಗಗಳನ್ನು ಮಾಡದೆ ಕರ್ಮಭ್ರಷ್ಟರಾಗಿ ನಾಮಮಾತ್ರ ಬ್ರಾಹ್ಮಣರಾಗಿದ್ದರು.[೨೩-೨೪] ಗಚ್ಛತಾತ ಮಹಾಪ್ರಾಜ್ಞಮೇರೋರ್ದಕ್ಷಿಣತಃ ಶುಭಂ | ಅಹಿಕ್ಷೇತ್ರ ಇತಿ ಖ್ಯಾತಂ ವಿಪ್ರಾಣಾಮಾದಿ ಮಹಾಮಂಡಲಂ || [೨೫]ಎಂದು ಕಾಶ್ಯಪ ಮುನಿಗಳು ಮಯೂರವರ್ಮನಿಗೆ ಮೇರು ಪರ್ವತದ ದಕ್ಷಿಣದಲ್ಲಿರುವ ಅಹಿಕ್ಷೇತ್ರಕ್ಕೆ ಹೋಗಿ ಅಲ್ಲಿರುವ ವೇದಾಂಗ ಪಾರಂಗತ ಬ್ರಾಹ್ಮಣರನ್ನು ಕರೆತಂದು ಯಜ್ಞಯಾಗಾದಿಗಳನ್ನು ಮಾಡಿಸಲು ಆದೇಶ ನೀಡುತ್ತಾರೆ. ಇಲ್ಲಿ ವಿಪ್ರಾಣಾಮಾದಿ ಮಹಾಮಂಡಲಂ ಎಂದಿರುವುದರಿಂದ ಅಹಿಕ್ಷೇತ್ರವು

ಪ್ರಾಚೀನಕಾಲದಿಂದಲೂ ಬ್ರಾಹ್ಮಣರ ನೆಲೆಬೀಡಾಗಿತ್ತೆಂದು ತಿಳಿದುಬರುತ್ತದೆ. [೨೫]ಮಯೂರನಾಮ ನೃಪತಿಃ ಹೇಮಾಂಗದ ಕುಮಾರಕಃ |ಅಹಿಕ್ಷೇತ್ರೇ ಸ್ಥಿತಾನ್ ವಿಪ್ರಾಂಸ್ತ್ವಾಗತಾನ್ ದ್ವಿಜಪುಂಗವಾನ್|| [೨೬]ಹೇಮಾಂಗದನ ಮಗನಾದ ಮಯೂರವರ್ಮನು ಅಹಿಕ್ಷೇತ್ರದಲ್ಲಿರುವ ಬ್ರಾಹ್ಮಣರನ್ನು ಕರೆತಂದನು. [೨೭]ಮುಕ್ಕಣ್ಣ ಕದಂಬನು ಅಹಿಚ್ಛತ್ರ ಅಗ್ರಹಾರದಿಂದ ಹನ್ನೆರಡು ಸಾವಿರ ಅಗ್ನಿಹೋತ್ರಗಳನ್ನು ಹೊಂದಿದ ೩೨ ಪವಿತ್ರ ಬ್ರಾಹ್ಮಣ ಕುಟುಂಬಗಳನ್ನು ಆರಾಧಿಸಿ ಕರೆತಂದನು. [೨೮-೩೦]ಹವಿಕ ಅಥವಾ ಹೈಗರು ಉತ್ತರ ಕನ್ನಡದ ಪ್ರಾಚೀನ ಹೆಸರಾದ ಹೈಗ ಅಥವಾ ಅಹಿಕ್ಷೇತ್ರದಿಂದ ಬಂದವರು. ಇವರು ಮೂಲತಃ ಉತ್ತರ ಭಾರತದ ಕೆಲವು ಭಾಗಕ್ಕೆ ಸೇರಿದವರು ಮತ್ತು ಮಯೂರವರ್ಮನಿಂದಾಗಿ ದಕ್ಷಿಣಕ್ಕೆ ಬಂದವರು.[೩೧] ಷಟ್ಕರ್ಮನಿರತಾನ್ ದಾಂತಾನ್ ನಾನಾಗೋತ್ರ ಸಮುದ್ಭವಾನ್ | ಋಗ್ಯಜುಃ ಸಾಮ ಸಂಪನ್ನಾನ್ಮಂತ್ರ ಶಾಸ್ತ್ರ ಸಮನ್ವಿತಾನ್|| [೩೨]ನಾನಾ ಗೋತ್ರಗಳಿಂದ ಕೂಡಿದ ಮೂವತ್ತೆರಡು ಬ್ರಾಹ್ಮಣ ಕುಟುಂಬಗಳನ್ನು ಕರೆದುಕೊಂಡು ಮಯೂರವರ್ಮನು ತನ್ನ ರಾಜ್ಯಕ್ಕೆ ಹಿಂದಿರುಗಿದನು.[೩೩]

ಶಾಪಗ್ರಸ್ಥ ಹೈಗನಾಡಿನ ವಿಮೋಚನೆಗಾಗಿ ಉತ್ತರ ಕನ್ನಡದ ಬನವಾಸಿಯ ಕದಂಬ ಸಾಮ್ರಾಜ್ಯದ ಮಯೂರವರ್ಮನು ಗೋದಾವರೀ ತೀರದಲ್ಲಿದ್ದ ಅಹಿಕ್ಷೇತ್ರದಿಂದ ಬ್ರಾಹ್ಮಣರನ್ನು ಕರೆತಂದನು. ಆದರೆ ಇದು ಸ್ಪಷ್ಟವಾಗಿ ಉಲ್ಲೇಖಗೊಂಡಿಲ್ಲ.[೩೪] ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಕದಂಬರಿಗೂ ಭಾರತದ ಗುಪ್ತ ವಾಕಾಟಕರಿಗೂ ರಾಜಕೀಯ ಹಾಗೂ ವೈವಾಹಿಕ ಸಂಬಂಧಗಳಿದ್ದುದು ತಿಳಿದುಬರುತ್ತದೆ.[೩೫-೩೬] ಹವ್ಯಕರ ಮೂಲ ಉತ್ತರ ಭಾರತದ ಅಹಿಚ್ಛತ್ರ ಅಥವಾ ಅಹಿಕ್ಷೇತ್ರವೆಂದು ತಿಳಿದುಬರುತ್ತದೆ.[೩೭] ಹವ್ಯಕರ ಮೂಲನೆಲೆ ಅಹಿಚ್ಛತ್ರ. ಇವರು ಸುಮಾರು ಮೂರು ನಾಲ್ಕನೆಯ ಶತಮಾನದ ಅವಧಿಯಲ್ಲಿ ಬನವಾಸಿಯ ಕದಂಬ ರಾಜ್ಯಕ್ಕೆ ಅಂದಿನ ಅರಸು ಮಯೂರಶರ್ಮ (ವರ್ಮ) ನ ಆಗ್ರಹದ ಆಮಂತ್ರಣಕ್ಕಾಗಿ ಬಂದವರು. ಸಮೃದ್ಧ ಬನವಾಸಿಯ ರಾಜ್ಯದಲ್ಲಿ ಒಮ್ಮೆ ಕ್ಷಾಮ ತಲೆದೋರಿದಾಗ ಯಜ್ಞಕ್ಕಾಗಿ ಇವರನ್ನು ಪ್ರಾರ್ಥಿಸಿ ಕರೆತರಲಾಯಿತು.[೩೮] ಗೋಕರ್ಣವನ್ನೂ ಅಹಿಕ್ಷೇತ್ರವೆಂದು ಕರೆಯಲಾಗುತ್ತಿತ್ತು.[೩೯] ಅಹಿಚ್ಛತ್ರ ಕ್ಷೇತ್ರದಿಂದ ಸಹಸ್ರಾರು ಸಂವತ್ಸರಗಳ ಹಿಂದೆ ಕದಂಬ ವಂಶದ ವಿಪ್ರ ಪ್ರಭು ಮಯೂರವರ್ಮನ ಬಯಕೆ ಪ್ರಾರ್ಥನೆಯಂತೆ ಕರ್ನಾಟಕ ಪ್ರದೇಶಕ್ಕೆ ಹವ್ಯಕ ಬ್ರಾಹ್ಮಣ ಸಮಾಜದ ಪೂರ್ವಜರು ಆಗಮಿಸಿದರು. [೪೦] ಸ್ಕಂದ ಪುರಾಣದ ಮೇರೆಗೆ ಕ್ರಿ. ಶ. ೪-೫ ನೆಯ ಶತಮಾನಕ್ಕೆ ಸೇರಿದ ಕದಂಬರು ಉತ್ತರಾದಿಯಿಂದ ಬ್ರಾಹ್ಮಣರನ್ನು ಕರೆಸಿಕೊಂಡು ಅವರಿಗೆ ಗೋವಾ ಪ್ರಾಂತದ ಭೂಮಿಗಳನ್ನು ಕೊಟ್ಟರು. [೪೧] ಕದಂಬ ವಂಶವು ಸ್ಥಾಪಿತವಾದ ಆರು ಏಳು ಶತಮಾನಗಳ ಬಳಿಕ ಹುಟ್ಟಿರುವ ಶಾಸನಗಳು ಮಯೂರಶರ್ಮನಿಗಿಂತ ಹಿಂದೆ ತ್ರಿನೇತ್ರ ಕದಂಬ ಅಥವಾ ಮುಕ್ಕಣ್ಣ ಕದಂಬ, ಮಧುಕೇಶ್ವರ, ಮಲ್ಲಿನಾಥ, ಚಂದ್ರವರ್ಮ ಎಂಬುವವರು ಆಳಿದರೆಂದು ಹೇಳುತ್ತವೆ. ಇವರು ಇದ್ದುದು ನಿಜವಾದರೆ ಕದಂಬರ ಕಾಲ ೩ನೆಯ ಶತಮಾನವಾಗುತ್ತದೆ. [೪೨] ಕ್ರಿ.ಶ. ೩ನೆಯ ಶತಮಾನಕ್ಕಿಂತ ಹಿಂದೆಯೇ ಇಲ್ಲಿ ಬ್ರಾಹ್ಮಣರಿದ್ದು, ಅವರು ಕ್ರಿ.ಶ. ೩ನೆಯ ಶತಕದ ಹೊತ್ತಿಗೆ ದೇಶವನ್ನು ಬಿಟ್ಟುಹೋಗಿದ್ದಿರಬಹುದು. [೪೩] ಬನವಾಸಿಯ

ಮೂಲಕದಂಬ ವಂಶಸ್ಥಾಪಕನ ಹೆಸರು ಆತನದೇ ಚಂದ್ರವಳ್ಳಿಯ ಶಿಲಾಶಾಸನದಿಂದ ತಿಳಿವಂತೆ ಮಯೂರಶರ್ಮ ಎಂದೇ ಹೊರತು ಮಯೂರವರ್ಮ ಎಂದಲ್ಲ. ಆತನು ಅಚ್ಚ ಬ್ರಾಹ್ಮಣನು; ಕ್ಷತ್ರಿಯನಲ್ಲ.[೪೪-೪೫] ಮಯೂರಶರ್ಮ ಹಾರೀತಿ ಪುತ್ರ ಮಾನವ್ಯ ಗೋತ್ರದ ಬ್ರಾಹ್ಮಣ.[೪೬] ಕದಂಬ ಪ್ರಮುಖನು ಮಯೂರಶರ್ಮ ಎಂಬ ಬ್ರಾಹ್ಮಣನ ಹೆಸರನ್ನು ಇಟ್ಟುಕೊಂಡನು. ನಂತರ ಅದನ್ನು ಮಯೂರವರ್ಮ ಎಂಬ ಕ್ಷತ್ರಿಯ ಹೆಸರನ್ನಾಗಿ ಬದಲಿಸಿಕೊಂಡನು.[೪೭]

ಪೌರಾಣಿಕ ನಂಬಿಕೆಗಳ ಪ್ರಕಾರ ಕದಂಬ ಮಯೂರವರ್ಮನ ಕಾಲದಲ್ಲಿ ಯಜ್ಞಯಾಗಗಳನ್ನು ನಡೆಸುವ ಸಲುವಾಗಿ ಈ ಬ್ರಾಹ್ಮಣರು ಉತ್ತರ ಭಾರತದ ಅಹಿಚ್ಛತ್ರದಿಂದ ಕರೆತರಲ್ಪಟ್ಟವರು.[೪೮] ಪರಶುರಾಮನು ಸೃಷ್ಟಿಸಿದ ಹೈಗನಾಡನ್ನು ಗೆದ್ದುಕೊಂಡು ಮಯೂರವರ್ಮನು ತೆಲಂಗಾಣದ ಅಹಿಚ್ಛತ್ರದಿಂದ ೫೦೦೦ ಪರಿಶುದ್ಧ ಬ್ರಾಹ್ಮಣರನ್ನು ಕರೆತಂದನು. ಇವರಲ್ಲಿ ೧೦೦೦ ಬ್ರಾಹ್ಮಣರು ತಮ್ಮ ಆಚಾರಲೋಪದಿಂದ ಜಾತಿಹೀನರಾದರು. ಉಳಿದ ೪೦೦೦ ಬ್ರಾಹ್ಮಣರು ಇಡೀ ಹೈಗನಾಡನ್ನು ವ್ಯಾಪಿಸಿಕೊಂಡರು. ಕಾಲಾಂತರದಲ್ಲಿ ಮಯೂರವರ್ಮನನ್ನು ಶೂದ್ರ ಜನಾಂಗದ ಉತ್ತುಂಗನ ಮಗನಾದ ನಂದನು ಸೋಲಿಸಿ ಹೈಗನಾಡನ್ನು ವಶಪಡಿಸಿಕೊಂಡು ಬ್ರಾಹ್ಮಣರನ್ನೆಲ್ಲ ಅಹಿಚ್ಛತ್ರಕ್ಕೆ ಓಡಿಸಿದನು. ಇವನ ನಂತರ ಬಂದ ಚಂಡಸೇನನು ತಾಯಿಯ ಕೋರಿಕೆಯ ಮೇರೆಗೆ ವರ್ಣಾಶ್ರಮ ಧರ್ಮಕ್ಕೆ ಗೌರವ ನೀಡಿ ಆ ಬ್ರಾಹ್ಮಣರನ್ನು ಪುನಃ ಕರೆತಂದು ಹವ್ಯಕನಾಡಿನ ಉಸ್ತುವಾರಿಯನ್ನು ಸಭಾಹಿತನೆಂಬ ಮುಖ್ಯಸ್ಥನಿಗೆ ನೀಡಿದನು.[೪೯-೫೦] ಮಯೂರವರ್ಮನ ಮರಣಾನಂತರ ಆತನ ಕುಮಾರ ತ್ರಿನೇತ್ರ ಕದಂಬನು ಚಿಕ್ಕವನಾದ ಕಾರಣ ತಮ್ಮನ್ನು ರಕ್ಷಿಸಲು ಯಾರೂ ಇಲ್ಲವೆಂದು ಬ್ರಾಹ್ಮಣರೆಲ್ಲರೂ ಅಹಿಚ್ಛತ್ರಕ್ಕೆ ಮರಳಿ ಹೊರಟು ಹೋದರು. ರಾಜನು ಅಹಿಚ್ಛತ್ರಕ್ಕೆ ಹೋಗಿ ಅವರ ಮನವೊಲಿಸಿ ಮರಳಿ ಕರೆತಂದನು. ತ್ರಿನೇತ್ರ ಕದಂಬನ ಮಿತ್ರ ಚಂಡಸೇನ ರಾಜನು ತನ್ನ ರಾಜ್ಯಕ್ಕೂ ಈ ಬ್ರಾಹ್ಮಣರ ಕೆಲವು ಕುಟುಂಬಗಳನ್ನು ಕರೆದುಕೊಂಡು ಹೋದನು. ಚಂಡಸೇನನ ಪುತ್ರ ಲೋಕಾದಿತ್ಯನು ತ್ರಿನೇತ್ರ ಕದಂಬನ ತಂಗಿಯನ್ನು ವಿವಾಹವಾದನು. ಚಂಡಸೇನನ ಮರಣಾನಂತರ ಹುಬ್ಬಾಸಿಕನೆಂಬ ಚಾಂಡಾಲನು ಸೈನ್ಯ ಕಟ್ಟಿ ಬ್ರಾಹ್ಮಣರನ್ನು ಹಿಂಸಿಸಿ ಅನೇಕರನ್ನು ಕೊಲೆ ಮಾಡಿದ್ದರಿಂದ ಹೆದರಿ ಬ್ರಾಹ್ಮಣರೆಲ್ಲರೂ ಸ್ವದೇಶಕ್ಕೆ ಓಡಿಹೋದರು. ಪರಾಶರನೆಂಬ ಬ್ರಾಹ್ಮಣನಿಂದ ಪ್ರೇರಿತನಾದ ಲೋಕಾದಿತ್ಯನು ಓಡಿಹೋದ ಬ್ರಾಹ್ಮಣರನ್ನು ತನ್ನ ದೇಶಕ್ಕೆ ಕರೆತಂದು ಹುಬ್ಬಾಸಿಕನನ್ನು ಸೈನ್ಯ ಸಮೇತ ನಾಶಮಾಡಿದನು. ಲೋಕಾದಿತ್ಯನು ಆ ಬ್ರಾಹ್ಮಣರಿಗೆ ೧೦ ಪಟ್ಟಣಗಳಿಂದ ಕೂಡಿದ ೧೬ ಗ್ರಾಮಗಳನ್ನೂ, ೧೦ ಘಟ್ಟಗಳನ್ನೂ, ೧೦ ದುರ್ಗಾಸ್ಥಾನಗಳನ್ನೂ, ೫ ಶೈವ ಕ್ಷೇತ್ರಗಳನ್ನೂ ಕೊಟ್ಟಿದ್ದನು.[೫೧-೫೫] ಹೊನ್ನಳ್ಳಿ (ಈಗಿನ ಸ್ವರ್ನವಲ್ಲಿ) ಮಠದ ಸ್ಥಳೀಯ ಚರಿತ್ರೆಯಲ್ಲಿ ನಮೂದಿಸಿದಂತೆ ಹೈಗನಾಡಿನ ಗೋಕರ್ಣದಿಂದ ಲೋಕಾದಿತ್ಯ ರಾಜನು ಕೆಲವು ಬ್ರಾಹ್ಮಣರನ್ನು ಕರೆತಂದನು.[೫೬-೫೭] ಮಯೂರವರ್ಮನು ಪಲ್ಲವರ ರಾಜಧಾನಿ ಕಂಚಿಯಲ್ಲಿ ವೀರಶರ್ಮನೆಂಬ ಗುರುವಿನ ಶಿಷ್ಯನಾಗಿದ್ದನು. ಆ ಕಾಲದಲ್ಲಿ ಪಲ್ಲವ ರಾಜ ಶಿವಸ್ಕಂದವರ್ಮನು ಮಾಡಿದ ಅಶ್ವಮೇಧಯಾಗದಲ್ಲಿ ಬ್ರಾಹ್ಮಣರಿಗೆ ಸಲ್ಲಬೇಕಾದ ಮರ್ಯಾದೆ ಆತನಿಂದ ದೊರಕದೆ

ಕೋಪಗೊಂಡ ಮಯೂರವರ್ಮನು ಸೈನ್ಯ ಕಟ್ಟಿ ಪಲ್ಲವರ ಅನೇಕ ಭೂಭಾಗಗಳನ್ನು ವಶಪಡಿಸಿಕೊಂಡನು. [೫೮-೬೦] ತನ್ನ ಚಕ್ರಾಧಿಪತ್ಯದ ಕುರುಹಾಗಿ ಅಶ್ವಮೇಧಯಾಗವನ್ನೂ ಮಾಡಿದನು.[೬೧] ಮಯೂರವರ್ಮನು ಸಪ್ತಗೋತ್ರಗಳಿಂದ ಕೂಡಿದ ಯಜುರ್ವೇದಿಗಳನ್ನು ಅಧಿಕ ಸಂಖ್ಯೆಯಲ್ಲಿಯೂ ಋಗ್ವೇದಿ ಸಾಮವೇದಿಗಳನ್ನು ಅಲ್ಪ ಸಂಖ್ಯೆಯಲ್ಲಿಯೂ ಕರೆದುಕೊಂಡು ಬಂದನು.[೬೨] ಜೈನನಿಗ್ರಹ ವೇಲಾಯಾಂ ಸಮವೇತಾ ಮಹೋತ್ಸಹಾಃ ಜೈನಮತ ಪ್ರಾಬಲ್ಯವಿದ್ದ ದ್ರಾವಿಡ ದೇಶದಲ್ಲಿ ಜೈನನಿಗ್ರಹದಿಂದ ಸಂತಸಗೊಂಡ ವಿಪ್ರರು ಎಲ್ಲ ಒಂದೆಡೆ ಸೇರಿ ಪುನಃ ಈ ದೇಶಕ್ಕೆ ಬರಲು ಉತ್ಸಾಹಗೊಂಡರು.[೬೩-೬೪]

ಮಹಾಭಾರತದಲ್ಲಿ ಅಹಿಚ್ಛತ್ರ ಪ್ರದೇಶವನ್ನು ಅಹಿಕ್ಷೇ (ಕ್ಷ) ತ್ರವೆಂದು ಉಲ್ಲೇಖಿಸಿದೆ. ಈ ಉಲ್ಲೇಖದಿಂದ ಅಹಿಚ್ಛತ್ರವುಹಸ್ತಿನಾಪುರಕ್ಕಿಂತ ಪೂರ್ವದಿಕ್ಕಿಗೆ ಇರುವುದು ಸ್ಥಿರವಾಗುತ್ತದೆ[೬೫-೬೬] ಉತ್ತರ ಪ್ರದೇಶದ ಅಹಿಚ್ಛತ್ರ, ಆಂಧ್ರದ ಗೋದಾವರಿ ತೀರದ ಅಹಿಚ್ಛತ್ರ, ಅಸ್ಸಾಂ, ಗುಜರಾತ್, ಕೇರಳ ತಮಿಳುನಾಡು, ಗೋರಾಷ್ಟ್ರ, ಗೋಕರ್ಣ ಮಂಡಲ ಇವುಗಳಲ್ಲಿ ಮೊದಲನೆಯದನ್ನು ಬಿಟ್ಟರೆ ಉಳಿದವುಗಳಿಗೆ ಹಲಕೆಲವು ಹೋಲಿಕೆಗಳ ಊಹೆಯೇ ಆಧಾರ. [೬೭] ಕ್ರಿ. ಶ. ೩೪೦ ರ ಭಾರತದ ಭೂಪಟದಲ್ಲಿ ಉತ್ತರ ಪ್ರದೇಶದ ಕೋಸಲದ ಮೇಲ್ಭಾಗದಲ್ಲಿ ಅಂದರೆ ಇಂದಿನ ಲಖನೌ ಬಳಿ ಅಹಿಚ್ಛತ್ರವಿರುವುದನ್ನು ನೋಡಬಹುದು. ಆಂಧ್ರದಲ್ಲಿ ಇದೆ ಎನ್ನಲಾದ ಅಹಿಚ್ಛತ್ರವು ಭೂಪಟದಲ್ಲಿ ಎಲ್ಲಿಯೂ ಕಂಡು ಬಂದಿಲ್ಲ.[೬೮] ಇದನ್ನು ಅಹಿಕ್ಷೇತ್ರ [೬೯] ಎಂದೂ, ಛತ್ರವತಿ [೭೦-೭೨] ಎಂದೂ, ಛತ್ರಾವತಿ [೭೩] ಎಂದೂ ಹೇಳಿದೆ. ಹವಿಕ ಬ್ರಾಹ್ಮಣರು ವಲ್ಲಭಪುರದಿಂದ ಬಂದಿರಬೇಕು. ವಲ್ಲಭಪುರ ಗುಜರಾತಿನ ಈಗಿನ ಅನಹಿಲವಾಡ ಆಗಿದೆ. ಇದಕ್ಕೆ ಅಹಿಚ್ಛತ್ರವೆಂಬ ಹೆಸರೂ ಇತ್ತು. ಅಲ್ಲಿಯ ಬ್ರಾಹ್ಮಣರು ಸಮುದ್ರಮಾರ್ಗವಾಗಿ ಬನವಾಸಿ ದೇಶಕ್ಕೆ ಬಂದರು.[೭೪] ಧಾರೇಶ್ವರ ದೇವಸ್ಥಾನದಲ್ಲಿ ದೊರೆತ ಬಹು ದೊಡ್ಡ ಗ್ರಂಥ ಸಭಾಹಿತನೊಬ್ಬನಿಂದ ರಚಿತವಾದುದು. ಇದು ಪ್ರಥಮ ಬಾರಿಗೆ ಹವಿಕರ ತೆಲಂಗಾಣದ ಅಹಿಚ್ಛತ್ರ ಮೂಲವನ್ನು ಪ್ರಸ್ತಾಪಿಸುತ್ತದೆ.[೭೫] ಉತ್ತರದಲ್ಲಿ ಛತ್ರಪುರ ಸಂಸ್ಥಾನವುಂಟು; ಅಹಿರರ ಪ್ರಾಬಲ್ಯವಾದಾಗ ಆ ಸೀಮೆಯು ಅಹಿ ಛತ್ರ ಎನ್ನಿಸುವ ಸಂಭವವಿದೆ. ಈ ಸೀಮೆಯಿಂದಲೇ ಹವಿಕರು ಬನವಾಸಿ ದೇಶದಲ್ಲಿ ರಾಜಾಶ್ರಯಕ್ಕೆ ಬಂದಿರಬೇಕು.[೭೬] ಅಹಿಚ್ಛತ್ರದಿಂದ ಬಂದವರು ಅಹಿಚ್ಛತ್ರಕರು, ಪರಪದದ ಲೋಕೋಕ್ತಿಯಲ್ಲಿ ಅಹಿ(ಚ್ಛತ್ರ)ಕರು ಅಹಿಕರು ಹೈಗರು ಎಂದಾಗುವುದರಿಂದ ಅವರ ಆ ಹೈಗ ಎಂಬ ಹೆಸರಿಂದ ಅವರು ನೆಲೆಸಿದ ಉತ್ತರ ಕನ್ನಡಕ್ಕೂ ಹೈಗದೇಶವೆಂದು ಹೆಸರಾಗಿರಬಾರದೆ ? ಆದ್ದರಿಂದ ಅದರ ಮೂಲನಾಮವು ಅಹಿಚ್ಛತ್ರದಿಂದ ಉಂಟಾಗಿರಬೇಕಲ್ಲವೆ? [೭೭] ವಿಪ್ರಾಣಾಂ ಭೇದ ವೃತ್ತಿತಃ ಎನ್ನುವುದರಿಂದ ಈ ವಿಪ್ರರಿಗೆ ಹವ್ಯ ಕವ್ಯ ವೃತ್ತಿಯಿಂದಲೇ ಹವ್ಯಕರೆಂಬ ಹೆಸರು ಅನ್ವರ್ಥನಾಮವಾಗಿ ಬಂದಿತೇ ಹೊರತು ದೇಶಭೇದದಿಂದಲ್ಲ. [೭೮] ಶಿಕಾರಿಪುರದ ೧೭೮ ನೆಯ ಶಾಸನದಲ್ಲಿ ಆ ತಾಣಗುಂದೂರಿನ ಬ್ರಾಹ್ಮಣರು ೩೨೦೦೦ ಸಂಖ್ಯೆಯಲ್ಲಿ ಅಹಿಚ್ಛತ್ರದಿಂದ ಬಂದವರೆಂದೂ ಮಯೂರವರ್ಮನೆಂಬ ಅರಸನು ಮಾಡಿದ ೧೮ ಅಶ್ವಮೇಧಗಳಲ್ಲಿ ದಕ್ಷಿಣೆಯಾಗಿ ಪಡೆದ ೧೪೪ ಗ್ರಾಮಗಳ ನಿವಾಸಿಗಳೆಂದೂ ಹೇಳಿದೆ. [೭೯-೮೧] ಮಯೂರವರ್ಮ ಚರಿತ್ರಂ ಎಂಬ ಕಾವ್ಯದಲ್ಲಿಯೂ

ಇದು ನಿರೂಪಿತವಾಗಿದೆ.[೮೨] ಉತ್ತರ ಸಹ್ಯಾದ್ರಿ ಖಂಡವು ಆಮೇಲಿನ ರಚನೆಯಾದರೂ ೩-೪ ನೆಯ ಶತಮಾನದ ತಾಳಗುಂದ ಶಾಸನವಂತೂ ನಿರ್ದಿಷ್ಟ ಪ್ರಮಾಣವಾಗಿದೆ.[೮೩] ಈಗ ಕರ್ಣಾಟಕದ ಆದ್ಯಂತ ಕಾಣಸಿಗುವ ಹವ್ಯಕರ ಮೂಲಸ್ಥಳ ಅಹಿಚ್ಛತ್ರವೆಂದು ತಿಳಿದುಬರುತ್ತದೆ.[೮೪] ಮಯೂರವರ್ಮನು ರೋಹಿಲಖಂಡದಲ್ಲಿದ್ದ ಅಹಿಚ್ಛತ್ರದಿಂದ ಬ್ರಾಹ್ಮಣ ಸಮುದಾಯವನ್ನು ಕರೆತಂದು ಘಟ್ಟ ಪ್ರದೇಶವನ್ನು ೬೪ ಭಾಗಗಳಾಗಿ ವಿಂಗಡಿಸಿ ಅಲ್ಲಿ ಅವರನ್ನು ನೆಲೆ ನಿಲ್ಲಿಸಿದನು. ಅವನ ಮಗ ತ್ರಿನೇತ್ರನ ಕಾಲದಲ್ಲಿ ಈ ಬ್ರಾಹ್ಮಣರು ತಮ್ಮ ಪ್ರದೇಶವನ್ನು ಬಿಟ್ಟು ಹೋಗಲು ಪ್ರಯತ್ನಿಸಿದಾಗ ಅವರನ್ನು ಪುನಃ ಕರೆತಂದು ಅವರ ಗುರುತು ಸಿಗಲು ಅನುಕೂಲವಾಗುವಂತೆ ಹಣೆಯ ಮೇಲ್ಭಾಗದಲ್ಲಿ ಅಂದರೆ ಮುಂದಲೆಯಲ್ಲಿ ಜುಟ್ಟು ಬಿಟ್ಟುಕೊಳ್ಳಲು ಆಜ್ಞಾಪಿಸಲಾಯಿತು. ಈ ಬ್ರಾಹ್ಮಣರ ವಂಶಸ್ಥರೇ ಮೈಸೂರಿನ ಉತ್ತರ ಪಶ್ಚಿಮದಲ್ಲಿದ್ದ ಹೈಗ ಅಥವಾ ಹವ್ಯಕ ಬ್ರಾಹ್ಮಣರು.[೮೫-೮೬] ಕ್ರಿ. ಪೂ. ೨೦೦ ರಲ್ಲಿದ್ದ ಮಯೂರವರ್ಮನ ಕಾಲದಲ್ಲಿ ದಕ್ಷಿಣ ದೇಶಕ್ಕೆ ಅಹಿಚ್ಛತ್ರದಿಂದ ಬಂದ ಹವ್ಯಕ ಬ್ರಾಹ್ಮಣರು ಕ್ರಿ.ಶಕಾರಂಭದ ಸುಮಾರಿಗೆ ಲೋಕಾದಿತ್ಯನ ಕಾಲಕ್ಕೆ ಸ್ಥಿರವಾಗಿ ನೆಲೆಯೂರಿದರು.[೮೭] ಲೋಕಾದಿತ್ಯ ಮಹಾರಾಜನು ಮಯೂರವರ್ಮನ ನಾಡಿನಲ್ಲಿದ್ದ ಅಹಿಚ್ಛತ್ರದ ಬ್ರಾಹ್ಮಣರನ್ನು ತನ್ನ ನಾಡಿಗೂ ಕರೆದೊಯ್ದು ಯಜ್ಞಯಾಗಾದಿಗಳನ್ನು ಮಾಡಿಸಿ ಅನೇಕ ಊರು, ಅಗ್ರಹಾರಗಳು, ಭೂಮಿಯನ್ನು ನೀಡಿ ಹವ್ಯ ಕವ್ಯಾದಿಗಳಲ್ಲಿ ನಿಷ್ಣಾತರಾದ ಇವರಿಗೆ ಹವ್ಯಕರು ಎಂಬ ಅನ್ವರ್ಥ ನಾಮವನ್ನು(ಬಿರುದನ್ನು)ನೀಡಿ ಗೌರವಿಸಿದನು.[೮೮] ಹವ್ಯಕಾಶ್ಚೇತಿ ವಿಪ್ರಾಣಾಂ ನಾಮಧೇಯಂ ಚಕಾರ ಸಃ.[೮೯]

ಉತ್ತರ ಪ್ರದೇಶದಲ್ಲಿರುವ ಅಹಿಚ್ಛತ್ರವು ಇಂದಿನ ರೋಹಿಲಖಂಡದಲ್ಲಿದೆ. ಇದು ರೇಲಿ (ಬರೇಲಿ) ಎಂಬ ಪಟ್ಟಣಕ್ಕೆ ಇಪ್ಪತ್ತೊಂದು ಮೈಲಿ ದೂರದಲ್ಲಿದೆ.ಇದನ್ನೀಗ ರಾಮನಗರವೆಂದು ಕರೆಯುತ್ತಾರೆ.[೯೦-೯೧]ಇದನ್ನು ಪೂರ್ವದಲ್ಲಿ ಪಾಂಚಾಲ ದೇಶವೆಂದು ಕರೆಯುತ್ತಿದ್ದರು.[೯೨-೯೩] ಟಾಲೆಮಿ ಕಂಡ ಅಧಿಸದ್ರವು ಗಂಗಾ ನದಿಯ ಉತ್ತರಕ್ಕಿದ್ದ ಪಾಂಚಾಲದ ಪ್ರಾಚೀನ ರಾಜಧಾನಿಯ ಹೆಸರಾಗಿದ್ದ ಅಹಿಚ್ಛತ್ರ ಅಥವಾ ಅಹಿಕ್ಷೇತ್ರದ ಅಂದಗೇಡಾದ ರೂಪವಾಗಿರಬಹುದು.[೯೪-೯೬] ಬರೇಲಿಯ ಪಶ್ಚಿಮಕ್ಕೆ ಹದಿನೆಂಟು ಮೈಲಿಗಳು ಮತ್ತು ಅನೋಲದ ಉತ್ತರಕ್ಕೆ ಏಳು ಮೈಲಿಗಳ ದೂರದಲ್ಲಿದ್ದ ಆಧುನಿಕ ಅಹಿಚ್ಛತ್ತೂರಿನೊಂದಿಗೆ ಅಹಿಚ್ಛತ್ರವನ್ನು ಗುರುತಿಸಲಾಗಿದೆ.[೯೭-೯೮] ಪಾಂಚಾಲ ಅಥವಾ ರೋಹಿಲ ಖಂಡದಲ್ಲಿ ಇರುವ ಅಹಿಚ್ಛತ್ರದಿಂದ ಕದಂಬರಾಜರಲ್ಲಿ ಒಬ್ಬರು ನಾಗರ ದೇಶದ ಹೈಗ ಅಥವಾ ಹವಿಕ ಬ್ರಾಹ್ಮಣರ ಪೂರ್ವಜರಾದ ಬ್ರಾಹ್ಮಣರನ್ನು ಕ್ರಿ. ಶ. ೩ ಅಥವಾ ೪ ನೆಯ ಶತಮಾನದಲ್ಲಿ ಕರೆತಂದಿರಬೇಕು.[೯೯]ಅಹಿಚ್ಛತ್ರವು ಉತ್ತರಾಪಥದಲ್ಲಿಯ ಈಗಣ ರೋಹಿಲ ಖಂಡ ಎಂಬ ಪಾಂಚಾಲ ದೇಶದ ಅಹಿಚ್ಛತ್ರವೇ ಹೊರತು ಗೋದಾವರಿಯ ತೀರದಲ್ಲಿಯದೆಂಬ ದಕ್ಷಿಣ ಅಹಿಚ್ಛತ್ರವಲ್ಲ. ರೋಹಿಲ ಖಂಡದಲ್ಲಿರುವ ಈ ಅಹಿಚ್ಛತ್ರದ ಈಗಣ ಹೆಸರು ರಾಮನಗರ ಎಂದು.[೧೦೦]ಮಹಾಭಾರತದಲ್ಲಿ ತಥಾ ರೋಹಿತಕಾರಣ್ಯಂ ಮರುಭೂಮಿಶ್ಚ ಕೇವಲಾ| ಅಹಿಚ್ಛತ್ರ ಕಾಲಕೂಟಂ ಗಂಗಾಕೂಲಂ ಚ ಭಾರತ ॥ ಎಂದು ಉಲ್ಲೇಖಿಸಿ ಈಗಿನ

ರೋಹಿಲ ಖಂಡದ ಬರೇಲಿ ಮತ್ತು ರಾಮನಗರ ಪ್ರದೇಶಗಳೇ ಅಹಿಚ್ಛತ್ರವೆಂದು ಪ್ರತಿಪಾದಿಸಿದೆ [೧೦೧-೧೦೩] ಅಹಿಚ್ಛತ್ರವು ಉತ್ತರ ಪಾಂಚಾಲದ ರಾಜಧಾನಿಯಾಗಿತ್ತು. [೧೦೪-೧೦೫] ಉತ್ತರ ಪಾಂಚಾಲಕ್ಕಿದ್ದ ಇನ್ನೊಂದು ಹೆಸರು ಜಾಂಗಲ ದೇಶದ ಮುಖ್ಯ ಪಟ್ಟಣ ಅಹಿಚ್ಛತ್ರವಾಗಿತ್ತೆಂದು ಹೇಳಲಾಗಿದೆ. [೧೦೬-೧೦೮] ಪಾಂಚಾಲ ದೇಶವು ಚರ್ಮಣ್ವತೀ (ವರ್ತಮಾನ ಚಂಬಲಾ) ನದಿಯಿಂದ ಹಿಮಾಲಯದ ಬುಡದವರೆಗೆ ವಿಸ್ತೃತವಾಗಿದ್ದು ಅದನ್ನು ಗಂಗಾನದಿಯು ದಕ್ಷಿಣೋತ್ತರ ಎರಡು ಭಾಗಗಳನ್ನಾಗಿ ಕಲ್ಪಿಸಿ, ದ್ರೋಣಾಚಾರ್ಯರು ದಕ್ಷಿಣ ಪಾಂಚಾಲವನ್ನು ದ್ರುಪದನಿಗೆ ಕೊಟ್ಟು, ಉತ್ತರ ಪಾಂಚಾಲವನ್ನು ತನ್ನ ರಾಜ್ಯವನ್ನಾಗಿಟ್ಟುಕೊಂಡರು. ರಾಜಧಾನಿ ಅಹಿಚ್ಛತ್ರಾಪುರಿಯಾಗಿತ್ತು. [೧೦೯-೧೧೧] ಈ ಪ್ರಕಾರ ಉತ್ತರ ಪಾಂಚಾಲ ಅಂದರೆ ಈಗಿನ ರೋಹಿಲ್ ಖಂಡ (ಮಹಾಭಾರತದೊಳಗಿನ ರೋಹಿತಕಾರಣ್ಯ)ಅರ್ಥಾತ್ ಬರೇಲೀ, ರಾಮನಗರ ಮೊದಲಾದ ಪ್ರದೇಶಗಳೇ ಅಹಿಚ್ಛತ್ರ ಪ್ರದೇಶವೆಂದು ಹೇಳಬಹುದಾಗಿದೆ. [೧೧೨]

ಈ ಪ್ರದೇಶವು ಪರಶುರಾಮ ಕ್ಷೇತ್ರವಾಗಿದ್ದು ಇದಕ್ಕಿದ್ದ ಇನ್ನೊಂದು ಹೆಸರು ನಾಗರಖಂಡ. ನಾಗ ಎಂಬುದರ ಅಚ್ಚಗನ್ನಡದ ರೂಪ ಪಾವು (ಹಾವು). ಇದನ್ನು ದೇಶವಾಚಕವಾಗಿ ಇಗ ಎಂಬ ಪ್ರತ್ಯಯ (ಕನ್ನಡಿಗ ಎಂಬಂತೆ) ಹಚ್ಚಿದಾಗ ಪಾವಿಗ ಹಾವಿಗ ಆಗಬಹುದು. ಅದು ಮುಂದೆ ಇಕ್ಕವಲಾಗಿ ಪವಿಗ, ಪವಿಕ, ಹವ್ಯಕ ಎಂದು ಕೊನೆಗೆ ಸಂಸ್ಕೃತೀಕರಣಗೊಂಡಿತು. ಹಾಗೆಯೇ ಪವಿಗ, ಪೈಗ, ಹೈಗ, ಹೈವ ಎಂದು ಕನ್ನಡದಲ್ಲಿಯೇ ಮಾರ್ಪಾಟುಗಳನ್ನು ತಾಳಿತು. [೧೧೩-೧೧೪] ಅಹಿ ಎಂದರೆ ಕನ್ನಡದಲ್ಲಿ ಹಾವು ಎಂದರ್ಥ. ಕನ್ನಡ ಕುಣುಬಿಗಳಲ್ಲೂ ಹಾವಿಗೆ ಹೈಸ ಎಂಬ ಶಬ್ದವಿದೆ. ಆದುದರಿಂದ ಹೈಗ ಅಥವಾ ಹವಿಗ ಎಂಬುದು ಆ ಪ್ರದೇಶಕ್ಕೆ ಇದ್ದ ಸ್ಥಳೀಯ ಹೆಸರಾಗಿರಬೇಕು. ಆದರ ಸಂಸ್ಕೃತರೂಪವೇ ಅಹಿಕ್ಷೇತ್ರ. [೧೧೫-೧೧೬] ಶಿವಮೊಗ್ಗ ಜಿಲ್ಲೆಯ ಗುಟ್ಟವಾಡಿಯಲ್ಲಿ ದೊರೆತ ಗಂಗರ ತಾಮ್ರ ಶಾಸನ (ಕ್ರಿ.ಶ. ೯೦೪) ವ್ಯಕ್ತಪಡಿಸುವಂತೆ ಅಹಿಚ್ಛತ್ರದಿಂದ ಬ್ರಾಹ್ಮಣರು ಬಂದು, ಬನವಾಸಿ ವಿಷಯದ ತಾನಗುಂದೂರಿನಲ್ಲಿ (ತಾಳಗುಂದ) ನೆಲಸಿದುದಾಗಿ ತಿಳಿದುಬರುತ್ತದೆ. [೧೧೭-೧೧೮] ದ್ರಾವಿಡ ದೇಶದಲ್ಲಿ ನೆಲಸಿದ್ದ ಬ್ರಾಹ್ಮಣರೇ ಕಾರಣಾಂತರಗಳಿಂದ ಅಹಿಚ್ಛತ್ರಕ್ಕೆ ಹೋಗಿದ್ದು, ಮಯೂರವರ್ಮನ ಪ್ರೋತ್ಸಾಹದಿಂದ ಮತ್ತೆ ಹಿಂದಿರುಗಿ ಬಂದರೆಂಬ ಊಹೆ ತರ್ಕಬದ್ಧವಾಗಿ ನಿಲ್ಲುತ್ತದೆ. ಇವರು ಮೊದಲಿಂದ ಅಹಿಚ್ಛತ್ರ ನಿವಾಸಿಗಳೇ ಆಗಿದ್ದಲ್ಲಿ ಒಬ್ಬ ರಾಜನ ಪ್ರೋತ್ಸಾಹಕ್ಕೆ ಮಣಿದು ದೇಶಾಂತರಕ್ಕೆ ಬಂದು ನೆಲಸುತ್ತಾರೆಂಬುದು ವ್ಯಾವಹಾರಿಕವಲ್ಲ. ಅಲ್ಲದೆ ಉತ್ತರ ದೇಶದವರ ಗೋತ್ರಾದಿಗಳಾಗಲಿ, ಭಾಷೆಯಾಗಲಿ, ಕೆಲವಾದರೂ ಭಾಷಾಶಬ್ದಗಳಾಗಲಿ ಹವ್ಯಕರಲ್ಲಿ ಕಂಡುಬರುವುದಿಲ್ಲ. [೧೨೦]

ಹೈಗನಾಡಿನಲ್ಲಿ ವಿಶೇಷವಾಗಿ ಕಂಡುಬರುವ ರೈತ ವರ್ಗದವರು ಹವಿಕ ಬ್ರಾಹ್ಮಣರಾಗಿದ್ದು ಆ ನಾಡಿನಿಂದಾಗಿ ಅವರಿಗೆ ಆ ಹೆಸರು ಬಂದಿದೆ. [೧೨೧] ಹವ್ಯಕರು ಕೇರಳದ ಮೂಲಕ ಬಂದರೆಂದು ಕೆಲ ಸಂಶೋಧಕರ ವಾದ. [೧೨೨-೧೨೩] ಪಶ್ಚಿಮ ಕರಾವಳಿಯಲ್ಲಿರುವ ಉತ್ತರ ಕನ್ನಡ ಜಿಲ್ಲೆಗೆ ನರ್ಮದಾನುಕೂಲವರ್ತಿಯಾದ ಉತ್ತರ ಹೈಹಯದವರು ಬಂದು ನೆಲಸಿದ್ದರಿಂದ ಹೈಹಯ ಎಂದು ಹೆಸರಾಗಿರಬೇಕು. ಹೈಹಯವೇ ಸಂಕೋಚವಾಗಿಯೋ ಅಥವಾ ಹೈಹಯಕವು ಸಂಕುಚಿತವಾಗಿಯೋ

ಲೋಕೋಕ್ತಿಯಲ್ಲಿ ಹೈಗ ಎಂದಾಗಿರಬೇಕು. ಪಶುಕವು ಉತ್ತರ ಕನ್ನಡದ ಹೈಗ ಎಂಬ ರೂಢ ನಾಮದ ಪುನಃ ಸಂಸ್ಕೃತಿಸಿದ ರೂಪವಾಗಿರಬೇಕು.[೧೧೪] ಐದನೆಯ ಪಶು ಎಂಬ ದೇಶವೆಂದರೆ ಹೈಗದೇಶ ಎಂಬ ಉತ್ತರ ಕನ್ನಡ ಜಿಲ್ಲೆ. ಕನ್ನಡದ ಪಸುರ್ (ಪಸಿರು) ಎಂಬುದು ಪಯಿರ್ ಪಯ್ರು ಪೈರು ಎಂದು ಆದಂತೆ, ಉತ್ತರ ಕನ್ನಡ ಜಿಲ್ಲೆಯ ನಾಡುನುಡಿಯಾದ ಕನ್ನಡದಲ್ಲಿ ಪಶುಕವು ಪಯಿಕ ಪಯ್ಕ ಪಯಿಗ ಪಯ್ಗ ಎಂದು ತದ್ಭವಿಸಿ ನಡುಗನ್ನಡದಲ್ಲಿ ಪಯಿಗ (ಪಯ್ಗ)ವು ಹಯಿಗ ಹಯ್ಗ ಎಂದೂ ಹಯಿಗ (ಹಯ್ಗ)ವು ಹೈಗ ಎಂದೂ ಸಹಜವಾಗಿ ರೂಪಾಂತರಿಸುತ್ತದೆ. [೧೧೫] ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ೨೦ ಕಿ.ಮೀ. ದೂರದಲ್ಲಿನ ಹೈಗುಂದ ಶರಾವತಿಯಿಂದ ಸುತ್ತುವರಿಯಲ್ಪಟ್ಟ ದ್ವೀಪವಾಗಿದ್ದು, ಹೆರಂಗಡಿ ಗ್ರಾಮಕ್ಕೆ ಸೇರಿದ್ದು ಪ್ರಾಚೀನ ಕಾಲದಲ್ಲಿ ಪಯ್ವೆ, ಪಯ್ವೆಗುಂದ ಅಥವಾ ಹಯ್ವೆಗುಂದ ಎಂದು ಹೆಸರಾಗಿತ್ತು. ಇಲ್ಲಿ ಯಜ್ಞಕುಂಡಗಳ ಅವಶೇಷಗಳನ್ನು ಇಂದಿಗೂ ಕಾಣಬಹುದು. ಪಯ್ವೆಗುಂದ ಅಥವಾ ಹೈಗುಂದವು ಹವಿಕರ ಮೂಲವಾದ ಅಹಿಕ್ಷೇತ್ರವಾಗಿರುವ ಸಾಧ್ಯತೆ ಉಂಟು[೧೧೬-೧೧೭] ಮಯೂರಶರ್ಮನು ಉತ್ತರ ಭಾರತದ ಕಡೆಯಿಂದ ಹವ್ಯಕವ್ಯಗಳಿಗಾಗಿ ಎಂದು ಕರೆಸಿಕೊಂಡು ದಕ್ಷಿಣದಲ್ಲಿ ನೆಲೆಯೂರುವಂತೆ ಮಾಡಿದನೆಂಬ ಐತಿಹ್ಯವನ್ನು ಸಹ್ಯಾದ್ರಿ ಖಂಡದಲ್ಲಿ ಹೇಳಿದ್ದರೂ ಈ ಪಂಗಡದವರು ಮೂಲತಃ ಕರ್ನಾಟಕದಲ್ಲಿ ಹೈಹಯರು ಆಳುತ್ತಿದ್ದ ಉತ್ತರ ಕನ್ನಡ ಜಿಲ್ಲೆಯವರೆನ್ನಬೇಕು.[೧೧೮] ಹೈವೆ ಹೈಗ ಎಂಬುದು ಒಂದು ಪ್ರದೇಶವಾಚಕ ಶಬ್ದ. ಹೈಗ ಪ್ರದೇಶಕ್ಕೆ ಸೇರಿದ ಬ್ರಾಹ್ಮಣರು ಹೈಗರು ಅಥವಾ ಹವ್ಯಕರು. ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲ ಭಾಗಗಳಿಗೆ ಹೈವೆ ಎನ್ನುತ್ತಿದ್ದರು. ಹೈವೆ ಹೈಗ ಎಂಬ ಹೆಸರು ಹೈಗ ಎಂಬ ಮರದಿಂದ ಬಂದಿರಬಹುದು. ಹೈಗುಂದ ಎಂಬ ಊರ ಹೆಸರು ಆ ಮರಗಳಿದ್ದ ಗುಡ್ಡ ಎಂಬ ಅರ್ಥದಿಂದ ಬಂದುದು.[೧೧೯] ಉತ್ತರ ಕೆನರಾದ ದಕ್ಷಿಣ ಭಾಗ ಮತ್ತು ದಕ್ಷಿಣ ಕೆನರಾದ ತೀರಾ ಉತ್ತರ ಭಾಗವನ್ನೊಳಗೊಂಡ ಹೈಗ ಪ್ರದೇಶದಲ್ಲಿ ಮಯೂರವರ್ಮನು ಕರೆತಂದ ಬ್ರಾಹ್ಮಣ ವರ್ಗದ ವಂಶಸ್ಥರಾದ ಹವಿಕ, ಹವಿಗ ಅಥವಾ ಹೈಗ ಬ್ರಾಹ್ಮಣರು ನೆಲಸಿದರು.[೧೨೦] ಉತ್ತರ ಕೆನರಾದ ಘಟ್ಟದೊಳಗೆ ಮತ್ತು ಘಟ್ಟದ ಮೇಲಿನ ಪ್ರದೇಶಗಳಲ್ಲಿ ಹೆಚ್ಚಿನ ಜನರನ್ನು ಹೈಗ ಬ್ರಾಹ್ಮಣರೆಂದು ಕರೆಯುತ್ತಾರೆ [೧೨೧-೧೨೨] ತುಳು ದೇಶದ ಬ್ರಾಹ್ಮಣರು ಹವಿಗರು.[೧೨೩]ಹವ್ಯಕವೆಂಬ ಪದ ಸಾಕಷ್ಟು ಪ್ರಾಚೀನವೆನ್ನಬಹುದು. ಇನ್ನು ಕೆಲವು ವಾದಗಳ ಪ್ರಕಾರ ಹೈಗುಂದದಿಂದ ಬಂದವರಾದುದರಿಂದ ಹೈಗರು ಎಂದೂ ಹೇಳಬಹುದು.[೧೨೪]

'ಹವ್ಯಕ' ಇದು ಹೈಗ ಶಬ್ದದ ಸಂಸ್ಕೃತೀಕರಣ.[೧೨೫] ಅಹಿಕ್ಷೇತ್ರದವರಾಗಿ ಅಹಿಕರೆನಿಸಿದರು. ಅಹಿ ಎಂಬುದಕ್ಕೆ 'ಕ' ಪ್ರತ್ಯಯ ಸೇರಿದಾಗ 'ಅಹಿಕ' ಎಂದಾಗುವುದು. ಅಹಿಕ ಎಂಬುದು ಹಯಿಕ, ಹಯಿಗ, ಹೈಗ, ಹವಿಕ (ಹವೀಕ), ಹವ್ಯಕ ಎಂಬ ವಾಚಕಗಳನ್ನು ಪಡೆದುದಾಗಿ ತಿಳಿದುಬರುತ್ತದೆ. ಅಹುದು-ಹಉದು-ಹವ್ವುದು-ಹೌದು; ಎಹಗೆ-ಹೇಗೆ; ಅರಲು-ಅಲರು;ಅಸಗ-ಅಗಸ: ಎಂಬೀ ರೂಪ ಪರಿವರ್ತನೆಗಳು ಲಕ್ಷ್ಯಾರ್ಹ. 'ಹೈಕ' ಎಂಬಲ್ಲಿ ಮೂಲವಾಗಿ 'ಹೈ' ಎಂಬುದಿದ್ದುಕೊಂಡು ಹೈವ, ಹೈಗ (ಹೈಹಯ) ಮುಂತಾದ ರೂಪಗಳಾದುದನ್ನು ಕಾಣುತ್ತೇವೆ. ಅಹಿಕ ಎಂಬ ಸಂಸ್ಕೃತ ಶಬ್ದ ಹೈಗ, ಹವಿಗ ರೂಪಗಳಿಗೆ ಬಂದು ಪುನಃ ಸಂಸ್ಕೃತವಾಗಿ ಹವ್ಯಕವಾದಂತೆ ಕಂಡುಬರುತ್ತದೆ[೧೨೬-೧೨೮] ತಾನಗುಂದ,

ಹೈಗುಂದಗಳಲ್ಲಿ ಅವರ ವಸತಿಯ ಹಾಗೂ ಯಜ್ಞಕಾರ್ಯದ ಅವಶೇಷಗಳು ಇವೆ.[೧೩೯] ಹವ್ಯಕರು ಹವಿಕರು ಅಥವಾ ಹೈಗ (ಹೈವೆ ಪ್ರದೇಶದಿಂದ ಉತ್ಪತ್ತಿಯಾದ)ರೆಂದು ಕರೆಯಲ್ಪಡುತ್ತಾರೆ. ಅವರು ಬನವಾಸಿಯ ಕದಂಬ ಸಾಮ್ರಾಜ್ಯದ ಸ್ಥಾಪಕ ಮಯೂರಶರ್ಮನು ಉತ್ತರ ಭಾರತದಿಂದ ಕರೆತಂದ ಬ್ರಾಹ್ಮಣರ ನಿರ್ದಿಷ್ಟ ವರ್ಗಗಳ ವಂಶಸ್ಥರೆಂದು ಹೇಳಲಾಗಿದೆ. ಅವರು ನೆಲಸಿದ ಪ್ರದೇಶವನ್ನು ಉತ್ತರ ಕನ್ನಡದ ಭಾಗವಾದ ಹೈಗ ಅಥವಾ ಹೈವ ಎಂದು ಕರೆಯಲಾಗಿದೆ.[೧೪೦] ಕ್ರಿ.ಶ. ಸುಮಾರು ೬ನೆಯ ಶತಮಾನದ ಉತ್ತರ ಕನ್ನಡ ಜಿಲ್ಲೆ ಕಂಪ್ಲಿ ಶಾಸನದಲ್ಲಿ ಪೈವೆಯರು ಎಂಬ ಶಬ್ದವಿದ್ದು ಅವರೇ ಮುಂದೆ ಹೈವೆಯರು, ಹವ್ಯಕರು ಅಥವಾ ಹೈಗರು ಆಗಿರುವಂತಿದೆ.[೧೪೧] ದೇವತೆಗಳಿಗೆ ವೈಶ್ವದೇವದ ಮೂಲಕ ವಿಶೇಷವಾಗಿ ಹವ್ಯ (ಹವಿಸ್ಸು) ಗೋರಾಷ್ಟ್ರ ಪ್ರದೇಶದಲ್ಲಿ ಸಲ್ಲುವುದರಿಂದಾಗಿ 'ಹವ್ಯ' ಎಂಬ ಹೆಸರು ಬಂದುದಾಗಿ ಹೇಳಲಾಗಿದೆ.[೧೪೨] ಹವ್ಯಾನಿ ಯಂತ್ರ ದೀಯಂತೇ ದೇವತಾಭ್ಯೋ ವಿಶೇಷತಃ | ತತೋ ಹವ್ಯ ಇತಿ ಖ್ಯಾತ ದೇಶೋ ಗೋರಾಷ್ಟ್ರನಾಮಕಃ ||[೧೪೩] ಹವ್ಯ ಏವ ಹವ್ಯಕ ಸ್ವಾರ್ಥೇಕ ಪ್ರತ್ಯಯಃ ಎಂಬ ವಿವರಣೆಯಂತೆ ಹವ್ಯ ಎಂಬುದು ಸ್ವ ಅರ್ಥದಲ್ಲಿ ಕ ಪ್ರತ್ಯಯ ಸೇರಿ ಹವ್ಯಕವಾಯಿತು.[೧೪೪] ಹವ್ಯಕರೆಂದರೆ ಹೈವದೇಶದಲ್ಲಿ ವಾಸಿಸುವವರು ಮತ್ತು ಹವ್ಯಕವ್ಯಗಳನ್ನು ಚೆನ್ನಾಗಿ ನಡೆಸುವವರೆಂದರ್ಥ. ಯತೋ ಹವ್ಯೇ ಕವ್ಯೇ ವಿಧಿವಿಹಿತ ಧರ್ಮೇಹ್ಯ ಭಾರತಾ ತತಃ ಖ್ಯಾತಾ ಏತೇ ನಿಗಮ ವಿಧಿತಾ ಹವ್ಯಕ ಗಣಾಃ ಎಂದು ತಿಳಿಸಿದಂತೆ ಹವ್ಯಕರು ಖ್ಯಾತರು.[೧೪೫] ಹವೀಕ ಎಂದರೆ ಹವ್ಯಕ, ಹೈಗ, ಸ್ಮಾರ್ತ ಬ್ರಾಹ್ಮಣರ ಒಂದು ವರ್ಗ ಎಂದರ್ಥ.[೧೪೬-೧೪೭] ಹವ್ಯಕರ ನಿತ್ಯಾಹ್ನಿಕದಲ್ಲಿ ಗಂಗಾ ಯಮುನೆಯೋರ್ಮಧ್ಯೇಯೇ ವಸಂತಿ..... ನಮಃ ಎಂದು ಬರುವುದರಿಂದ ಹವ್ಯಕರು ಗಂಗಾನದೀ ತೀರದಲ್ಲಿ ಹಿಂದೆ ವಾಸವಾಗಿದ್ದರೆಂಬುದನ್ನು ಸೂಚಿಸುತ್ತದೆ.[೧೪೮]

ಆ ಬ್ರಾಹ್ಮಣರು ಅಹಿಚ್ಛತ್ರ ಎಂಬಲ್ಲಿಂದ ಬಂದವರಾದ ಕಾರಣ ಅವರಿಗೆ ಅಹಿಚ್ಛತ್ರ ಬ್ರಾಹ್ಮಣ ಎಂಬ ಹೆಸರು ರೂಢವಾಯಿತು. ಈ ದೀರ್ಘವಾದ ಹೆಸರು ಆಡುಭಾಷೆಯಲ್ಲಿ ಸಂಕುಚಿತವಾಗಿ ಅಹಿಕ ಬ್ರಾಹ್ಮಣ ಎಂಬ ರೂಪವನ್ನು ತಳೆಯಿತು. ಅಹಿಕ ಎಂಬ ಶಬ್ದವು ಮತ್ತಷ್ಟು ರೂಪಾಂತರಗೊಂಡು ಹವಿಕ ಎಂದು ಇಂದು ರೂಢವಾಗಿರುತ್ತದೆ. ಈ ಶಬ್ದವನ್ನು ಈಗೀಗ ಕೆಲವರು ಹವ್ಯಕ ಎಂದು ಮಾಡಿಕೊಂಡಿದ್ದಾರೆ.[೧೪೯] ಮಯೂರಶರ್ಮನು ಕರೆತಂದ ಬ್ರಾಹ್ಮಣರು ದೇವರನ್ನು ಮತ್ತು ಮೃತರಾದ ಪಿತೃಗಳನ್ನು ತೃಪ್ತಿಪಡಿಸಲು ಹವ್ಯಕವ್ಯಗಳನ್ನು ಮಾಡುತ್ತಿದ್ದುದರಿಂದ ಇವರಿಗೆ ಹವ್ಯಕರೆಂಬ ಹೆಸರು ಬಂದಿತು. ಕ್ರಮೇಣ ಅದೇ ಶಬ್ದವೇ ಹವಿಕ, ಹೈಕ, ಹೈಗ ಮುಂತಾಗಿ ಪರಿವರ್ತನೆ ಹೊಂದಿತು.[೧೫೦] ಹೂ ದಾನಾದನಯೋಃ ಅಂದರೆ ಅರ್ಪಣೆ ಮತ್ತು ಭಕ್ಷಣೆ ಎಂಬ ಅರ್ಥದ ಹೂ ಧಾತುವಿನಿಂದ ಹವಿಸ್ ಹವ್ಯ ಪದಗಳು ಉತ್ಪನ್ನವಾಗಿದೆ. ಕನ್ನಡದ ಹೈನು ಹಾಲು ಪದವೂ ಹವಿಸ್ ಪದಕ್ಕೆ ಶಬ್ದಾರ್ಥವೆರಡರಲ್ಲೂ ಸಂವಾದಿಯಾಗಿದೆ. ಹಸುವಿನ ಹಾಲು, ತುಪ್ಪ, ಮೊಸರು, ಗೋಮಯ, ಗೋಮೂತ್ರ ಇವೆಲ್ಲ ಧಾರ್ಮಿಕ ಯಜ್ಞಕರ್ಮಗಳಿಗೆ ಮುಖ್ಯ ದ್ರವ್ಯಗಳಾಗಿವೆ ಈ ಹವಿರ್ದಾನ ಭಕ್ಷಣಗಳ ಪ್ರಾಧಾನ್ಯವಿರುವ ಕರ್ಮಠ ಬ್ರಾಹ್ಮಣರು ವಾಸ ಮಾಡುತ್ತಿರುವ ಭೂಭಾಗವೇ ಹೈಗನಾಡು, ಗೋರಾಷ್ಟ್ರ ದೇಶ. ಇಲ್ಲಿ ವಾಸಿಸುವ ಜನ ಹೈಗರು ಹವೀಕರು ಹವ್ಯಕರು. ಇಲ್ಲಿ ಹೈಗರು ಹವ್ಯಕರು ವಾಸಿಸಿದ್ದರಿಂದ ಹೈನಾಡಾಯಿತೋ ಹೈಗನಾಡಿನಲ್ಲಿ ವಾಸಮಾಡಿದ್ದರಿಂದ

ಇವರು ಹೈಗರು ಹವೀಕ ಹವ್ಯಕರಾದರೋ ಎನ್ನುವ ಪ್ರಶ್ನೆಗೆ ಸರಿಯಾದ ಉತ್ತರ ಸಿಗದು.[೧೫೫] ಯಜ್ಞಯಾಗ, ಹೋಮಹವನಗಳಲ್ಲಿ ಆರಾಧ್ಯ ದೇವತೆಗಳನ್ನು ಉದ್ದೇಶಿಸಿ ಅಗ್ನಿಗೆ ಸಮರ್ಪಿಸುವ ಸಮಿತ್ತು, ಆಜ್ಯ, ಕ್ಷೀರ, ಚರು ಮೊದಲಾದ ಆಹುತಿ ದ್ರವ್ಯಗಳಿಗೆ ಹವ್ಯ, ಹವಿಷ್ಯ, ಹವಿಸ್ಸು ಮುಂತಾದ ಹೆಸರುಗಳು ಪ್ರಸಿದ್ಧವಾಗಿವೆ. ಹವಿಷೇ ಹಿತಂ ಎಂಬುದು ಅದರ ಪದವಿಭಾಗ. ಹು ದಾನಾದಯೋಃ ಎಂದು ಆ ಧಾತುವಿನ ಅರ್ಥ. ಯತ್ ಪ್ರತ್ಯಯವು ಸೇರಿ ಅದು ಹವ್ಯ ಎಂಬ ಶಬ್ದವಾಗಿದೆ.[೧೫೬] ಹವಿಕ ಪದವು ಹವ್ಯಕ ಪದದ ಅಪಭ್ರಂಶ ಅಥವಾ ಯಜ್ಞಯಾಗಗಳ ನೆರವೇರಿಕೆಯನ್ನು ಸೂಚಿಸುತ್ತದೆಯೆಂದು ಹೇಳಲಾಗಿದೆ.[೧೫೭-೧೫೮] ಹವ್ಯಕರೆಂದರೆ ಹವ್ಯಕವ್ಯದ ಅಧಿಕಾರಿಗಳು. ಯಜ್ಞಯಾಗಗಳಲ್ಲಿ ಹವಿಸ್ಸನ್ನು ಅರ್ಪಿಸುವವರು ಅರ್ಥಾತ್ ಯಜ್ಞಯಾಗ ಮಾಡುವ ಅಗ್ನಿಹೋತ್ರಿಗಳು, ಯಜ್ಞ ದೀಕ್ಷಿತರು, ಯಾಜಿಗಳು, ಹೆಗಡೆಯವರು, ಪಂಡಿತರು, ಭಟ್ಟರೇ ಮೊದಲಾದ ಷಟ್ಕರ್ಮಿ ಬ್ರಾಹ್ಮಣರು.[೧೫೯] ಹವ್ಯಕ ಎಂಬ ಪದದ ಭಾಷಾ ಶಾಸ್ತ್ರೀಯ ಹಿನ್ನೆಲೆ ಏನೇ ಇರಲಿ ಈ ಪದ ಕೇಳಿದೊಡನೆಯೇ ಇದು ವೈದಿಕ ಪರಂಪರೆಯ ಗಂಧವುಳ್ಳದ್ದೆಂದು ಎಲ್ಲರ ಮನಸ್ಸಿಗೂ ಬರುತ್ತದೆ.[೧೬೦] ಹವ್ಯಕವ್ಯ ವಿಧಿಜ್ಞತ್ವಾತ್ ಹವ್ಯಕಾಸ್ತೇ ಪ್ರಕೀರ್ತಿತಾ| ಹವ್ಯಕೇಷು ಪ್ರಭೇದಾಸ್ತು ಸಪ್ತ ಕಾರ್ಯಾನುಸಾರತಃ || ಅಂದರೆ ದೇವತೆಗಳಿಗೆ ಹವ್ಯವನ್ನೂ ಪಿತೃಗಳಿಗೆ ಕವ್ಯವನ್ನೂ ವಿಧಿವತ್ತಾಗಿ ಸಮರ್ಪಿಸುವ ಬ್ರಾಹ್ಮಣರು ಹವ್ಯಕರು ಎಂದು ಪ್ರಸಿದ್ಧರು. ಬೇರೆ ಬ್ರಾಹ್ಮಣರು ಅನರ್ಹರೆಂದು ಅರ್ಥವಲ್ಲ. ಬಹುಶಃ ಅತಿ ಪ್ರಾಚೀನ ಕಾಲದಲ್ಲಿ ಅವರೆಲ್ಲ ಹವ್ಯಕರಾಗಿದ್ದಿರಬಹುದು.[೧೬೧-೧೬೨] ಕದಂಬರ ಕಾಲದಲ್ಲಿ ಉತ್ತರ ಭಾರತದ ಅಹಿಚ್ಛತ್ರದಿಂದ ಬಂದು ಅಹಿಕರೆನಿಸಿಕೊಂಡು ವೇದಾಧ್ಯಯನ ಕೃಷಿಗಳಲ್ಲಿ ನಿರತರಾದ ಬ್ರಾಹ್ಮಣರೇ ಹವ್ಯಕರು. ಅವರಿಗೆ ಹಯಿಕ, ಹೈಗ, ಹವಿಕ, ಹವ್ಯಕ ಎಂಬ ಹೆಸರುಗಳೂಲಕ್ಷಣವಿಧಯಾ ಬೋಧಿತವಾಗುವುದರಿಂದ ಹವ್ಯದೇಶಭವತ್ವ, ಹವ್ಯಕವ್ಯ ಕರ್ಮನೈಪುಣ್ಯ ಈ ಎರಡೂ ಹವ್ಯಕ ಶಬ್ದಕ್ಕೆ ಪ್ರವೃತ್ತಿ ನಿಮಿತ್ತಗಳಾಗಬಹುದು.[೧೬೩] ಮಯೂರವರ್ಮನಿಂದ ಪರಿಚಿತರಾದ ಬ್ರಾಹ್ಮಣರು ಭಟ್ಟಾಚಾರ್ಯರ ಅನುಯಾಯಿಗಳಾಗಿದ್ದು ಆ ನಂತರ ೮ನೆಯ ಶತಮಾನದಲ್ಲಿ ಶಂಕರಾಚಾರ್ಯರ ತತ್ವಗಳನ್ನು ಅಳವಡಿಸಿಕೊಂಡರೆಂದು ಹೇಳಲಾಗಿದೆ.[೧೬೪] ಅದ್ವೈತ ಪೀಠಕ್ಕೆ ನಡೆದುಕೊಳ್ಳುವುದರಿಂದ ಇವರು ಅದ್ವೈತಾವಲಂಬಿಗಳಾದರು ಹಾಗೂ ಶ್ರೀಮದ್ ಶಂಕರಾಚಾರ್ಯರ ತತ್ವಾನುಯಾಯಿಗಳಾದರು. ಶ್ರುತಿಯುಕ್ತವಾದ ಯಜ್ಞಯಾಗಾದಿಗಳನ್ನು ಮಾಡುವುದರಿಂದಲೇ ಇವರನ್ನು 'ಹವ್ಯಕ'ರೆಂದು ಕರೆಯಲಾಯಿತು. ಹಾಗೆಯೇ ಇವರು ಸ್ಮೃತಿಯುಕ್ತವಾದ ಪೂಜಾ ವಿಧಾನಗಳನ್ನು ನಡೆಸುವುದರಿಂದ 'ಸ್ಮಾರ್ತ'ರೆಂದು ಕರೆಯಲ್ಪಟ್ಟರು.[೧೬೫]

ಸಂಕ್ಷೇಪದಲ್ಲಿ, ದಾಖಲೆಗಳಲ್ಲಿ ಲಭ್ಯವಾಗಿರುವಂತೆ ಉಗಮಗೊಂಡಿರುವ, ಶತಮಾನಗಳಿಂದ ಸಹ್ಯಾದ್ರಿ ಬೆಟ್ಟಸಾಲು ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬರುವ ಹವ್ಯಕ ಉಪಸಂಸ್ಕೃತಿಯು ಕಳೆದ ಐವತ್ತು ವರ್ಷಗಳ ಕಾಲಘಟ್ಟದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿನ ಸವಾಲುಗಳನ್ನು ಎದುರಿಸುತ್ತಾ ಹಲವಾರು ಸ್ಥಳಗಳಲ್ಲಿ ಬದಲಾಗುತ್ತಾ ಬಂದಿದೆ. ವಾಸ್ತವದಲ್ಲಿ ಹವ್ಯಕ ಸಮುದಾಯದ ಸಮಾಜಶಾಸ್ತ್ರೀಯ ಅಧ್ಯಯನವು ರೂಢಿಗತವಾದ ವಿಶಿಷ್ಟ ಭಾಷೆ, ಶಾಸ್ತ್ರ

ಸಂಪ್ರದಾಯಗಳು, ಸಂಸ್ಕಾರಗಳು, ನಂಬಿಕೆಗಳು, ಆಚರಣೆಗಳು, ಜೀವನ ವಿಧಾನ ಮತ್ತು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ನಡಾವಳಿಗಳನ್ನುಳ್ಳ ಒಂದು ಜನಸಮುದಾಯದ ಆತ್ಮಾವಲೋಕನ ಅಥವಾ ಬದಲಾವಣೆಯ ಸ್ವರೂಪವನ್ನು ಒಳಗೊಂಡಿದೆ.

* * * * *

ಟಿಪ್ಪಣಿ ಮತ್ತು ಪರಾಮರ್ಶೆ

೧. ಟಿ. ಕೇಶವ ಭಟ್ಟ: ೧೯೮೬, ಹವ್ಯಕರ ಶೋಭಾನೆಗಳು, ಬೆಂಗಳೂರು, ಚಿರಸಾಹಿತ್ಯ ಪ್ರಕಾಶನ, ಪುಟ ೪೮೦.

೨. ಶಾಲಿನಿ ರಘುನಾಥ: ೧೯೭೯, ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಮೈಸೂರು, ಕನ್ನಡ ಅಧ್ಯಯನ ಸಂಸ್ಥೆ, ಪುಟ ೫

೩. ಟಿ. ಕೇಶವಭಟ್ಟ: ಹವ್ಯಕರ ಶೋಭಾನೆಗಳು, ಪುಟ ೪೭೮.

೪. ಶಾಲಿನಿ ರಘುನಾಥ: ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೯

೫. ಉತ್ತರ ಸಹ್ಯಾದ್ರಿ ಖಂಡ: ಅಧ್ಯಾಯ ೧, ಪುಟ ೫, ಶ್ಲೋಕ ೪೨. (ವಿವರಣೆ:ಈ ಗ್ರಂಥವನ್ನು ಸೊರಬ ತಾಲ್ಲೂಕು ಹೊಸಬಾಳೆ ಗ್ರಾಮದ ಅನಂತ ಹೆಗಡೆಯವರು ಸಂಗ್ರಹಿಸಿದ್ದು,ಇದನ್ನು ನಡಹಳ್ಳಿವೆಂಕಟೇಶ ಶರ್ಮರು ಪರಿಶೋಧಿಸಿ ೧೮೩೪ರಲ್ಲಿ ನಡಹಳ್ಳಿಯ ತಮ್ಮ ಲಕ್ಷ್ಮೀವಿಲಾಸ ಮುದ್ರಾಕ್ಷರ ಶಾಲೆಯಲ್ಲಿ ಅಚ್ಚು ಮಾಡಿಸಿರುತ್ತಾರೆ.)

೬. B.L. Rice: 1897. Mysore: A Gazetteer, Volume I, London, Archibald Coustable and Company, p. 276.

೭. ಟಿ. ಕೇಶವಭಟ್ಟ:೧೯೯೬, ಹವ್ಯಕರು ಮತ್ತು ಶ್ರೀ ಗುರುಪೀಠ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ೨.

೮. H.R. Raghunath Bhat: 1993, Havika-Some Etymological Speculations and Identifications, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ೪೧.

೯. ಎಚ್.ಎಂ.ತಿಮ್ಮಪ್ಪ: ೧೯೯೦, ಹವ್ಯಕರ ಇತಿಹಾಸ, ಕೆಡಲಸರ, ಹವ್ಯಕ ಸಂಪದಭಿವೃದ್ಧಿ ಸಮಾಜ, ಪುಟ ೩೩.

೧೦. ಟಿ.ಕೆ. ಮಹಮೂದ್ (ಸಂ): ೧೯೮೬, ಉತ್ತರ ಕನ್ನಡ ದರ್ಶನ, ಬೆಂಗಳೂರು, ಕನ್ನಡ ಸಾಹಿತ್ಯ ಪರಿಷತ್ತು, ಪುಟ ೧೫೩.

೧೧. ಪಿ. ಗುರುರಾಜ ಭಟ್: ತಮಿಳುನಾಡಿನ ಚರಿತ್ರೆ, ಪುಟ ೧೦೫

೧೨. ಎಚ್.ಎಂ. ತಿಮ್ಮಪ್ಪ: ಹವ್ಯಕರ ಇತಿಹಾಸ, ಪುಟ ೩೦.

೧೩. ರಾಮಕೃಷ್ಣ ಅಡ್ಕೋಳಿ:೧೯೭೫, ಶ್ರೀಮದ್ರಾಘವೇಂದ್ರ ಭಾರತಿ ಮಹಾಸ್ವಾಮಿಗಳು, ಬೆಂಗಳೂರು, ಸದ್ಗ್ರಂಥ ಪ್ರಕಾಶನ ಸಮಿತಿ, ಪುಟ ೧೦.

೧೪. Trivendrum Sanskrit Series: No. 45, pp. 3-4.

೧೫. ಕೃಷ್ಣಭಟ್ಟ, ಹೆರಂಜೆ/ಉಪಾಧ್ಯ ಮುರಳೀಧರ, ಹಿರಿಯಡಕ: ೧೯೯೫ ಗೋವಿಂದ ಪೈ ಸಂಶೋದನ ಸಂಪುಟ, ಉಡುಪಿ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಪುಟ ೫೮೬.

೧೬. ಟಿ. ಕೇಶವ ಭಟ್ಟ: ಹವ್ಯಕರ ಶೋಭಾನೆಗಳು, ಪುಟ ೪೮೦.

೧೭. H.R. Raghunath Bhat: Havika-Some Etymological Speculation.. P.41.

೧೮. ಟಿ.ಕೆ. ಮಹಮೂದ್: ಉತ್ತರ ಕನ್ನಡ ದರ್ಶನ, ಪುಟ ೧೫೩.

೧೯. ಅದೇ, ಪುಟ ೧೫೩.

೨೦. ಅದೇ, ಪುಟ ೧೫೪.

೨೧. ಉತ್ತರ ಸಹ್ಯಾದ್ರಿ ಖಂಡ: ಅಧ್ಯಾಯ ೧, ಪುಟ ೬-೭.

೨೨. ಎಚ್. ಎಂ. ತಿಮ್ಮಪ್ಪ: ಹವ್ಯಕರ ಇತಿಹಾಸ, ಪುಟ ೪.

೨೩. ಉತ್ತರ ಸಹ್ಯಾದ್ರಿ ಖಂಡ: ಅಧ್ಯಾಯ ೪, ಪುಟ ೧೪, ಶ್ಲೋಕ ೨೦.

೨೪. ಎಚ್.ಎಂ. ತಿಮ್ಮಪ್ಪ: ಹವ್ಯಕರ ಇತಿಹಾಸ, ಪುಟ ೨೬-೨೭

೨೫. ಉತ್ತರ ಸಹ್ಯಾದ್ರಿ ಖಂಡ: ಅಧ್ಯಾಯ ೪, ಪುಟ ೧೪, ಶ್ಲೋಕ ೧೯.

೨೬. ಎಚ್. ಎಂ. ತಿಮ್ಮಪ್ಪ: ಹವ್ಯಕರ ಇತಿಹಾಸ , ಪುಟ ೨೨

೨೭. ವೆಂ. ಹರಿಕೃಷ್ಣಶಾಸ್ತ್ರಿ: ೧೮೩೬, ಬ್ರಾಹ್ಮಣೋತ್ಪತ್ತಿ ಮಾರ್ತಾಂಡ, ಬೊಂಬಾಯಿ, ಮಂತ್ರಾಲಯ ಪ್ರಕಾಶನ, ಪುಟ ೫೫೭, ಶ್ಲೋಕ ೧.

೨೮. ಎಚ್. ಎಂ. ತಿಮ್ಮಪ್ಪ: ಹವ್ಯಕರ ಇತಿಹಾಸ, ಪುಟ ೨೨.

೨೯. Epigraphia Carnatica : VII. Sk. 186 pp. 16 -20.

೩೦. ಶಾಲಿನಿ ರಘುನಾಥ: ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೬.

೩೧. H.V. Nanjundayya/ L.K. Ananthakrishna Iyer ; 1928 The Mysore tribes and Castes, Volume II. Brahmanas, Mysore, University of Mysore, PP. 312-313

೩೨. ಉತ್ತರ ಸಹ್ಯಾದ್ರಿ ಖಂಡ : ಅಧ್ಯಾಯ ೪, ಪುಟ ೧೫, ಶ್ಲೋಕ ೩೪-೩೫.

೩೩. ಎಚ್. ಎಂ. ತಿಮ್ಮಪ್ಪ : ಹವ್ಯಕರ ಇತಿಹಾಸ, ಪುಟ ೨೮.

೩೪. Thurston. Edgar : 1909. Castes and Tribes of Southern India. Volume I-A and B, Madras, Government Press, P. 375.

೩೫. Epigraphia Carnatica: VII.Sk. 176.

೩೬. ಶಾಲಿನಿ ರಘುನಾಥ: ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೬.

೩೭. ಟಿ. ಕೇಶವ ಭಟ್ಟ: ೧೯೭೨, ಹವ್ಯಕ ಪದ ಸಂಚಯ, ಬೆಂಗಳೂರು, ಚಿರಸಾಹಿತ್ಯ ಪ್ರಕಾಶನ, ಪುಟ XII.

೩೮. ವಿಘ್ನೇಶ್ವರಶರ್ಮಾ ತದ್ವಲಸೆ : ೧೯೯೦, ನೆಲೆ ಕಳೆದುಕೊಳ್ಳುತ್ತಿರುವ ಹವ್ಯಕರು, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ಕಾಣಿಸಿಲ್ಲ.

೩೯. Thurston. Edgar: Castes and tribes of Southern India. p. 375

೪೦. ಶಂಕರನಾರಾಯಣಭಟ್ ಎದುರ್ಕಳ: ೧೯೯೦, ಹವ್ಯಕರು ಮತ್ತು ಧಾರ್ಮಿಕತೆ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ಕಾಣಿಸಿಲ್ಲ.

೪೧. Kosambi D.D : 1956. An Introduction to the study of Indian History Bombay. Popular Prakashan, P. 313.

೪೨. ಎಂ. ಚಿದಾನಂದಮೂರ್ತಿ: ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಪುಟ ೪೩೦.

೪೩. B.L. Rice: Mysore and Coorg from Inscriptions. PP. 204-205.

೪೪. Mysore Archaeological report: 1920, p. 50.

೪೫. ಗೋವಿಂದ ಪೈ ಸಂಶೋಧನ ಸಂಪುಟ, ಪುಟ ೧೦೨೦-೧೦೨೧.

೪೬. ತಿಪ್ಪೇರುದ್ರಸ್ವಾಮಿ. ಎಚ್ ೧೯೭೪ (ಪುನರ್ಮುದ್ರಣ) ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, ಡಿ.ವಿ.ಕೆ. ಮೂರ್ತಿ, ಪುಟ ೮೬.

೪೭. Kosambi D.D. : An Introduction to the study of Indian History, p. 323.

೪೮. ಶಾಲಿನಿ ರಘುನಾಥ: ೧೯೯೪, 'ಭಾಷೆ ಸಾಹಿತ್ಯ ಸಂಸ್ಕೃತಿ', ಮೈಸೂರು, ಭಾರತೀ ಪ್ರಕಾಶನ, ಪುಟ. ೮೯

೪೯. Buchanan, Francis: 1988 (Reprint) A Journey from Madras..... Volume III. Delhi, Asian Educational Services, pp. 131-139.162.

೫೦. ಶಾಲಿನಿ ರಘುನಾಥ: ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೭.

೫೧. ಉತ್ತರ ಸಹ್ಯಾದ್ರಿ ಖಂಡ: ಅಧ್ಯಾಯ ೩೪, ಪುಟ ೧೦೧, ಶ್ಲೋಕ ೪೩.

೫೨. ತಾಳಗುಂದದ ಶಿಲಾಶಾಸನ : ೧೮೯.

೫೩. South Canara Manual: p.61.

೫೪. ವೈದ್ಯಪಾಟೀಲ ಗ. ಸು. ಬರಿಗೆ/ಹೆಬ್ಬಾರ ಪಂಡಿತ ಗಣಪತಿಶಾಸ್ತ್ರೀ ವಾರಣಾಸೀ:೧೯೫೮, ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ, ತೀರ್ಥಹಳ್ಳಿ, ಶ್ರೀರಾಮಚಂದ್ರಾಪುರಮಠದ ಇತಿಹಾಸ ಪ್ರಕಾಶನ, ಪುಟ ೧೮-೨೦.

೫೫. ಬಿ.ಎಸ್. ರಾಮಭಟ್ಟ:೧೯೯೨ ಹವ್ಯಕ ಪರಂಪರೆ, ಬೆಂಗಳೂರು, ಹೈವಪ್ರಭಾ ಸಂಚಿಕೆ, ಪುಟ ೪೪.

೫೬. Thurston, Edgar: Castes and Tribes of Southern India, P. 375.

೫೭. South Canara Manual: p. 139.

೫೮. Karnataka Darshana : 1955 R.R. Diwakar Felicitation Volume, Bombay,p. 29.

೫೯. C. Hayavadana Rao : 1930, Mysore Gazetteer, volume II, Part II, Bangalore Government Press, P.499

೬೦. ತಿಮ್ಮಪ್ಪ : ಹವ್ಯಕರ ಇತಿಹಾಸ, ಪುಟ ೩೮.

೬೧.. Karnataka Darshana : p.

೬೨. ಉತ್ತರ ಸಹ್ಯಾದ್ರಿ ಖಂಡ : ಅಧ್ಯಾಯ ೩೩, ಪುಟ ೯೯.

೬೩. ಉತ್ತರ ಸಹ್ಯಾದ್ರಿಖಂಡ : ಅಧ್ಯಾಯ ೩೨, ಪುಟ ೯೩, ಶ್ಲೋಕ ೧೬.

೬೪. ಅದೇ, ಹವ್ಯಕೋತ್ಪತ್ತಿ, ಟೀಕು, ಪುಟ ೫.

೬೫. ಮಹಾಭಾರತ: ವನಪರ್ವ, ಅಧ್ಯಾಯ ೨೫೫,ಶೋಕ ೮-೯.

೬೬. ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ, ಪುಟ ೨.

೬೭. ರಾಮಚಂದ್ರಶರ್ಮಾ ತ್ಯಾಗಲಿ:೧೯೯೦, ಹವ್ಯಕ ಸಮಾಜದ ಉತ್ಪತ್ತಿ ಮತ್ತು ಸಂಘಟನೆ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ಕಾಣಿಸಿಲ್ಲ .

೬೮. ಹವ್ಯಕರ ಇತಿಹಾಸ, ಪುಟ ೨೪.

೬೯. ಮಹಾಭಾರತ: ವನಪರ್ವ, ಅಧ್ಯಾಯ ೨೫೨.

೭೦. ಮಹಾಭಾರತ: ಆದಿಪರ್ವ, ಅಧ್ಯಾಯ ೧೬೮.

೭೧. Nandalal Dev : Geographical Dictionary of Aucient and Medieval India, p. 2-3.

೭೨. ಪಂಪ ಭಾರತ : III ೩೬, ಗದ್ಯ ೩೯.

೭೩. ಪಂಪ ಭಾರತ : II ೪೬.

೭೪. Wilson(Ed): Mackenzie Collection, Oriental Manuscript Library, Madras, Government of Madras, pp. 60-61.

೭೫. Buchanan, Francis: A journey from Madras........Volume III, pp. 131-139.

೭೬. ಶಂ.ಬಾ. ಜೋಷಿ : ೧೯೩೩, ಕಣ್ಮರೆಯಾದ ಕನ್ನಡ, ಧಾರವಾಡ, ಪುಟ ೯೭.

೭೭. ಗೋವಿಂದ ಪೈ ಸಂಶೋಧನ ಸಂಪುಟ: ಪುಟ ೧೦೨೦.

೭೮. ಹವ್ಯಕರ ಇತಿಹಾಸ: ಪುಟ ೮.

೭೯. Epigraphia Carnatica: VII. sk. 17b. p 115.

೮೦. B.A. Saletore: 1936, Ancient Karnataka, volume 1, Poona, The oriental Book Agency, p. 335.

೮೧. ಗೋವಿಂದ ಪೈ ಸಂಶೋಧನ ಸಂಪುಟ ; ಪುಟ ೧೦೨೦.

೮೨. India Office Library : Sanskrit Manuscript No. 4104 (Micro Film), ಬೆಂಗಳೂರು, ವಿಧಾನಸೌಧ ಪತ್ರಾಗಾರ,

೮೩. ರಾಮಚಂದ್ರಶರ್ಮಾ ತ್ಯಾಗಲಿ : ಹವ್ಯಕ ಸಮಾಜದ ಉತ್ಪತ್ತಿ ಮತ್ತು ಸಂಘಟನೆ, ಪುಟ ಕಾಣಿಸಿಲ್ಲ.

೮೪. ರಾಮಕೃಷ್ಣ ಅಡ್ಕೋಳಿ : ಶ್ರೀಮದ್ರಾಘವೇಂದ್ರ ಭಾರತಿ ಮಹಾಸ್ವಾಮಿಗಳು, ಪುಟ ೧೦.

೮೫. Epigraphia Carnatica : VII. Shimoga. Sk., 186.

೮೬. C. Hayavadana Rao: Mysore Gazetteer, volume II, Part II, PP.499-501.

೮೭. ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ, ಪುಟ ೨೧.

೮೮. ತಿಮ್ಮಪ್ಪ: ಹವ್ಯಕರ ಇತಿಹಾಸ. ಪುಟ ೭

೮೯. ಉತ್ತರ ಸಹ್ಯಾದ್ರಿ ಖಂಡ : ಅಧ್ಯಾಯ ೩೪, ಪುಟ ೯೯, ಶ್ಲೋಕ ೧೧.

೯೦. ಬೆನಗಲ್ ಶ್ಯಾಮಾ ಶಾಸ್ತ್ರಿ : ಪುರಾಣನಾಮ ಚೂಡಾಮಣಿ, ಮೈಸೂರು, ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಪುಟ ೩೫

೯೧. ತಿಮ್ಮಪ್ಪ : ಹವ್ಯಕರ ಇತಿಹಾಸ. ಪುಟ ೨೩.

೯೨. ಭಾರತದ ಪ್ರೌಢ ಇತಿಹಾಸ, ಪುಟ ೩೨.

೯೩. ತಿಮ್ಮಪ್ಪ : ಹವ್ಯಕರ ಇತಿಹಾಸ, ಪುಟ ೨೩.

೯೪. Gereni : Researches into ptolemy, p. 747.

೯೫. B.A. Saletore: Ancient Karnataka, volume II, p. 335.

೯೬. ಶಾಲಿನಿ ರಘುನಾಥ : ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೫೧.

೯೭. Cunnigham : Archaeological Survey of India, I, pp. 255-257.

೯೮. B.A. Saletore : Ancient Karnataka, p. 335

೯೯. B.L. Rice : Mysore; A Gazetteer, Volume I, p. 216.

೧೦೦. ಗೋವಿಂದ ಪೈ ಸಂಶೋಧನ ಸಂಪುಟ : ಪುಟ ೧೦೨೩.

೧೦೧. ಮಹಾಭಾರತ : ಉದ್ಯೋಗಪರ್ವ, ಅಧ್ಯಾಯ ೧೯, ಶ್ಲೋಕ ೨೯-೩೨.

೧೦೨. ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ, ಪುಟ ೩.

೧೦೩. ರಾಮಭಟ್ಟ : ಹವ್ಯಕ ಪರಂಪರೆ, ಪುಟ ೪೪.

೧೦೪. David Rhys : Buddhist India, p. 27.
೧೦೫. ರಾಮಭಟ್ಟ : ಹವ್ಯಕ ಪರಂಪರೆ, ಪುಟ ೪೩-೪೪
೧೦೬. ಹವ್ಯಕ ಸಮಾಜ ಮತ್ತು ಶ್ರೀ ಗುರುಮಠದ ಇತಿಹಾಸ, ಪುಟ ೨
೧೦೭. Weber's Indicha Studies : p. 398.
೧೦೮. ಹವ್ಯಕ ಸಮಾಜ...................ಪುಟ ೪
೧೦೯. ಮಹಾಭಾರತ : ಆದಿಪರ್ವ, ಅಧ್ಯಾಯ ೧೯೮, ಶ್ಲೋಕ ೮೧-೮೨.
೧೧೦. David Rhys: Buddhist India, p. 27.
೧೧೧. ತಿಮ್ಮಪ್ಪ : ಹವ್ಯಕರ ಇತಿಹಾಸ, ಪುಟ ೨೩-೨೪
೧೧೨. ಹವ್ಯಕ ಸಮಾಜ................... ಪುಟ ೨.
೧೧೩. Madras Gazetteer, Madras, Government of Madras.
೧೧೪. ಕೇಶವ ಭಟ್ಟ : ಹವ್ಯಕರ ಶೋಭಾನೆಗಳು, ಪುಟ ೪೮೧.
೧೧೫. Bombay Gazetteer : 1883, kanara District.
೧೧೬. ಉತ್ತರ ಕನ್ನಡ ಜಿಲ್ಲೆಯ ಹವ್ಯಕರ ಹಾಡುಗಳು, ಪುಟ ೮.
೧೧೭. Mysore Archaeological Report : 1910, p. 181.
೧೧೮. Epigraphia Carnatica: III. 1974, No. 402. ಸಂಸ್ಕೃತ ಶಾಸನದ ಸಾಲುಗಳು, ೬೨-೬೭.
೧೧೯. ಕೇಶವ ಭಟ್ಟ : ಹವ್ಯಕರ ಶೋಭಾನೆಗಳು, ಪುಟ ೪೭೯.
೧೨೦. ಎಸ್. ರಂಗನಾಥ ಶರ್ಮಾ (ಮುನ್ನುಡಿ, ಹವ್ಯಕರ ಇತಿಹಾಸ) ಪುಟ IX.
೧೨೧ Buchanan, Francis: A Journey from Madras.... pp 131-139.
೧೨೨. Gazetteer of India: Suryanath Kamath (Ed.) Bangalore/
Karnataka State/ Uttara Kannada District, p. 241.
೧೨೩. ಹವ್ಯಕರ ಶೋಭಾನೆಗಳು, ಪುಟ ೪೮೦.
೧೨೪. ಗೋವಿಂದ ಪೈ ಸಂಶೋಧನ ಸಂಪುಟ, ಪುಟ ೧೦೨೭.
೧೨೫. ಅದೇ, ಪುಟ ೫೮೬.
೧೨೬. Havika - Some Etymological Speculations..... pp. 41-44.
೧೨೭. ಜಿ.ಎಸ್. ಭಟ್ಟ (ಸಂ): ವೈಜಯಂತಿ, ತೃತೀಯ ಸಂಪುಟ, ಮೈಸೂರು, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಪುಟ ೧೨೬.
೧೨೮. ಟಿ.ವಿ. ವೆಂಕಟಾಚಲ ಶಾಸ್ತ್ರೀ : ೨೦೦೦, ಮುಲಕನಾಡು ಬ್ರಾಹ್ಮಣರು, ಬೆಂಗಳೂರು, ಮುಲಕನಾಡು ಮಹಾಸಂಘ, ಪುಟ ೧೦.
೧೨೯. ಹವ್ಯಕರ ಶೋಭಾನೆಗಳು: (ಸೂರ್ಯನಾಥ್ ಕಾಮತ್ ಅಭಿಪ್ರಾಯ) ಪುಟ ೩೩-೩೪.
೧೩೦. Thurston, Edgar : Castes and Tribes of Southern India... .... p. 383.
೧೩೧. Campbell: Ethnology of India, p. 74.
೧೩೨. Sherring, M.A.: 1974. Hindu Tribes and Castes. Volume 1, Delhi, Cosmo Publications, p 97
೧೩೩. Ghurye. G.S: 1996 (Reprint) Caste and Race in India. Bombay.
Popular Prakashan, p. 17.
೧೩೪. ಪಿ.ಕೆ. ಶ್ರೀಕೃಷ್ಣ ಭಟ್ : ೧೯೮೫, ಹವಿಗನ್ನಡ, ಬೆಂಗಳೂರು, ಹವ್ಯಕ ಸಂಚಿಕೆ, ಪುಟ ೧೬.
೧೩೫. ಶಾಲಿಸಿ ರಘುನಾಥ್ : ಭಾಷೆ ಸಾಹಿತ್ಯ ಸಂಸ್ಕೃತಿ..... ಪುಟ ೮.
೧೩೬. ಟಿ. ಕೇಶವ ಭಟ್ಟ: ಹವ್ಯಕ ಪದಸಂಚಯ...... ಪ್ರಸ್ತಾವನೆ XII
೧೩೭. ಹವ್ಯಕರ ಶೋಭಾನೆಗಳು, ಪುಟ ೪೮೧-೪೮೨.
೧೩೮. ಟಿ. ಕೇಶವ ಭಟ್ಟ: ಡಿಸೆಂಬರ್ ೧೯೬೬, 'ಹವ್ಯಕ ಶಬ್ದ ಮೂಲ', ಬೆಂಗಳೂರು, ಹವ್ಯಕ ಸಂಚಿಕೆ.
೧೩೯. ವಿಘ್ನೇಶ್ವರಶರ್ಮಾ ತದ್ವಲಸೆ: ನೆಲೆ ಕಳೆದುಕೊಳ್ಳುತ್ತಿರುವ ಹವ್ಯಕರು..... ಪುಟ ಕಾಣಿಸಿಲ್ಲ.
೧೪೦. Gazetteer of India..........p. 241.
೧೪೧. ಜಿ.ಎಸ್. ಭಟ್ಟ (ಸಂ) : ವೈಜಯಂತಿ........ಪುಟ ೧೨೬.
೧೪೨. ಹವ್ಯಕರ ಶೋಭಾನೆಗಳು, ಪುಟ ೪೭೮.
೧೪೩. ಉತ್ತರ ಸಹ್ಯಾದ್ರಿ ಖಂಡ : ಅಧ್ಯಾಯ ೩೪, ಪುಟ ೯೯, ಶ್ಲೋಕ ೧೧.
೧೪೪. ಹವ್ಯಕರ ಶೋಭಾನೆಗಳು, ಪುಟ ೪೭೮.
೧೪೫. ಸಾ.೦. ದೀಕ್ಷಿತರು : ಆಗಸ್ಟ್ ೧೯೯೦, ಹವ್ಯಕರಲ್ಲಿ ಉಪನಯನ ಹಾಗೂ ವಿವಾಹ ಸುಸ್ಕಾರಗಳು, ಬೆಂಗಳೂರು, ಹವ್ಯಕ ಸಂಚಿಕೆ, ಪುಟ ೯.

೧೪೬. Kittel's Kannada-English Dictionary. Volume 4, 1971, Revised and enlarged by Mariyappa Bhat. M. Madras, University of Madras, p.1717.

೧೪೭. ಶಂ.ಭಾ.ಜೋಷಿ : ಕಣ್ಮರೆಯಾದ ಕನ್ನಡ..... ಪುಟ ೯೭.

೧೪೮. ಹವ್ಯಕರ ಇತಿಹಾಸ... ಪುಟ ೨೪-೨೫.

೧೪೯. ಸೇಡಿಯಾಪು ಕೃಷ್ಣಭಟ್ಟ : ೧೯೯೨, ವಿಚಾರ ಪ್ರಪಂಚ, (ಸಂ) ಪಾದೇಕಲ್ಲು ವಿಷ್ಣುಭಟ್ಟ, ಪುತ್ತೂರು, ಕರ್ನಾಟಕ ಸಂಘ, ಪುಟ ೭೮. ಮತ್ತು ಗೋವಿಂದ ಪೈ ಸಂಶೋಧನ ಸಂಪುಟ ..... ಪುಟ ೧೦೨೭.

೧೫೦. ವಿಘ್ನೇಶ್ವರಶರ್ಮಾ, ತದ್ದಲಸೆ:೧೯೬೮, ಹವ್ಯಕ ಜನಾಂಗ ಮತ್ತು ಹವ್ಯಕ ಮಂಡಲಿ, ಬೆಂಗಳೂರು, ಹವ್ಯಕ ತ್ರೈಮಾಸಿಕ ಪತ್ರಿಕೆ.

೧೫೧. ಹವ್ಯಕ ಸಮಾಜದ ಉತ್ಪತ್ತಿ ಮತ್ತು ಸಂಘಟನೆ, ಪುಟ ಕಾಣಸಿಲ್ಲ.

೧೫೨. ಶಿರಂಕಲ್ಲು ಈಶ್ವರಭಟ್ಟ:೧೯೯೭, ಹವ್ಯಕವ್ಯ ಒಂದು ಟಿಪ್ಪಣಿ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ೯.

೧೫೩. B.L. Rice: Mysore; A Gazetteer........p. 239.

೧೫೪. The Mysore Tribes and Castes..... p. 312-313.

೧೫೫. ಪಿ.ಎಸ್. ಚಿದಾನಂದರಾವ್: ೧೯೯೦, ತಸ್ಮಾತ್ ಬಲಂ ಉಪಾಸ್ಯ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ಕಾಣಸಿಲ್ಲ.

೧೫೬. ರಾಮಚಂದ್ರ ಜಿ.ಭಟ್ಟ, ಕೋಟೆಮನೆ :೧೯೯೦, ಪರಂಪರೆಯೆಂಬ ಸತ್ವದ ಶಾಲೆ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ಕಾಣಸಿಲ್ಲ.

೧೫೭. ಎಂ.ಆರ್. ದತ್ತಾತ್ರೇಯ : ೧೯೯೩, ಸಂಸ್ಕೃತ ಕಾವ್ಯ ಶ್ರೀ ಹವ್ಯಕ ಗುರುಪೀಠಂ, ಶ್ಲೋಕ ೨೨.

೧೫೮. ಟಿ. ಕೇಶವ ಭಟ್ಟ : ೧೯೯೭, ಹವ್ಯಕರು ಮತ್ತು ಶ್ರೀ ಗುರುಪೀಠ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ೧.

೧೫೯. ಎಂ. ಮರಿಯಪ್ಪ ಭಟ್ಟ : ೧೯೮೩, ಹವ್ಯಕ ಇಂಗ್ಲಿಷ್ ನಿಘಂಟು, ದೇಜಗೌ ಮುನ್ನುಡಿ, ಪುಟ ೧೩.

೧೬೦. ಶ್ರೀಕೃಷ್ಣ ಭಟ್ ಅರ್ತಿಕಜೆ : ೧೯೮೫, ಹವ್ಯಕರ ಗಾದೆಗಳು, ಪುತ್ತೂರು, ಕರ್ನಾಟಕ ಸಂಘ, ಪುಟ ೧೧.

೧೬೧. ವಿಘ್ನೇಶ್ವರ ಶರ್ಮಾ ತದ್ದಲಸೆ : ೧೯೯೭, ಹವ್ಯಕ ಪರಂಪರೆ ಮತ್ತು ಸಂಸ್ಕೃತಿ, ಬೆಂಗಳೂರು, ಹವ್ಯಕ ವಿಶೇಷ ಸಂಚಿಕೆ, ಪುಟ ೮.

೧೬೨. ವಿಘ್ನೇಶ್ವರ ಶರ್ಮಾ ತದ್ದಲಸೆ : ನೆಲೆ ಕಳೆದುಕೊಳ್ಳುತ್ತಿರುವ ಹವ್ಯಕರು........ ಪುಟ ಕಾಣಸಿಲ್ಲ.

೧೬೩. ಕೆ.ಎಸ್. ಭಾಸ್ಕರ ಭಟ್ಟ : ೧೯೯೦, ಅಭಿಪ್ರಾಯ, ಹವ್ಯಕರ ಇತಿಹಾಸ.... ಪುಟ XXI.

೧೬೪. Thurston. Edgar : 1909. Castes and Tribes of Southern India, Volume 1-A and B. Madras, Government Press, pp. 375-376.

೧೬೫. ವಿದ್ವಾನ್ ಡಿ.ಎಸ್. ಭಟ್ಟ, ಸೋಮಸಾಗರ, ಫೆಬ್ರವರಿ ೧೯೯೩, ಭಕ್ತಿ ಹವ್ಯಕರ ಪರಿ, ಹವ್ಯಕ ಸಂಚಿಕೆ, ಬೆಂಗಳೂರು, ಪುಟ ೧೦.

ಸೆಪ್ಟೆಂಬರ್ ೨೧ ಮತ್ತು ೨೨, ೨೦೦೧ ರಂದು ಹಾಸನದಲ್ಲಿ ಜರುಗಿದ ನಾಲ್ಕನೆಯ ಕರ್ನಾಟಕ ಸಮಾಜ ಶಾಸ್ತ್ರ ಸಮ್ಮೇಳನದಲ್ಲಿ ಮಂಡಿಸಲಾದ ಸಂಶೋಧನಾ ಪ್ರಬಂಧ.

---

* * * * *

ಭಾಷಾವಿಜ್ಞಾನ ಕ್ಷೇತ್ರಕ್ಕೆ ಹಂಪನಾ ಅವರ ಕೊಡುಗೆ

ಡಾ. ಆರ್. ರಾಮಕೃಷ್ಣ

(೧)

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ತಮ್ಮ ವೈಶಿಷ್ಟ್ಯಪೂರ್ಣ ಕೃತಿಗಳ ಮೂಲಕ, ಸಂಪ್ರಬಂಧಗಳ ಮೂಲಕ, ಹಂಪನಾ ಈಗಾಗಲೆ ಚಿರಪರಿಚಿತರಾಗಿದ್ದಾರೆ. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಉತ್ತಮ ಕೊಡುಗೆಗಳನ್ನು ನೀಡಿದ ಸಾಹಿತಿಗಳ ಸಾಲಿನಲ್ಲಿ ಹಂಪನಾ ಅವರ ಹೆಸರು ಎದ್ದು ಕಾಣುವಂಥದ್ದು. ಅವರದು ಬಹುಮುಖ ಪ್ರತಿಭೆ. ನಿರಂತರ ಅಧ್ಯಯನ, ಉಪನ್ಯಾಸ ಹಾಗೂ ಅವರ ಸಂಶೋಧನ ಪ್ರವೃತ್ತಿಗಳು ಅವರ ಸೃಜನಶೀಲತೆಗೆ ಹೊಸ ಅರ್ಥವನ್ನು ತಂದುಕೊಟ್ಟಿವೆ. ಹಳಗನ್ನಡ-ನಡುಗನ್ನಡ ಸಾಹಿತ್ಯ, ಜೈನಧರ್ಮ ಮತ್ತು ಸಾಹಿತ್ಯ, ಸಂಶೋಧನೆ, ವಿಮರ್ಶೆ, ಜನಪದ ಸಾಹಿತ್ಯ, ಗ್ರಂಥ ಸಂಪಾದನೆ ಮೊದಲಾದ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಹಂಪನಾ ಅವರ ಭಾಷ ವಿಜ್ಞಾನ ಕ್ಷೇತ್ರದ ಬಗೆಗಿನ ಆಸಕ್ತಿ ಅಪೂರ್ವವಾದುದು. ಈ ಕ್ಷೇತ್ರದಲ್ಲಿ ವಿಶೇಷ ಪರಿಣತಿಯನ್ನು ಪಡೆದಿರುವ ಅವರು ಅನೇಕ ಭಾಷಾವಿಜ್ಞಾನ ಕೃತಿಗಳನ್ನು ಹೊರತಂದಿದ್ದಾರೆ. ಸಂಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಅವನ್ನು ಸ್ಥೂಲವಾಗಿ ಪರಿಚಯಿಸುವುದು ಈ ಲೇಖನದ ಮುಖ್ಯ ಉದ್ದೇಶ.

(೨)

ಕನ್ನಡದಲ್ಲಿ ಆಧುನಿಕ ಭಾಷಾವಿಜ್ಞಾನದ ಬಗೆಗಿನ ಅಧ್ಯಯನ ಆರಂಭಗೊಳ್ಳುತ್ತಿದ್ದ ಅವಧಿ ಯಲ್ಲಿಯೇ ಅಂದರೆ ಅರವತ್ತರ ದಶಕದಲ್ಲಿಯೇ ಹಂಪನಾ ಅವರ 'ದ್ರಾವಿಡ ಭಾಷಾವಿಜ್ಞಾನ'ಎಂಬ ಕೃತಿ ಪ್ರಕಟವಾಯಿತು. ಇದೊಂದು ದೊಡ್ಡ ಪ್ರಮಾಣದ ಗ್ರಂಥ. ಇದು ನಾಲ್ಕು ಮುದ್ರಣಗಳನ್ನು ಕಂಡಿದೆ (೧೯೬೬, ೧೯೭೨ ಮತ್ತು ೧೯೯೪). ಈವರೆಗೆ ಉಪಲಬ್ಧವಾಗಿರುವ ಇಂಗ್ಲಿಷ್ ಗ್ರಂಥಗಳು ಮತ್ತು ಲೇಖನ ಸಂಪತ್ತನ್ನು ಸೂರೆಗೊಂಡಿರುವ ವಿಷಯ ವೈಪುಲ್ಯ ಈ ಗ್ರಂಥದ ಹಿರಿಮೆಗೆ ಕಾರಣವಾಗಿದೆ. ಈಗಾಗಲೆ ನಡೆದಿರುವ ಸಂಶೋಧನೆಗಳ ಮತ್ತು ಜಿಜ್ಞಾಸೆಯ ಫಲಿತಾಂಶಗಳ ಸಕ್ರಮವಾದ ವಿವರಣೆ ಈ ಗ್ರಂಥದ ಪ್ರಧಾನೋದ್ದೇಶವಾದ್ದರಿಂದ, ಪ್ರಸಿದ್ಧ ಭಾಷಾವಿಜ್ಞಾನಿಗಳ ಅಭಿಪ್ರಾಯಗಳನ್ನು ಉಲ್ಲೇಖಿಸುವುದರ ಮೂಲಕ ಪ್ರಚಲಿತ ಸಮಸ್ಯೆಗಳಿಗೆ ಪರಿಹಾರ ಸೂಚಿಸಿದೆ. ಶ್ರೀಮಾನ್ ಹಂಪನಾ ಅವರ ದೀರ್ಘಾಧ್ಯಯನದ ಚಿಂತನ ಮಂಥನ ಮತ್ತು ಆಲೋಚನೆಯ ಫಲ ಜೊತೆಗೆ ಭಾಷಾಶಾಸ್ತ್ರ ಸಂಬಂಧವಾದ ಅವರ ಆದರಾನುರಕ್ತಿ ಶ್ರದ್ಧೆಗಳು ಈ ಕೃತಿಯಲ್ಲಿ ಹೆಜ್ಜೆ ಹೆಜ್ಜೆಗೂ ಪ್ರತಿಬಿಂಬಿಸುತ್ತಿವೆ.[೧]

'ಈ ಹೊತ್ತಗೆಯಲ್ಲಿ ಇದುವರೆಗೆ ತಿಳಿದುಬಂದಿರುವ ಎಲ್ಲ ದ್ರಾವಿಡ ಭಾಷೆಗಳ ಸಮಗ್ರ ಇತಿಹಾಸವನ್ನು ಕೊಡಲು ಯತ್ನಿಸಿದ್ದೇನೆ, ಗ್ರಂಥವಿಸ್ತಾರದ ಭೀತಿಯಿಂದ ಹಲವು ಭಾಗಗಳಲ್ಲಿ ವಿವರಣೆ ಸಂಕ್ಷಿಪ್ತವಾಗಿದೆ. ಬೇಕೆಂದೇ ಮೊಟಕು ಮಾಡಿದೆ. ಬರವಣಿಗೆಯಲ್ಲಿ ಆದಷ್ಟು ಅತ್ಯುಕ್ತಿ

ಅನುಕ್ತಿಗಳಿಗೆ ಅವಕಾಶ ಕೊಡದೆ ಸಮತೂಕವನ್ನು ಕಾಪಾಡಿಕೊಂಡು ಬರಲು ಎಚ್ಚರದಿಂದ ಪ್ರಯತ್ನಿಸಿದ್ದೇನೆ..... ಇಂಥ ಶಾಸ್ತ್ರೀಯ ಹಾಗೂ ತೌಲನಿಕ ಗ್ರಂಥದಲ್ಲಿ ಹಲವರ ಅಭಿಪ್ರಾಯಗಳು ಅನಿವಾರ್ಯವಾಗಿ ಸಮಾವೇಶವಾಗಿದ್ದು ಹೊಳಲುಗೊಡುತ್ತಿರುತ್ತವೆ..... ದ್ರಾವಿಡ ಭಾಷಾವಿಜ್ಞಾನದ ವಿಚಾರದಲ್ಲಿ ಕೆಲವು ಸಾಮಾನ್ಯ ರೂಪುರೇಖೆಗಳನ್ನು ಮಾತ್ರ ಬಿಡಿಸಲು ಇಲ್ಲಿ ಯತ್ನಿಸಲಾಗಿದೆ. ಅಂದಮಾತ್ರಕ್ಕೆ ಇದೊಂದು ಸಮಗ್ರ ಕೃತಿ ಎಂಬ ಧಾಷ್ಟ್ಯಕ ಲೇಖಕನಿಗೆ ಎಳ್ಳನಿತೂ ಇಲ್ಲ' ಎಂಬುದಾಗಿ ಹಂಪನಾ ಅವರು ವಿನಮ್ರರಾಗಿ ಹೇಳಿಕೊಂಡಿದ್ದಾರೆ. ಆದರೂ ಇದೊಂದು ಪಾಂಡಿತ್ಯಪೂರ್ಣ ಕೃತಿಯೆಂಬುದರಲ್ಲಿ ಸಂದೇಹವಿಲ್ಲ.

೨೯೦ ಪುಟಗಳ, ೪೯ ಅಧ್ಯಾಯಗಳುಳ್ಳ, ರಾಜ್ಯ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರಕಿರುವ ಈ ಗ್ರಂಥದಲ್ಲಿ ದ್ರಾವಿಡರು, ದ್ರಾವಿಡ ಶಬ್ದದ ವಿಶ್ಲೇಷಣೆ, ದ್ರಾವಿಡ ಹಾಗೂ ಸಿಥಿಯನ್ ಭಾಷೆಗಳು, ದ್ರಾವಿಡ ಜನಸಂಖ್ಯೆ, ದ್ರಾವಿಡ ಭಾಷೆಗಳು, ವಿಭಕ್ತಿ ಪ್ರತ್ಯಯಗಳು, ಸರ್ವನಾಮ, ವಚನ, ಗುಣವಾಚಕ, ಲಿಂಗವ್ಯವಸ್ಥೆ, ಕ್ರಿಯಾಪದ, ಸಂಖ್ಯಾವಾಚಕ, ಮೂಲದ್ರಾವಿಡ ಧ್ವನಿವ್ಯವಸ್ಥೆ, ಮೂಲ ದ್ರಾವಿಡದಲ್ಲಿ ಸ್ವರ ವ್ಯವಸ್ಥೆ ಟ್ ಕಾರ, ಪ್ ಕಾರ, ಟ್-ತ್ ಕಾರಗಳ ಚರಿತ್ರೆ, ರೇಫ ಮತ್ತು ಶಕಟರೇಫ, ಕ್, ಚ್, ళ్,ವ್/ಬ, ಸಕಾರ ಮೊದಲಾದ ವಿಚಾರಗಳನ್ನು ವಿದ್ವಾಂಸರ ಅಭಿಪ್ರಾಯಗಳೊಂದಿಗೆ ವ್ಯಾಪಕವಾಗಿ ಚರ್ಚಿಸಲಾಗಿದೆ.

ದ್ರಾವಿಡ ಭಾಷೆಗಳು ಸಂಸ್ಕೃತಜನ್ಯವಲ್ಲ. ಸ್ವತಂತ್ರವಾದವು ಎಂಬ ವಿಚಾರವನ್ನು ಲೇಖಕರು ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಹರಪ್ಪ, ಮೊಹೆಂಜೊದಾರೊ ನಾಗರಿಕತೆಯನ್ನು ಕಟ್ಟಿ ಬೆಳೆಸಿದ ಮಂದಿ ದ್ರಾವಿಡರೇ ಆಗಿರಬೇಕೆಂಬ ವಿದ್ವಾಂಸರ ಅಭಿಪ್ರಾಯಗಳನ್ನು ಎತ್ತಿ ಹಿಡಿದಿದ್ದಾರೆ. ಪ್ರತಿಯೊಂದು ದ್ರಾವಿಡ ಭಾಷೆಯ ಉಗಮವಿಕಾಸಗಳನ್ನು ವರ್ಣಮಾಲೆಯ ವಿವರಗಳನ್ನು ತೌಲನಿಕವಾಗಿ ಚರ್ಚಿಸಿದ್ದಾರೆ. ಇಂಡೋಯೂರೋಪಿಯನ್ ಭಾಷಾಪರಿವಾರದಲ್ಲಿ ಸಂಸ್ಕೃತ ಭಾಷೆಗೆ ಇರುವ ಸ್ಥಾನ, ದ್ರಾವಿಡ ಭಾಷಾ ಪರಿವಾರದಲ್ಲಿ ತಮಿಳು ಭಾಷೆಗೆ ಇದೆ. ತಮಿಳು ಭಾಷೆ ದ್ರಾವಿಡ ಕುಟುಂಬದ ಏಕೈಕ ಪ್ರತಿನಿಧಿಯೆಂದು ಹೇಳುವುದು ಸರಿಯಲ್ಲ, ಕನ್ನಡ ನುಡಿಯೇ ಮೂಲ ದ್ರಾವಿಡದ ಸ್ವರೂಪವನ್ನು ಉಳಿಸಿಕೊಂಡಿರುವುದು ಕಾಣುತ್ತದೆ. ಕ್/ಚ್/ಎರಡೂ ಧ್ವನಿಗಳಿಗಿರುವ ಶಬ್ದರೂಪಗಳಲ್ಲಿ ಕ ಕಾರವು ಚ ಕಾರಕ್ಕಿಂತಲೂ ಪ್ರಾಚೀನ. ಈ ವಿಚಾರದಲ್ಲಿ ತಮಿಳು ಭಾಷೆಗಿಂತಲೂ ಕನ್ನಡ ಹೆಚ್ಚು ಹಳೆಯರೂಪಗಳನ್ನು ಉಳಿಸಿಕೊಂಡಿದೆ ಎಂಬುದಾಗಿ ಸಮರ್ಥಿಸಿದ್ದಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟು ವಿಷಯವನ್ನು ಸ್ಪಷ್ಟಪಡಿಸಿದ್ದಾರೆ.

ಕನ್ನಡದ ವಿಭಕ್ತಿಪ್ರತ್ಯಯಗಳು ಅನಿಯತ. ವಾಕ್ಯದಲ್ಲಿಯ ಸ್ಥಾನದಿಂದಲೇ ವಿಭಕ್ತಿಯನ್ನು ಅಂದರೆ ಪದಗಳ ನಡುವಣ ಸಂಬಂಧವನ್ನು ಗುರುತಿಸಬಹುದು. ಪ್ರತ್ಯಯಗಳು ಈಚೆಗೆ ಸೇರಿಕೊಂಡಿರಬೇಕೆಂದೂ ಪಲ್ಲಟದ ಆಧಾರದಿಂದ ತಿಳಿಯಬಹುದು. ದ್ರಾವಿಡಭಾಷೆಗಳಲ್ಲಿ ವಚನ, ಗುಣವಾಚಕ, ಲಿಂಗವ್ಯವಸ್ಥೆ, ನಿಷೇಧಾರ್ಥಕ ಪ್ರತ್ಯಯಗಳು, ಕರ್ಮಣಿ ಪ್ರಯೋಗಗಳನ್ನು ಕುರಿತ ವಿಚಾರಗಳು ವಿವರವಾಗಿ ಮೂಡಿ ಬಂದಿವೆ. ಮೂಲದ್ರಾವಿಡ ಭಾಷೆಯ ಧ್ವನಿವ್ಯವಸ್ಥೆ, ಮೂಲದ್ರಾವಿಡದಲ್ಲಿ ಸ್ವರವ್ಯವಸ್ಥೆಗಳನ್ನು ಯುಕ್ತ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

ಟ್, ಪ್, ಜ್ ಕಾರಗಳ ಚರಿತ್ರೆಯನ್ನು ತೌಲನಿಕವಾಗಿ ತಿಳಿಸಿಕೊಟ್ಟಿದ್ದಾರೆ. ಕನ್ನಡದ ಪರಿಸರಗಳಲ್ಲಿ ಚ ಕಾರ ಸ ಕಾರವಾಗುತ್ತದೆ ಎಂಬುದನ್ನು ನಿರ್ದೇಶಿಸಿದ್ದಾರೆ.

ಪ್ರಸ್ತುತ ಗ್ರಂಥದಲ್ಲಿ ಹಂಪನಾ ಅವರ ತಲಸ್ಪರ್ಶಿ ಅಧ್ಯಯನ, ವಿಷಯ ಸಂಗ್ರಹದಲ್ಲಿ ಅವರು ತೋರಿರುವ ಕೌಶಲ, ನಿರೂಪಣೆಯಲ್ಲಿ ಅವರ ಬರಹದ ವಿಶಿಷ್ಟ ಸಿದ್ಧಿ ಸಾಮರ್ಥ್ಯಗಳು ಪ್ರಕಟಗೊಂಡಿವೆ. ಆಧುನಿಕ ವಿಚಾರಧಾರೆಗಳನ್ನು ಅಂತರ್ಗತ ಮಾಡಿಕೊಂಡು ದ್ರಾವಿಡ ಭಾಷೆಗಳ ಸಮಗ್ರ ಚಿತ್ರಣವನ್ನು ಕೊಡುವ ಗ್ರಂಥವಿದು.

ಈ ಗ್ರಂಥ ವಿದ್ವಾಂಸರೆಲ್ಲಾ ಓದಬೇಕಾದುದು... ಓದುವವರೆಲ್ಲ ವಿದ್ವಾಂಸರೂ ಆಗಬಹುದು. ಗ್ರಂಥದ ಮೌಲ್ಯ ಅದು ಎಂಬುದಾಗಿ ಆಚಾರ್ಯ ತೀನಂಶ್ರೀಯವರೂ 'ದ್ರಾವಿಡಭಾಷಾವಿಜ್ಞಾನವನ್ನು ಹೊಸದಾಗಿ ವ್ಯಾಸಂಗ ಮಾಡಲಿಚ್ಛಿಸುವವರಿಗೆ ಇದೊಂದು ಉತ್ತಮ ಪ್ರವೇಶಿಕೆ; ವ್ಯಾಸಂಗ ಮಾಡಿರುವವರಿಗೆ ವಿಚಾರ ಪ್ರಚೋದಕ' ಎಂಬುದಾಗಿ ಎಂ.ವಿ.ಸೀ. ಅಭಿಪ್ರಾಯಪಟ್ಟಿದ್ದಾರೆ.

೧೯೬೮ ರಲ್ಲಿ ' ಭಾಷಾವಿಜ್ಞಾನ ' ಎಂಬ ಮತ್ತೊಂದು ಗ್ರಂಥ ಹೊರಬಂದಿದೆ. ಭಾಷಾವಿಜ್ಞಾನವನ್ನು ಪರಿಚಯಿಸಲು ರಚಿಸಿರುವ ಗ್ರಂಥವಿದು. ಇದರಲ್ಲಿ ೨೩ ಅಧ್ಯಾಯಗಳಿವೆ. ಭಾಷಾ ವಿಜ್ಞಾನಾಂಗಗಳು, ಭಾಷೆ ಸನ್ನೆ ಸಂಕೇತ, ಬಾಷಾಮೂಲದ ಕೆಲವು ಸಿದ್ಧಾಂತಗಳು, ಭಾಷೆಯ ಬೆಳವಣಿಗೆ, ಭಾಷಾಸ್ವೀಕರಣ, ಭಾಷೆಗಳ ವರ್ಗೀಕರಣ ಮೊದಲಾದ ಅಧ್ಯಾಯಗಳಿವೆ, ಫರ್ಥ್(Firth) ಮತ್ತು ನೋಮ್ ಚೋಮ್‌ಸ್ಕಿ (Noam Chomsky) ಸಿದ್ಧಾಂತಗಳನ್ನೂ ಇದರಲ್ಲಿ ಪರಿಚಯಿಸಲಾಗಿದೆ. ಈ ಕೃತಿಯಲ್ಲಿ ಸಾಮಾನ್ಯ ಭಾಷಾವಿಜ್ಞಾನದ ವಿವಿಧ ಶಾಖೆಗಳನ್ನು ಪರಿಚಯಿಸಲು ಯತ್ನಿಸಲಾಗಿದೆ. ಆದರೂ ವಿವರಣಾತ್ಮಕ ಭಾಷಾವಿಜ್ಞಾನದ ಪ್ರಮುಖ ವಿಭಾಗಗಳಾದ ಧ್ವನಿ ವಿಜ್ಞಾನ, ಧ್ವನಿಮಾ ವಿಜ್ಞಾನ, ಆಕೃತಿಮಾ ವಿಜ್ಞಾನ, ವಾಕ್ಯವಿಜ್ಞಾನದ ಬಗೆಗಿನ ಮಾಹಿತಿಗಳು ಮತ್ತಷ್ಟು ಇದ್ದಿದ್ದರೆ ಈ ಗ್ರಂಥದ ಉಪಯುಕ್ತತೆ ಹೆಚ್ಚಾಗುತ್ತಿತ್ತು ಎನಿಸುತ್ತದೆ. ಏನೇ ಆದರೂ ಇದೊಂದು ಉತ್ತಮ ಆಕರ ಗ್ರಂಥವೆಂದು ಸ್ಪಷ್ಟವಾಗಿ ಹೇಳಬಹುದು.

'ಈ ಗ್ರಂಥವನ್ನು ಶ್ರೀ ಹಂಪನಾಗರಾಜಯ್ಯನವರು ಬರೆದು ಕನ್ನಡಿಗರಿಗೆ ಮಾಡಿರುವ ಉಪಕಾರವನ್ನು ಇಷ್ಟಿಷ್ಟೆಂದು ಹೇಳುವ ಹಾಗಿಲ್ಲ. ಅನೇಕ ಆಧಾರ ಗ್ರಂಥಗಳನ್ನು ಅವಲೋಕಿಸಿ, ಮನನ ಮಾಡಿ, ಸಾರಭೂತವಾದ ಅಂಶಗಳನ್ನು ಒಂದೆಡೆ ಸೇರಿಸಿ ಸೌಧವನ್ನು ಕಟ್ಟುವ ಶಿಲ್ಪಿಯಂತೆ ಅವರು ತಮ್ಮ ಗ್ರಂಥವನ್ನು ಬರೆದಿದ್ದಾರೆ. ಅವರ ಭಾಷೆ ನಿರರ್ಗಳವಾಗಿ ಓಡುತ್ತದೆ; ಅದು ಸುಲಭವೂ ಖಚಿತವೂ ಸಂಯಮಯುಕ್ತವೂ ಆಗಿದೆ. ಅವರ ಉತ್ಸಾಹ ಅವರ ಭಾಷೆಯಲ್ಲಿ ಹೊಳಲು ಕೊಡುತ್ತಿದೆ.'[೨]

ಹಂಪನಾ ಅವರ ಮತ್ತೊಂದು ಪುಸ್ತಕ 'ಭಾರತದ ಭಾಷಾ ಸಮಸ್ಯೆ' ಎಂಬುದು. ಇದು ಕೂಡ ೧೯೬೮ರಲ್ಲಿ ಪ್ರಕಟವಾದುದು. ಇದರಲ್ಲಿ ರಾಷ್ಟ್ರಭಾಷೆಯ ಹಿನ್ನೆಲೆ, ರಾಷ್ಟ್ರಭಾಷೆಯ ಇತಿಹಾಸ, ವಿರೋಧ ಹೊಸದಲ್ಲ, ಭಾಷಾವಾರು ಪ್ರಾಂತ್ಯರಚನೆ, ಕಿಡಿ ಹಾರಿತು, ಹಿಂದಿ ಏಕೆ ರಾಜಭಾಷೆಯಾಗಬೇಕು, ಹಿಂದಿ ಭಾಷೆಗೆ ಇರುವ ಅನುಕೂಲ, ಇಂಗ್ಲಿಷಿನ ಮೋಡಿ, ಕನ್ನಡ ಏಕೆ

ರಾಜಭಾಷೆಯಾಗಬಾರದು ಎಂಬ ಅಧ್ಯಾಯಗಳಿವೆ. ಇವುಗಳ ವಿವೇಚನೆಯಲ್ಲಿ ಎರಡು ವಿಚಾರಗಳು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಮೊದಲನೆಯದು : ಒಂದು ರಾಷ್ಟ್ರಕ್ಕೆ ತನ್ನದೇ ಆದ ಭಾಷೆ ಇರಬೇಕು. ಭಾರತದಂಥ ರಾಷ್ಟ್ರಕ್ಕೆ ಆ ರಾಷ್ಟ್ರದ ಬಹು ಜನರಾಡುವ ಭಾಷೆ ರಾಷ್ಟ್ರ ಭಾಷೆಯಾಗಬೇಕು ಎಂಬುದು. ಎರಡನೆಯದು : ಅನೇಕ ರಾಜ್ಯಗಳನ್ನು ಹೊಂದಿರುವ ರಾಷ್ಟ್ರದಲ್ಲಿ ಆಯಾ ರಾಜ್ಯಭಾಷೆಗೆ ಯುಕ್ತ ಪ್ರಾಧಾನ್ಯ ಇರಬೇಕು ಎಂಬುದು. ಆದುದರಿಂದ ಆಯಾ ಪ್ರಾಂತೀಯ ಭಾಷೆಗಳಲ್ಲೆ ವ್ಯವಹಾರ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕು. ಕನ್ನಡದಲ್ಲೇ ವ್ಯವಹಾರ ನಡೆಯಬೇಕು, ಕನ್ನಡ ಜನ ಕನ್ನಡಕ್ಕಾಗಿ ಹೋರಾಟ ನಡೆಸಬೇಕು ಎಂಬುದು.

೧೯೭೨ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟವಾದ 'ದ್ರಾವಿಡ ಸಂಖ್ಯಾವಾಚಕಗಳು' ಎಂಬುದು ಒಂದು ಕಿರು ಪುಸ್ತಕ. ಇದರಲ್ಲಿ ವ್ಯಕ್ತಿಯ ಬದುಕಿಗೆ ಸಂಖ್ಯಾವಾಚಕಗಳು ಎಷ್ಟರಮಟ್ಟಿಗೆ ಅನಿವಾರ್ಯ, ಬದುಕಿನಲ್ಲಿ ಅವು ನಿರ್ವಹಿಸುವ ಪಾತ್ರವನ್ನು ಕುರಿತ ವಿವೇಚನೆಯಿದೆ. ಸಂಖ್ಯಾವಾಚಕಗಳನ್ನು ಶಾಸನಗಳಲ್ಲಿ, ಪ್ರಾಚೀನ ಕಾವ್ಯಗಳಲ್ಲಿ ಬಹಳ ಹಿಂದೆಯೇ ಬಳಸಿರುವುದನ್ನು ಉದಾಹರಣೆಗಳೊಂದಿಗೆ ತಿಳಿಸಿಕೊಟ್ಟಿದ್ದಾರೆ. ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ಸರ್ವನಾಮಗಳಂತೆ ಸಂಖ್ಯಾವಾಚಕಗಳಿಗೂ ವಿಶಿಷ್ಟ ಸ್ಥಾನವುಂಟು. ಇವುಗಳ ನೆರವಿನಿಂದ ಭಾಷೆಗಳ ನಡುವೆಯಿರುವ ಸಮಾನ ಅಂಶಗಳನ್ನು ಅರಿಯಲು ಸಾಧ್ಯ ಎಂದಿರುವ ಲೇಖಕರು, ಸಂಸ್ಕೃತ, ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿರುವ ಮೂಲಾಂಕಗಳು ಮತ್ತು ಕ್ರಮಾಂಕಗಳ ಪಟ್ಟಿಯನ್ನು ಕೊಟ್ಟು ಅವನ್ನು ವಿವರಿಸಿದ್ದಾರೆ. ದ್ರಾವಿಡ ಭಾಷೆಗಳಲ್ಲಿ ಬಳಕೆಗೊಳ್ಳುವ ಪ್ರತಿಯೊಂದು ಸಂಖ್ಯಾವಾಚಕವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅವುಗಳ ಮೂಲ, ರೂಪ ವ್ಯತ್ಯಾಸ ಹಾಗೂ ಸಮಾನ ಅಂಶಗಳನ್ನು ನಿದರ್ಶನ ಸಹಿತ ವಿವರಿಸಲಾಗಿದೆ. ಉದಾಹರಣೆಗಾಗಿ 'ಒಂದು' ಎಂಬ ಸಂಖ್ಯೆಯನ್ನು ಪರಿಶೀಲಿಸಬಹುದು 'ಎಲ್ಲ ದ್ರಾವಿಡ ಭಾಷೆಗಳಲ್ಲಿ 'ಒರು', ತೆಲುಗು ಭಾಷೆಯಲ್ಲಿ ಮಾತ್ರ 'ಒಕ'. ಒರ್ ಎಂಬುದೇ ಮೂಲ. ಒರು ರೂಪಕ್ಕೆ - ಉ ಎಂಬುದು ಸೇರುವುದು ಬಹುಶಃ ಉಚ್ಚಾರ ಸೌಲಭ್ಯಕ್ಕಾಗಿ. ಸಮಾಸದಲ್ಲಿ - ಉ ಬಿದ್ದು ಹೋಗುತ್ತದೆ. ಆದರೆ ತಮಿಳಿನಲ್ಲಿ ಸಮಾಸದಲ್ಲೂ-ಉ ಉಂಟು: ಒರುವನ್, ಒರುವಳ್. ವಿಶೇಷಣರೂಪ ಒರ್ ಎಂದಿಟ್ಟುಕೊಳ್ಳಬಹುದು. ತಮಿಳಿನಲ್ಲಂತೂ ಒರ್ ಎಂಬುದೇ ವಿಶೇಷಣರೂಪ (ಒರಿ - ಒಬ್ಬನು, ಒರ - ಒಮ್ಮೆ), ಸ್ವರಗಳು ಮುಂದೆ ಬಂದರೆ ಆಗ ಒರ್, ಓರ್ ಆಗುತ್ತದೆ. ಆದಿ ಹ್ರಸ್ವಸ್ವರ, ದೀರ್ಘ ಸ್ವರವಾಗುತ್ತದೆ. ಒರು + ಉಡಲ್ >ಒರುಡಲ್ (ತಮಿಳು).ಒರ್ +ಒಡಲ್ >ಓರೊಡಲ್ (ಕನ್ನಡ), ಆದರೆ ತಮಿಳಿನಲ್ಲಿ ವ್ಯಂಜನಗಳು ಪರವಾದಾಗಲೂ ದೀರ್ಘತೆಯುಂಟು; ಕನ್ನಡದಲ್ಲಿಲ್ಲ.

ದಕ್ಷಿಣ ದ್ರಾವಿಡ ಭಾಷೆಯಲ್ಲಿ ಒಂದರಿಂದ ಎಂಟರತನಕ ಮತ್ತು ಹತ್ತು, ನೂರು - ಈ ಸಂಖ್ಯೆಗಳಿಗೆ ಮೂಲಾಂಕದ ಸ್ಥಾನವನ್ನು ನೀಡಲಾಗಿದೆ. ಇದರಲ್ಲಿ 'ಒಂಬತ್ತು' ಎಂಬುದು ಹತ್ತರಲ್ಲಿ ಕಳೆಯುವಿಕೆಯಿಂದ ರೂಪುಗೊಂಡಿರುವಂಥದು. 'ಸಾವಿರ' ಎಂಬ ಸಂಖ್ಯೆಯ ಮೂಲ ಆಕೃತಿಮಾವನ್ನು ಸಾಸಿರ (ಸಂಸ್ಕೃತ) ಎಂಬುದರ ತದ್ಭವ ರೂಪವಾಗಿ ಸ್ವೀಕರಿಸಲಾಗಿದೆ. ಲಕ್ಷ, ಕೋಟಿ ಎಂಬ ರೂಪಗಳು

ಆರ್ಯ ಭಾಷೆಯಿಂದ ಸ್ವೀಕೃತವಾದವು. ಕೊಂಚ, ಅರೆ, ಕಡಿಮೆ ಇತ್ಯಾದಿ ಶಬ್ದಗಳನ್ನು ಅನಿಶ್ಚಿತ ಸಂಖ್ಯಾವಾಚಕಗಳೆಂದು ನಿರ್ಧರಿಸಲಾಗಿದೆ. ಇವು ದೇಹಾಂಗಗಳ ಶಬ್ದಗಳಾಗಿದ್ದು, ಅರ್ಥ ವಿಕಾಸ ಹೊಂದಿವೆ. 'ಅರೆ' ಎಂಬರ್ಥದಲ್ಲಿ ಸಂಸ್ಕೃತದ 'ಅರ್ಧ' ಶಬ್ದವೇ ಹೆಚ್ಚಾಗಿ ಬಳಕೆಯಲ್ಲಿದೆ- ಹೀಗೆ ಲೇಖಕರ ವಿಚಾರಧಾರೆ ಸಾಗುತ್ತದೆ. ಒಟ್ಟಿನಲ್ಲಿ ದ್ರಾವಿಡ ಸಂಖ್ಯಾವಾಚಕಗಳನ್ನು ಕುರಿತು ವಿಶ್ಲೇಷಿಸುವಲ್ಲಿ ಹಂಪನಾ ಅವರು ಒಂದು ಕ್ರಮಬದ್ಧತೆಯನ್ನು ತೋರಿದ್ದಾರೆ. ಅಭ್ಯಾಸಾರ್ಹ ಪುಸ್ತಕವನ್ನಾಗಿಸಿದ್ದಾರೆ.

ಹಂಪನಾ ಅವರ 'ಭಾಷೆ' ಎಂಬ ಪುಟ್ಟ ಪುಸ್ತಕ ಪ್ರಕಟವಾದುದು ೧೯೭೩ ರಲ್ಲಿ. ಈ ಪುಸ್ತಕದಲ್ಲಿ ಭಾಷೆಯನ್ನು ಕುರಿತಂತೆ ೧೦೦ ವಿಚಾರಗಳಿವೆ. ಭಾಷೆ ಬಗೆಗಿನ ಅವರ ಆಳವಾದ ಅಧ್ಯಯನ [illegible]ಮುಟ್ಟಿನದು ಎಂಬ ವಿಚಾರ, ಈ ಪುಸ್ತಕದ ಅವಲೋಕನದಿಂದ ತಿಳಿದುಬರುತ್ತದೆ. ಪ್ರೊ. ಕಮಲಾ ಹಂಪನಾ ಅವರಿಗೆ ಉಡುಗೊರೆಯಾಗಿ ನೀಡಿದ ೫೪ ಪುಟಗಳ ವ್ಯಾಪ್ತಿಯಿರುವ ಪುಸ್ತಕವಿದು. ಭಾಷೆಯ ಸ್ವರೂಪ, ಪ್ರಯೋಜನ ಕುರಿತಂತೆ ಆಧುನಿಕ ವಿಚಾರಗಳನ್ನು ತಮ್ಮದೇ ಆದ ಸೊಗಸಾದ ಶೈಲಿಯಲ್ಲಿ ನಿರೂಪಿಸಿದ್ದಾರೆ. ಭಾಷೆಯನ್ನು ಕುರಿತ ಸೂತ್ರಗಳನ್ನೂ ಅದರ ಸಾಮಾನ್ಯ ತತ್ವಗಳನ್ನೂ ಪರಿಚಯಿಸುವಾಗಲೆಲ್ಲ ಇಂಗ್ಲಿಷಿನಲ್ಲಿ ಪ್ರಕಟಗೊಂಡಿರುವ ವಿಚಾರಗಳನ್ನೂ ಅನುವಾದಿಸಿ, ಕನ್ನಡದಲ್ಲಿ ಸರಳವಾಗಿ ಸಾರವತ್ತಾಗಿ ಸೆರೆಹಿಡಿದಿಟ್ಟಿದ್ದಾರೆ. ಭಾಷೆ ಎಂದರೇನು? ಅದರ ಸ್ವರೂಪವೇನು? ಭಾಷಾ ವಿಜ್ಞಾನದ ಪ್ರಕಾರಗಳಾವುವು? ಮಾನವ ಭಾಷಾ ವೈಲಕ್ಷಣ್ಯಗಳಾವುವು? ವ್ಯಕ್ತಿ ಭಾಷೆ, ಉಪ ಭಾಷೆ, ಶಿಷ್ಟ ಭಾಷೆಗಳೆಂದರೇನು? ಭಾಷೆಯಲ್ಲಿ ಲಿಪಿಯ ಸ್ಥಾನವೇನು? ಮೊದಲಾದ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರಗಳು ಸಿಗುತ್ತವೆ.

೧೯೮೦ರಲ್ಲಿ ಹೊರಬಂದ 'ಭಾಷಾ ವಿಜ್ಞಾನಿಗಳು' ಎಂಬ ಗ್ರಂಥದಲ್ಲಿ ಅರುವತ್ತೇಳು ಮಂದಿ ಪ್ರಸಿದ್ಧ ಭಾಷಾ ವಿಜ್ಞಾನಿಗಳ ಪರಿಚಯವಿದೆ. ಎಡ್ವರ್ಡ್ ಸಪೀರ್, ಕೆನ್ನೆತ್ ಲೀ ಪೈಕ್, ಜಾನ್ ರೂಪರ್ಟ್ ಫರ್ಥ್, ಜಾರ್ಜ್ ಎಬ್ರಹಾಮ್‌ಗ್ರಿಯರ್‌ಸನ್, ಥಾಮಸ್ ಬರೊ, ಫರ್ಡಿನೆಂಡ್ ಡಿ ಸಸ್ಸೂರ್, ಫ್ರಾಂಜ್ ಬಾಪ್, ಮರೆ ಎಮಿನೊ, ರಾಬರ್ಟ್ ಕಾಲ್ಡ್‌ವೆಲ್, ರಾಸ್ಮಸ್ ಕ್ರಿಶ್ಚಿಯನ್ ರಾಸ್ಕ್, ಲಿಯೊನಾರ್ಡ್‌ಬ್ಲೂಮ್‌ಫೀಲ್ಡ್, ಸರ್ ವಿಲಿಯಮ್ ಜೋನ್ಸ್, ಡೇನಿಯಲ್ ಜೋನ್ಸ್, ಯೂಜಿನ್ ಎ ನೈಡಾ, ರಾಬರ್ಟ್ ಎ ಹಾಲ್, ರೋಮನ್‌ಯಾಕೋಬ್‌ಸನ್, ಆಚಾರ್ಯ ತೀನಂಶ್ರೀ, ಎಲ್.ವಿ. ರಾಮಸ್ವಾಮಿ ಅಯ್ಯರ್ ಮೊದಲಾದ ಬಗೆಗಿನ ಲೇಖನಗಳು ಆತ್ಮೀಯವಾಗಿವೆ. ಈ ಮಹನೀಯರೆಲ್ಲ ಭಾಷಾ ವಿಜ್ಞಾನ ಕ್ಷೇತ್ರದಲ್ಲಿ ದುಡಿದ ಪ್ರಸಿದ್ಧರು. ಬೇರೆ ಬೇರೆ ದೇಶಗಳ ಬೇರೆ ಬೇರೆ ಭಾಷೆಗಳಿಗೆ ಸೇರಿದವರು. ತೌಲನಿಕ ಭಾಷಾವಿಜ್ಞಾನ, ದ್ರಾವಿಡ ಭಾಷಾವಿಜ್ಞಾನ, ವ್ಯಾಕರಣ, ಧ್ವನಿವಿಜ್ಞಾನ, ಕೋಶ ವಿಜ್ಞಾನ, ಆಕೃತಿಮಾವಿಜ್ಞಾನ, ವಾಕ್ಯವಿಜ್ಞಾನ ಮೊದಲಾದ ಕ್ಷೇತ್ರಗಳಿಗೆ ಈ ವಿದ್ವಾಂಸರಿಂದ ಸಂದ ಅಪೂರ್ವ ಕೊಡುಗೆಗಳನ್ನು ಸಮರ್ಥವಾಗಿ ಪರಿಚಯಿಸಲಾಗಿದೆ. ಒಟ್ಟಿನಲ್ಲಿ ಈ ಪುಸ್ತಕದ ಪ್ರಮುಖ ಉದ್ದೇಶ ಭಾಷಾವಿಜ್ಞಾನಿಗಳ ಸಾಧನೆ ಸಿದ್ಧಿಗಳನ್ನು ಜನಸಾಮಾನ್ಯರಿಗೆ ತಿಳಿಸಿಕೊಡುವುದೇ ಆಗಿದೆ. ಭಾಷಾವಿಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಇದೊಂದು ಉಪಯುಕ್ತ ಪುಸ್ತಕವಾಗಿದೆ.

(೩)

ಹಂಪನಾ ಅವರು ಭಾಷಾವಿಜ್ಞಾನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಶ್ಲಾಘನೀಯ ಕೆಲಸವನ್ನು ಮಾಡಿದ್ದಾರೆ. ಈವರೆಗೆ ನಾನು ಪರಿಚಯಿಸಿರುವ ಕೃತಿಗಳೇ ಅಲ್ಲದೆ ಅವರ ಅನೇಕ ಸಂಪ್ರಬಂಧಗಳು ವಿವಿಧ ಪತ್ರಿಕೆಗಳಲ್ಲಿ ನಿಯತಕಾಲಿಕೆಗಳಲ್ಲಿ ಸಂಭಾವನಾ ಗ್ರಂಥಗಳಲ್ಲಿ ಪ್ರಕಟವಾಗಿವೆ. ಅವನ್ನೆಲ್ಲ ಪರಿಚಯಿಸಲು ಇಲ್ಲಿ ಸಾಧ್ಯವಾಗಿಲ್ಲ. ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಅವರ ಪ್ರಕಟಿತ ಹಾಗೂ ಅಪ್ರಕಟಿತ ಬಿಡಿಬರಹಗಳನ್ನೆಲ್ಲ ಒಂದೆಡೆ ಸೇರಿಸಿ ಪುಸ್ತಕ ರೂಪದಲ್ಲಿ ಹೊರತಂದರೆ, ಭಾಷಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಸಹಾಯಕವಾಗುತ್ತದೆ. ಮಾನವಿಕ ವಿಭಾಗದ ಬೇರೆ ಬೇರೆ ಕ್ಷೇತ್ರಗಳಿಗೆ ಹೋಲಿಸಿದಾಗ, ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಕೃಷಿ ಮಾಡುತ್ತಿರುವವರ ಸಂಖ್ಯೆ ಬಹಳ ಕಡಿಮೆ. ಹಂಪನಾ ಅವರಿಗೆ ಪಾಂಡಿತ್ಯವಿದೆ, ಪ್ರತಿಭೆಯಿದೆ, ಬರಹ ಸಾಮರ್ಥ್ಯವೂ ಇದೆ. ಮುಂದಿನ ದಿನಗಳಲ್ಲಿ ಅವರು ಭಾಷಾವಿಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದ ಮೌಲಿಕ ಕೃತಿಗಳನ್ನು ಹೊರತರಲೆಂದು ಆಶಿಸುತ್ತೇನೆ.

(ಧಾರವಾಡದಲ್ಲಿ ನಡೆದ 'ಹಂಪನಾ ಸಾಹಿತ್ಯ ವಿಚಾರ ಸಂಕಿರಣ'ದಲ್ಲಿ ಮಂಡಿಸಿದ ಪ್ರಬಂಧ)

ಕೊನೆ ಟಿಪ್ಪಣಿಗಳು

೧. ದೇಜಗೌ ದ್ರಾವಿಡ ಭಾಷಾವಿಜ್ಞಾನ, ಮುನ್ನುಡಿ ಪು. vi-vii, ೧೯೯೪.

೨. ಹಂಪನಾ ದ್ರಾವಿಡ ಭಾಷಾವಿಜ್ಞಾನ, ಮೊದಲ ಮಾತು ಪು. xiii-xiv, ೧೯೯೪.

೩. ಪ್ರೊ.ಡಿ.ಎಲ್.ಎನ್. ಭಾಷಾವಿಜ್ಞಾನ, ಮುನ್ನುಡಿ , ಪು. xvii-xviii, ೧೯೬೮.

*   *   *   *   *

ಮೈಸೂರು ಜಿಲ್ಲೆಯ ಮಹಮ್ಮದೀಯ ಶಾಸನಗಳು

ಕೆ. ಮೊಹಮ್ಮದ್ ಶರೀಫ್

ಮೈಸೂರು ಐತಿಹಾಸಿಕ ಪ್ರಸಿದ್ಧವಾದ ನಗರ. ಇದು ಕರ್ನಾಟಕ ರಾಜ್ಯದ ಹೆಮ್ಮೆಯ ನಗರವೂ ಹೌದು. ಇದು ಕರ್ನಾಟಕದ ಸಂಸ್ಕೃತಿಯ ಕೇಂದ್ರ, ಕನ್ನಡ ಸಾಹಿತ್ಯ, ಸಂಗೀತ, ನೃತ್ಯ ಮತ್ತು ನಾಟಕ ಕಲೆಗಳ ತೌರುಮನೆ. ವಿಜಯನಗರದ ಪತನಾನಂತರ ಮುಳುಗಿದ ಕರ್ನಾಟಕ ಸಂಸ್ಕೃತಿ ಮೈಸೂರಿನಲ್ಲಿ ಬೆಳಗಿದೆ ಎನ್ನಬಹುದು. ಭಾರತದ ಜನರಲ್ಲದೆ ಪ್ರಪಂಚದ ನಾನಾ ಭಾಗದ ಜನರ ಮನಸ್ಸನ್ನು ಸೆಳೆದಿರುವಂತಹ ಸುಂದರ, ರಮ್ಯ, ನೈರ್ಮಲ್ಯಕ್ಕೆ ಪ್ರಸಿದ್ಧವಾದಂತಹ ಮನೋಹರ ದೃಶ್ಯಗಳಿಂದ ಕೂಡಿದ ಉದ್ಯಾನವನಗಳ ನಗರ ಮೈಸೂರು. ಇದು ವಿದ್ಯಾರ್ಜನೆಗೆ ಸರ್ವಸೌಲಭ್ಯವನ್ನು ಹೊಂದಿರುವಂತಹ ಸರಸ್ವತೀನಿವಾಸವೆಂದು ಪ್ರಸಿದ್ಧವಾಗಿದೆ. ಇದು ದೊಡ್ಡ ದೊಡ್ಡ ರಸ್ತೆಗಳಿಂದಲೂ, ಉತ್ತಮ ಸೌಧಗಳಿಂದಲೂ, ವಿದ್ಯಾಕೇಂದ್ರಗಳಿಂದಲೂ, ಗುಮ್ಮಟ ಗೋಪುರಗಳಿಂದಲೂ, ಅರಮನೆ, ಗುರುಮನೆ, ದೇವಾಲಯ, ಮಠ, ಮಸೀದಿ, ಚರ್ಚುಗಳಿಂದಲೂ ಶೋಭಾಯಮಾನವಾಗಿದೆ.

'ಮಹಿಷಪುರ, ಮಹಿಷೂರು' ತದನಂತರ 'ಮೈಸೂರು' ಎಂಬ ಈಗಿನ ಹೆಸರು ಸುಮಾರು ಹತ್ತನೆಯ ಶತಮಾನದಿಂದಲೂ ವಾಡಿಕೆಯಲ್ಲಿದೆ. ಮೈಸೂರು ನಗರದ ಸುತ್ತಲೂ ದೊರೆತ ಶಾಸನಗಳ ಮೂಲಕ ಈಗಿನ ಮೈಸೂರು ನಗರದ ಸುತ್ತಲೂ ದೇವಲಾಪುರ, ಉತ್ತನಹಳ್ಳಿ, ಕುಕ್ಕರಹಳ್ಳಿ, ಬೇಗೂರು, ವರುಣ, ಬೆಲ್ಲವತ್ತ, ನಂಜನಗೂಡು, ಮಾರಗೌಡನಹಳ್ಳಿ ಮುಂತಾದ ಎಪ್ಪತ್ತು ಹಳ್ಳಿಗಳಿಂದ ಕೂಡಿದ್ದು 'ಮೈಸೂರು ನಾಡು' ಎಂದು ಕರೆಯಲ್ಪಡುತ್ತಿದ್ದಿತು. ಮೈಸೂರು ಈ ನಾಡಿನ ಮುಖ್ಯ ಸ್ಥಳವಾಗಿದ್ದಿತು.

ಮೈಸೂರು ಜಿಲ್ಲೆಯ ಸುಮಾರು ೫೭೮ ಗ್ರಾಮಗಳಲ್ಲಿ ನಮಗೆ ಶಾಸನಗಳು ದೊರೆತಿವೆ. ಹೀಗೆ ದೂರೆತಿರುವ ಶಾಸನಗಳ ಸಂಖ್ಯೆ ಸುಮಾರು ೨೩೮೫. ಇವು ನಮ್ಮ ಜನಾಂಗದ ಆಸ್ತಿ. ಈ ಶಾಸನಗಳನ್ನು ಮುಖ್ಯವಾಗಿ ಮೂರು ವಿಭಾಗಗಳಾಗಿ ವಿಂಗಡಿಸಬಹುದು- ತಾಮ್ರ ಶಾಸನಗಳು, ಶಿಲಾ ಶಾಸನಗಳು ಮತ್ತು ಲೋಹಶಾಸನಗಳು. ಈ ಮೂರು ಪ್ರಕಾರದ ಶಾಸನಗಳು ಒಂದರಿಂದ ಒಂದು ಭಿನ್ನರೀತಿಯಲ್ಲಿವೆ. ಇವುಗಳಲ್ಲೆಲ್ಲಾ ತಾಮ್ರಶಾಸನಗಳು ಹೆಚ್ಚು ಅಮೂಲ್ಯವಾದುವು.

ಈ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಕದಂಬ, ಪುನ್ನಾಟ, ಗಂಗ, ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯ, ನೊಳಂಬ, ಚೋಳ, ಬಯಲ್ನಾಡಿನ ಕದಂಬ, ಹೊಯ್ಸಳ, ವಿಜಯನಗರ, ಕೊಂಗಾಳ್ವ, ಚಂಗಾಳ್ವ, ಉಮ್ಮತ್ತೂರು, ನಂದ್ಯಾಲ, ಹದಿನಾಡು, ಚೆಂಚಿ, ಮಧುರ, ರಾಮನಾಡು, ಕಳಲೆ, ಶಿವಗಿರಿ, ಮೈಸೂರು ಮುಂತಾದ ಅರಸರಿಗೆ ಸೇರಿದವು.

ಈ ಜಿಲ್ಲೆಯ ಶಾಸನಗಳಲ್ಲಿ ಕೆಲವು ತಮಿಳು ಭಾಷೆ, ತಮಿಳು ಹಾಗೂ ಗ್ರಂಥ ಲಿಪಿಯಲ್ಲಿವೆ. ಇನ್ನು ಕೆಲವು ಸಂಸ್ಕೃತ ಭಾಷೆ ನಾಗರಿ ಮತ್ತು ತಮಿಳು ಲಿಪಿಯಲ್ಲಿವೆ. ಸಂಸ್ಕೃತ, ತೆಲುಗು, ಪರ್ಶಿಯನ್, ಅರಾಬಿಕ್, ಉರ್ದು ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಕೆಲವು ಶಾಸನಗಳಿವೆ. ಉಳಿದ ಎಲ್ಲ ಶಾಸನಗಳು ಕನ್ನಡ ಭಾಷೆ ಮತ್ತು ಲಿಪಿಯಲ್ಲಿವೆ. ಅನೇಕ ಕನ್ನಡ ಶಾಸನಗಳ ಕೆಲ ಭಾಗಗಳು ಸಂಸ್ಕೃತದಲ್ಲಿರುವುದೂ ಉಂಟು. ಬಹುಪಾಲು ಶಾಸನಗಳ ಮೊದಲಲ್ಲಿ ಬರುವ ಪ್ರಾರ್ಥನೆ ಮತ್ತು ಕಡೆಯಲ್ಲಿ ಬರುವ ಶಾಪ ಪದ್ಯಗಳು ಸಂಸ್ಕೃತ ಭಾಷೆಯಲ್ಲಿವೆ.

ನಮಗೆ ಮೈಸೂರು ಜಿಲ್ಲೆಯಲ್ಲಿ ಸಿಕ್ಕಿರುವ ಕನ್ನಡ, ತಮಿಳು, ತೆಲುಗು ಮತ್ತು ಇತರ ಭಾಷೆಗಳ ಶಾಸನಗಳು ಹಾಗೆಯೇ ಪರ್ಶಿಯನ್, ಅರಾಬಿಕ್, ಉರ್ದು ಹಾಗೂ ಕನ್ನಡ ಭಾಷೆಗಳಲ್ಲಿ ದೊರೆತಿರುವ ಮಹಮ್ಮದೀಯ ಶಾಸನಗಳು ಬಹಳ ಮುಖ್ಯವಾದುವು. ಇವು ಇತರ ಭಾಷೆಗಳ ಶಾಸನಗಳಂತೆಯೇ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಘಟನೆಗಳ ಅಧ್ಯಯನಕ್ಕೆ ಅಮೂಲ್ಯವಾದ ಆಕರಗಳಾಗಿವೆ.

ಮೈಸೂರು ಜಿಲ್ಲೆಯ ಮಹಮ್ಮದೀಯ ಶಾಸನಗಳಲ್ಲಿ ಬಹುಪಾಲು ಶಾಸನಗಳು, ಮಸೀದಿ, ಗೋರಿ, ಅಣೆಕಟ್ಟು, ದೇವಸ್ಥಾನ, ಗೋಪುರ, ಕಟ್ಟಡ ಮುಂತಾದ ಸ್ಥಳಗಳಲ್ಲಿ ದೊರೆಯುತ್ತವೆ. ಇವು ಅವುಗಳ ನಿರ್ಮಾಣ, ನಿರ್ಮಿಸಿದ ವ್ಯಕ್ತಿಯ ಹೆಸರು. ಕೆಲವೊಮ್ಮೆ ಅಂದಿನ ಅರಸ, ಕಾಲ ಮುಂತಾದ ವಿಷಯಗಳನ್ನೊಳಗೊಂಡಿರುತ್ತವೆ.ಇವುಗಳಲ್ಲದೆ ನಾಣ್ಯಗಳು. ಪಾತ್ರೆಗಳು ಮುಂತಾದ ಚರವಸ್ತುಗಳ ಮೇಲೂ ಈ ಶಾಸನಗಳನ್ನು ಕಾಣಬಹುದು.

ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕಿನ ಆನಂದೂರು ಗ್ರಾಮಕ್ಕೆ ಸೇರಿದ ಕ್ರಿ.ಶ. ೧೭೯೭ರ ಶಾಸನವು ಟಿಪ್ಪುಸುಲ್ತಾನನು ಕಾವೇರಿ ನದಿಗೆ ಅಡ್ಡಲಾಗಿ ಕಟ್ಟಿರುವ ಅಣೆಕಟ್ಟಿನ ವಿಷಯವನ್ನು ತಿಳಿಸುತ್ತದೆ. ಟಿಪ್ಪುಸುಲ್ತಾನನು ಕೃಷಿಯ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದುದಕ್ಕೆ ಇದೊಂದು ಉತ್ತಮ ಸಾಕ್ಷಿಯಾಗಿದೆ. ಸಯ್ಯಿದ್ ಜಾಫರ್ ಎಂಬುವನು ಈ ಶಾಸನವನ್ನು ಬರೆದಿದ್ದಾನೆ. ಈ ಶಾಸನದಲ್ಲಿ ಮೈಸೂರು ರಾಜ್ಯವು ಟಿಪ್ಪುಸುಲ್ತಾನನಿಗೆ "ಸರ್ಕಾರೆ ಖುದಾದಾದ್" ಅಂದರೆ "ದೈವದತ್ತವಾದ ರಾಜ್ಯ" ಎಂದು ಹೇಳಿದೆ. ಅಲ್ಲದೆ ದೇವರೇ ತನ್ನನ್ನು ಈ ರಾಜ್ಯಕ್ಕೆ ಬಾದಶಹನನ್ನಾಗಿ ನೇಮಿಸಿದ್ದಾನೆ ಎಂಬ ಮಾತು ಈ ಶಾಸನದಲ್ಲಿದೆ.

ಇದೇ ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಕಳಲೆ ಗ್ರಾಮದ ಲಕ್ಷ್ಮೀಕಾಂತ ದೇವಸ್ಥಾನದಲ್ಲಿರುವ ನಾಲ್ಕು ಬೆಳ್ಳಿಯ ಬಟ್ಟಲುಗಳ ಮೇಲಿರುವ ಶಾಸನಗಳಲ್ಲಿ ಹೀಗೆ ಹೇಳಿದೆ : "ಟಿಪು ಸುಲತಾನ ಪಾಧಶಾರ ಧರ್ಮಲ ತುಕ ೮೩". ಅಂದರೆ ಅವು ಆ ಬೆಳ್ಳಿಯ ಬಟ್ಟಲುಗಳನ್ನು ಆ ದೇವಸ್ಥಾನಕ್ಕೆ ಟಿಪ್ಪು ಸುಲ್ತಾನನು ದಾನ ಮಾಡಿದ ಸಂಗತಿಯನ್ನು ತಿಳಿಸುತ್ತವೆ. ಇದೇ ರೀತಿ ಅದೇ ದೇವಸ್ಥಾನದಲ್ಲಿರುವ ದೊಡ್ಡ ಬೆಳ್ಳಿಯ ತಟ್ಟೆಯ ಮೇಲಿರುವ ಶಾಸನದಲ್ಲಿ ಹೀಗೆ ಹೇಳಿದೆ: "ಸುಲತಾನಿ ಪಾದಶಾಹರ ಧರ್ಮಲ ತುಕ ಗ ೪೨೨". ಅಂದರೆ ಅದರಲ್ಲಿ ಸುಲ್ತಾನನು (ಟಿಪ್ಪು ಸುಲ್ತಾನನು) ತಟ್ಟೆಯನ್ನು ಈ ದೇವಸ್ಥಾನಕ್ಕೆ ದಾನ ಮಾಡಿದುದಾಗಿ ಹೇಳಿದೆ.

ಟಿಪ್ಪು ಸುಲ್ತಾನನನ್ನು ಕೆಲವು ಇಂಗ್ಲಿಷ್ ಬರಹಗಾರರು ಮತಾಂಧ ಮತ್ತು ಕ್ರೂರಿ ಎಂದು

ಚಿತ್ರಿಸಿದ್ದಾರೆ. ಆದರೆ ಅವನ ಜೀವನ ಚರಿತ್ರೆಯನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಹಾಗೂ ಮೈಸೂರು ಮಂಡ್ಯ ಮಂತಾದ ಜಿಲ್ಲೆಗಳ ಶಾಸನಗಳ ಅಧ್ಯಯನದಿಂದ ಇಂಗ್ಲಿಷ್ ಬರಹಗಾರರ ಅಭಿಪ್ರಾಯ ಸುಳ್ಳೆಂದು ವ್ಯಕ್ತವಾಗುತ್ತದೆ. ಪ್ರತಿಯಾಗಿ ಟಿಪ್ಪು ಸುಲ್ತಾನನು ತಿಳಿವಳಿಕೆಯುಳ್ಳ ಅರಸನಾಗಿದ್ದುದರಿಂದ ಮುಸ್ಲಿಮೇತರರನ್ನು ಬಹಳ ಔದಾರ್ಯದಿಂದಲೇ ನಡೆಸಿಕೊಂಡನೆಂದು ಅವನ ಎಲ್ಲಾ ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಟಿಪ್ಪು ಸುಲ್ತಾನನು ಮಂಡ್ಯ ಜಿಲ್ಲೆಯ ಮೇಲುಕೋಟೆ ತಿರುನಾರಾಯಣ ಸ್ವಾಮಿ ಮತ್ತು ನರಸಿಂಹ ಸ್ವಾಮಿ ದೇವಸ್ಥಾನಗಳಿಗೂ ಶ್ರೀರಂಗಪಟ್ಟಣದ ರಂಗನಾಥ ಸ್ವಾಮಿ ದೇವಸ್ಥಾನಕ್ಕೂ ಬೆಳ್ಳಿಯ ಬಟ್ಟಲು, ಬೆಳ್ಳಿಯ ಪಂಚಾರತಿ ಮುಂತಾದವುಗಳನ್ನು ಕಾಣಿಕೆಯಾಗಿ ಕೊಟ್ಟಿರುವುದನ್ನು ಈ ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ. ಇವಲ್ಲದೆ ಮೇಲುಕೋಟೆಯ ನಾರಾಯಣಸ್ವಾಮಿ, ನರಸಿಂಹ ಸ್ವಾಮಿ ದೇವಸ್ಥಾನಗಳಿಗೆ ತನ್ನ ರಾಜಧಾನಿಯಾದ ಶ್ರೀರಂಗಪಟ್ಟಣದಿಂದ ಆಸ್ಥಾನ ನಾಯಕನಾದ (ಹುಜೂರ ನಾಯಕ) ಶ್ರೀನಿವಾಸಾಚಾರಿ ಮತ್ತು ಹರಿಕಾರ ಭಕ್ಷಿಯ ಮುಖಾಂತರ ಗಂಡಾನೆ ೨ ಮತ್ತು ಹೆಣ್ಣಾನೆ ೧ನ್ನು ಮೇಲುಕೋಟೆ ಪಾರಪತಿ ಕಾರಿರಾಉ ಮತ್ತು ವೀರ ಜೈನ ಉನ್‌ರ (ಮೀರ್ ಜೈನ್ ಉಲ್) ಮೂಲಕ ದಾನ ಮಾಡಿದುದಾಗಿ ಕ್ರಿ.ಶ. ೧೭೮೫ರ ಟಿಪ್ಪು ಸುಲ್ತಾನನ ಶಾಸನದಿಂದ ತಿಳಿದುಬರುತ್ತದೆ. ಇವು ಅಲ್ಲದೆ ಟಿಪ್ಪು ಸುಲ್ತಾನನು ಮಾಡಿದ ಇನ್ನೂ ಅನೇಕ ದತ್ತಿಗಳನ್ನು ನಾವು ಇತರೆ ಜಿಲ್ಲೆಗಳ ಶಾಸನಗಳಿಂದಲೂ ಮತ್ತು ಇತರೆ ದಾಖಲೆಗಳಿಂದಲೂ ಕಾಣುತ್ತೇವೆ. ಈ ಸಂದರ್ಭದಲ್ಲಿ ನಾವು ಮೈಸೂರು ಜಿಲ್ಲೆಯ ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನಕ್ಕೆ ಬೆಳ್ಳಿಯ ಪಾತ್ರೆಗಳನ್ನು ಆನೆಯನ್ನು ದಾನವಾಗಿ ಕೊಟ್ಟಿದ್ದನ್ನು ಮತ್ತು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ಸ್ವಾಮಿಗಳ ಸನ್ನಿಧಿಗೆ ಟಿಪ್ಪು ಸುಲ್ತಾನನು ಬರೆದ ಪತ್ರದಲ್ಲಿರುವಂತೆ ಅವನು ಇನ್ನೂರು ರಹತಿ ನಗದನ್ನು ಇನ್ನೂರು ರಹತಿ ಬೆಲೆಯ ಧಾನ್ಯವನ್ನೂ ಶಾರದಾದೇವಿಗೆ ಅರ್ಪಿಸಿದುದನ್ನು ಸ್ಮರಿಸಬಹುದು. ಇಷ್ಟೇ ಅಲ್ಲದೆ ಈ ಕಾಣಿಕೆಯನ್ನು ಅರ್ಪಿಸಿ ಅವನ ದಿಗ್ವಿಜಯಕ್ಕೂ ಶತ್ರುಗಳ ವಿನಾಶಕ್ಕೂ ಪ್ರಾರ್ಥಿಸಿಕೊಳ್ಳಲು ಸ್ವಾಮೀಜಿಯವರಲ್ಲಿ ಕೇಳಿಕೊಂಡಿರುವುದು ಗಮನಾರ್ಹ.

ಶೃಂಗೇರಿಯ ಸ್ವಾಮಿಗಳ ಸನ್ನಿಧಿಗೆ ಟಿಪ್ಪು ಸುಲ್ತಾನನು ಬರೆದ ಪತ್ರಗಳಿಂದಲೂ ಅನೇಕ ಹಿಂದೂ ದೇವಸ್ಥಾನಗಳಿಗೆ ದತ್ತಿ ಕೊಟ್ಟಿರುವ ಶಾಸನಗಳ ಆಧಾರಗಳಿಂದಲೂ ಹಿಂದೂಗಳಿಗೆ ಇಚ್ಛೆ ಬಂದ ದೇವರನ್ನು ಸೂಚಿಸಲು ಸಂಪೂರ್ಣ ಸ್ವಾತಂತ್ರ್ಯ ಇತ್ತೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ಟಿಪ್ಪು ಸುಲ್ತಾನನು ಮತೀಯ ಸೂಕ್ಷ್ಮಾಂಶಗಳಿಗೆ ಹೆಚ್ಚು ಗಮನ ಕೊಡದೆ ಮತಸಹಿಷ್ಣುವಾಗಿದ್ದನೆಂಬುದಾಗಿ ಹೇಳಬಹುದು.

ಮೈಸೂರಿನ ಶಿವರಾಂಪೇಟೆ ರಸ್ತೆಯಲ್ಲಿರುವ ಮೇಮ್ಮಾನ್ ಮಸೀದಿ ಎಂದು ಕರೆಯುವ ಅತ್ಯಂತ ಸುಂದರವಾದ ಮಸೀದಿಯಲ್ಲಿರುವ ಪರ್ಶಿಯನ್ ಭಾಷೆಯ ಶಾಸನದಲ್ಲಿ ಈ ಮಸೀದಿಯನ್ನು ಇಸ್ಮಾಯಿಲ್ ಎಂಬುವರು ಕ್ರಿ.ಶ. ೧೮೩೩ರಲ್ಲಿ ಕಟ್ಟಿಸಿದರೆಂದು ಹೇಳಿದೆ. ಈ ಶಾಸನವನ್ನು ಗುಲಾಂ ಜಿಲಾನಿ ರಚಿಸಿದ್ದಾನೆ ಹಾಗೂ ಸೈಯ್ಯದ್ ಮೊಹಮ್ಮದ್ ಎಂಬುವನು ಕಂಡರಿಸಿದ್ದಾನೆ. ಉತ್ತಮ ರೀತಿಯಲ್ಲಿ ಕಟ್ಟಿರುವ ಈ ಮಸೀದಿಯು ಇಂದಿಗೂ ಪ್ರಾರ್ಥನೆಗೆ

ಯೋಗ್ಯವಾಗಿದೆ.

ಮೈಸೂರಿನಲ್ಲಿರುವ ಜೈಲಿನ ಹಿಂಭಾಗ, ಮುಸ್ಲಿಮರ ಮುಖ್ಯ ಸ್ಮಶಾನ ಭೂಮಿಯ ಮುಂಭಾಗದಲ್ಲಿರುವ ಹಯಾತ್ ಸಾಹೇಬರ ಮಸೀದಿಯಲ್ಲಿ ಒಂದು ಉರ್ದು ಭಾಷೆಯ ಶಾಸನವು ದೊರಕಿದೆ. ಈ ಮಸೀದಿಯ ನಿರ್ಮಾಣವು ಕ್ರಿ.ಶ. ೧೮೩೭ರಲ್ಲಿ ನಡೆಯಿತೆಂದು ಇದರಲ್ಲಿ ಹೇಳಿದೆ.

ಮೈಸೂರಿನ ಟಿಪ್ಪು ವೃತ್ತಕ್ಕೆ ಸಮೀಪದ ಸ್ಮಶಾನ ಭೂಮಿಯೊಂದರಲ್ಲಿ ಹಜರತ್ ಬಂದಗಿ ಷಾಃ ಅವರ ಸಮಾಧಿಯ ಮೇಲೆ ದೊರೆತಿರುವ ಒಂದು ಪರ್ಶಿಯನ್ ಭಾಷೆಯ ಶಾಸನವು ಹಜರತ್ ಬಂದಗಿ ಷಾಃ ರವರು ಕ್ರಿ.ಶ. ೧೮೩೭ರಲ್ಲಿ ನಿಧನರಾದ ಸಂಗತಿಯನ್ನು ದಾಖಲಿಸಿದೆ. ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗಳಲ್ಲಿ ಬರೆದಿರುವ ಇನ್ನೊಂದು ಶಾಸನವು ಬಂದಗಿ ಷಾಃ ಅವರ ಸಮಾಧಿ ಹಾಗೂ ಗೋರಿಗಳ ಸಂಕೀರ್ಣದಲ್ಲಿ ದೊರೆತಿದೆ. ಇದರಲ್ಲಿ ದೈವಾಧೀನರಾದ ಸಂತರ ಪ್ರಶಂಸೆಯನ್ನು ಮಾಡಿದೆ.

ಮೈಸೂರಿನ ಉಮರ್ ಷಾಃ ಮಸೀದಿಯ ಸಮೀಪದಲ್ಲಿರುವ ಸ್ಮಶಾನ ಭೂಮಿಯಲ್ಲಿ ಪರ್ಶಿಯನ್ ಭಾಷೆಯಲ್ಲಿರುವ ಶಾಸನವೊಂದು ದೊರೆತಿದೆ. ಇದು ಕ್ರಿ.ಶ. ೧೮೫೫ರಲ್ಲಿ ಖಾದಿರ್ ಮುಹಿಯುದ್ದೀನ್ ಎಂಬುವರ ಮಗಳಾದ ಧರ್ಮಶ್ರದ್ಧೆಯುಳ್ಳ ಜುಹ್ರಾಬೇಗಂ ಎಂಬುವಳು ದೈವಾಧೀನಳಾದ ವಿಷಯವನ್ನು ತಿಳಿಸುತ್ತದೆ. ಅದೇ ಸ್ಮಶಾನ ಭೂಮಿಯಲ್ಲಿ ದೊರೆತಿರುವ ಇನ್ನೊಂದು ಪರ್ಶಿಯನ್ ಭಾಷೆಯ ಶಾಸನವು ಮೆಹ್‌ಕರಿ ಮುಸಾರಿಜಾ ಎಂಬುವರ ಮಗ ಬದ್ರುಜ್‌ಜಮನ್ ಖಾನ್ ಎಂಬುವನು ಕ್ರಿ.ಶ. ೧೮೬೦-೬೧ರಲ್ಲಿ ಮೃತಪಟ್ಟಿರುವ ವಿಷಯವನ್ನು ತಿಳಿಸುತ್ತದೆ. ಈ ಶಾಸನವನ್ನು ಜಕ್ಕಿ ಎಂಬುವನು ಬರೆದಿದ್ದಾನೆ.

ಮೈಸೂರಿನ ಕ್ಲಾಕ್ ಟವರ್‌ಗೆ ಹತ್ತಿರದಲ್ಲಿರುವ ಖಾಕಿಷಾಃ ಮಸೀದಿ ಎಂದು ಕರೆಯುವ ಮಸೀದಿಯನ್ನು ಖಾಕಿಷಾಃ ಎಂಬ ಒಬ್ಬ ಪ್ರಸಿದ್ಧ ಪೈಲ್ವಾನನು ಕಟ್ಟಿಸಿದನೆಂದು ತಿಳಿದುಬರುತ್ತದೆ. ಇದೇ ಸ್ಥಳದಲ್ಲಿ ಈತನ ಗೋರಿಯೂ ಇದೆ. ಇದು ಈಚೆಗೆ ಅಭಿವೃದ್ಧಿಪಡಿಸಲ್ಪಟ್ಟು ಬಹಳ ಸುಂದರವಾಗಿ ಇದೆ. ಈ ಮಸೀದಿಯಲ್ಲಿ ನಮಗೆ ಒಂದು ಪರ್ಶಿಯನ್ ಭಾಷೆಯ ಶಾಸನವು ದೊರೆತಿದ್ದು ಅದು ಈ ಮಸೀದಿಯನ್ನು ಕ್ರಿ.ಶ. ೧೮೬೯ರಲ್ಲಿ ಕಟ್ಟಲು ಆರಂಭ ಮಾಡಿ ಕ್ರಿ.ಶ. ೧೮೮೨ ರಲ್ಲಿ ಮುಗಿಸಲಾಯಿತೆಂದು ತಿಳಿಸುತ್ತದೆ.

ಮೈಸೂರಿನ ಸಯ್ಯಾಜಿರಾವ್ ರಸ್ತೆ ಪಕ್ಕದ ವೃತ್ತದಲ್ಲಿರುವ ಡಫರಿನ್ ಗಡಿಯಾರ ಗೋಪುರದ ಮೇಲೆ ಒಂದು ಪರ್ಶಿಯನ್ ಭಾಷೆಯ ಶಾಸನವಿದೆ. ನವಾಬ್ ಅರ್ಲ್ ಆಫ್ ಡಫರಿನ್ ಸಾಹಿಬ್ ಬಹದ್ದೂರ್ ವೈಸ್‌ರಾಯ್ ಆಫ್ ಇಂಡಿಯಾ ಅವರ ಆಗಮನದ ಸಮಯದಲ್ಲಿ ಸುಸ್ವಾಗತ ಸ್ವರೂಪವಾಗಿ ಮೈಸೂರಿನಲ್ಲಿ ಈ ನೆನಪಿನ ಅಸ್ತಿತ್ವಕ್ಕೆ ಬಂದಿತು. ಮೈಸೂರು ಸಂಸ್ಥಾನದ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು ಕ್ರಿ.ಶ. ೧೮೮೬ರಲ್ಲಿ ಇತ್ತ ಆಜ್ಞೆಗನುಸಾರವಾಗಿ ಈ ಗೋಪುರವನ್ನು ಕಟ್ಟಲಾಗಿದೆ ಎಂದು ಈ ಶಾಸನದಿಂದ ತಿಳಿದುಬರುತ್ತದೆ.

ಮೈಸೂರು ಜಿಲ್ಲೆ ಸಾಲಿಗ್ರಾಮದಲ್ಲಿರುವ ಮಸೀದಿಯೊಂದರಲ್ಲಿ ದೊರೆತಿರುವ ಪರ್ಶಿಯನ್ ಭಾಷೆಯ ಶಾಸನದಲ್ಲಿ ಸದರಿ ಮಸೀದಿಯನ್ನು ಕ್ರಿ.ಶ. ೧೮೯೧ರಲ್ಲಿ ಕಟ್ಟಿಸಿದರೆಂದು ಹೇಳಿದೆ.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಜಾಮಿಯಾ ಮಸೀದಿಯಲ್ಲಿದ್ದು ನೊಂದಣಿ ಹೊಂದಿದ್ದ ಈಗ ಉಪಲಬ್ಧವಿಲ್ಲದ ಒಂದು ಪರ್ಶಿಯನ್ ಭಾಷೆಯ ಶಾಸನದಲ್ಲಿ ಮಹಾರಾಜ ಕಿಷನ್ ಅಂದರೆ ಮಹಾರಾಜ ಕೃಷ್ಣರಾಜ ಒಡೆಯರವರು ಕ್ರಿ.ಶ. ೧೯೩೧ರಲ್ಲಿ ಈ ಮಸೀದಿಯ ಪುನರ್ ನಿರ್ಮಾಣ ಮಾಡಿಸಿದರೆಂದು ತಿಳಿದುಬರುತ್ತದೆ. ಈ ಶಾಸನದ ಕವಿತೆಯನ್ನು ಅಬು ಹಸನ್ ಅವರ ಇಚ್ಛೆಯಂತೆ ವಲಿ ಎಂಬುವರು ರಚಿಸಿದ್ದಾರೆ. ಈ ಮಸೀದಿಯು ಸುಂದರವಾಗಿದೆ. ಇದರ ಒಳ ಅಂಗಳದಲ್ಲಿ ಆಕರ್ಷಕವಾದ ಕೊಳ ಹಾಗೂ ರಮ್ಯವಾದ ಪ್ರಾರ್ಥನಾ ಸ್ಥಳವಿದೆ. ಇದರ ಎರಡು ದೊಡ್ಡ ಮೀನಾರ್‌ಗಳು ಬಹಳ ಎತ್ತರವಾಗಿದ್ದು ತುಂಬಾ ಆಕರ್ಷಣೀಯವಾಗಿವೆ.

ಇನ್ನೊಂದು ಪರ್ಶಿಯನ್ ಭಾಷೆಯ ಶಾಸನವು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿಗೆ ಸಮೀಪ ಹಿಂದೆ ಅಶ್ವಾರೋಹಿ ಅಂಗರಕ್ಷಕರ ವಸತಿಗಳಿದ್ದ ಸ್ಥಳದಲ್ಲಿರುವ ಅಂಗರಕ್ಷಕರ ಮಸೀದಿ ಯಲ್ಲಿದೆ. ಅರಸರ ಸೇನೆಯಲ್ಲಿದ್ದವರ ಉಪಯೋಗಕ್ಕಾಗಿ ನಿರ್ಮಾಣಗೊಂಡ ಈ ಮಸೀದಿಗೆ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರವರು ಕ್ರಿ.ಶ. ೧೯೨೭ರಲ್ಲಿ ಶಿಲಾನ್ಯಾಸ ಮಾಡಿದರು ಎಂದು ಅದರಲ್ಲಿ ದಾಖಲಿಸಿದೆ.

ಮೈಸೂರಿನ ಅಶೋಕ ರಸ್ತೆಯಲ್ಲಿರುವ 'ಮಸ್‌ಜಿದ್ ಇ ಆಜ್ಹಮ್' ಎಂದು ಕರೆಯುವ ಮಸೀದಿಯಲ್ಲಿ ಒಂದು ಪರ್ಶಿಯನ್ ಭಾಷೆಯ ಶಾಸನವಿದೆ. ಈ ಮಸೀದಿಯನ್ನು ಷಾಃ ಅಲೀಪುರ ಅಂದರೆ ಜಮಾತ್ ಅಲೀಷಾಃ ಅಲೀಪುರದ (ಪಂಜಾಬ್) ಸೂಫಿ ವ್ಯಕ್ತಿಯ ಒಪ್ಪಿಗೆಯ ಮೇರೆಗೆ ಕ್ರಿ.ಶ. ೧೯೨೭ರಲ್ಲಿ ಕಟ್ಟಲಾಯಿತು ಎಂದು ಇದರಲ್ಲಿ ಹೇಳಿದೆ. ಈ ಮಸೀದಿಯ ಒಳ ಅಂಗಳದಲ್ಲಿ ನಯನ ಮನೋಹರವಾದ ಕೊಳವಿದೆ. ಮಸೀದಿಯು ಬಹಳ ಸುಂದರವಾಗಿದ್ದು ಅದರ ಎರಡು ಮೀನಾರ್‌ಗಳು ಮಹಮ್ಮದೀಯ ಕಲಾಕೌಶಲ್ಯದಿಂದ ಕೂಡಿ ಮಾಡಗೂಡುಗಳಿಂದ ಕೊರೆಯಲ್ಪಟ್ಟು, ಅವು ಬಹಳ ರಮ್ಯವಾಗಿವೆ.

ಮೈಸೂರಿನಲ್ಲಿರುವ ಟೌನ್ ಹಾಲ್ ಎದುರಿಗಿರುವ ರಜತ ಮಹೋತ್ಸವ ಸ್ಮಾರಕವಾದ ಗಡಿಯಾರದ ಗೋಪುರ (ಕ್ಲಾಕ್ ಟವರ್)ದಲ್ಲಿ ಒಂದು ಉರ್ದು ಭಾಷೆಯ ಶಾಸನವಿದೆ. ಇದು ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಂಬಂಧಿಸಿದೆ. ಅವರ ಜನ್ಮ ದಿನಾಂಕ ಕ್ರಿ.ಶ. ೧೮೮೪ ಎಂದೂ ಪಟ್ಟಾಭಿಷಿಕ್ತರಾದ ದಿನಾಂಕ ಕ್ರಿ.ಶ. ೧೮೮೫ ಫೆಬ್ರವರಿ ಎಂದೂ ಅದರಲ್ಲಿ ಹೇಳಿದೆ. ವಾಸ್ತವದಲ್ಲಿ ಅವರು ಆಡಳಿತಾಧಿಕಾರವನ್ನು ಕ್ರಿ.ಶ. ೧೯೦೨ನೆಯ ಆಗಸ್ಟ್ ೮ ರಂದು ವಹಿಸಿಕೊಂಡರು. ಅಲ್ಲಿಯವರೆಗೆ ಅವರ ತಾಯಿ ಮಹಾರಾಣಿಯವರು ಆಡಳಿತವನ್ನು ನಿರ್ವಹಿಸಿದರು. ಆಡಳಿತಾವಧಿಯ ರಜತ ಮಹೋತ್ಸವ ಅಂದರೆ ಇಪ್ಪತ್ತೈದು ವರ್ಷ ಕಳೆದಿರುವುದರಿಂದ ಇದರ ಸವಿನೆನಪಿಗೆ, ತಮ್ಮ ನಿಷ್ಠೆ, ಸುರಕ್ಷತೆ, ದೀರ್ಘಾಯಸ್ಸು ಹಾಗೂ ರಾಜ್ಯದ ಸರ್ವತೋಮುಖವಾದ ಅಭಿವೃದ್ಧಿಗೋಸ್ಕರವಾಗಿ ತಮ್ಮ ಆಸ್ಥಾನದ ಅಧಿಕಾರಿಗಳ, ಸೈನಿಕರ ಮತ್ತು ಇತರೆಯವರ ಪರವಾಗಿ ಈ ಗೋಪುರವನ್ನು (ಟವರ್, ಬುರ್ಜ್) ಕಟ್ಟಲಾಗಿದೆ ಎಂದು ಕ್ರಿ.ಶ. ೧೯೨೭ನೇ ಆಗಸ್ಟ್ ೮ನೇ ತಾರೀಖಿನ ಇದರಲ್ಲಿರುವ ಶಾಸನದಲ್ಲಿ ಹೇಳಿದೆ.

ಮೈಸೂರಿನ ನೂರು ಅಡಿ ರಸ್ತೆಯಲ್ಲಿರುವ (ಚಾಮರಾಜ ಡಬಲ್ ರೋಡ್‌ನಲ್ಲಿರುವ)

'ಮಸ್‌ಜಿದ್ ನವ್ವಾಬ್ ಸಾಹೇಬ್' ಎಂಬ ಮಸೀದಿಯ ಒಳಗೋಡೆಯಲ್ಲಿ ಒಂದು ಶಾಸನವಿದೆ. ಇದರಲ್ಲಿರುವ ತೇದಿಯ ಪ್ರಕಾರ ಇದು ಕ್ರಿ.ಶ. ೧೯೩೯ಕ್ಕೆ ಸೇರಿದೆ. ಇದು ಆ ಮಸೀದಿಯ ನಿರ್ಮಾಣದ ಕಾಲವಾಗಿದೆ. ಮುರ್ಷಿದ್ ಮೌಲಾನಾಷಾಃ ಜಮಾತ್ (ಸಯ್ಯಿದ್ ಜಮಾತ್ ಅಲೀ ಷಾಃ ಸಾಹೇಬ್ ಅಲೀಪುರಿ) ಅವರ ಪ್ರಯತ್ನದಿಂದ ಈ ಮಸೀದಿಯನ್ನು ಕಟ್ಟಲಾಯಿತು ಎಂದು ಇದರಲ್ಲಿ ಹೇಳಿದೆ. ಈ ಶಾಸನದಲ್ಲಿ ಈ ಮಸೀದಿಯನ್ನು 'ಜಿನತ್ ಉಲ್ ಮಸಾಜಿದ್' ಅಂದರೆ ಸುಂದರವಾದ ಮಸೀದಿ ಎಂದು ಕರೆದಿದೆ.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಪಕ್ಕದ ಇಸ್ಲಾಮಿಯ ಯತೀಮ್ ಖಾನಾ (ಅನಾಥಾಲಯ) ಕಟ್ಟಡದಲ್ಲಿ ಒಂದು ಶಾಸನವಿದೆ. ಅದರಲ್ಲಿ ಕಟ್ಟಡದ ಶಂಕುಸ್ಥಾಪನೆಯನ್ನು ಕ್ರಿ.ಶ. ೧೯೩೧ ರ ಮೇ ತಿಂಗಳ ೩೦ನೇ ತಾರೀಖಿನಂದು ಮಾಡಲಾಯಿತು ಎಂದಿದೆ. ಈ ಅನಾಥಾಲಯದ ಅಡಿಪಾಯದ ಕಲ್ಲನ್ನು ಖಾನ್ ಬಹಾದೂರ್ ಹಾಜಿ ಸರ್ ಇಸ್ಮಾಯಿಲ್ ಸೇಠ್ ಕೆ.ಟಿ. ಅವರು ಹಾಕಿದರೆಂದು ಈ ಶಾಸನದಲ್ಲಿ ಹೇಳಿದೆ. ಈ ಶಾಸನದಲ್ಲಿ ಈ ಅನಾಥಾಲಯವನ್ನು ಯತೀಮ್ ಖಾನಾ-ಇ-ಇಸ್ಲಾಮಿಯ ಮೈಸೂರು ಎಂದು ಕರೆದಿದೆ.

ಮೈಸೂರು ಜಿಲ್ಲೆಯ ಮಹಮ್ಮದೀಯ ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅವು ನಮಗೆ ಇನ್ನೂ ಹಲವು ಹತ್ತು ವಿಷಯಗಳ ಮೇಲೆ ಬೆಳಕು ಚೆಲ್ಲುವುದನ್ನು ಕಾಣಬಹುದು. ಟಿಪ್ಪುಸುಲ್ತಾನನು ಅಣೆಕಟ್ಟುಗಳನ್ನು ಕಟ್ಟಿಸಿ ತನ್ನ ರಾಜ್ಯದ ಕೃಷಿ ಅಭಿವೃದ್ಧಿಗೆ ವಿಶೇಷವಾಗಿ ಪ್ರೋತ್ಸಾಹವನ್ನು ಕೊಟ್ಟನು. ಕ್ರಿ.ಶ. ೧೭೯೮ರಲ್ಲಿ ಹೀಗೆ ನೀರಾವರಿ ಉದ್ದೇಶಗಳಿಗಾಗಿ ಲಕ್ಷೋಪಲಕ್ಷ ಹಣವನ್ನು ವ್ಯಯಿಸಿ ಅಣೆಕಟ್ಟನ್ನು ಕಟ್ಟಿರುವ ವಿಷಯ ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ ಅಣೆಕಟ್ಟೆನ ಪ್ರವೇಶ ಸ್ಥಳದಲ್ಲಿರುವ ಪರ್ಷಿಯನ್ ಭಾಷೆಯ ಶಾಸನದಲ್ಲೂ ದಾಖಲಿಸಿದೆ. ಅಲ್ಲದೆ ರೈತರು ಬೆಳೆದ ಉತ್ಪನ್ನದ ೧/೩ ಭಾಗ ಇಟ್ಟುಕೊಂಡು ಮಿಕ್ಕಿದ್ದನ್ನು ಸರ್ಕಾರಕ್ಕೆ ಕೊಡಬೇಕು ಹಾಗೂ ಈ ಭೂಮಿಯ ಮೇಲಿನ ಹಕ್ಕು ಉಳುವವರಿಗೆ ಸಂಬಂಧಿಸಿದ್ದು, ಇದು ವಂಶಪಾರಂಪರ್ಯವಾಗಿ ಮುಂದುವರೆಯುತ್ತದೆ ಎಂಬ ಮಾತುಗಳನ್ನು ಹೇಳಿರುವುದನ್ನು ನಾವು ಈ ಶಾಸನದಲ್ಲಿ ಕಾಣಬಹುದು. ಟಿಪ್ಪು ಸುಲ್ತಾನನು ಮುಸ್ಲಿಮರಿಗಲ್ಲದೆ ಮುಸ್ಲಿಮೇತರರಿಗೂ ಹೇರಳವಾಗಿ ದತ್ತಿಯನ್ನು ಕೊಟ್ಟಿರುವುದು ಇವನ ಶಾಸನಗಳಿಂದ ತಿಳಿದುಬರುವ ಇನ್ನೊಂದು ಸಂಗತಿ. ಇವನ ಎಲ್ಲಾ ಶಾಸನಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ ಅವನ ಕಾಲದಲ್ಲಿ ಎಲ್ಲಾ ಕೋಮಿನ ಜನರಿಗೂ ಧಾರ್ಮಿಕ ಸ್ವಾತಂತ್ರ್ಯವಿತ್ತೆಂದು ತಿಳಿಯುತ್ತದೆ. ಈ ಜಿಲ್ಲೆಯ ಮಹಮ್ಮದೀಯ ಶಾಸನಗಳಲ್ಲಿ 'ಹಿಜರಿ' ಮತ್ತು 'ಮೌಲೂದಿ' ಶಕೆಗಳು ಬಳಕೆಯಾಗಿರುವ ವಿಷಯ ನಮಗೆ ತಿಳಿಯುತ್ತದೆ 'ಹಿಜರಿ' ಶಕೆಯನ್ನು ಬರೆಯುವಾಗ ಅಂಕೆಗಳನ್ನು ಎಡದಿಂದ ಬಲಕ್ಕೂ 'ಮೌಲೂದಿ' ಶಕೆಯನ್ನು ಬರೆಯುವಾಗ ಅಂಕೆಗಳನ್ನು ಬಲದಿಂದ ಎಡಕ್ಕೂ ಸಾಮಾನ್ಯವಾಗಿ ಬರೆಯುವ ಪದ್ಧತಿ ಇದ್ದು ಈ ಪದ್ಧತಿ ಟಿಪ್ಪು ಸುಲ್ತಾನನ ಕೆಲವು ಶಾಸನಗಳಲ್ಲಿ ಬಳಕೆಯಾಗಿರುವುದನ್ನು ಕಾಣಬಹುದು. ಇಲ್ಲಿಯ ಮಹಮ್ಮದೀಯ ಶಾಸನಗಳಲ್ಲಿ ಬಹಳಷ್ಟು ಮಸೀದಿಗಳನ್ನು ಕಟ್ಟಿಸಿರುವ, ಕಟ್ಟಲು ತೆಗೆದುಕೊಂಡ ಸಮಯದ, ಕಟ್ಟಿಸಿರುವ ವ್ಯಕ್ತಿಗಳ ಇಲ್ಲವೆ ಶಿಲಾನ್ಯಾಸ ಮಾಡಿರುವ ವ್ಯಕ್ತಿಯ, ಅರಸರ ಪ್ರಸ್ತಾಪ, ತೇದಿಯ ವಿವರಗಳು ಇತ್ಯಾದಿ

ವಿಷಯಗಳಿವೆ. ಪಂಜಾಬಿನ ಅಲೀಪುರದ ಸೂಫಿ ಸಂತನೊಬ್ಬ ಇಲ್ಲಿಗೆ ಬಂದು ತನ್ನ ಸ್ವಪ್ರಯತ್ನ ದಿಂದ ಎರಡು ಮಸೀದಿಗಳನ್ನು ಇಲ್ಲಿ ಕಟ್ಟಿಸಿರುವ ವಿಷಯ ಹಾಗೂ ಒಂದು ಪರ್ಶಿಯನ್ ಶಾಸನದಲ್ಲಿ ಮಹಾರಾಜ ಕೃಷ್ಣರಾಜ ಒಡೆಯರ್‌ರವರು ಮಸೀದಿಯೊಂದರ ಶಿಲಾನ್ಯಾಸ ಮಾಡಿಸಿರುವ ವಿಷಯ ಮತ್ತು ಇನ್ನೊಂದು ಶಾಸನದಲ್ಲಿ ಇನ್ನೊಂದು ಮಸೀದಿಯ ಪುನರ್ ನಿರ್ಮಾಣ ಮಾಡಿಸಿರುವ ವಿಷಯ ಇವು ಗಮನಾರ್ಹವಾದುವು. ಇನ್ನೂ ಕೆಲವು ಶಾಸನಗಳು ಗಣ್ಯ ವ್ಯಕ್ತಿಗಳ ನಿಧನದ ಸಂಗತಿ ಹಾಗೂ ಅವರ ಪ್ರಶಂಸೆಗಳನ್ನೊಳಗೊಂಡಿವೆ. ಅನಾಥಾಲಯವನ್ನು ಕಟ್ಟಿಸಿ ಅನಾಥರಿಗೆ ಪೋಷಿಸುತ್ತಿದ್ದ ಜನೋಪಯೋಗಿ ಕೆಲಸದ ವಿಷಯ ಒಂದು ಶಾಸನದಲ್ಲಿ ಬಂದಿದೆ. ಇದು ಅಂದಿನ ದೀನ ದಲಿತರ ಸೇವೆಗೆ ಉತ್ತಮ ಉದಾಹರಣೆಯಾಗಿದೆ. ಮೈಸೂರಿನ ಒಂದು ಪರ್ಶಿಯನ್ ಶಾಸನದಲ್ಲಿ ಒಬ್ಬ ವೈಸ್‌ರಾಯ್ ಆಫ್ ಇಂಡಿಯಾ ಅವರ ಆಗಮನದ ಸಮಯದಲ್ಲಿ ಅವರಿಗೆ ಸುಸ್ವಾಗತ ಸ್ವರೂಪವಾಗಿ ಮೈಸೂರಿನ ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರ್ ಅವರು ಇಲ್ಲಿ ಕಟ್ಟಿಸಿದ ನೆನಪಿನ ಗೋಪುರದ ಪ್ರಸ್ತಾಪವಿದೆ. ಇನ್ನೊಂದು ಶಾಸನದಲ್ಲಿ ಮೈಸೂರು ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಇಪ್ಪತ್ತೈದು ವರ್ಷ ಆಳ್ವಿಕೆಯ ಅಂದರೆ ರಜತಮಹೋತ್ಸವದ ಸವಿನೆನಪಿಗಾಗಿ ಕಟ್ಟಿಸಿದ ಗಡಿಯಾರ ಗೋಪುರದ (ಕ್ಲಾಕ್ ಟವರ್) ವಿಷಯವಿದೆ. ಇವು ಅಂದು ನಡೆದ ಮಹಾನ್ ಘಟನಾವಳಿಗಳ ಸವಿನೆನಪಿಗಾಗಿ ಕಟ್ಟಿಸುತ್ತಿದ್ದ ನೆನಪಿನ ಗೋಪುರಗಳ ಬಗ್ಗೆ ಬೆಳಕು ಚೆಲ್ಲುತ್ತವೆ.

ಒಟ್ಟಿನಲ್ಲಿ ಮೈಸೂರು ಜಿಲ್ಲೆಯ ಮಹಮ್ಮದೀಯ ಶಾಸನಗಳು ಇತರ ಭಾಷೆಗಳ ಶಾಸನಗಳ ಹಾಗೆ ಅಂದಿನ ಭಾಷೆ, ಜನಜೀವನ, ಸಂಸ್ಕೃತಿ, ಇತಿಹಾಸ ಇತ್ಯಾದಿ ವಿಷಯಗಳನ್ನು ತಿಳಿದುಕೊಳ್ಳಲು ನಮಗೆ ತುಂಬಾ ಉಪಯುಕ್ತವಾಗಿವೆ.

* * * * *

ಮುದ್ರಾರಾಕ್ಷಸದಲ್ಲಿ ಜ್ಯೋತಿಷದ ವಿಚಾರಗಳು

ಡಾ. ಎಸ್.ಎಸ್. ಭಟ್ಟ ಮೈಸೂರು

ರಾಜಕೀಯ ವಸ್ತುವನ್ನು ನಾಟಕವಾಗಿ ಪರಿವರ್ತಿಸಿದ ಸಂಸ್ಕೃತ ಕವಿ ವಿಶಾಖದತ್ತನು ಒಳ್ಳೆಯ ಜ್ಯೋತಿಷಿಯೂ ಆಗಿದ್ದನೆಂದು ತೋರುತ್ತದೆ. ತನ್ನ ಮುದ್ರಾರಾಕ್ಷಸದಲ್ಲಿ ಜ್ಯೋತಿಷದ ಹಲವಾರು ಸಂಗತಿಗಳನ್ನು ಅವನು ಅಳವಡಿಸಿಕೊಂಡಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ನಾಟಕದ ಆರಂಭದಿಂದ ಕೊನೆಯವರೆಗೂ ಅಲ್ಲಿಯ ಪಾತ್ರಗಳ ಸಂಭಾಷಣೆಯಲ್ಲಿ ಜ್ಯೋತಿಷದ ವಿಚಾರಗಳು ನುಸುಳುತ್ತವೆ. ನಾಟಕದ ಪ್ರಮುಖ ಪಾತ್ರವಾದ ಚಾಣಕ್ಯನೂ ಅವನ ಗೆಳೆಯನೇ ಆದ ಜೀವಸಿದ್ಧಿಯೂ ಅವರ ಕಾಲದಲ್ಲಿ ಸುಪ್ರಸಿದ್ಧ ಜ್ಯೋತಿಷಿಗಳೇ ಆಗಿದ್ದರೆಂಬುದು ವರಾಹಮಿಹಿರನ ಹೋರಾಶಾಸ್ತ್ರದಲ್ಲಿ ವ್ಯಕ್ತವಾಗಿದೆ. ಅದನ್ನು ಹೊರತುಪಡಿಸಿ ಮುದ್ರಾರಾಕ್ಷಸದಲ್ಲಿಯೇ ಸಿಗುವ ಜ್ಯೋತಿಷದ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿ ಚರ್ಚಿಸಲಾಗಿದೆ.

(೧) ನಾಟಕದ ಪ್ರಸ್ತಾವನೆಯಲ್ಲಿಯೇ ಒಂದು ಚಂದ್ರಗ್ರಹಣದ ಪ್ರಸ್ತಾಪವಿದೆ. ಮನೆಗೆ ಬಂದ ಸೂತ್ರಧಾರನಿಗೆ ಅಲ್ಲಿ ಹಬ್ಬದ ವಾತಾವರಣವಿರುವಂತೆ ಕಾಣುತ್ತದೆ. ಸೇವಕರೆಲ್ಲರೂ ತಮ್ಮ ಕೆಲಸಗಳನ್ನು ಹೆಚ್ಚು ಲವಲವಿಕೆಯಿಂದ ಮಾಡುತ್ತಿರುತ್ತಾರೆ. ಒಬ್ಬಳು ನೀರನ್ನು ತರುತ್ತಿದ್ದರೆ ಇನ್ನೊಬ್ಬಳು ಗಂಧವನ್ನು ತೇಯುತ್ತಿದ್ದಾಳೆ. ಮಹಿಳೆಯೊಬ್ಬಳು ಚಿತ್ರವಿಚಿತ್ರವಾದ ಮಾಲೆಗಳನ್ನು ಮಾಡುತ್ತಿದ್ದಾಳೆ. ಮತ್ತೊಬ್ಬಳು ಒನಕೆಯನ್ನು ಹಿಡಿದು ಹೂಂಕರಿಸಿ ಕುಟ್ಟುತ್ತಿದ್ದಾಳೆ. ಇದನ್ನೆಲ್ಲಾ ನೋಡಿದ ಸೂತ್ರಧಾರನಿಗೆ ಏನೋ ವಿಶೇಷವಿರುವಂತೆ ಭಾಸವಾಗಿ ಗೃಹಿಣಿಯನ್ನು ಕೇಳುತ್ತಾನೆ. ಹೀಗೆ ಅಡುಗೆಯನ್ನು ಮಾಡಬೇಕಾದರೆ ಬ್ರಾಹ್ಮಣರೋ, ಅತಿಥಿಗಳೋ ಬರುತ್ತಿರಬಹುದೆಂದು ಅವನು ತರ್ಕಿಸುತ್ತಾನೆ. ಅವನ ತರ್ಕವು ಯಥಾರ್ಥವೇ ಆಗಿದೆ. ನಟಿಯೇ ಬ್ರಾಹ್ಮಣರನ್ನು ಆಮಂತ್ರಿಸಿರುವಳಂತೆ. ನಗರವಾಸಿಗಳು ಹೇಳುವಂತೆ ಅಂದು ಚಂದ್ರಗ್ರಹಣವಾಗಲಿದೆ. ಆ ಸಂದರ್ಭದಲ್ಲಿ ಧರ್ಮಶಾಸ್ತ್ರದಲ್ಲಿ ಹೇಳಿರುವಂತೆ ಸಂಪ್ರದಾಯವನ್ನನುಸರಿಸಿ ಸ್ನಾನ-ದಾನಾದಿಗಳನ್ನು ಆಚರಿಸಲು ಅವಳು ಸಿದ್ಧತೆಯನ್ನು ಮಾಡುತ್ತಿದ್ದಾಳೆ.

ಅಂದು ಚಂದ್ರಗ್ರಹಣವೆಂಬುದನ್ನು ಸೂತ್ರಧಾರನು ಒಪ್ಪುವುದಿಲ್ಲ. ಬ್ರಾಹ್ಮಣರಿಗಾಗಿ ಅಡುಗೆ ಮಾಡುವುದಕ್ಕೆ ಅವನ ಅಭ್ಯಂತರವೇನೂ ಇಲ್ಲ. ಆದರೆ ಚಂದ್ರಗ್ರಹಣವೆಂದು ಯಾರೋ ಅವಳನ್ನು ಮೋಸಗೊಳಿಸಿದ್ದಾರೆಂದು ಅವನು ಸೂಚಿಸುತ್ತಾನೆ. ತಾನು ಜ್ಯೋತಿಃಶಾಸ್ತ್ರವನ್ನು ಆಮೂಲಾಗ್ರವಾಗಿ ತಿಳಿದಿರುವೆನೆಂದೂ ಅಂದು ಬುಧ ಯೋಗವಿರುವುದರಿಂದ ಚಂದ್ರ (ಗುಪ್ತ) ಗ್ರಹಣವೂ ಆಗುವುದಿಲ್ಲವೆಂದೂ ಹೇಳುತ್ತಾನೆ.

ಇಲ್ಲಿ ಸೂತ್ರಧಾರನ ಮಾತಿನ ಎರಡು ಅರ್ಥಗಳು ಹೊರಡುತ್ತವೆ. ಒಂದು ಪ್ರಕೃತ ಕಥಾ

ವಸ್ತುವಿಗೆ ಸಂಬಂಧಿಸಿದೆ. ಕ್ರೂರಗ್ರಹವೆಂದರೆ ಅಮಾತ್ಯರಾಕ್ಷಸ. ಚಂದ್ರಗುಪ್ತನನ್ನು ವಂಚಿಸಿ ಹಿಡಿಯಲು ಅವನು ಸಂಚು ಹೂಡಿದ್ದಾನೆ. ಅವನ ಜೊತೆಗೆ (ಮಲಯ) ಕೇತುವೂ ಸೇರಿದ್ದಾನೆ. ಇನ್ನೂ ರಾಷ್ಟ್ರದಲ್ಲಿ ಭದ್ರವಾಗಿ ಬೇರೂರದಿರುವ ಚಂದ್ರಗುಪ್ತನನ್ನು ಮ್ಲೇಚ್ಛರ ಬಲದಿಂದ ಸೋಲಿಸಬೇಕೆಂದು ಅವರು ಬಯಸಿದರೂ ಅದು ಅಸಂಭವವೇ ಸರಿ. ರಾಜನೀತಿ ಕುಶಲನಾಗಿ ಚಾಣಕ್ಯನು ರಾಕ್ಷಸನ ತಂತ್ರಗಳಿಗೆ ನಿಶ್ಚಯವಾಗಿಯೂ ಪ್ರತಿತಂತ್ರಗಳನ್ನು ಪ್ರಯೋಗಿಸುತ್ತಾನೆ.

ಇನ್ನೊಂದು ಅರ್ಥವು ಜ್ಯೋತಿಃಶಾಸ್ತ್ರಕ್ಕೆ ಸಂಬಂಧಿಸಿದೆ. ಕ್ರೂರಗ್ರಹವೆಂದರೆ ರಾಹುವೆನ್ನಬಹುದು. ಅವನ ಎದುರಲ್ಲಿಯೇ ಕೇತುವಿರುತ್ತಾನೆ. ರಾಹುವು ಕೇತುವಿನೊಂದಿಗೆ ಸೇರಿ ಪೂರ್ಣ ಮಂಡಲನಾದ ಚಂದ್ರನನ್ನು, ಹುಣ್ಣಿಮೆಯ ಚಂದ್ರನನ್ನು, ಕಬಳಿಸಲಿದ್ದಾನೆ ರಾಹು - ಚಂದ್ರರಲ್ಲಿ ರಾಹುವಿನ ಬಲವೇ ಹೆಚ್ಚು. ಆದರೆ ಬುಧನೂ ಚಂದ್ರಪುತ್ರನಾದ ಬುಧನೂ ಅಲ್ಲಿರುವುದರಿಂದ ರಾಹುವಿನ ಬಲವು ಕಡಿಮೆಯಾಗುತ್ತದೆ. ಗ್ರಹಪಂಚಕ ಸಂಯೋಗದಲ್ಲಿ ಬುಧನಿಲ್ಲದಿದ್ದರೆ ಗ್ರಹಣವಾಗುವುದೆಂದು ವ್ಯಾಸಸಂಹಿತೆಯಲ್ಲಿದೆಯಂತೆ. ರಾಹು, ಕೇತು, ಸೂರ್ಯ, ಚಂದ್ರ, ಬುಧ-ಹೀಗೆ ಐದು ಗ್ರಹಗಳಿರುವಾಗ ಅಲ್ಲಿ ಗ್ರಹಣವಾಗುವುದಿಲ್ಲ - ಎಂದು ಸೂತ್ರಧಾರನು ಭಾವಿಸುತ್ತಾನೆ. ಅಸ್ಪಷ್ಟವಾದ ಈ ಮಾತಿನಿಂದ ಕೆಲವರು ಆಗ ಒಂದು ಚಂದ್ರಗ್ರಹಣವು ಕಾಣಿಸಿಕೊಂಡಿತ್ತು ಎಂದು ಹೇಳುತ್ತಾರೆ. ಯಾಕೋಬಿ, ಶ್ರೀಕಂಠಶಾಸ್ತ್ರಿಗಳು ಮುಂತಾದವರು ಅದನ್ನು ಅವಲಂಬಿಸಿ ಕ್ರಮವಾಗಿ ೯ನೇ ಶತಮಾನ, ೬ನೇ ಶತಮಾನಕ್ಕೆ ನಾಟಕವನ್ನು ಜೋಡಿಸುತ್ತಾರೆ. ಆದರೆ ಗ್ರಹಣವು ಆಗ ಸಂಭವಿಸಿಲ್ಲ ಎಂಬುದೇ ಇಲ್ಲಿ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಕ್ರೂರ ಗ್ರಹವೆಂದರೆ ಸೂರ್ಯನೋ ಕುಜನೋ ಆಗಬಹುದು. ಸೂರ್ಯನನ್ನೇ ತೆಗೆದುಕೊಂಡರೆ ಅವನೊಂದಿಗೆ ಕೇತುವಿರುವಾಗ, ರಾಹುವಿನೊಡನೆ ಚಂದ್ರನಿರುವುದು ಅಸಂಭವವೇನಲ್ಲ. ಆದರೆ ಆಗ ಚಂದ್ರನಿಗೆ ಬುಧಯೋಗವು ಅಸಂಭವವಾಗುತ್ತದೆ. ಸೂತ್ರಧಾರನ ಮಾತಿನಂತೆ ಚಂದ್ರನಿಗೆ ಬುಧಯೋಗವಿರುವುದಾದರೆ ರಾಹುಯೋಗವು ಅಸಂಭವವಾಗುತ್ತದೆ. ಪೂರ್ಣಚಂದ್ರನಿಗೆ ರಾಹುಯೋಗವೂ ಬುಧಯೋಗವೂ ಏಕಕಾಲದಲ್ಲಿ ಬರಲಾರದು. ಈ ಕಾರಣದಿಂದ ಗ್ರಹಣವು ಸಂಭವಿಸುವುದಿಲ್ಲವೆಂದೂ ನಟಿಯನ್ನು ಯಾರೋ ಸುಳ್ಳುಮಾತಿನಿಂದ ಮೋಸಗೊಳಿಸಿದ್ದಾರೆಂದೂ ಸೂತ್ರಧಾರನು ಹೇಳುತ್ತಾನೆ.

(೨) ಅಮಾತ್ಯ ರಾಕ್ಷಸನು ಯಾತ್ರಾ ಮುಹೂರ್ತವನ್ನು ಕೇಳುವುದಕ್ಕಾಗಿ ಜ್ಯೋತಿಷಿಗಳು ಯಾರಿದ್ದಾರೆ ಎಂದು ಕೇಳುತ್ತಾನೆ (ಪುಟ ೨೧೧). ಅದಕ್ಕೆ ಪ್ರತಿಯಾಗಿ ಪುರುಷ (ಸೇವಕ)ನು ಕ್ಷಪಣಕನಿದ್ದಾನೆ ಎಂದು ಉತ್ತರಿಸುತ್ತಾನೆ. ಸಂನ್ಯಾಸಿ ಅಥವಾ ಭಿಕ್ಷುವಾದ ಕ್ಷಪಣಕನನ್ನು ಉಲ್ಲೇಖಿಸಿರುವುದು ಒಳ್ಳೆಯ ಶಕುನವಲ್ಲ, ಅದೊಂದು ಅಪಶಕುನವೆಂದು ರಾಕ್ಷಸನು ಚಿಂತಿಸಿದರೂ, ಅವನು ವಿಶ್ವಾಸಕ್ಕೆ ಪಾತ್ರನಾದ ಜೀವಸಿದ್ಧಿಯೆಂದು ತಿಳಿದು ಯಾತ್ರೆಗೆ ಮುಹೂರ್ತವನ್ನು ನಿಶ್ಚಯಿಸಲು ಅನುವಾಗುತ್ತಾನೆ. ಜೀವಸಿದ್ಧಿಯು ಚಾಣಕ್ಯನ ಕಡೆಯವನೆಂದು ರಾಕ್ಷಸನಿಗೆ ತಿಳಿದಿರುವುದಿಲ್ಲ.

ತಾನು ಯಾವಾಗ ಹೊರಡಬೇಕೆಂದು ಅಮಾತ್ಯ ರಾಕ್ಷಸನು ಜೀವಸಿದ್ಧಿಯೆಂಬ ಭದಂತ ಅಥವಾ ಕ್ಷಪಣಕನನ್ನು ಪ್ರಶ್ನಿಸುತ್ತಾನೆ. ಅದಕ್ಕೆ ಉತ್ತರವಾಗಿ ಆಗಲೇ ಹೇಳಿರುವ ಮುಹೂರ್ತವನ್ನು ಜೀವಸಿದ್ಧಿಯು ನೆನಪಿಸುತ್ತಾನೆ. ಕೌಮುದೀ ಮಹೋತ್ಸವವನ್ನು ಚಾಣಕ್ಯನು ನಿಷೇಧಿಸಿದಾಗ

ಆಶ್ವಿನ ಶುದ್ಧ ಹುಣ್ಣಿಮೆಯಾಗಿತ್ತು. ಆಮೇಲೆ ಎರಡು ತಿಂಗಳುಗಳ ಕಾಲ ರಾಕ್ಷಸನೂ ಚಾಣಕ್ಯನೂ ತಮ್ಮ ತಂತ್ರ-ಪ್ರತಿತಂತ್ರಗಳನ್ನು ಪ್ರಯೋಗಿಸಿ ಪರಸ್ಪರ ಪರಾಜಯಕ್ಕಾಗಿ ಪ್ರಯತ್ನಿಸಿದ್ದಾರೆ. ಮಾರ್ಗಶೀರ್ಷ ಹುಣ್ಣಿಮೆಯ ಸಂಜೆ ವಿಜಯ ಯಾತ್ರೆಗೆ ಹೊರಡಬಹುದೆಂದು ಜೀವಸಿದ್ಧಿಯು ಹೇಳುತ್ತಾನೆ. ಅವಕ್ಕೆ ಕಾರಣವೂ ಇದೆ. ಮಧ್ಯಾಹ್ನದವರೆಗೆ ವಿಷ್ಟಿದೋಷವಿದ್ದು ಅದರಿಂದಾಗಿ ಯಾತ್ರೆಯನ್ನು ಆರಂಭಿಸುವಂತಿಲ್ಲ. ಅಲ್ಲದೇ ಆಗ ಪೂರ್ವದಲ್ಲಿ ಮೃಗಶಿರಾ ನಕ್ಷತ್ರವಿದ್ದು ದಕ್ಷಿಣಕ್ಕೆ ಪ್ರಯಾಣ ಮಾಡುವಂತಿಲ್ಲ ಹಾಗಾದರೂ ಪ್ರಯಾಣವನ್ನು ಮಾಡಲೇ ಬೇಕಾಗಿರುವುದರಿಂದ ಸಂಜೆ ಚಂದ್ರೋದಯವಾಗುತ್ತಿರುವಾಗ ಮಿಥುನ ಲಗ್ನದಲ್ಲಿ ಪ್ರಯಾಣ ಮಾಡಬಹುದೆಂದು ಅವನು ತಿಳಿಸುತ್ತಾನೆ. ಆದರೆ ಆ ಲಗ್ನವೂ ಗ್ರಹಯೋಗವೂ ಅನಿಷ್ಟವನ್ನು ಸೂಚಿಸುವಂತಿದೆ. ಮಿಥುನ ಲಗ್ನವು ಅಸ್ತ ಲಗ್ನವಾದುದರಿಂದ ಸಪ್ತಮದಲ್ಲಿ ಸೂರ್ಯನಿರುತ್ತಾನೆ. ಜೀವಸಿದ್ಧಿಯ ಮಾತಿನಿಂದಲೇ ಕೇತುವೂ ಅಲ್ಲಿಯೇ ಇದ್ದಾನೆ. ಆಗ ಲಗ್ನದಲ್ಲಿ ರಾಹುವಿದ್ದು ದ್ವಿಸ್ವಭಾವ ಲಗ್ನಕ್ಕೆ ಮೂರು ಪಾಪಗ್ರಹಗಳ ಸಂಬಂಧವಾಗುತ್ತದೆ. ದ್ವಿಸ್ವಭಾವ ಲಗ್ನದಲ್ಲಿ ಕ್ರೂರ (ಪಾಪ) ಗ್ರಹಗಳ ಯೋಗದೃಷ್ಟಿಗಳಿರುವಾಗ ಪ್ರಯಾಣವನ್ನು ಆರಂಭಿಸಿದರೆ, ಶತ್ರುಗಳಿಂದ ಸೋಲನ್ನನುಭವಿಸಿ ಹಿಂದಿರುಗಬೇಕಾಗುತ್ತದೆ. ಆದರೆ ಲಗ್ನದಲ್ಲಿಯೇ ಚಂದ್ರನು ಪೂರ್ಣ ಬಲಾನ್ವಿತನಾಗಿದ್ದು ಸಪ್ತಮದಲ್ಲಿ ಲಗ್ನಾಧಿಪತಿಯಾದ ಬುಧನೂ ಇರುವುದರಿಂದ ಪ್ರಯಾಣವು ಅನುಕೂಲಕರವಾಗಲಿದೆ ಎಂಬುದು ಜೀವಸಿದ್ಧಿಯ ವಾದವಾಗಿದ್ದು ಪರಿಣಾಮವು ಹಾಗೆಯೇ ಆಗುತ್ತದೆ. ಅಮಾತ್ಯ ರಾಕ್ಷಸನು ಚಂದ್ರಗುಪ್ತನ ಅಮಾತ್ಯನಾಗಿ ಮತ್ತೆ ಅಧಿಕಾರವನ್ನು ಪಡೆಯುವಂತಾಗುತ್ತದೆ.

ಜೀವಸಿದ್ಧಿಯ ಮಾತಿಗೆ ಇನ್ನೊಂದು ಅರ್ಥವೂ ಇದೆ. ಆದರೆ ಅದು ಅಮಾತ್ಯ ರಾಕ್ಷಸನಿಗೆ ಗೊತ್ತಾಗುವುದೇ ಇಲ್ಲ. ಚಂದ್ರನು ಪೂರ್ಣಮಂಡಲನಾಗಿರುವುದೆಂದರೆ ಚಂದ್ರಗುಪ್ತನು ರಾಜ್ಯಭಾರವನ್ನು ವಹಿಸಿಕೊಂಡಿರುವುದು ಕೇತುವು ಉದಯಾಸ್ತಮಯವನ್ನು ಹೊಂದಿರುವುದೆಂದರೆ ಮಲಯಕೇತು ಈಗ ಸುರಕ್ಷಿತನಾಗಿದ್ದರೂ ಮುಂದೆ ಪರಾಭವವನ್ನು ಅನುಭವಿಸಿ ತನ್ನ ರಾಜ್ಯವನ್ನು ಆಶ್ರಯಿಸಲಿದ್ದಾನೆ ಎಂಬುದೇ ಆಗಿದೆ. ಶೂರನಾದ ರಾಕ್ಷಸನು ಅರ್ಥಾಭಿಮುಖನಾಗಿದ್ದಾನೆ ಎಂದರೆ, ಸೂರ್ಯನು ಅಸ್ತಾಭಿಮುಖನಾಗಿದ್ದಾನೆ ಎಂಬ ಪ್ರಾಕೃತ ವಾಕ್ಯವೇ ಆಗಿದೆ. ಹೀಗೆ ಜೀವಸಿದ್ಧಿಯು ಚಾಣಕ್ಯನಿಗೆ ಸಹಾಯಕನಾಗಿ ತಂತ್ರದಿಂದ ಮುಹೂರ್ತವನ್ನು ನಿಶ್ಚಯಿಸುತ್ತಾನೆ.

ಅಮಾತ್ಯ ರಾಕ್ಷಸನಿಗೂ ಜ್ಯೋತಿಷದ ಸಾಮಾನ್ಯ ಜ್ಞಾನವಿದ್ದೇ ಇದೆ. ಹಳೆಯ ರೋಗಿಯು ಹೊಸ ವೈದ್ಯನ ಮಾತನ್ನು ಕೂಡಲೇ ಒಪ್ಪದೆ ಸಂಶಯಿಸುವಂತೆ ತಿಥಿಯೇ ಶುದ್ಧವಾಗಿರುವುದಿಲ್ಲವಲ್ಲ ಎಂದು ಜೀವಸಿದ್ಧಿಯನ್ನು ಆಕ್ಷೇಪಿಸುತ್ತಾನೆ. ಜೀವಸಿದ್ಧಿಯು ಅದಕ್ಕೆ ಉತ್ತರವಾಗಿ ತಿಥಿಗಿಂತಲೂ ನಕ್ಷತ್ರವು ನಾಲ್ಕು ಪಟ್ಟು ಹೆಚ್ಚಿನದೆಂದೂ, ಲಗ್ನವು ಅರವತ್ತನಾಲ್ಕುಪಟ್ಟು ಮಿಗಿಲೆಂದೂ ಹೇಳುತ್ತಾನೆ (೪ -೨೦). ದ್ವಿಸ್ವಭಾವ ಲಗ್ನವಾದರೂ ಶುಭಗ್ರಹದ ಯೋಗದಿಂದ ಇಲ್ಲಿ ಲಗ್ನದ ಅಧಿಪತಿಯಾದ ಬುಧನ ಯೋಗವಿರುವುದರಿಂದ, ಅದು ಒಳ್ಳೆಯ ಲಗ್ನವೇ ಆಗಿದೆ. ಲಗ್ನದಲ್ಲಿರುವ ಚಂದ್ರನು ಪರಿಪೂರ್ಣ ಬಲವನ್ನು ಹೊಂದಿರುವುದರಿಂದ ದೀರ್ಘಕಾಲ ಸಿದ್ಧಿಯೇ ಆಗಲಿದೆ ಎಂದು ಭವಿಷ್ಯವನ್ನು ನುಡಿಯುತ್ತಾನೆ. ಅವನು ನಿಸ್ಸಂದಿಗ್ಧವಾಗಿ ಹೇಳುತ್ತಿರುವುದರಿಂದ ಯಾರಿಗೇ ಆಗಲಿ.

ಅದು ಸತ್ಯವೇ ಇರಬಹುದೆನ್ನಿಸುತ್ತದೆ.

ಇಲ್ಲಿಯೂ ಬುಧನು ಚಾಣಕ್ಯನೆಂದೂ ಚಂದ್ರನು ಚಂದ್ರಗುಪ್ತನೆಂದೂ ಬಲವು ಸೇನೆಯೆಂದೂ ಅಮಾತ್ಯ ರಾಕ್ಷಸನಿಗೆ ಹೊಳೆಯುವುದಿಲ್ಲ! ಆದರೆ ಅವನು ಜೀವಸಿದ್ಧಿಯ ಮಾತನ್ನು ಅಂಗೀಕರಿಸದೆ, ಬೇರೆಯ ಜ್ಯೋತಿಷಿಗಳ ಜೊತೆಗೆ ಸಮಾಲೋಚಿಸಲು ಅವನಿಗೆ ಸಲಹೆ ಮಾಡುತ್ತಾನೆ. ಜೀವಸಿದ್ಧಿಯು ಅದನ್ನು ವಿರೋಧಿಸುತ್ತಾ, ತನ್ನ ಪಕ್ಷವನ್ನು ಬಿಟ್ಟು ಬೇರೆಯ ಪಕ್ಷವನ್ನು ಅವಲಂಬಿಸಿರುವ ಅಮಾತ್ಯನಿಗೆ ದೈವವೇ ಪ್ರತಿಕೂಲವಾಗಿದೆ ಎಂದು ಹೇಳಿ ಹೊರಟು ಹೋಗುತ್ತಾನೆ. ಇಲ್ಲಿಯೂ ತನ್ನ ಪಕ್ಷವೆಂದರೆ ಚಂದ್ರಗುಪ್ತನ ಪಕ್ಷವೂ, ಪರಪಕ್ಷವೆಂದರೆ ಮಲಯಕೇತುವಿನ ಪಕ್ಷವಾಗಿರುತ್ತದೆ.

(೩) ಕೌಟಿಲ್ಯನು ತನ್ನನ್ನು ನಂದಕುಲಕಾನನ ಧೂಮಕೇತು ಎಂದು ಹೇಳಿಕೊಳ್ಳುತ್ತಾನೆ (೧.೧೦). ಧೂಮಕೇತು ಅನಿಷ್ಟವೆಂದು ಸಂಹಿತೆಗಳಲ್ಲಿದೆ. ಅದು ಕಾಣುತ್ತಿರುವಾಗ ಶುಭಕರ್ಮಗಳನ್ನು ವರ್ಜಿಸಬೇಕೆಂದು ಮುಹೂರ್ತಗ್ರಂಥಗಳಲ್ಲಿದೆ. ಸ್ವತಃ ಜ್ಯೋತಿಷಿಯಾದ ಕೌಟಿಲ್ಯನು ತನ್ನ ಸಹಾಧ್ಯಾಯಿಯಾದ ಇಂದುಶರ್ಮನು ಶುಕ್ರನೀತಿಯಲ್ಲಿಯೂ ಜ್ಯೋತಿಃಶಾಸ್ತ್ರದಲ್ಲಿಯೂ ಪಾರಂಗತನೆಂದು ಹೇಳುತ್ತಾನೆ. (ಪು. ೭೧) ಜೀವಸಿದ್ಧಿಯು ಕಪಟ ಭಿಕ್ಷುವಾದುದರಿಂದ ಅವನ ದರ್ಶನವು ಅಪಶಕುನವಲ್ಲವೆಂದು ಅದು ಸಂಮತವೇ ಆಗಿರುವುದೆಂದೂ ಸಿದ್ಧಾರ್ಥಕನು ಭಾವಿಸುತ್ತಾನೆ (ಪು. ೨೨೦).

(೪) ಪ್ರಯಾಣಕ್ಕೆ ಸನ್ನದ್ಧನಾದ ಸಿದ್ಧಾರ್ಥಕನು ಪ್ರಯಾಣಕ್ಕಾಗಿ ಒಳ್ಳೆಯ ಮುಹೂರ್ತವನ್ನು ತನಗೆ ಎದುರಾದ ಜೀವಸಿದ್ಧಿಯಲ್ಲಿ ವಿಚಾರಿಸುತ್ತಾನೆ. ಅದು ಕ್ಷೌರವಾದ ಮೇಲೆ ನಕ್ಷತ್ರವನ್ನು ಕೇಳಿದಂತೆ ಎಂದು ಕ್ಷಪಣಕ ವೇಷದಲ್ಲಿರುವ ಜೀವಸಿದ್ಧಿಯು ಹಾಸ್ಯಮಾಡುತ್ತಾನೆ. ಸುಮುಹೂರ್ತವನ್ನು ಕೇಳುವುದಾದರೆ ಪ್ರಯಾಣಕ್ಕೆ ಸನ್ನದ್ಧನಾಗಿರುವುದು ಸರಿಯಲ್ಲ, ಪ್ರಯಾಣವು ನಿಶ್ಚಿತವಾಗಿದ್ದರೆ ಮುಹೂರ್ತವನ್ನು ವಿಚಾರಿಸುವುದೂ ಸರಿಯಲ್ಲ. ಕ್ಷೌರವನ್ನು ಮಾಡಿಕೊಳ್ಳುವುದಕ್ಕಿಂತ ಮುಂಚೆಯೇ ನಕ್ಷತ್ರವನ್ನು ಕೇಳುತ್ತಿರುವುದಾಗಿ ಸಿದ್ಧಾರ್ಥಕನು ತನ್ನನ್ನು ಸಮರ್ಥಿಸಿಕೊಳ್ಳುತ್ತಾನೆ. ಪ್ರಯಾಣಕ್ಕೆ ಸಿದ್ಧನಾದರೆ ಏನಾಯಿತು? ಪ್ರಯಾಣವನ್ನಿನ್ನೂ ಆರಂಭಿಸಿಲ್ಲವಷ್ಟೇ? ಅದನ್ನು ಮಾಡುವ ಅಥವಾ ಮುಂದೂಡುವ ಅವಕಾಶವಿದ್ದೇ ಇದೆ. ಸುಮುಹೂರ್ತವಿದ್ದರೆ ಈಗಲೇ ಪ್ರಯಾಣ ಮಾಡಬಹುದು. ಇಲ್ಲವೆಂದಾದರೆ ಅದನ್ನು ಮುಂದೂಡಬಹುದು ಎಂದು ಸಿದ್ಧಾರ್ಥಕನು ವಾದಿಸುತ್ತಾನೆ. ಅವನ ಕಾರ್ಯವು ಸಿದ್ಧಿಸಲೆಂದು ಜೀವಸಿದ್ಧಿಯು ಅವನನ್ನು ಬೀಳ್ಕೊಡುತ್ತಾನೆ.

ಜೀವಸಿದ್ಧಿ-ಸಿದ್ಧಾರ್ಥಕರ ಸಲ್ಲಾಪದಲ್ಲಿ ಕ್ಷೌರ ಮತ್ತು ನಕ್ಷತ್ರದ ವಿಚಾರ ಗಮನಾರ್ಹವಾಗಿದೆ. ಕ್ಷೌರವನ್ನು ಆಯುಷ್ಯಕ್ಕೆ ಸಂಬಂಧಿಸಿದ ಕಾರಣ, ಒಳ್ಳೆಯ ನಕ್ಷತ್ರದಲ್ಲಿಯೇ ಮಾಡಬೇಕೆಂಬುದು ಸಾಮಾನ್ಯವಾದ ನಂಬಿಕೆ. ಮೊದಲನೆಯ ಕ್ಷೌರವನ್ನು ಚೌಲವೆಂದು ಅದ್ದೂರಿಯಾಗಿ ಆಚರಿಸುವ ರೂಢಿಯೂ ಇದೆ. ಆಮೇಲೆ ಯಾವಾಗ ಕ್ಷೌರವನ್ನು ಮಾಡಿಸುವುದಾದರೂ ಒಳ್ಳೆಯ ವಾರ, ನಕ್ಷತ್ರ ಮುಂತಾದವುಗಳನ್ನು ಪರಿಶೀಲಿಸುವವರು ಈಗ ಕಡಿಮೆಯಾದರೂ ಅಲ್ಲಲ್ಲಿ ಇದ್ದೇ ಇರುತ್ತಾರೆ. ಹಿಂದೆ ಈ ರೂಢಿಯು ಎಲ್ಲರ ಅಂಗೀಕಾರಕ್ಕೆ ಪಾತ್ರವಾಗಿತ್ತು ಎಂಬುದನ್ನು ಈ ಸಂಭಾಷಣೆಯಿಂದ ತಿಳಿಯಬಹುದು.

ಹೀಗೆ ವಿಶಾಖದತ್ತನು ತನ್ನ ನಾಟಕದಲ್ಲಿ ಜ್ಯೋತಿಃಶಾಸ್ತ್ರದ ಕೆಲವು ವಿಚಾರಗಳನ್ನು ಅಳವಡಿಸಿಕೊಂಡಿದ್ದು, ಅವನು ಜ್ಯೋತಿಷಿಯಾಗಿದ್ದುದನ್ನು ಸ್ಪಷ್ಟಪಡಿಸುತ್ತದೆ. ಚಾಣಕ್ಯ ಮತ್ತು ಅವನ ಸಹಚರರ ಸಫಲತೆಯಾದರೂ ಜ್ಯೋತಿಷದ ಯಥಾರ್ಥ ಜ್ಞಾನವನ್ನೇ ಅವಲಂಬಿಸಿದೆ ಎಂಬಲ್ಲಿ ಸಂದೇಹವೇ ಇಲ್ಲ. ಇಂದಿಗೂ ರಾಜಕಾರಣಿಗಳೂ ವ್ಯಾಪಾರಿಗಳೂ ವ್ಯಾವಹಾರಿಕರೂ ಸಾಮಾನ್ಯವಾಗಿ ತಮ್ಮ ದಿನನಿತ್ಯದ ವ್ಯವಹಾರಗಳಿಗೆ ಜ್ಯೋತಿಷವನ್ನು ಅನುಸರಿಸುತ್ತಿದ್ದು ಅದಕ್ಕೆ ಪರಂಪರೆಯೇ ಮೂಲವಾಗಿದೆ ಎನ್ನಬಹುದು. ಅದೊಂದು ಮೂಢನಂಬಿಕೆ ಎನ್ನುವವರು ಇರಬಹುದಾದರೂ ಆ ನಂಬಿಕೆಯ ಹಿನ್ನೆಲೆಯಲ್ಲಿ ಇರಬಹುದಾದ ಸತ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಹಲವರು ಅಸಮರ್ಥರಾಗಿರುವುದು ಒಳ್ಳೆಯ ಲಕ್ಷಣವೇನೂ ಅಲ್ಲ.

* * * * *

ಜಾಗತೀಕರಣವೂ ಬೇಟೆ ಆಚರಣೆಯೂ

ಡಾ. ಟಿ. ಗೋವಿಂದರಾಜು

'ಬೇಟೆ'- ಎಂದಾಕ್ಷಣ ಸಾಮಾನ್ಯವಾಗಿ ಮೂಡುವ ಅಭಿಪ್ರಾಯಗಳು -ಅದು ಆದಿಮ ಮಾನವನ ಪ್ರಧಾನ ಜೀವನ ಮಾರ್ಗ. ರಾಜ-ಮಹಾರಾಜರು ಪ್ರಜಾಪರಿಪಾಲನೆಯ ಕರ್ತವ್ಯದ ಅಥವಾ ಸಾಹಸ ಪ್ರದರ್ಶನದ ಅಂಗವಾಗಿ ಕೈಗೊಳ್ಳುತ್ತಿದ್ದ ಕ್ರಿಯೆ; ಆಧುನಿಕ ಶ್ರೀಮಂತರು, ಅಧಿಕಾರಿಗಳ ಖಯ್ಯಾಲಿ, ಬಡ ಬೇಟೆಗಾರರ ಆಗೀಗಿನ ಹವ್ಯಾಸ; ಈಚೆಗೆ, ವನ್ಯ ಜೀವಿಗಳ ಹತ್ಯೆಯ ವಿರುದ್ಧ ಸರ್ಕಾರ ಹೇರಿದ ನಿರ್ಬಂಧ.

ಇದೆಲ್ಲವೂ ಸರಿ. ಆದರೆ, ತಟಕ್ಕನೆ ನಮ್ಮ ನೆನಪಿಗೆ ಬಾರದ ಇನ್ನೊಂದು ಮುಖವೂ 'ಬೇಟೆ'ಗೆ ಇದೆ. ಅದೇ 'ಆಚರಣೆ'ಯಾಗಿ ಬೇಟೆಯ ಸ್ವರೂಪ. ಕಾಡುಗಳ್ಳರೋ, ಶಿಕಾರಿ ಷೋಕಿಯ ಸಿನಿಮಾ ನಟರೋ ಬೇಟೆಯಲ್ಲಿ ಯಾವ ನೀತಿ-ನಿಯಮವನ್ನಾಗಲೀ, ಆರಾಧನಾ ಮನೋಧರ್ಮವನ್ನಾಗಲೀ ಹೊಂದಿರಲಾರರು. ಆದರೆ, ನಿಜವಾದ ಬೇಟೆಗಾರ ವರ್ಗದ ಬುಡಕಟ್ಟಿನವರಿಗೆ, ನಿತ್ಯ ವನ್ಯ ಪಶು-ಪಕ್ಷಿಗಳೊಂದಿಗೆ ಸ್ವಲ್ಪವಾದರೂ ಸಂಪರ್ಕ ಇಟ್ಟುಕೊಂಡ ರೈತರಿಗೆ ಬೇಟೆ ಎಂಬುದು ತಮ್ಮ ನಂಬಿಕೆಯ ಬೇಟೆ ದೇವರ ಪ್ರೀತ್ಯರ್ಥ ಕೈಗೊಳ್ಳುವ ಒಂದು ವಾರ್ಷಿಕ ಆಚರಣೆ. ಅದು ಅವರಲ್ಲಿನ ಆದಿಮ ಆರಾಧನಾ ಮನೋಭಾವವೂ ಹೌದು. ವಿಶೇಷವೆಂದರೆ, ಆಗಮಿಕರು ಪೂಜಿಸುವ ಕೆಲ ಶಿಷ್ಟ ದೈವಗಳ ಜಾತ್ರೆಯಲ್ಲಿ 'ಬೇಟೆ 'ಯೂ ಒಂದು ವಿಧಿ ಆಚರಣೆಯಾಗಿ ('ನಾಟಕೀಯ'ವಾಗಿ) ಅಸ್ತಿತ್ವದಲ್ಲಿರುವುದು (ನಮ್ಮ ಜಾತ್ರೆ, ಮದುವೆ ಮೊದಲಾದವುಗಳಲ್ಲಿನ ಬಹಳಷ್ಟು ಶಾಸ್ತ್ರ-ಸಂಪ್ರದಾಯಗಳು 'ನಾಟಕೀಯ'ವಾಗಿಯೇ ಅಭಿವ್ಯಕ್ತಗೊಳ್ಳುತ್ತವೆ). ಬೇಟೆ-ಎಂಬುದು ಆಚರಣೆಯಾಗಿ ಹೇಗೆ ವ್ಯಾಪಕವಾಗಿ ಇದೆ (ಹಿಂದೆ ಇನ್ನೂ ವ್ಯಾಪಕವಾಗಿ ಇತ್ತು) ಎಂಬುದನ್ನು, ಪ್ರಸ್ತುತದ, ನಗರೀಕರಣ, ಜಾಗತೀಕರಣ, ಪರಿಸರ ಜಾಗೃತಿ ಮೊದಲಾದ ಬಾಹ್ಯ ಒತ್ತಡ, ಬದಲಾದ ಜೀವನ ವಿಧಾನ ಮೊದಲಾದವುಗಳಿಂದ, ಆದಿಮದ ಬೇಟೆ ಆಧುನಿಕದಲ್ಲಿ 'ಆಚರಣೆ'ಯಾಗಿ ಉಳಿಯುವುದೂ ಎಂತಹ ದುಸ್ತರವಾಗಿದೆ ಎಂಬುವರ ಒಂದು ಸ್ಥೂಲ ನೋಟ ಇಲ್ಲಿದೆ.

ಬೇಟೆ ಮತ್ತು ಆಚರಣೆಗೆ ಸಂಬಂಧಿಸಿದ ಎಲ್ಲ ಮಾಹಿತಿಗಳನ್ನು ಅಧ್ಯಯನ ಕ್ರಮಕ್ಕಾಗಿ ಮೂರು ಮುಖ್ಯ ವರ್ಗಗಳಲ್ಲಿ ವಿಭಾಗಿಸಿಕೊಳ್ಳಬಹುದು.

i) ಧಾರ್ಮಿಕ ಆರಾಧನೆಗಳ ಅಂಗವಾಗಿ ಬೇಟೆ ಆಚರಣೆ

ii) ಸ್ವತಂತ್ರ ಬೇಟೆ ಆಚರಣೆ.

iii) ಬೇಟೆ ದೇವರು, ನಂಬಿಕೆ ಇತ್ಯಾದಿ.

I ಧಾರ್ಮಿಕ ಆರಾಧನೆಗಳ ಅಂಗವಾಗಿ ಬೇಟೆ ಆಚರಣೆ

ನಮ್ಮ ಗ್ರಾಮೀಣರು ವಾರ್ಷಿಕವಾಗಿ ಆಚರಿಸುವ ಕೆಲವೊಂದು ಹಬ್ಬ, ಜಾತ್ರೆಗಳು ಮೊದಲಾದವುಗಳ ಸಂದರ್ಭದಲ್ಲಿ ಒಂದು 'ವಿಧಿ' ಎಂಬಂತೆ ಬೇಟೆ ಕ್ರಿಯೆ ನಡೆಯುವುದುಂಟು. ಅಂಥವುಗಳ ಕೆಲ ಮಾದರಿಗಳನ್ನು ಇಲ್ಲಿ ಗಮನಿಸಬಹುದು.

೧. ಮೊಗವೀರರ ಮುರಿನ ಬೇಟೆ ಆಚರಣೆ

ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಾದ ಮೊಗವೀರರು ನಡೆಸುವ ಕೆಲ ಧಾರ್ಮಿಕ ಆಚರಣೆಗಳಲ್ಲಿ "ಹೌದೇರಾಯನ ವಾಲ್ಗ" ಹಾಗೂ "ಹರಿಸೇವೆ"ಗಳು ತಿರುಪತಿ ತಿಮ್ಮಪ್ಪನಿಗೆ ಮೀಸಲಾದ ಭಕ್ತಿ ಸೂಚಕ ಆಚರಣೆಗಳಾಗಿವೆ. ಇವುಗಳಲ್ಲಿ 'ಬೇಟೆ'ಯೂ ಸೇರಿರುವುದು ಗಮನಿಸುವಂತಿದೆ. ಮನೆ ಮುಂದಿನ ತುಳಸಿ ಕಟ್ಟೆ ಬಳಿ ನಡೆಯುವ "ಹೌದೇರಾಯನ ವಾಲ್ಗ"ದಲ್ಲಿ ಕೋಲಾಟದವರು ಕುಣಿಯುತ್ತಾ ಹಾಡುವ ಹಾಡಿನಲ್ಲಿ 'ಬ್ಯಾಟೆ ಸಂಧಿ' ಎಂಬ ಕಥಾಭಾಗಕ್ಕೆ ಬಂದಾಗ "ಬೇಟೆಗಾರ ನೃತ್ಯದ ಶೈಲಿ"ಯಲ್ಲಿ ಕುಣಿಯುತ್ತಾರೆ. ಏಕೆಂದರೆ, ಆ ಕತೆಯಲ್ಲಿ ತಮ್ಮ ಬೆಳೆಗೆ ತೀವ್ರ ಹಾನಿ ಮಾಡಿದ ಕಾಡು ಹಂದಿಯೊಂದನ್ನು ಬೇಟೆ ಮಾಡಿ ಕೊಲ್ಲುವ ಪ್ರಸಂಗ ಬರುತ್ತದೆ (ಪೃ. ೫೯)[೧].

ನಾಲ್ಕು ದಿನ ನಡೆಯುವ "ಹರಿಸೇವೆ"ಯಲ್ಲಿ ಒಂದು ದಿನ "ಮುರಿನ ಬೇಟೆ" ಆಚರಣೆ ನಡೆಯುತ್ತದೆ. ಮೊಗವೀರ ಸಮಾಜದ ಅನುಭವೀ ವ್ಯಕ್ತಿಯೊಬ್ಬರು ಬಿಲ್ಲುಬಾಣ ಸಹಿತವಾಗಿ ಕಲಶ ಪೂಜೆ ಮಾಡಿದ ಗದ್ದೆಗೆ ಹೊರಡುತ್ತಾರೆ. ಆಗ ಗಾಯಕ ತಂಡದ ಮುಖ್ಯಸ್ಥ "ಯಾವ ಬೇಟೆಗೆ ಹೋಗೋಣೆ"? ಎಂದು ಪ್ರಶ್ನಿಸಿದಾಗ ಈ ಬಿಲ್ಲು ಬಾಣದ ವ್ಯಕ್ತಿ "ಮುರಿನ್ ಬ್ಯಾಟೆಗೆ ಹೋಗೋಣೆ" ಎನ್ನುತ್ತಾನೆ.

ಆನಂತರ, ಗದ್ದೆಗೆ ಹೋಗಿ, ಗದ್ದೆಯಲ್ಲಿಟ್ಟಿರುವ ಒಂದು ತೆಂಗಿನ ಕಾಯಿಗೆ ಆತ ಬಾಣ ಹೊಡೆದು, ಕೀಲಿಸುವಂತೆ ಮಾಡಿ, ಆ ಬಾಣದಲ್ಲೇ ಅದನ್ನು ಮೇಲೆತ್ತಿ ಹಿಡಿದು, ಹಾಗೆಯೇ ಮನೆಯ ತುಲಸಿ ಕಟ್ಟೆಗೆ ಬರುತ್ತಾರೆ. ಅಲ್ಲಿ ಆ ಕಾಯಿಯನ್ನು ಪೂರ್ತಿ ಒಡೆದು, ಚೂರುಗಳನ್ನು ಪ್ರಸಾದ ರೂಪದಲ್ಲಿ ಎಲ್ಲರಿಗೂ ಹಂಚುತ್ತಾರೆ. (ಪುಟ. ೬೧)[೨]

ಇದು ಉಪದ್ರವಕಾರಿಯಾದ ವನ್ಯಜೀವಿಯೊಂದನ್ನು ಬೇಟೆಯಾಡಿ, ಮನೆಗೆ ತಂದು ಎಲ್ಲರೂ ಅದನ್ನು ಹಂಚಿಕೊಳ್ಳುವುದರ ಸಾಂಕೇತಿಕ ಕ್ರಿಯೆ ಎಂಬುದು ಆ ಮೂಲಕ ಮೊಗವೀರರಿಗೆ ಕೃಷಿಯೊಂದಿಗೆ ಅಥವಾ ತಮ್ಮ ಪರಿಸರದೊಂದಿಗೆ ಇರುವ (ಇದ್ದ?) ಸಂಬಂಧದ ಧ್ಯೋತಕ ಎಂಬುದು ವೇದ್ಯವಾಗುತ್ತದೆ.

೨. ಕೆಡ್ಡಸ

'ಕೆಡ್ಡ' ಎಂಬುದಕ್ಕೆ 'ಬೇಟೆ' ಎಂಬ ಅರ್ಥವಿದೆ ಎನ್ನಲಾಗಿದೆ.[೩] ಹೀಗಾಗಿ, 'ಕೆಡ್ಡಸ' ಬೇಟೆಯೊಂದಿಗೆ ಸಂಬಂಧ ಪಡೆದ ಒಂದು ಸಂಪ್ರದಾಯ ಎನ್ನಬಹುದು.

ಮಹಿಳೆಯಂತೆ ಫಲವಂತಿಕೆ ಗುಣ ಹೊಂದಿದ ಭೂಮಿಯೂ ಮುಟ್ಟಾಗುತ್ತಾಳೆಂಬ ನಂಬಿಕೆ ಕರಾವಳಿ ಭಾಗದಲ್ಲಿ ವಿಶೇಷವಾಗಿದೆ. ಅದರ ಕುರುಹಾಗಿ ಫೆಬ್ರವರಿ ತಿಂಗಳಲ್ಲಿ ೩ ರಿಂದ ೫ ದಿನಗಳವರೆಗೆ ಕೆಡ್ಡಸ ಆಚರಣೆ ನಡೆಸುತ್ತಾರೆ. ಆ ಅವಧಿಯಲ್ಲಿ ಯಾವುದೇ ಬೇಸಾಯ, ಬೇಟೆ ಕಾರ್ಯ ಮಾಡುವುದಿಲ್ಲ. ಆದರೆ, ನಾಲ್ಕನೆಯ ದಿನ ಊರವರೆಲ್ಲ ಸಾಮೂಹಿಕವಾಗಿ ಬೇಟೆಗೆ

ಹೋಗಿ, ಸಿಕ್ಕಿದ ಪ್ರಾಣಿಯನ್ನು ಕಾಡಿನಲ್ಲಿಯೇ ಬೇಯಿಸಿ, ಭೂತಗಳಿಗೆ ಅರ್ಪಿಸಿ ಪ್ರಸಾದ ರೂಪದಲ್ಲಿ ಸ್ವೀಕರಿಸುವ ಪದ್ಧತಿ ಇದೆ.[೪] (ಪು. ೧೭೫)

೩. ಸಂಕ್ರಾಂತಿ ನರಿಬೇಟೆ

ಸಂಕ್ರಾಂತಿ ಹಬ್ಬದ ಅಂಗವಾಗಿ ಊರದೇವರ ಹೆಸರಲ್ಲಿ ಸಾಂಪ್ರದಾಯಿಕವಾಗಿ ಬೇಟೆ ಆಡುವ ಪದ್ಧತಿ ಹಳೇ ಮೈಸೂರು ಭಾಗದ ಹಲವು ಊರುಗಳಲ್ಲಿ ಕಾಣಬರುತ್ತದೆ. ಇವುಗಳಲ್ಲಿ ಕದಬಳ್ಳಿ (ನಾಗಮಂಗಲ ತಾ.) ಹಾಗೂ ಉದ್ಬೂರು (ಮೈಸೂರು ತಾ.) ಗಳ ನರಿ ಬೇಟೆಗಳು ಈಗಾಗಲೇ ಪತ್ರಿಕೆಗಳ ಮೂಲಕ 'ಕು-ಖ್ಯಾತಿ' ಪಡೆದಿವೆ. ಇತರ ಊರುಗಳಲ್ಲಿಯೂ ಈ ಆಚರಣೆ ಇದೆ. ಮೈಸೂರು ತಾಲ್ಲೂಕಿನ ಧನಗಹಳ್ಳಿಯ ನರಿಪೂಜೆ ಮಾದರಿಯ ಸ್ಥೂಲ ಚಿತ್ರ ಹೀಗಿದೆ :

'ಅಂದು ಮನೆಗೊಬ್ಬರು ಬೇಟೆಗೆ ಬರಬೇಕು. ಬಲೆ ತರುವವರು ಸ್ನಾನ, ಮಡಿಯಲ್ಲಿರಬೇಕು. ಊರ ಬಸವೇಶ್ವರ ಗುಡಿ ಮುಂದೆ ಸೇರಿ, ಬಲೆ, ಆಯುಧಗಳಿಗೂ ದೇವರಿಗೂ ಪೂಜೆ ಮಾಡುತ್ತಾರೆ. ದೇವರು ಹೂ ಕೊಟ್ಟ ದಿಕ್ಕಿಗೆ ಹೊರಡುತ್ತಾರೆ. ಅಲ್ಲಿ ಬೇಟೆ ಆಗದಿದ್ದರೆ ಇನ್ನೊಂದು ಸೂಕ್ತ ದಿಕ್ಕಿಗೆ ತಿರುಗುತ್ತಾರೆ. ನಗಾರಿ, ತಮಟೆ ಬಡಿಯುತ್ತ, ನರಿ ಜಾಡು ನೋಡಿ ಬಲೆ ಒಡ್ಡುತ್ತಾರೆ. ಮಿಕ್ಕವರು ಗಲಾಟೆ ಎಬ್ಬಿಸುತ್ತಾರೆ. ನರಿ ಬಿದ್ದಾಗ ಒಬ್ಬ ಅದರ ಕಿವಿ, ತಲೆ ಹಿಡಿದರೆ, ಇನ್ನೊಬ್ಬ ಅದರ ಬಾಯಿಗೆ ಮಕೋಡ ಹಾಕುತ್ತಾನೆ. ಕಾಲುಗಳನ್ನು ಕಟ್ಟಿ, ಕಿವಿಗಳನ್ನು ಭದ್ರ ಹಿಡಿದು, ಕಂಕುಳಲ್ಲಿ ಅಮುಕಿ ಹಿಡಿದುಕೊಂಡಾಗ ಆತನಿಗೆ ಹೂ ಹಾರ ಹಾಕಿ, ದೇವರ ಹೆಸರು ಹೇಳಿ ಕೂಗುಹಾಕುತ್ತಾ, ವಾದ್ಯ ಸಮೇತ ಬಸವೇಶ್ವರನ ಗುಡಿ ಬಳಿ ಬಂದು ನರಿಗೂ ಹಾರ, ತೀರ್ಥ ಹಾಕಿ, ಒಂದು ಕೋಣೆಯಲ್ಲಿ ಸರಪಳಿ ಹಾಕಿ ಕಟ್ಟುತ್ತಾರೆ. ಕಾಲು, ಬಾಯಿ ಬಿಚ್ಚಿ ತಿನ್ನಲು ಕೋಳಿ ಎಸೆಯುತ್ತಾರೆ.

ಮಾರನೇ ರಾತ್ರಿ ದೇವರ ಉತ್ಸವ. ನರಿಯ ಕೊರಳಿಗೆ ಹೂವಿನ ಹಾರ, ಬಾಯಿಗೆ ಮಕೋಡ ಹಾಕಿ ಒಬ್ಬ ಎತ್ತಿ ಹಿಡಿದುಕೊಳ್ಳುತ್ತಾನೆ. ಊರ ಅಂಚಿನ ಕೆರೆದಡದಲ್ಲಿ ಒಂದು ಸಣ್ಣ ಹಸಿರು ಚಪ್ಪರ ಹಾಕಿ ಅದರಲ್ಲಿ ಮಣ್ಣಿನ 'ಮಂಟಪ' (ಪೀಠ) ಮಾಡಿರುತ್ತಾರೆ. ಅದರ ಮೇಲೆ ಮನೆಯಿಂದ ತಂದ "ಮಿಳ್ಳೆ" (ಕಳಸ) ಪೂಜಿಸುತ್ತಾರೆ. ಅಲ್ಲಿ ಬಸವಣ್ಣನ ಪೂಜಾರರು ಪೂಜೆ ಮಾಡಿ, ನರಿಗೂ ಆರತಿ ಮಾಡಿ ತೀರ್ಥ ಹಾಕುತ್ತಾರೆ. (ಆಗ ಮಕೋಡ ತೆಗೆದಿರುತ್ತಾರೆ) ಆನಂತರ ಕೊರಳ ಸರಪಣಿ ಕಳಚಿ, ಎಲ್ಲರೂ ಜೋರಾಗಿ ಕೂಗುಹಾಕಿದಾಗ ಗಾಬರಿಯಿಂದ ಆ ನರಿ ಯಾವುದೋ ದಿಕ್ಕಿಗೆ ಪಲಾಯನ ಮಾಡುತ್ತದೆ. ದೇವರನ್ನು ಅಲ್ಲಿಂದ ಊರೊಳಗೆ ಮೆರವಣಿಗೆ ತಂದು, ಮದ್ದುಗುಂಡು ಸುಡುವುದು ಇತ್ಯಾದಿ ನಡೆಯುತ್ತದೆ. "ನರಿ ಹೋದ ದಿಕ್ಕಿಗೆ ಮಳೆ ಬೆಳೆ ಚೆನ್ನಾಗಿ ಆಗುತ್ತೆ ಎಂಬ ನಂಬಿಕೆ" ಅಲ್ಲಿಯವರದು.[೫]

೪. ಮಲ್ಲೋಹಳ್ಳಿ, ರಂಗನಾಥಸ್ವಾಮಿ ಜಾತ್ರೆಯಲ್ಲಿ ಬೇಟೆ ಆಚರಣೆ

ಕೆಲವು ಶಿಷ್ಟ ದೈವಗಳ ಜಾತ್ರೆಯ ಒಂದು ಅಂಗವಾಗಿ ಬೇಟೆಯೂ ಆಚರಣೆಯಾಗಿ ಹೇಗೆ ಸೇರ್ಪಡೆಯಾಗಿರುತ್ತದೆ ಎಂಬುದಕ್ಕೆ ದೊಡ್ಡ ಬಳ್ಳಾಪುರ ತಾ. ಮಲ್ಲೋಹಳ್ಳಿ ಗ್ರಾಮದ ಅಧಿದೈವ ರಂಗನಾಥನ ಜಾತ್ರೆಯ ಈ ಭಾಗ ನೋಡಬಹುದು.

ಬೆಂಗಳೂರು ಕರಗದ ದಿನ ಅಲ್ಲಿ ಬ್ರಹ್ಮರಥೋತ್ಸವ. ಅದರ ಮರುದಿನ ರಾತ್ರಿ "ಅಶ್ವವಾಹನೋತ್ಸವ". ಶ್ರೀದೇವಿ, ಭೂದೇವಿ ಸಹಿತ ಅಶ್ವವಾಹನನಾಗಿರುವಂತೆ ಸಂಯೋಜಿಸಿದ ರಂಗನಾಥನ ಮೆರವಣಿಗೆ ದೇವರನ್ನು ಊರಾಚೆ ನೀರು ಇರುವಲ್ಲಿ ಕೊಂಡೊಯ್ಯಲಾಗುತ್ತದೆ. ಅಲ್ಲಿ ಆಗಮಿಕರು ದೇವರಿಗೆ ಪುಣ್ಯಾಹ ಇತ್ಯಾದಿ ಮಾಡುತ್ತಾರೆ. ಆಮೇಲೆ ಸಿಪ್ಪೆಸುಲಿದ ಒಂದು ತೆಂಗಿನಕಾಯಿಯನ್ನು 'ಹುಲಿ ಬಂತು ಹುಲಿ...." ಎಂದು ಹೇಳುತ್ತಾ ದೇವರ ಮುಂದಿನಿಂದ ಉರುಳಿಸುತ್ತಾರೆ. ಹಾಗೆ ಎರಡುಬಾರಿ ಮಾಡಿ, ಮೂರನೇ ಬಾರಿ ಉರುಳಿಸಿದಾಗ ದೊಣ್ಣೆ ಹಿಡಿದು ನಿಂತಿದ್ದ ತರುಣರು ಅದನ್ನು ಹೊಡೆದು, ಚಚ್ಚಿ ಚೂರು ಮಾಡುತ್ತಾರೆ. ಅಲ್ಲಿಂದ ಬಂದು ಊರೊಳಗೆ ಮೆರವಣಿಗೆ, ಪೂಜೆ ಆದ ಮೇಲೆ ಗುಡಿಯ ಬಳಿ, ದೇವರಿಗೆ ಉಯ್ಯಾಲೆ ಹಾಕುತ್ತಾರೆ. ಬೇಟೆಯ ಆಯಾಸ ಪರಿಹಾರಕ್ಕಾಗಿ ಹಾಗೂ ಮನರಂಜನೆಗಾಗಿ ದೇವರು ಹೀಗೆ ಉಯ್ಯಾಲೆಯಲ್ಲಿ ಪವಡಿಸುತ್ತಾನೆ ಎನ್ನುತ್ತಾರೆ.

ವಿಶೇಷವೆಂದರೆ 'ಆತನಿಗೆ ಆಗ ನಿದ್ರೆ ಹತ್ತುತ್ತದೆ' ಆ ಹೊತ್ತಿನಲ್ಲಿ 'ಕಳ್ಳ'ರು ಗುಡಿಗೆ ನುಗ್ಗಿ ಕೈಗೆ ಸಿಕ್ಕಿದ ಸಾಮಾನುಗಳನ್ನೂ ಕೊನೆಗೆ ಅಲ್ಲೇ 'ಮಲಗಿದ್ದ' ಆಗಮಿಕರನ್ನೂ ಕದ್ದು ಹೊತ್ತುಕೊಂಡು ಹೋಗುತ್ತಾರೆ. ವಿಷಯ ತಿಳಿದ ಗ್ರಾಮಸ್ಥರು ಪೊಲೀಸರಿಗೆ ದೂರು ಕೊಡುತ್ತಾರೆ. ಪೊಲೀಸರು ಕಳ್ಳರನ್ನು ಪತ್ತೆ ಮಾಡಿ, ಕಳವು ವಸ್ತುಗಳನ್ನು ಜಪ್ತಿ ಮಾಡಿ, ಅವರನ್ನು ಶಿಕ್ಷಿಸುತ್ತಾರೆ. (ಇದನ್ನೆಲ್ಲಾ ಆಗಮಿಕರ ನಿರ್ದೇಶನದಂತೆ ನಾಟಕೀಯವಾಗಿ ಮಾಡಲಾಗುತ್ತದೆ) ಕೊನೆಗೆ ದೇವರನ್ನು ಉಯ್ಯಾಲೆಯಿಂದ ಇಳಿಸಿ, ಮಹಾ ಮಂಗಳಾರತಿ ಮಾಡಿ, ಪ್ರಸಾದ ವಿನಿಯೋಗ ಮಾಡುತ್ತಾರೆ.

ಇಲ್ಲಿ 'ಬೇಟೆ' ಆಚರಣೆ ಭಕ್ತಾದಿಗಳಿಗೆ ಉಪದ್ರವಿಯಾಗಿದ್ದ ವನ್ಯಮೃಗಗಳನ್ನು ಸ್ವತಃ ದೇವರೇ ಬೇಟೆಯಾಡಿ ನಿಗ್ರಹಿಸುತ್ತಾನೆಂಬ ಆಶಯ ಹೊಂದಿದೆ ಎಂದು ಅಲ್ಲಿನವರು ಭಾವಿಸಿದ್ದಾರೆ.[೬] (ಆದರೆ, ಕಳ್ಳರ ಪ್ರಕರಣ ಕೇವಲ ಮನರಂಜನೆಯದೇ? ಅಥವಾ ದೇವರೂ ಮನುಷ್ಯರಂತೆ ಮೈಮರೆಯುತ್ತಾನೆ, ತಮ್ಮ ಸುರಕ್ಷತೆಗೆ ಜನರೇ ಜಾಗ್ರತರಾಗಿರಬೇಕು ಎಂಬುದರ ಇಂಗಿತದ್ದೇ?)[೭].

II ಸ್ವತಂತ್ರ ಬೇಟೆ ಆಚರಣೆ

ಇತರ ಧಾರ್ಮಿಕ ಆರಾಧನೆಗಳ ಅಂಗವಾಗಿ ನಡೆಯುವ ಬೇಟೆ ಆಚರಣೆಯಲ್ಲಿ ಬೇಟೆ ಕ್ರಿಯೆ ಸಾಂಕೇತಿಕವಾಗಿರುತ್ತದೆ. ವನ್ಯಜೀವಿಯನ್ನು ಸೆರೆಹಿಡಿದರೂ, ಹೆಚ್ಚೆಂದರೆ ಅದಕ್ಕೆ ಸ್ವಲ್ಪಮಟ್ಟಿಗಿನ ದೈಹಿಕ ತೊಂದರೆ ಆಗಬಹುದಾದರೂ (ಆ ನರಿಗಳ ಬಾಯಿಯನ್ನು ಸೂಜಿದಾರದಿಂದ ಹೊಲಿಯುತ್ತಾರೆ. ಬಾಲಕ್ಕೆ ಪಟಾಕಿ ಹಚ್ಚಿ ಓಡಿಸುವ ಹಿಂಸೆ ಮಾಡುತ್ತಾರೆಂದು ಹಿಂದೆ ಪತ್ರಿಕಾ ವರದಿಯಲ್ಲಿ ಬರೆದದ್ದು ಉಂಟಾದರೂ ಈಗಿನ ಗ್ರಾಮಸ್ಥರು ಅದನ್ನು ನಿರಾಕರಿಸುತ್ತಾರೆ. ಈ ಹಿನ್ನೆಲೆಯಲ್ಲಿಯೇ ಕೋರ್ಟು ಈ ಆಚರಣೆಯನ್ನು ನಿರ್ಬಂಧಿಸಿದ್ದು, ಆಚರಣೆ ಯಥಾರೂಪದಲ್ಲಿ ನಡೆಯುತ್ತಿಲ್ಲವಾದ್ದರಿಂದ, ವಾಸ್ತವವೇನೆಂಬುದನ್ನು ಇಂದು ಸ್ವತಃ ನೋಡಲು ಸಾಧ್ಯವಾಗುತ್ತಿಲ್ಲ) ಅದನ್ನು ಕೊಲ್ಲುವುದಿಲ್ಲ. 'ಕೆಡ್ಡಸ' ಇದಕ್ಕೊಂದು ಅಪವಾದ ಎನ್ನಬಹುದು. ಆದರೆ, ನಿಜವಾದ ವನ್ಯಜೀವಿಗಳ ಹತ್ಯೆಯನ್ನೇ ಆಚರಣೆ - ಸಂಪ್ರದಾಯದ ಹೆಸರಲ್ಲಿ ಕೈಗೊಳ್ಳುವ ಇನ್ನೊಂದು ನಡೆವಳಿಯೂ ಉಂಟು. ಇದರ ಎರಡು ನಿದರ್ಶನಗಳನ್ನು ಇಲ್ಲಿ ಗಮನಿಸಬಹುದು:

೧. ದೊಡ್ಡ ಬೇಟೆ

ದೊಡ್ಡ ಬಳ್ಳಾಪುರ ತಾಲ್ಲೂಕಿನ ಹುಲಿಕುಂಟೆ, ನೆಲಮಂಗಲ ತಾಲ್ಲೂಕಿನ ಸೋಲದೇವನಹಳ್ಳಿ, ಜಕ್ಕನಹಳ್ಳಿ, ಮಿಂಡಾಪುರಗಳಲ್ಲಿ ಈ ಸುತ್ತಿನಲ್ಲಿಯೇ ಹೆಸರಾದ 'ದೊಡ್ಡ ಬೇಟೆ' ಭಾರೀ ಉತ್ಸುಕತೆಯಿಂದ ನಡೆಯುತ್ತದೆ. ಧನುರ್ಮಾಸದ ನಿರ್ದಿಷ್ಟ ದಿನಗಳಲ್ಲಿ ನಡೆಯುವ ಈ ಬೇಟೆಗೆ ಸುತ್ತಲ ಹತ್ತಾರು ಊರು ಬೇಟೆ ತಂಡಗಳೂ, ಅಂಗಡಿ ಮುಂಗಟ್ಟುಗಳೂ ಸೇರುತ್ತವೆ. ಇದು ಒಂದು ದಿನದ ಬೇಟೆಯೇ ಆದರೂ ಇದಕ್ಕೆ ಪೂರಕವಾಗಿ ಆಯಾ ಊರ ಬೇಟೆ ತಂಡಗಳು ಹೊಗೆ ಬೇಟೆ, ಕೋಲು ಬೇಟೆ, ತಂಕಣಿ ಬೇಟೆ ಮೊದಲಾದವುಗಳನ್ನು ಸಾಂಪ್ರದಾಯಿಕವಾಗಿ ನಡೆಸಿರುತ್ತಾರೆ.[೮]

ಬೇಟೆಗೆ ಹೊರಡುವುದು, ಊರಿಗೆ ಹಿಂದಿರುಗುವುದು, ಬೇಟೆ ಸೇರುವ ಗುಡಿ ಬಳಿ ಪರ ಊರ ಬೇಟೆಗಾರರನ್ನು ಸಂಪ್ರದಾಯಿಕವಾಗಿ ಸ್ವಾಗತಿಸುವುದು. ಇವೆಲ್ಲವೂ ನಿಯಮಿತ ಪದ್ಧತಿಯಂತೆಯೇ ನಡೆಯುತ್ತವೆ. ಬೇಟೆಗೆ ಹೋಗಿ ದೇವರಿಗೆ ಹಣ್ಣು ಕಾಯಿ ಮಾಡಿಸುವುದು ಎಷ್ಟು ಮುಖ್ಯವೋ, ಹೆಚ್ಚು ಪ್ರಾಣಿ-ಪಕ್ಷಿಗಳನ್ನು ಬೇಟೆ ಆಡಿ ತಮ್ಮ ತಂಡದ ಸಾಮರ್ಥ್ಯ ಪ್ರದರ್ಶಿಸುವುದೂ ಅಷ್ಟೇ ಪ್ರತಿಷ್ಠೆಯದು ಎಂದು ಆ ಬೇಟೆಗಾರರು ಉತ್ಸುಕರಾಗಿರುತ್ತಾರೆ.

೨. ಯುಗಾದಿ ಬೇಟೆ

ಯುಗಾದಿಯ ಮರುದಿನ ಸಾಂಪ್ರದಾಯಿಕವಾಗಿ ಬೇಟೆ ಆಡುವ ಪದ್ಧತಿ ಹಲವು ಊರುಗಳಲ್ಲಿದೆ. ಇದಕ್ಕೆ ಮಾದರಿಯಾಗಿ ಹುನಗುಂದ ತಾಲ್ಲೂಕಿನ ಅಮರಾವತಿ ಗ್ರಾಮದಲ್ಲಿ ನಡೆಯುವ ಬೇಟೆ ಸಂಪ್ರದಾಯ ನೋಡಬಹುದು. (ಆ ಊರಲ್ಲಿ ಬೇಟೆಗೆ ತೀರಾ ಪ್ರಶಸ್ತವಾದ ದೊಡ್ಡ ಕಾಡು, ವನ್ಯಮೃಗ ಬಾಹುಳ್ಯ ವಿಶೇಷವಾಗಿ ಇರದಿದ್ದರೂ ಜನ ಸಾಂಪ್ರದಾಯಿಕ ಬೇಟೆಗೆ ಹೋಗುತ್ತಿದ್ದರು).

ಯುಗಾದಿ ಪಾಡ್ಯದ ದಿನ ಬೇಟೆಗಾರರು ಗೌಡ, ಪಾಟೀಲ, ಕುಲಕರ್ಣಿ ಮುಂತಾದ ಊರ ಮುಖಂಡರೊಂದಿಗೆ ಬಾಜಾಬಜಂತ್ರಿ ಸಹಿತ ಊರ ಬಸವಣ್ಣ ದೇವರ ಗುಡಿಗೆ ಬಂದು, ಪೂಜೆ ಸಲ್ಲಿಸಿ, ಆ ವರ್ಷ ಯಾರ ಹೆಸರಿಗೆ, ಯಾವ ದಿಕ್ಕಿಗೆ, ಯಾವ ಬಣ್ಣದ ನಾಯಿಗೆ ಬೇಟೆ ಬಲ ಬರುವುದೋ ಎಂದು ಶಕುನ ಕೇಳಿ ತಿಳಿಯುತ್ತಾರೆ. ಸ್ಥಳೀಯರು 'ಜೂಗನಾಯಿ'ಗಳೆಂದು ಕರೆಯುವ (ಮುಧೋಳದ ಪ್ರಖ್ಯಾತ 'ಹೌಂಡ್') ನಾಯಿಗಳು ಬೇಟೆಗೆ ಹೆಸರಾದವು. ಅಂತಹ ನಾಲ್ಕೆಂಟು ನಾಯಿಗಳ ಕಾಲುಗಳಿಗೆ ರಾತ್ರಿಯೇ ಒಳ್ಳೆಣ್ಣೆ ಹಚ್ಚಿ ಮೃದುಗೊಳಿಸುತ್ತಾರೆ.

ಪೂಜಾರಿ ಹೇಳಿದ ಹೆಸರಿನವ ("ಶಕುನ ಹಾರಿದವ" ಅಥವಾ "ಬೇಟೆ ಬಲಬಂದವ") ಪೂಜಾರಿ ಹೇಳಿದ ಬಣ್ಣದ ನಾಯಿ ಹಿಡಿದು ಬೆಳಗಿನ ಜಾವದಲ್ಲಿಯೇ ಬೇಟೆಗೆ ಹೊರಡುತ್ತಾನೆ. ಅಪಶಕುನವಾದೀತೆಂದು, ಆತ ಊರು ಬಿಡುವವರೆಗೆ ಊರ ಇತರರು ನಿತ್ಯದಂತೆ ಮುಂಜಾವಿಗೇ ಎದ್ದು ಓಡಾಡುವುದಿಲ್ಲ. ಆನಂತರ ಇತರ ಬೇಟೆಗಾರರೂ ಆತನನ್ನು ಹಿಂಬಾಲಿಸುತ್ತಾರೆ. ಬೇಟೆ ಆಡಿ, ಸಂಜೆ ಅವರು ಹಿಂದಿರುಗಿದಾಗ ಊರ ಗಂಡು, ಹೆಣ್ಣುಗಳು ಅವರ ಮೇಲೆ ಓಕಳಿ ಉಗ್ಗಿ, ಸಂಭ್ರಮದಿಂದ ಸ್ವಾಗತಿಸುತ್ತಾರೆ.

ಯುಗಾದಿ ದಿನ ಸಿಹಿಯೂಟ ಆದರೆ, ಮರುದಿನ 'ಕರಿ' ದಿನ.[೯] ಬಾಡು ತಿನ್ನುವ ಹಬ್ಬಕ್ಕೆ

ಈ ಬೇಟೆ ಹೇಳಿ ಮಾಡಿಸಿದಂತಿದೆ.

III ಬೇಟೆದೇವರು, ನಂಬಿಕೆ ಇತ್ಯಾದಿ

ಈ ಮೇಲಿನ ಬಹಳಷ್ಟು ನಿದರ್ಶನಗಳಲ್ಲಿ 'ಬೇಟೆ ದೇವ'ರೊಂದು ಪೂಜೆಗೊಳ್ಳುವುದು ಗಮನಾರ್ಹ. ೩೩ ಕೋಟಿ ದೇವತೆಗಳನ್ನು ಕಲ್ಪಿಸಿದ ನಮ್ಮ ಸಂಸ್ಕೃತಿಯಲ್ಲಿ ಬೇಟೆಗೂ ದೇವರಿರುವುದು ಆಶ್ಚರ್ಯವಲ್ಲ (ಹಾಗೆ ಇಲ್ಲದಿದ್ದರೇ ಆಶ್ಚರ್ಯವಾಗುತ್ತಿತ್ತೇನೋ). ಆದರೆ, ದುಡ್ಡಿಗೆ ಲಕ್ಷ್ಮಿ, ವಿದ್ಯೆಗೆ ಸರಸ್ವತಿ ಇದ್ದಂತೆ ಬೇಟೆಯ ನಿರ್ದಿಷ್ಟ ದೇವರು ಯಾರು? ಎಂಬ ಪ್ರಶ್ನೆ ಬಂದಾಗ ತುಸುಗೊಂದಲ ಆಗುತ್ತದೆ. ಏಕೆಂದರೆ, ಸಾರ್ವತ್ರಿಕವಾದ ಅಂತಹ ಒಂದು ದೇವರು ಇಲ್ಲ. ಸ್ಥಳೀಯವಾಗಿ ಅದು ಬದಲಾಗಿದೆ. ಸ್ವಾರಸ್ಯವೆಂದರೆ, ಕೊಲ್ಲುವ ಕ್ರಿಯೆಗೆ ಹೇಗೂ ಸಂಬಂಧಪಡದ ಬಸವಣ್ಣ (ಮೇಲಿನ ಧನಗಳ್ಳಿ ಹಾಗೂ ಅಮರಾವತಿ ನಿದರ್ಶನಗಳಲ್ಲಿ) ಬೇಟೆಯ ಸಂದರ್ಭದಲ್ಲಿ ಪ್ರಧಾನ ಪಾತ್ರ ವಹಿಸಿದೆ. ಬಹುಶಃ ಇದು ಆ ಊರುಗಳ ಗ್ರಾಮದೇವತೆ ಆಗಿದ್ದಿರಬಹುದು. ಆದರೆ, ಮಲ್ಲೋಹಳ್ಳಿ ಹಾಗೂ ಕದಬಳ್ಳಿಯಲ್ಲಿ ರಂಗನಾಥ 'ಬೇಟೆ ದೇವರು'[೧೦] ಆಗಿದ್ದಾನೆ. ಸೋಲದೇವನ ಹಳ್ಳಿ ದೊಡ್ಡ ಬೇಟೆಯಲ್ಲಿ ಶ್ರೀರಾಮನೇ ಬೇಟೆ ದೇವರು.ಇನ್ನು ಬುಡಕಟ್ಟಿನವರಾದ ಸಿದ್ಧಿಗಳಲ್ಲಿ 'ಬೇಟೆ ನಾಸ'[೧೧]. ಬೇಟೆದೇವರಾದರೆ ಹರಿಕಾಂತರಿಗೆ 'ಕಾನಬೀರ' (ಮೀನಿನ) ಬೇಟೆ ದೇವರು.[೧೨] ಸೋಲಿಗರು, ಜೇನು ಕುರುಬರು ಮೊದಲಾದವರೂ ಬೇಟೆಗೆ ಮೊದಲು, ಅನಂತರ 'ಬೇಟೆ ದೇವ'ರಿಗೆ ಪ್ರಾರ್ಥನೆ, ಪೂಜೆ ಸಲ್ಲಿಸುತ್ತಾರೆಯಾದರೂ ಆ ದೇವರಿಗೆ ನಿರ್ದಿಷ್ಟ ಹೆಸರು, ಆಕಾರ ಇದ್ದಂತಿಲ್ಲ.[೧೩] ಮಲೆನಾಡಿನ, ಶಿಕಾರಿಯಲ್ಲಿಯೂ ಬೇಟೆ ದೇವರಿಗೆ ಒಳ್ಳೇ ಶಿಕಾರಿಗಾಗಿ ಪ್ರಾರ್ಥನೆ ಸಲ್ಲಿಸಿದರೂ 'ಅದಕ್ಕೆ ನಿರ್ದಿಷ್ಟ ಸ್ಥಳ, ಹೆಸರು, ಆಕಾರ ಇಲ್ಲ'. ಶಿಕಾರಿದಾರರು ಮಾತ್ರ ನಂಬುವ ಸಾಂದರ್ಭಿಕ ದೇವರು ಅದು.[೧೪] ಶಿಕಾರಿಯ ಹಸಿಗೆನಂತರ ಹುರಿತುಂಡು ಆದ ಮೇಲೆ ಆ ಪ್ರಾಣಿ ಹೊಡೆದವನು ತನ್ನ ಭಾಗದ ಏಸಿನ ಪಾಲು ಮತ್ತು ಹುರಿತುಂಡಿನ ಪಾತ್ರೆಯೊಂದಿಗೆ ಹೋಗಿ, 'ಹಂಪಿ'ಗೆ (ಹಸಿಗೆ ಮಾಡಿದ ಸ್ಥಳಕ್ಕೆ) ಸ್ವಲ್ಪ ದೂರದಲ್ಲಿ ೫-೯ ಎಲೆಗಳ ಮೇಲೆ ಹುರಿತುಂಡು ಇಟ್ಟು, ಧೂಪ ಹಾಕಿ, ಹೆಚ್ಚಿನ ಶಿಕಾರಿಗೆ ಪ್ರಾರ್ಥಿಸಿ ಬರುತ್ತಾನೆ. (ಅದೇ. ಪು. ೧೩೦)

ಹೀಗೆ ಮಾಡುವುದು ಆದಿಮ ನಡೆವಳಿ ಆಗಿದ್ದು, ಬಹುಶಃ ಪ್ರಾರಂಭದಲ್ಲಿ ಎಲ್ಲಾ ವರ್ಗದ ಬೇಟೆಗಾರರೂ ಹೀಗೇ ಅನಿಕೇತನ ದೇವರನ್ನೇ ಪೂಜಿಸುತ್ತಿದ್ದಿರಬಹುದು. ಮುಂದೆ, ವಿವಿಧ ಪಂಥಗಳ ಪ್ರಭಾವದಿಂದ ಅವರು ತಾವು ಒಪ್ಪಿದ ಅಧಿದೈವವನ್ನೇ ಬೇಟೆ ದೇವರಾಗಿಯೂ ಮಾಡಿಕೊಂಡಿರಬಹುದು. ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಅಂಶವೆಂದರೆ ಬೆಂಗಳೂರು ಪರಿಸರದಲ್ಲಿ ಬೇಟೆರಾಯ ದೇವರೂ ಬ್ಯಾಟರಾಯನ ಪುರಗಳೂ ಇವೆ. ಸಾಮಾನ್ಯವಾಗಿ, 'ಗೋಪಾಲಸ್ವಾಮಿ'ಯ ಆಕಾರದಲ್ಲೇ 'ಬೇಟೆರಾಯ'ನೂ ಇರುವುದುಂಟು. ಶ್ರೀರಾಮ, ರಂಗನಾಥ, ಬೇಟೆರಾಯ.... ಇವರೆಲ್ಲಾ ವಿಷ್ಣುವಿನ ಬೇರೆ ಬೇರೆ ರೂಪಗಳೇ ಆಗಿವೆ. ಒಂದು ಸಣ್ಣ ಪ್ರಶ್ನೆ ಎಂದರೆ ಕಾಡಿನ ಹಾಗೂ ದ್ರಾವಿಡರ ದೈವವಾದ 'ಶಿವ' ಎಲ್ಲೂ ಬೇಟೆ ದೇವರಾದದ್ದು ಕಂಡುಬಂದಿಲ್ಲ. ಆತನಿಗೆ ಬದಲು ವೈದಿಕ ದೇವರುಗಳು ವಿಶೇಷವಾಗಿ ಆ ಕಾರ್ಯಭಾರ ವಹಿಸಿಕೊಂಡಿವೆ. ಬಹುಶಃ ವೇಣುಗೋಪಾಲನು ದನಗಾಹಿಗಳ ಆ ಮೂಲಕ ಕೃಷಿಕರ ದೇವರು ಎನಿಸಿರುವುದು ಇದಕ್ಕೆ ಕಾರಣ ಇರಬಹುದೇ?

ನಂಬಿಕೆಗಳು

ಬೇಟೆ-ಸಾಹಸ ಪ್ರದರ್ಶನವೂ ಆದ್ದರಿಂದ, ಹುಲಿ ಕೊಲ್ಲುವುದು ಮಹಾವೀರನಿಗೆ ಮಾತ್ರ ಸಾಧ್ಯ ಎಂದು ಭಾವಿಸಿದ್ದರಿಂದ, ಅಂತಹ ವೀರನನ್ನು ವಿಶೇಷವಾಗಿ ಕೊಂಡಾಡುವ ಸಂಪ್ರದಾಯವೂ ಉಂಟು. ಕೊಡವರಲ್ಲಿನ 'ಹುಲಿ ಮದುವೆ'[೨೫] ಅಂತಹ ವಿಶಿಷ್ಟ ಸಂಪ್ರದಾಯಗಳಲ್ಲಿ ಒಂದು ಬೇಟೆಗೆ ಸಂಬಂಧಿಸಿದ ಇತರ ಎಷ್ಟೋ ನಂಬಿಕೆ- ನಡೆವಳಿಗಳಲ್ಲಿ ಸ್ವಾರಸ್ಯದ ಒಂದೆರಡನ್ನು ಮಾದರಿಗಾಗಿ ಇಲ್ಲಿ ಪ್ರಸ್ತಾಪಿಸಿದೆ:

ಬೇಟೆಯಲ್ಲಿ ಯಾವ ಪ್ರಾಣಿ-ಪಕ್ಷಿ ಕೊಂದರೂ ತಪ್ಪಿಲ್ಲ ಎಂಬುದು ಚೆನ್ನಾದೇವಿ ಪರಿಸರದ ಸಾಮಾನ್ಯ ಭಾವನೆಯಾದರೂ ಅಮರಾವತಿಯಂತಹ ಗ್ರಾಮಗಳ ಬೇಟೆ ಆಚರಣೆಯಲ್ಲಿ ಕೆಲ ನಿರ್ಬಂಧಗಳಿವೆ. ಅವರ ಪ್ರಕಾರ 'ನರಿ ಲಕ್ಷ್ಮಿಯ ಸಂಕೇತವಾದ್ದರಿಂದ ನರಿಯನ್ನು ಕೊಲ್ಲುವುದಿಲ್ಲ' (ಫಸಲು ಹುಲುಸಾಗುವುದೆಂಬ ನಂಬಿಕೆಯಿಂದ ಅವರು ಸುಗ್ಗಿಯಲ್ಲಿ ನರಿ ಕೂಗುವ ಕಾಲಕ್ಕೆ ಧಾನ್ಯವನ್ನು ಚೀಲಕ್ಕೆ ತುಂಬುತ್ತಾರೆ).' ಕುರಿಗಾರರಿಗೆ ಅರ್ಧಪಾಲಿನ ಒಡೆಯ' ಎಂಬ ಮತ್ತು 'ತೋಳ ಸಾಯಿಸಿದರೆ ಕುರಿ ಸಂತತಿ ನಾಶವಾಗುವು'ದೆಂಬ ನಂಬಿಕೆಯಿಂದ ಅವರು ತೋಳವನ್ನೂ ಕೊಲ್ಲುವಂತಿಲ್ಲ. ಒಂದು ವೇಳೆ ನಾಯಿಗಳಿಂದ ತೋಳ ಸತ್ತರೆ ಅದಕ್ಕೆ ಪೂಜೆ ಮಾಡಿ ಸಾಂಪ್ರದಾಯಿಕವಾಗಿ ಹೂಳುತ್ತಾರೆ.[೨೬]

ಹೀಗೆ, ಗ್ರಾಮಸ್ಥರ ಸಾಮೂಹಿಕ ಬೇಟೆ ಎಂಬುದು ಕೇವಲ ಮಾಂಸಾಪೇಕ್ಷೆಯ, ಮನೋರಂಜನೆಯ ಸಾಮಾನ್ಯ ಶಿಕಾರಿ ಆಗದೆ ಅದು ದೈವದ ಸಾಹಚರ್ಯ ಪಡೆದ, ಹಲವು ನಂಬಿಕೆ- ಆಚರಣೆಗಳಿಂದ ರೂಪಿತವಾದ ಸಂಪ್ರದಾಯವೂ ಆಗಿರುವುದು ಸ್ಪಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಇನ್ನೊಂದು ಮಹತ್ವದ ಸಂಗತಿಯನ್ನೂ ಇಲ್ಲಿ ದಾಖಲಿಸುವುದು ಅಗತ್ಯ:

ಅಲಭ್ಯವಾದುದನ್ನು ಸುಲಭ ಲಭ್ಯ ಮಾಡಿಕೊಳ್ಳುವುದು, ಪೀಡನೆಯಿಂದ ರಕ್ಷಣೆ ಪಡೆಯುವುದು... ಇಂತಹ ಆಶಯಗಳಿಂದ ದೈವದ ಮೊರೆ ಹೋಗುವುದು ಮನುಷ್ಯನಲ್ಲಿನ ಸಾಮಾನ್ಯ ಸ್ವಭಾವವಾಗಿದೆ. ಅಂತೆಯೇ ವನ್ಯ ಜೀವಿಗಳಿಂದ ಜನ-ಜಾನುವಾರು-ಬೆಳೆಗಳಿಗೆ ಆಗುತ್ತಿದ್ದ ಪೀಡನೆಯಿಂದ ರಕ್ಷಣೆ ಹಾಗೂ ಆಹಾರಕ್ಕಾಗಿ ಯಶಸ್ವಿ ಮತ್ತು ಸಮೃದ್ಧ ಬೇಟೆಯ ಅಪೇಕ್ಷೆಯಿಂದ, ಅಂತಹ ಬೇಟೆಯ ಕೊರತೆಯಿದ್ದ ಕಾಲದಲ್ಲಿ ಅಂದರೆ ಇತ್ತೀಚಿನ ಕಾಲಘಟ್ಟದಲ್ಲಿ ನಮ್ಮ ಜನ ದೈವದ ಮೊರೆಹೋದದ್ದರ ಫಲವಾಗಿ ಈ ರೀತಿಯ ಆಚರಣೆ, ಸಂಪ್ರದಾಯಗಳು ಹುಟ್ಟಿಕೊಂಡಿರಬಹುದೇ? ಎಂಬ ಅನಿಸಿಕೆ ಯಾರಲ್ಲಾದರೂ ಮೂಡಬಹುದು. ವಾಸ್ತವಿಕ ಸಂಗತಿ ಎಂದರೆ, ಬೇಟೆಗೆ ಸಂಬಂಧಿಸಿದ ಈ ನಂಬಿಕೆ ನಡವಳಿಕೆ ಮನುಷ್ಯನ ಆದಿಮ ಬದುಕಿನಷ್ಟು ಪ್ರಾಚೀನವಾದುದು ಎಂಬುದು ಉಲ್ಲೇಖನೀಯವಾಗಿದೆ. ಅಧ್ಯಯನಕಾರರು ಈಗಾಗಲೇ ಗುರುತಿಸಿರುವಂತೆ ಸುಮಾರು ೨೦ ಸಾವಿರ ವರ್ಷಗಳ ಹಿಂದಿನ ಮಾನವ ಬರೆದಿರುವ ಗುಹಾಚಿತ್ರಗಳಲ್ಲಿ ಹಲವು ಬೇಟೆಗೆ ಹೋಗುವ ಮೊದಲು ಯಶಸ್ವೀ ಬೇಟೆಯನ್ನು ಆಶಿಸಿ ಆ ಜನರು ಸಾಮೂಹಿಕವಾಗಿ ಕೈಗೊಳ್ಳುತ್ತಿದ್ದ ಮಾಂತ್ರಿಕ್ ಆಚರಣೆಗಳನ್ನು ಕುರಿತದ್ದಾಗಿವೆ.[೨೭] ಆ ಕಾಲದಲ್ಲಿ ಆತನಿಗೆ ವನ್ಯ ಜೀವಿಗಳ ಕೊರತೆ ಇದ್ದಿತು-ಎಂಬುದಕ್ಕಿಂತ ತನಗಿದ್ದ ಸೂಕ್ತ ಆಯುಧಗಳ ಮತ್ತು ಸಮರ್ಪಕ ತಂತ್ರಜ್ಞಾನದ ಕೊರತೆಯನ್ನು

ಹೀಗೆ ಮಾನವಾತೀತ ಶಕ್ತಿ-ತಂತ್ರಗಳ ಮೂಲಕ ತುಂಬಿಕೊಳ್ಳುವ ಪ್ರಯತ್ನ ನಡೆಸಿದ್ದ ಎಂದು ಊಹಿಸಬಹುದಾಗಿದೆ. ಅಷ್ಟು ಪ್ರಾಚೀನವಾದ ಮಾನವನ ನಂಬಿಕೆ-ಮನೋಭಾವ ಈ ಉನ್ನತ ವಿಜ್ಞಾನ-ತಂತ್ರಜ್ಞಾನಗಳ ಕಾಲದಲ್ಲಿ ಇನ್ನೂ ಉಳಿದಿರುವುದಕ್ಕೆ ಬಹುಶಃ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ನಮ್ಮ ಗ್ರಾಮೀಣ ಬೇಟೆಗಾರರ ಕೈಗೆ ಇನ್ನೂ ಎಟುಕಿಲ್ಲದ್ದು ಒಂದು ಕಾರಣ ಇದ್ದಿರಬಹುದೆಂದು ಭಾವಿಸಬಹುದಾಗಿದೆ ಯಾವಾಗ ಸರ್ವಶಕ್ತಿ ತನ್ನ ಕೈಯಲ್ಲಿರುವುದೋ ಆಗ ಪರಶಕ್ತಿಯಲ್ಲಿ ನಿರಾಸಕ್ತನಾಗುವುದು ಮಾನವನ ಸಹಜ ಗುಣವಲ್ಲವೇ?

ಅಂತೂ ಎಷ್ಟೋ ಕಾಲದಿಂದ ಮನುಷ್ಯನ ಒಡನಾಡಿಯಾಗಿ ಬಂದ ಈ ನಂಬಿಕೆ - ನಡೆವಳಿಗಳು ಇಂದು ಯಾವ ಸ್ಥಿತಿಯಲ್ಲಿವೆ? ಎಂಬುದು ಪರ್ಯಾಲೋಚಿಸಬೇಕಾದ ಪ್ರಮುಖ ಪ್ರಶ್ನೆ. ಇದಕ್ಕೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದರೆ ದೊರೆಯುವ ಮಾಹಿತಿಗಳು ಬೇಟೆಯ ಭವಿಷ್ಯದ ಹಣೆ ಬರಹ ಹೇಳುವ ಮುನ್ನುಡಿಗಳೂ ಆಗುತ್ತವೆ.

ಇದಕ್ಕೆ ಕಾರಣ ಜಾಗತೀಕರಣದ ತೀವ್ರ ಧಾಳಿ; ಅದರಿಂದ ಆದ ಬದುಕಿನ ಸ್ಥಿತಿಗತಿಗಳಲ್ಲಿನ ಪಲ್ಲಟ. ಅದನ್ನು ಹೀಗೆ ವಿವರಿಸಬಹುದು :

ಜಾಗತೀಕರಣವು ತೀವ್ರ ವೇಗೋತ್ಕರ್ಷವಾಗಿ ನಮ್ಮ ಬದುಕನ್ನು ಅಲುಗಾಡಿಸುತ್ತಿದೆಯಷ್ಟೆ? ಇದರಿಂದಾಗಿ ನಮ್ಮ ಸಾಂಪ್ರದಾಯಿಕ ಕೃಷಿ ಪದ್ಧತಿ ಬದಲಾಗುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ರಸಗೊಬ್ಬರ, ಕೀಟನಾಶಕ, ಬಿತ್ತನೆ ಬೀಜಗಳ ತಿಪ್ಪೆಯೋ, ಪ್ರಯೋಗಾಲಯಗಳೋ ಆಗಿವೆ ನಮ್ಮ ಹೊಲ ತೋಟಗಳು. ಇದೇ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಬೆಳೆಯುವುದಕ್ಕಾಗಿ, ಎಲ್ಲರಿಗೂ ಭೂಮಿಯ ದಾಹದಿಂದಾಗಿ ಗೋಮಾಳ, ಅರಣ್ಯ ಭೂಮಿಗಳ ಒತ್ತುವರಿ ಆಗಿ, ವನ್ಯ ಜೀವಿಗಳ ಮೇಲೆ ಒತ್ತಡ ಬೀಳುತ್ತಿದೆ. ಮುಕ್ತ ಮಾರುಕಟ್ಟೆ, ವಿದೇಶಿ ಮಾರುಕಟ್ಟೆಯ ತೀವ್ರ ಆಕರ್ಷಣೆಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸುಸಜ್ಜಿತ ಬೇಲಿಗಳಿಂದ ಆವೃತವಾದ ಎಸ್ಟೇಟುಗಳು, ಫಾರಂಗಳು ಆಗಿವೆ. 'ಜಗತ್ತಿನ ಮಾದರಿಗಳ ಬೆನ್ನುಹತ್ತಿದ ನಮ್ಮ ತರುಣರೂ ಸ್ಥಳೀಯ ಬದುಕಿಗೆ ಬೆನ್ನು ತಿರುಗಿಸಿದ್ದಾರೆ. ಇದೆಲ್ಲದರ ಬೆನ್ನಿಗೇ ಇರುವುದೊಂದೇ ಭೂಮಿಯ ಉಳಿಯುವಿಕೆಗಾಗಿ ಕಾಡು ಮತ್ತು ಕಾಡು ಪ್ರಾಣಿಗಳ ಸಂರಕ್ಷಣೆಗಾಗಿ ಪರಿಸರವಾದಿಗಳಿಂದ ತೀವ್ರ ಆಂದೋಲನ, ಜಾಗೃತಿ, ಒತ್ತಡಗಳಾಗುತ್ತಿವೆ. ಸರ್ಕಾರವೂ ಅದನ್ನು ಒಪ್ಪಿ ವನ್ಯಜೀವಿ ಸಂರಕ್ಷಣಾ ಕಾಯಿದೆ ರೂಪಿಸಿ ಬೇಟೆ ನಿಷೇಧ ಮಾಡಿರುವುದು ಅನಿವಾರ್ಯವಾಗಿದೆ. ಪತ್ರಿಕೆಗಳಲ್ಲಿನ ಆಕ್ಷೇಪದ ವರದಿಗಳ ಹಿನ್ನೆಲೆಯಲ್ಲಿ ಆರಕ್ಷಕರು ಸರ್ಕಾರದ ಕಾನೂನನ್ನು ಇನ್ನಾದರೂ ಕಟ್ಟುನಿಟ್ಟಾಗಿ ಪಾಲಿಸಲು ದಂಡಧಾರಿಗಳಾಗಿ ಬೇಟೆಗಾರರ ಬೆನ್ನು ಹತ್ತಿದ್ದಾರೆ. ಹೀಗಾಗಿ, ಸಂಪ್ರದಾಯದ ಹೆಸರಲ್ಲಿಯಾದರೂ ಬೇಟೆ ಆಚರಣೆ ಮಾಡುವುದು ಹೇಗೆ ಸಾಧ್ಯ? ಎಂಬುದು ಬೇಟೆಗಾರರ ಸಂದಿಗ್ಧವಾಗಿದೆ. ಈ ಬಗೆಗೆ ಕೇಳಿದಾಗ ಅವರಿಂದ ಬಂದ ಕೆಲ ಪ್ರತಿಕ್ರಿಯೆಗಳು ಇವು :

ಚನ್ನಾದೇವಿ ಅಗ್ರಹಾರದ ಬೇಟೆಗಾರರ ತಂಡದ ನಾಯಕ ಶ್ರೀ ರಾಮಯ್ಯ ಅವರ ಮಾತಿನ ಒಟ್ಟು ಭಾವ: 'ಊರು ಸುತ್ತಾ ತೋಟ, ಬೇಲಿ ಆದೋ; ಬೇಟೆಗೆ ಬರುವ ಜನರೂ ಕಡಿಮೆ; ಪ್ರತಿಫಲವೂ ಕಡಿಮೆ; ಸರ್ಕಾರದ ನಿರ್ಬಂಧ ಬೇರೆ.'[೧೮]

ಅಮರಾವತಿಯ ಬೇಟೆಯ ಸ್ಥಿತಿಗತಿ ಬಗೆಗೆ ವಕ್ತೃ ಹೇಳಿದ್ದು

" ವರ್ಷಕ್ಕೊಮ್ಮೆ ಭೇದಿ ತಗೋಬೇಕು; ವರ್ಷಕ್ಕೊಮ್ಮೆ ಬೇಟೆಗೆ ಹೋಗಬೇಕು" -ಅನ್ನೋದು ಅಲ್ಲಿಯವರ ಪಾರಂಪರಿಕ ನಂಬಿಕೆಯಾದರೂ ಬದಲಾದ ಕಾಲಮಾನದಿಂದಾಗಿ 'ಕಳೆದ ೧೦-೧೫ ವರ್ಷಗಳಿಂದ ಸಾಂಪ್ರದಾಯಿಕ ಬೇಟೆಗೆ ಹೋಗಲು ಆಗಿಲ್ಲ. ಆದರೆ ಅದರ ಪಳೆಯುಳಿಕೆ-ಸಂಕೇತವಾಗಿ-ಬಣ್ಣ (ಓಕಳಿ) ಉಗ್ಗುವುದು ಮಾತ್ರ ನಡೆಯುತ್ತದೆ'[೧೯]

ಕದಬಳ್ಳಿ, ಉದ್ದೂರು, ಜಕ್ಕನಹಳ್ಳಿ, ಸೋಲದೇವನ ಹಳ್ಳಿ ಮೊದಲಾದೆಡೆಯಂತೂ ಪೊಲೀಸರ ಸರ್ಪಗಾವಲೇ ಇರುತ್ತದೆ. ಹಿಂದೆಲ್ಲಾ ಬೇಟೆಯಂದು ಶಾಂತಿ ಉಸ್ತುವಾರಿಗೆ ಬರುತ್ತಿದ್ದ ಆರಕ್ಷಕರು ಈಗ ಕಾನೂನು ಭಂಗ ಮಾಡುವವರನ್ನು ಹಿಡಿದು ಶಿಕ್ಷಿಸುವುದಕ್ಕಾಗಿಯೇ ಬರುತ್ತಾರೆ. ನಾವು ಕ್ಷೇತ್ರ ವೀಕ್ಷಣೆಗಾಗಿ ಉದ್ದೂರಿಗೆ ಆ ಸಂಜೆ ಹೋದಾಗ ಜನರಲ್ಲಿ ಹೇಳಿಕೊಳ್ಳುವ ಲವಲವಿಕೆ ಇರಲಿಲ್ಲ. ಯಾರು ಅಪರಿಚಿತರು ಬಂದರೂ ಪತ್ರಿಕೆಯವರೋ, ಸಿ.ಐ.ಡಿ.ಗಳೋ ಇರಬೇಕು; ನರಿ ಹಿಡಿದದ್ದು ಪತ್ರಿಕೆಗಳಲ್ಲಿ ಬಂದರೆ ತಮಗೆಲ್ಲಾ ತೊಂದರೆ... ಎಂಬ ಆತಂಕದಲ್ಲಿ ನಾನು ಅವರ ಮಾತುಗಳನ್ನು ಧ್ವನಿ ಮುದ್ರಿಸಿಕೊಳ್ಳುವುದಕ್ಕೂ ಕೆಲವರು ಅಡ್ಡಿ ಮಾಡಿದ್ದುಂಟು. ಅಂತೂ ಆ ವರ್ಷ 'ನರಿ ಸಿಗಲಿಲ್ಲ; ನರಿ ಹಿಡಿದು ತರಲಿಲ್ಲ...' ಎಂದು ಅಲ್ಲಿನವರು ಹೇಳಿದರು. ಪೊಲೀಸರು... ಕಾನೂನಿನ ತೊಂದರೆಯಾಕೆ? ಅಂಥ ಈ ಸಾರಿ ನರಿ ಬೇಟೆಗೆ ಹೋಗಲೇ ಇಲ್ಲ-ಅಂಥ ಪಕ್ಕದ ಧನಗಳ್ಳಿಯ ಸೋಮಶೇಖರ ಸ್ಪಷ್ಟಪಡಿಸಿದ.

ಜಕ್ಕನಹಳ್ಳಿ ಬೇಟೆ ನೋಡಲು ಹೋದಾಗ ಪೊಲೀಸರೂ ಇದ್ದರು, ಬೇಟೆಗಾರರೂ ಇದ್ದರು. ಆದರೆ, ಯಾರ ಕೈಲೂ ಮೊಲ ಇರಲಿಲ್ಲ. ಬೇಟೆಯಾಡುತ್ತಿಲ್ಲ; ಸುಮ್ನೆ ಸಾಂಕೇತಿಕವಾಗಿ ಬೇಟೆ ಹಬ್ಬ ಮಾಡುತ್ತಿದ್ದೇವೆ ಎಂದರು ಕೆಲವರು. ಆದರೆ ಕೆಲವರು ಖಾಸಗಿಯಾಗಿ ನೇಪಥ್ಯದಲ್ಲಿ ನುಡಿದದ್ದು-'ಪೊಲೀಸರ ಕಣ್ಣಿಗೆ ಬೀಳುವುದು ಬೇಡ ಎಂದು, ಹೊಡೆದ ಮೊಲಗಳನ್ನು ಮೆರವಣಿಗೆಯಲ್ಲಿ ತಂದಿಲ್ಲ. ಊರಿಗೆ ಹಿಂದಿರುಗುವಾಗ ಹೊಲ, ಹಳ್ಳಗಳಲ್ಲಿ ಬಚ್ಚಿಟ್ಟ ಮೊಲಗಳನ್ನು ತೆಗೆದುಕೊಂಡು ಹೋಗುತ್ತಾರೆ'. ಹೌದು, ಪೊಲೀಸರು ಬೇಟೆ ಗುಡಿಯ ಬಳಿ ಕಾವಲು ನಿಲ್ಲುತ್ತಾರೆಯೇ ಹೊರತು ನಿಜವಾಗಿ ಬೇಟೆ ಆಡುವ ಹೊಲ, ದಿಣ್ಣೆ ಬಯಲಲ್ಲಿ ಅವರನ್ನು ಹಿಂಬಾಲಿಸುವುದಿಲ್ಲ. ಅಷ್ಟಕ್ಕೂ ಪೊಲೀಸರೂ ಮನುಷ್ಯರೇ ತಾನೇ. ಆದ್ದರಿಂದಲೇ ಈ ಕಾರಣಕ್ಕಾಗಿ ಈವರೆಗೆ ಯಾರಿಗೂ ಶಿಕ್ಷೆ ಆದದ್ದರ ನಿದರ್ಶನ ಕಂಡುಬಂದಿಲ್ಲ.

ಸಂಪ್ರದಾಯವನ್ನು ಬಿಡಲಾರದ, ಆದರೆ ಮುಕ್ತವಾಗಿ ಆಚರಿಸಲಾರದ ಆತಂಕ-ಸಂದಿಗ್ಧದಲ್ಲಿಯೇ ಚಿಕ್ಕ ವಯಸ್ಸಿನಿಂದಲೂ ಉತ್ಸುಕತೆಯಿಂದ ಬೇಟೆಯಾಡುತ್ತಾ ಬಂದಿದ್ದ ಬೇಟೆಗಾರ ರಾಮಯ್ಯ ಹೇಳಿದ್ದು ; "ಮುಂದೆ ಮುಂದೆ ಬ್ಯಾಟೆ ಇರಲ್ಲ..."[೨೦]

"ಜನಪದ ಕಲೆ, ಸಂಪ್ರದಾಯಗಳು ನಾಶವಾಗುತ್ತಿವೆ ; ಅವುಗಳನ್ನು ಉಳಿಸಿಕೊಳ್ಳಬೇಕು"-ಎನ್ನುವ ಮಹನೀಯರಿಗೆ ಇಂಥಾ ಮಾತುಗಳನ್ನು ಕೇಳಿ ಇನ್ನಷ್ಟು ದುಃಖವಾಗಬಹುದು. ಆದರೆ, ನಿಜವಾಗಿ ನಾವು ಇದಕ್ಕಾಗಿ ಮರುಗಬೇಕಾಗಿಲ್ಲ; ಸಂತೋಷಪಡಬೇಕು. ಏಕೆಂದರೆ ಬೇಟೆ ಸಂಪ್ರದಾಯ, ನಂಬಿಕೆ ಇಂದು ನಮ್ಮ ಬದುಕಿನಿಂದಲೇ ದೂರವಾಗಿ ಹೋಗಬೇಕಾದ ಅನಿವಾರ್ಯತೆ

ಇದೆ. (ನಾವು ತುರ್ತಾಗಿ ವಿದಾಯಹೇಳಬೇಕಾದ ಎಷ್ಟೋ ಜನಪದ ಕಲೆ, ಸಂಪ್ರದಾಯಗಳು ಇವೆ.) ಅದೊಂದು ಪರಿಸರ ವಿರೋಧಿ, ಜೀವ ವಿರೋಧಿ ಮನೋವೃತ್ತಿಯಾಗಿರುವುದರಿಂದ ಅದು ಸಂಪ್ರದಾಯವಾಗಿ, ಕಡ್ಡಾಯವಾಗಿ ಉಳಿಯಬೇಕಾದ ಮೌಲ್ಯ ಪಡೆದುಕೊಂಡಿಲ್ಲ ಎಂಬ ನಿಷ್ಠುರ ಸತ್ಯವನ್ನು ನಾವೆಲ್ಲ ಮನನ ಮಾಡಿಕೊಳ್ಳಬೇಕು. ಆದರೆ, 'ಜಾಗತೀಕರಣ' ಎಂಬ ಬಲಾಢ್ಯ, ನಯವಂಚಕ ಬೇಟೆಗಾರನಿಂದ ನಮ್ಮ ಬದುಕಿನ ಇತರ ಪಕ್ಕೆಲಬುಗಳು ಘಾಸಿಯಾಗದಂತೆ ನೋಡಿಕೊಳ್ಳುವ ಎಚ್ಚರವೂ ನಮಗಿರಬೇಕಾದುದು ಇಂದಿನ ಅಗತ್ಯ.

ಟಿಪ್ಪಣಿಗಳು

೧, ೨ ವೆಂಕಟರಾಜ ಪುಣಿಂಚತ್ತಾಯ : ಮೊಗವೀರರ ಸಂಸ್ಕೃತಿ ೧೯೯೩. ಕ. ಸಾ. ಅಕಾಡೆಮಿ.

೩.೪ ಡಾ.ಡಿ. ಪಾಂಡುರಂಗ : ಭೈರರ ಸಂಸ್ಕೃತಿ; ೧೯೯೩. ಕ.ಸಾ. ಅಕಾಡೆಮಿ.

೫. ವೈಯಕ್ತಿಕ ಮಾಹಿತಿ : ಸೋಮಶೇಖರ ಡಿ. ಎರಡನೇ ಪಿ.ಯು.ಸಿ. ವಿದ್ಯಾರ್ಥಿ; ೨೧-೦೧-೧೯೯೫, ಕೆಲವೆಡೆ ಮೊಲ ಬೇಟೆ ಆಡುವುದುಂಟು. ಇಂಗ್ಲೆಂಡಿನಲ್ಲಿಯೂ ಸಾಂಪ್ರದಾಯಿಕ ನರಿ ಬೇಟೆ ಇದ್ದಿತು. ಅದು ಬಹು ಕ್ರೂರ ಪದ್ಧತಿ ಎಂಬ ಕಾರಣದಿಂದ ಅಲ್ಲಿನ ಪಾರ್ಲಿಮೆಂಟ್ ಅದನ್ನು ವಿರೋಧಿಸಿದ್ದಿತು. (C.N.N. com. ಇಂಟರ್‌ನೆಟ್ ಆವೃತ್ತಿ. ನವೆಂಬರ್ ೨೮. ೧೯೯೭.

೬. ವೈಯಕ್ತಿಕ ಮಾಹಿತಿ : ರತ್ನಪ್ಪ (೫೫) ಶ್ರೀ ವೈಷ್ಣವ ಅರ್ಚಕರು; ಮಲ್ಲೋಹಳ್ಳಿ; ೯-೯-೨೦೦೨.

೭. ಸ್ವಾರಸ್ಯವೆಂದರೆ-ಊರವರ ಪ್ರಬಲ ನಂಬಿಕೆಯಂತೆ, ಬಹು ಹಿಂದೆ ದೇವನಹಳ್ಳಿಯವರು ಈ ರಂಗನಾಥನ ವಿಗ್ರಹವನ್ನು ಕದ್ದುಕೊಂಡು ಹೋದರಂತೆ. ಆಗ ದೇವರು 'ತಾನು ಎರಡೂ ಕಡೆ ಇರುತ್ತೇನೆ ; ನೀವು ಆಂಜನೇಯನ ವಿಗ್ರಹ ಇಟ್ಟು ಪೂಜೆ ಮಾಡಿ' ಎಂದು ಮಲ್ಲೋಹಳ್ಳಿಯವರಿಗೆ ಹೇಳಿದನಂತೆ. ಗರ್ಭಗುಡಿಯಲ್ಲಿ ಆಂಜನೇಯ ; ಹೆಸರು ಮಾತ್ರ ರಂಗನಾಥನ ಗುಡಿ!ದೇವಸ್ಥಾನ ನವೀಕರಣವಾದಾಗ ಈ ವಿಪರ್ಯಾಸ ಬೇಡವೆಂದು ಹೊಸ ರಂಗನಾಥನ ವಿಗ್ರಹ ಮಾಡಿಸಿ, ಆಂಜನೇಯನಿಗೆ ಪಕ್ಕದಲ್ಲೇ ಪ್ರತ್ಯೇಕ ಗುಡಿ ಕಟ್ಟಿಸಿದ್ದಾರೆ. (ರತ್ನಪ್ಪ)

ಟಿಪ್ಪು ಕಾಲದಲ್ಲಿ ಮುಸ್ಲಿಂ ಸೈನಿಕರಿಂದ ರಂಗನಾಥನ ಹೆಸರಿನ ಗುಡಿಗಳಿಗೆ ಯಾವ ಬಾಧೆಯೂ ಆಗುತ್ತಿರಲಿಲ್ಲವಾದ್ದರಿಂದ, ಧಾಳಿ ಸಂದರ್ಭದಲ್ಲಿ ಗ್ರಾಮಸ್ಥರು ಬೇರೆ ದೇವರು ಒಳಗೆ ಇದ್ದರೂ ಅದನ್ನು ರಂಗನಾಥನ ಗುಡಿ ಎಂದೇ ಕರೆಯುತ್ತಿದ್ದರು- ಎಂಬ ಅಭಿಪ್ರಾಯವಿದೆ. ಮಲ್ಲೋಹಳ್ಳಿಯಲ್ಲಿನ ಬದಲಾವಣೆಗೂ ಇದೇ ಕಾರಣ ಇರಬಹುದೇ?

೮. ವಿವರಕ್ಕೆ ನೋಡಿ : ಡಾ. ಟಿ. ಗೋವಿಂದರಾಜು ; ಸ್ಥಿತ್ಯಂತರದ ಬದುಕಿನಲ್ಲಿ ಬೇಟೆ ಸಂಸ್ಕೃತಿ ಲೇಖನ (ಕಣ;ಪುಟ. ೧೪೫-೧೬೨;೨೦೦೦ ಸಂವಹನ, ಮೈಸೂರು)

೯. ವೈಯಕ್ತಿಕ ಮಾಹಿತಿ : ಎಸ್. ಬಿ. ಶಿವಾನಂದ, ಕ್ಷೇತ್ರ ಸಹಾಯಕ, ಜಾನಪದ ವಸ್ತು ಸಂಗ್ರಹಾಲಯ, ಮೈಸೂರು:೧೦-೦೩-೧೯೯೭

೧೦. ಕದಬಳ್ಳಿಯ ನರಿ ಪೂಜೆ ವಿವರಕ್ಕೆ ನೋಡಿ: ಎಚ್.ಎನ್. ರಂಗರಾವ್ ; ಕದಬಳ್ಳಿ-ಸಂಕ್ರಾಂತಿಯ ನೆನಪು (ಲೇಖನ);ಜನಪದ: ಜನವರಿ ೧೯೯೭:೩೭-೪೦

೧೧. ಹಿ. ಚಿ. ಬೋರಲಿಂಗಯ್ಯ: ಸಿದ್ದಿಯರ ಸಂಸ್ಕೃತಿ, ಪುಟ ೬೭; ಕ.ಸಾ. ಅಕಾಡೆಮಿ.

೧೨. ವಿ.ಗ. ನಾಯಕ : ಹರಿಕಾಂತರ ಸಂಸ್ಕೃತಿ, ಪು. ೩೯; ಕ.ಸಾ. ಅಕಾಡೆಮಿ.

೧೩. ಚಂದ್ರು ಕಾಳೇನಹಳ್ಳಿ; ಸೋಲಿಗರ ಸಂಸ್ಕೃತಿ

೧೪. ಕಡಿದಾಳು ರಾಮಪ್ಪ ಗೌಡ: ಮಲೆನಾಡಿನ ಶಿಕಾರಿಯ ನೆನಪುಗಳು ; ಆದರೆ ಈ ದೇವರನ್ನು "ಬೇಟೆ ರಂಗ" ಎಂದು ಕರೆಯುವುದಾಗಿ ಡಾ. ಅಂಬಳಿಕೆ ಹಿರಿಯಣ್ಣ ಬರೆದಿದ್ದಾರೆ. ನೋಡಿ : ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ : ಪು. ೧೩೧.

೧೫. ವಿವರಕ್ಕೆ ನೋಡಿ : ಕಾಕಿಮಾನಿ : ಬೇಟೆ ನೆನಪು, ಐ.ಬಿ.ಎಚ್. ೧೯೮೪.
ಸತ್ತ ಹುಲಿಯನ್ನು ಮನೆಯ ಹಟ್ಟಿಯಲ್ಲಿ ಮರದ ಅಟ್ಟಣಿಗೆಯ ಮೇಲೆ ಕಟ್ಟಿ ನಿಲ್ಲಿಸುತ್ತಾರೆ. ಅದನ್ನು ಕೊಂದ ವೀರನಿಗೆ ಮಂಗಳ ಸ್ನಾನ ಮಾಡಿಸಿ ಮದುಮಗನಂತೆ ಅಲಂಕರಿಸಿ, ವಾದ್ಯಸಮೇತ ಮೆರವಣಿಗೆಯಲ್ಲಿ ಮನೆಮುಂದಿನ ಚಪ್ಪರಕ್ಕೆ ಕರೆತಂದು ಹಸೆ ಮೇಲೆ ಕೂರಿಸುತ್ತಾರೆ. ಆತನ ಕೋವಿಗೆ ಕೆಂಪುವಸ್ತ್ರ ಕಟ್ಟಿ ಮದುವಣಗಿತ್ತಿ ಸ್ಥಾನದಲ್ಲಿರಿಸುತ್ತಾರೆ. ವೀರನ ತಾಯಿ ಮತ್ತಿತರ ಸುಮಂಗಲಿಯರು ಆತನಿಗೆ ಅಕ್ಷತೆ ಇಟ್ಟು, ಹಾಲು ಕುಡಿಸಿ, ಆಶೀರ್ವದಿಸಿ ಹಣ ಇತ್ಯಾದಿ ಇನಾಮುಗಳನ್ನು ನೀಡುತ್ತಾರೆ. ಎಲ್ಲಾ ಆದ ಮೇಲೆ ಆತ ಕೋವಿ ಹೊತ್ತು ಹುಲಿಯ ಸುತ್ತ ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾನೆ. ವಾದ್ಯದವರು ಈತನ ಶೌರ್ಯಾದಿಗಳನ್ನು ಕುರಿತು ಪದಕಟ್ಟಿ ಹಾಡುತ್ತಾರೆ. ಎಲ್ಲರಿಗೂ ಮಾಂಸದೂಟದ ಔತಣ. ನಿಜವಾದ ಮದುವೆಯಂತಹ ಸಂಭ್ರಮ ಆಗುತ್ತದೆ.

೧೬. ವೈಯಕ್ತಿಕ ಮಾಹಿತಿ : ಎಸ್.ಬಿ. ಶಿವಾನಂದ

೧೭. ವಿವರಕ್ಕೆ ನೋಡಿ: ನರೇಂದ್ರರೈ ದೇರ್ಲ: ಕನ್ನಡದಲ್ಲಿ ಬೇಟೆ ಸಾಹಿತ್ಯ : ಪು ೩೩ : ೧೯೯೫
ಮಂತ್ರ-ತಂತ್ರದಿಂದ ಪ್ರಾಣಿಯನ್ನು ಮರುಳುಮಾಡಿ ಬೇಟೆಯಾಡುವುದು ಈಗಲೂ ಇರುವುದು ಕುತೂಹಲಕರವಾಗಿದೆ. ನೋಡಿ: ಡಾ. ಅಂಬಳಿಕೆ ಹಿರಿಯಣ್ಣ: ಮಲೆನಾಡಿನ ವೈಷ್ಣವ ಒಕ್ಕಲಿಗ ಸಂಸ್ಕೃತಿ :೧೯೯೯. ಪು. ೧೩೭

೧೮. ನೋಡಿ : ಟಿ. ಗೋವಿಂದರಾಜು, ಕಣ : ಪು. ೧೫೫-೧೭೦.

೧೯. ವೈಯಕ್ತಿಕ ಮಾಹಿತಿ: ಎಸ್. ಬಿ. ಶಿವಾನಂದ

೨೦. ನೋಡಿ : ಕಣ : ಪು. ೧೭೦: ನಾಗರಹೊಳೆ ವೈಲ್ಡ್ ಲೈಫ್ ಕನ್ಸರ್ವೇಷನ್ ಅಂಡ್ ಎಜುಕೇಷನ್ ಪ್ರಾಜೆಕ್ಟ್‌ನವರ ತಿಳುವಳಿಕೆಯ ಪರಿಣಾಮದಿಂದ ಬಂಡೀಪುರ ಅರಣ್ಯದಂಚಿನ ಹರಿಹರ ಗ್ರಾಮಸ್ಥರು ಬೇಟೆ ತ್ಯಜಿಸುವ ನಿರ್ಧಾರ ಕೈಗೊಂಡಿದ್ದಾರೆ. (ಪ್ರಜಾವಾಣಿ; ಪು. ೬; ೧೫-೦೭-೯೭)

* * * * *

ಜನಪದ ಸಾಹಿತ್ಯದಲ್ಲಿ ಶರಣೆಯರು

ಡಾ.ವೈ.ಸಿ. ಭಾನುಮತಿ

ಕರ್ನಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ನಡೆದಂಥ ಧಾರ್ಮಿಕ ಚಳವಳಿಯು ಸಮಕಾಲೀನ ಸಮಾಜ, ಸಂಸ್ಕೃತಿ, ಸಾಹಿತ್ಯದ ಮೇಲೆ ಗಾಢ ಪ್ರಭಾವ ಬೀರಿದ್ದು ವಿದಿತ. ಸಮಾಜದಲ್ಲಿ ಸೂಕ್ತ ಸ್ಥಾನಮಾನಗಳಿಲ್ಲದೆ, ಅಭಿವ್ಯಕ್ತಿಗೂ ಅವಕಾಶವಿಲ್ಲದೆ ಬದುಕು ಸವೆಸುತ್ತಿದ್ದ ಮಹಿಳೆಯರು, ಹಿಂದುಳಿದವರು, ದೀನದಲಿತರು ಮುಂತಾದವರು ಚಳವಳಿಯ ಝಳದಿಂದಾಗಿ ಮೊದಲ ಬಾರಿಗೆ ತಾವಿದ್ದ ವೃತ್ತವನ್ನು ಕ್ರಮಿಸಿ ತಮ್ಮ ಭಾವನೆಗಳನ್ನು ಪ್ರಕಟಿಸುವ ಧೈರ್ಯ ತೋರಿದರು.ಸಮಾಜದ ನಾನಾ ವೃತ್ತಿಯ ಜನರನ್ನು ಈ ಚಳವಳಿ ಆಕರ್ಷಿಸಿದ ಫಲವಾಗಿ ಜಾನಪದದ ಮೇಲೆ ಅದರಲ್ಲಿಯೂ ಪ್ರಮುಖವಾಗಿ ಉತ್ತರ ಕರ್ನಾಟಕದ ಜಾನಪದದ ಮೇಲೆ ಪರಿಣಾಮ ಬೀರಿತು. ಏಕೆಂದರೆ, ಆ ಶರಣರು ಮತಧರ್ಮದಿಂದ ವೀರಶೈವರಾಗಿದ್ದರೂ ನೀತಿಯಿಂದ ಜನಪದರು. ಕಲ್ಯಾಣ ಪರಿಸರದಲ್ಲಂತೂ ಶರಣ ಚರಿತ್ರೆಗಳು ಮನೆ ಮಾತಾದವು. ಹೀಗಾಗಿ ಇಂದಿಗೂ ಬೆಳುವಲನಾಡಿನ ಜನಪದರ ಭಾವಕೋಶದಲ್ಲಿ ಅಂದಿನ ಶರಣರ ಕ್ರಾಂತಿ ಸ್ಥಾಯಿಯಾಗಿದೆ. ಶರಣಶರಣೆಯರ ಕಥೆಗಳು, ಹಂತಿಯ ಹಾಡು, ಡೊಳ್ಳಿನ ಹಾಡು, ಬಯಲಾಟ, ಡಪ್ಪಿನಾಟ ಮೊದಲಾದ ಸಂದರ್ಭಗಳಲ್ಲಿ ಸಾಹಿತ್ಯ ಪಠ್ಯವಾಗಿ ಶೋಭಿಸಿದೆ. ಜನಪದರು ಶರಣೆಯರನ್ನು ನಿರ್ವಚಿಸಿಕೊಂಡ ರೀತಿಯನ್ನು ತಿಳಿಯುವುದೇ ಪ್ರಸ್ತುತ ಬರಹದ ಉದ್ದೇಶ.

ಗಿರಿಜೆಯು ಈಶ್ವರನ ಪತ್ನಿಯಾಗಿ, ಗಣಪ ಷಣ್ಮುಖರ ಮಾತೆಯಾಗಿ ಪುರಾಣ ಕಾವ್ಯಗಳಲ್ಲಿ ಚಿತ್ರಿತಳಾಗಿರುವುದು ಸಾಮಾನ್ಯ. ಆದರೆ ಜನಪದರು ಆಕೆಯನ್ನು ಶರಣೆಯಾಗಿ ಕಲ್ಪಿಸಿಕೊಂಡಿದ್ದಾರೆ. ಶಿವನನ್ನು ಮದುವಣಗನನ್ನಾಗಿ ಕಾಣುವ ಆದಿಚುಂಚನಗಿರಿ ಭಾಗದ ತ್ರಿಪದಿಗಳಲ್ಲಿ -

ಸಿದ್ಧರ ಮಠದಲ್ಲಿ ಎದ್ದು ಬೀಸುವರ್‍ಯಾರು
ಸಿದ್ಧರ ಮಡದಿ ಶಿವಶರಣೆ ಪಾರ್ವತಿ
ಎದ್ದು ಬೀಸ್ಯಾಳು ಮಠದಲ್ಲಿ

ಎಂದು ಮುಂಜಾವಿಗೇ ಎದ್ದು ಬೀಸುವ ಕಾರ್ಯದಲ್ಲಿ ತೊಡಗುವ ತಮ್ಮ ಆವರಣದಲ್ಲಿರುವ ಹೆಣ್ಣು ಮಗಳಂತೆಯೇ ಆತ್ಮೀಯವಾಗಿ ಪಾರ್ವತಿಯನ್ನು ಕಲ್ಪಿಸಿಕೊಳ್ಳಲಾಗಿದೆ. ಕೈಲಾಸದಲ್ಲಿರುವ ಆಕೆ ಈ ಲೋಕದ ಶರಣೆಯಾಗಿ ಪಡಿಮೂಡಿರುವುದು ಇಲ್ಲಿನ ವೈಶಿಷ್ಟ್ಯ. ಜನಪದ ಸಾಹಿತ್ಯದಲ್ಲಿ ಕೆಲವು ಶರಣೆಯರು ಹೆಚ್ಚು ಪ್ರಚಲಿತ. ಅಂಥವರನ್ನು ವಿವರವಾಗಿ ನೋಡಬಹುದು.

ಕೋಳೂರು ಕೊಡಗೂಸು

ಕೋಳೂರು ಕೊಡಗೂಸಿನ ಕಥೆ ವೀರಶೈವ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧವಾದುದು. ಇದೇ ಕಥೆ ಹಂತಿ ಹಾಡು ಮತ್ತು ಡೊಳ್ಳಿನ ಹಾಡುಗಳಲ್ಲಿಯೂ ಪ್ರಕಟವಾಗಿದೆ. ಮೂಲ ವಸ್ತುವಿನಲ್ಲಿ ಭಿನ್ನತೆಯಿಲ್ಲದಿದ್ದರೂ ಕೆಲವೊಮ್ಮೆ ಡೊಳ್ಳಿನ ಹಾಡುಗಳಲ್ಲಿ ಕೊಡಗೂಸಿನ ಕಥೆಯನ್ನು ಸಂಕ್ಷಿಪ್ತವಾಗಿಯೂ ಹಾಡುವುದುಂಟು. ಶಿವದೇವನೆಂಬ ಶರಣ ಕೋಳೂರಿನ ಕಲ್ಲೇಶ್ವರ ಲಿಂಗಕ್ಕೆ ನಿತ್ಯವೂ ಹಾಲು ಸಲ್ಲಿಸುವ ಸೇವೆಯನ್ನಿಟ್ಟುಕೊಂಡಿದ್ದ. ಒಮ್ಮೆ ಕಾರ್ಯ ನಿಮಿತ್ತ ಈತ ಪರ ಊರಿಗೆ ಹೋಗಬೇಕಾಗುತ್ತದೆ. ಆಗ ಚಿಕ್ಕ ವಯಸ್ಸಿನ ಮಗಳನ್ನು ಕರೆದು ಪ್ರತಿದಿನವೂ ತಪ್ಪದಂತೆ ಕಲ್ಲೇಶ್ವರನಿಗೆ ಹಾಲು ನೈವೇದ್ಯ ಮಾಡಬೇಕೆಂದು ತಿಳಿಸಿದ. ಕಾವ್ಯಗಳಲ್ಲಿ ಈಕೆಯ ಹೆಸರು ಚೆನ್ನಕ್ಕ ಎಂದಿದೆ. ಈ ಬಾಲೆ ಹಾಲು ಕಾಯಿಸುವ, ಅದನ್ನು ಗುಡಿಗೆ ಒಯ್ಯುವ ಸಂಭ್ರಮ ಜನಪದದಲ್ಲಿಯೂ ಲವಲವಿಕೆಯಿಂದ ವರ್ಣಿತವಾಗಿದೆ. ಶಿವನ ಮುಂದೆ ಹಾಲು ಇಟ್ಟು, ಕುಡಿಯಬೇಕೆಂದು ಆಗ್ರಹಪಡಿಸುವಲ್ಲಿಯೇ ಈಕೆಯ ಮುಗ್ಧತೆ ಅಡಗಿದೆ. ಶಿವ ಕುಡಿಯದಿದ್ದಾಗ ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಆದರೆ ಆತ ಮೌನವಾಗಿದ್ದ.

> ಕಲ್ಲಿನಾಥ ನಿನ ಎದುರಿನಲ್ಲಿ ನಾ
> ಕಲ್ಲ ಹಾದು ಬಿಡುವೆನು ಪ್ರಾಣ
> ಕಲ್ಲ ಹಾದು ಬಿಡುವೆನು ಪ್ರಾಣ
> ನೀ ಹಾಲು ಕುಡಿಯದಿರೆ ಕೇಳಿನ್ನು

ಎಂದು ಪ್ರಾಣ ಕಳೆದುಕೊಳ್ಳಲು ಸಿದ್ಧಳಾದಾಗ ಶಿವ ಮೆಚ್ಚಿ ಪ್ರತ್ಯಕ್ಷನಾಗಿ ಹಾಲು ಕುಡಿಯುತ್ತಾನೆ. ಈ ಬಾಲೆಯ ಪರಿಶುದ್ಧ ಭಕ್ತಿಗೆ ಮಾರುಹೋದ ಶಿವ ಈಕೆಯ ತಂದೆ ಹಿಂದಿರುಗುವವರೆಗೂ ಹಾಲು ಕುಡಿದು ಹೋಗುತ್ತಿರುತ್ತಾನೆ. ತಂದೆ ಊರಿಗೆ ಬಂದ ಮೇಲೆ ಶಿವನು ಹಾಲು ಕುಡಿದನೆಂಬ ಸಂಗತಿಯನ್ನು ನಂಬದೆ ಇರುವುದು, ಮಗಳನ್ನು ಪರೀಕ್ಷೆಗೆ ಒಡ್ಡುವುದು, ಶಿವ ಪ್ರತ್ಯಕ್ಷನಾಗದಿರುವುದು, ಕುಪಿತನಾದ ತಂದೆಯು ಮಗಳನ್ನು ಶಿಕ್ಷಿಸಲು ಹೊರಟಾಗ ಆಕೆ ಲಿಂಗದಲ್ಲಿ ಲೀನವಾಗುವುದು, ಮಗಳನ್ನು ಎಳೆದುಕೊಳ್ಳಲು ಹೋಗಿ ಕೂದಲು ಮಾತ್ರ ಹೊರಗುಳಿಯುವುದು ಮೊದಲಾದ ಘಟನೆಗಳು ಹರಿಹರನಲ್ಲಿ ಉಕ್ತವಾಗಿರುವಂತೆಯೇ ಬಂದಿವೆ.

ಶಿವನು ಶುದ್ಧ ಭಕ್ತಿಗೆ ಒಲಿಯುವನೇ ಹೊರತು ಡಾಂಭಿಕತೆಗಲ್ಲವೆನ್ನುವುದನ್ನು ಈ ಕಥೆಯ ಮೂಲಕ ದೃಢಪಡಿಸಲಾಗಿದೆ. ಕೋಳೂರು ಕೊಡಗೂಸು ಮುಗ್ಧ ಭಕ್ತಿಯ ಪ್ರತೀಕವಾಗಿದ್ದಾಳೆ.

ಅಕ್ಕಮಹಾದೇವಿ

ಮಹಿಳೆಯ ಸ್ವಾಭಿಮಾನದ ಸಂಕೇತ ಅಕ್ಕಮಹಾದೇವಿಯ ವ್ಯಕ್ತಿತ್ವ. ಉತ್ತರ ಕರ್ನಾಟಕದ ಬಯಲಾಟಗಳಲ್ಲಿ ಶರಣರಾಟ ಎಂಬುದು ಒಂದು ಪ್ರಕಾರ. ಹೆಸರೇ ಸೂಚಿಸುವಂತೆ ಈ ಆಟದ ವಸ್ತು ಶಿವಶರಣರ ಕಥೆ. ಶಿವಾನಂದ ಕವಿಯ ಅಲ್ಲಮಪ್ರಭುವಿನ ಬಯಲಾಟದಲ್ಲಿ ಅಕ್ಕಮಹಾದೇವಿಯ ಪ್ರಸಕ್ತಿಯಿದೆ. ಇದರಲ್ಲಿ ಈಕೆಯ ಹೆಸರು ಸಾತ್ವಿಕೆ. ಈಕೆಯನ್ನು ಪರೀಕ್ಷಿಸುವಂತೆ ಅಲ್ಲಮ ಕೌಶಿಕನಿಗೆ ತಿಳಿಸುತ್ತಾನೆ. ಕೌಶಿಕ ಮತ್ತು ಸಾತ್ವಿಕೆಯ ನಡುವೆ ವಾಗ್ವಾದ ನಡೆದು ಕೌಶಿಕ

ಆಕೆಯ ಸೀರೆ ಸೆಳೆಯಲು ಹೋಗಿ ಮೂರ್ಛೆ ಹೋಗುತ್ತಾನೆ. ಎಚ್ಚೆತ್ತ ಬಳಿಕ ತನ್ನ ಕೃತ್ಯಕ್ಕೆ ಹೇಸಿ ವೈರಾಗ್ಯ ತಳೆಯುತ್ತಾನೆ ಸಾತ್ವಿಕೆ ಆತನಿಗೆ ಧರ್ಮಬೋಧೆ ಮಾಡುತ್ತಾಳೆ. ಈ ಪ್ರಸಂಗ ಬಯಲಾಟದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಇಲ್ಲಿನ ಅಲ್ಲಮ ಚಾರ್ವಾಕ ವೇಷದಲ್ಲಿ ಬಂದು ಅಕ್ಕನೊಡನೆ ವಾದಕ್ಕೆ ಇಳಿಯುತ್ತಾನೆ. ಇದರಲ್ಲಿ ಅಕ್ಕಮಹಾದೇವಿ ಯಶಸ್ವಿಯಾದಾಗ ಆತ ತನ್ನ ನಿಜರೂಪ ತೋರುತ್ತಾನೆ. ಹೀಗೆ ಬಯಲಾಟದ ಕರ್ತೃಗಳಿಂದಾಗಿ ಈಕೆಯ ಕಥೆಯಲ್ಲಿ ಕೆಲವು ಮಾರ್ಪಾಟುಗಳು ಕಂಡುಬರುತ್ತವೆ. ಅಕ್ಕಮಹಾದೇವಿಯನ್ನು ಕುರಿತು ಯಕ್ಷಗಾನ ಕೃತಿಯೂ ರಚಿತವಾಗಿದೆ.

ನೀಲಾಂಬಿಕೆ

ಗಂಗಾಂಬಿಕೆ ಮತ್ತು ನೀಲಾಂಬಿಕೆಯರು ಬಸವಣ್ಣನ ಪತ್ನಿಯರು. ಇವರಲ್ಲಿ ಗಂಗಾಂಬಿಕೆಯೇ ಮೊದಲ ಪತ್ನಿ ಎಂಬ ಸಂಗತಿ ಕಾವ್ಯಗಳಲ್ಲಿ ಸ್ಪಷ್ಟವಾಗಿದೆ. ಜನಪದದಲ್ಲಿ ಗಂಗಾಂಬಿಕೆಗಿಂತ ನೀಲಾಂಬಿಕೆಯೇ ಜನಪ್ರಿಯೆ. ನೀಲಮ್ಮ, ನೀಲವ್ವ ಎಂದು ಆತ್ಮೀಯವಾಗಿ ಕರೆಯಲಾಗಿದೆ. ಆದರೆ ಈಕೆ ಬಿಜ್ಜಳನ ಸಾಕು ತಂಗಿ ಎಂಬ ವಿಚಾರಕ್ಕೆ ಗಮನಹರಿಸಿದಂತಿಲ್ಲ. ಕೋಲಾಟದ ಪದದಲ್ಲಿ ಈಕೆಯ ಜನನ ವಿಷಯವನ್ನು ಬೇರೆ ರೀತಿಯಲ್ಲಿ ವಿವರಿಸಲಾಗಿದೆ- ಪಾರವ್ವ ಎಂಬಾಕೆಯ ಕೂಸು ನೀಲವ್ವ. ಇದು ಹತ್ತು ತಿಂಗಳ ಶಿಶುವಾಗಿದ್ದಾಗ ಹೊಸ್ತಿಲ ಮೇಲೆ ಆಟವಾಡುತ್ತಿದ್ದುದನ್ನು ಕಂಡ ಬಸವಣ್ಣ ಮುತ್ತಿನ ಬಟ್ಟು ಇಟ್ಟು, ಪಾರವ್ವ ನೀರು ತರಲು ಹೋದಾಗ ಮಗುವನ್ನು ಒಯ್ಯುತ್ತಾನೆ. ಪಾರವ್ವ ಮಗುವನ್ನು ಕಾಣದೆ ಪಟ್ಟೆ ಸೀರೆ ಉಟ್ಟು ಬಂಗಾರದ ಒಡವೆ ಧರಿಸಲಿಲ್ಲ ನನ್ನ ಮಗಳು ಎಂದು ದುಃಖಿಸುವಳು. ಈ ಹಾಡಿನಲ್ಲಿ ಶಿಶುವಿವಾಹದ ಸೂಚನೆಯಿದೆ. ಹತ್ತು ತಿಂಗಳ ಶಿಶು ಯುವತಿಯಾಗಿ ಬೆಳೆದ ರೀತಿಯನ್ನು ವಿವರಿಸದೆ ಕಥೆಯನ್ನು ಒಂದೇ ಓಟದಲ್ಲಿ ಮುಂದುವರೆಸಲಾಗಿದೆ. ಬಸವಣ್ಣ 'ನಿಸ್ತ್ರೀ ನಾನು ನಿನಗೆ ವರವೇನು" ಎಂದು ನೀಲವ್ವನನ್ನು ಕೇಳುವಲ್ಲಿ ಹೆಣ್ಣಿನ ಅಭಿಪ್ರಾಯಕ್ಕೂ ಮಾನ್ಯತೆ ನೀಡಬೇಕೆಂಬ ಅರಿವಿದೆ. "ವರ ಆದರೆ ಆಯಿತು ಸರಿ, ಆದರೆ ಆಯಿತು ಶಿವಗಿರಿ ಹತ್ತಿರಿ"ಎಂದು ಆಕೆ ಭವಿಷ್ಯದ ಬಗ್ಗೆ ಯೋಚಿಸಿದಂತಿದೆ. ಇಲ್ಲಿ ಜನಪದ ಕವಿ ಬಸವಣ್ಣ ಮತ್ತು ನೀಲವ್ವರನ್ನು ಶಿವಪಾರ್ವತಿಗೆ ಸಮೀಕರಿಸಿದಂತೆ ತೋರುತ್ತದೆ. ಬಸವಣ್ಣ ತನ್ನ ಅಕ್ಕನಲ್ಲಿ "ಭಿಕ್ಷೆಗೆ ಹೋಗಿದ್ದೆ ಬೆನ್ನ ಹಿಂದೆ ನಾರಿ ಬಂದಳು" ಎಂದು ಹೇಳುವ ರೀತಿಯಲ್ಲಿ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ನೋಡುವ ದೃಷ್ಟಿ ಅಡಗಿದೆ. ಈ ಹಾಡಿನಲ್ಲಿ ನೀಲಾಂಬಿಕೆಯ ಸಾಧನೆಗಳು ವ್ಯಕ್ತವಾಗದಿದ್ದರೂ ಬಸವಣ್ಣ ಆಕೆಯನ್ನು ಪ್ರೇಮಿಸಿ ವಿವಾಹವಾದಂತಿದೆ.

ಬಿಜ್ಜಮಹಾದೇವಿ

ಹಂತಿಯ ಹಾಡುಗಳಲ್ಲಿ ಬಿಜ್ಜಮಹಾದೇವಿಯನ್ನು ಕೊಂಡಾಡಲಾಗಿದೆ. ಈಕೆ ವಚನಗಾರ್ತಿ ಎಂಬ ಅಂಶ ವೀರಶೈವ ಸಾಹಿತ್ಯದಿಂದ ತಿಳಿದುಬರುತ್ತದೆ. ಇವಳು ವಿವಾಹವಾದ ತಿಂಗಳೊಳಗೆ ತಂದೆ ತಾಯಿ ಮತ್ತು ಗಂಡನನ್ನು ಕಳೆದುಕೊಂಡು ಕಷ್ಟಕಾರ್ಪಣ್ಯಕ್ಕೆ ಸಿಲುಕಿ ವೀರಶೈವ ದೀಕ್ಷೆ ಪಡೆದು ಮುಕ್ತಿ ಬಯಸಿದವಳು. ಬಿಜ್ಜಮಹಾದೇವಿ ಎಷ್ಟು ಅಂತಃಕರಣವುಳ್ಳ ಶರಣೆಯೆಂದರೆ ಶಿವ ಪರದೇಶಿ, ಅನಾಥ ಎಂಬುದನ್ನು ಕೇಳಿ ಆತನಿಗೆ ತಾಯಿಯಾಗಬಯಸುತ್ತಾಳೆ. ಈ ಕಾರಣವಾಗಿ ಅಮ್ಮವ್ವೆ ಎಂಬ ಪರ್ಯಾಯನಾಮವೂ ಬಂದಿದೆ. ಶಿವನು ಶಿಶುವಾಗಿ ಅರಣ್ಯದಲ್ಲಿ

ರೋದಿಸುತ್ತಿರುವಾಗ

ಏಳು ಸೂರ್ಯರ ಬೆಳಕ ಹೇಳಿ ಹೀಯಾಳಿಸಿತು
ಭಾಳ ಲೋಚನನ ಶಿಶುರೂಪ ಶಿವಶರಣೆ
ತಾಳಿ ತಾಯ್ತನದ ಹಾಲುಣಿಸಿ

ಎಂದು ಜೈವಿಕ ತಾಯಿಯಂತೆಯೇ ಸಮಾಧಾನಪಡಿಸಿ ಶಿವನನ್ನು ಮುದ್ದಿಸುತ್ತ ಮಾತೃ ಮಮತೆಯನ್ನು ಧಾರೆ ಎರೆಯುತ್ತಾಳೆ. ಈ ಶಿಶು ಸಾಮಾನ್ಯ ಶಿಶುವಲ್ಲ. ಹಾಗಾಗಿ ಹೆಂಗಳೆಯರು ರತ್ನ ಮುತ್ತುಗಳ ಹಗ್ಗದಿಂದ ಚಿನ್ನದ ತೊಟ್ಟಿಲು ಕಟ್ಟಿ, ತೂಗುವ, ತಾಯಿ ಬಿಜ್ಜಮಹಾದೇವಿಯನ್ನು ಕಂಬಳಿಯ ಮೇಲೆ ಕುಳ್ಳಿರಿಸಿ ಸೇಸಕ್ಕಿ ಇಡುವ ಸಾಂಪ್ರದಾಯಿಕ ಶಾಸ್ತ್ರಗಳನ್ನು ಜರುಗಿಸಿ, ಮಗುವಿಗೆ ಆಭರಣಗಳನ್ನು ತೊಡಿಸುವುದು. ಕಣ್ಣಿಗೆ ಕಾಡಿಗೆ ಹಚ್ಚುವುದು ಮೊದಲಾದ ಅಲಂಕಾರ ಮಾಡಿ ದೃಷ್ಟಿ ತೆಗೆಯುತ್ತಾರೆ.

ಶಿವನಿಗೆ ಬಿಜ್ಜಮಹಾದೇವಿಯ ಭಕ್ತಿಯನ್ನು ಒರೆ ಹಚ್ಚುವ ಹಂಬಲ. ಆದುದರಿಂದ ಶಿಶು ಬೇನೆ ಬಂದಂತೆ ನಟಿಸಿದಾಗ ಈಕೆ ಆತಂಕಗೊಳ್ಳುತ್ತಾಳೆ. ಯಂತ್ರ ಮಂತ್ರ ಹಾಕಿಸಿ ಸಿದ್ಧರು ಬುಡುಬುಡುಕೆಗಳನ್ನೆಲ್ಲ ಕರೆಸುವುದಲ್ಲದೆ ಸಟವಿ ದೇವತೆಗೆ ಹರಕೆ ಕಟ್ಟಿಕೊಳ್ಳುತ್ತಾಳೆ. ಆದರೂ ರೋಗ ಉಲ್ಬಣಿಸಿದಾಗ-

ಗೋ ಹಾರಿದೆನು ಶಿವನೆ
ಛೀ ಹೋಗಲಿ ಜೀವ
ಭೋ ಹೇಳೆಂದು ಉಪ್ಪರಗಿ ಮೇಲಿಂದ
ಹಾ ಹೋ ಕಾಲವೆ ಶಿವಲಿಂಗ

ಎಂದು ತನ್ನ ತಲೆ ಕತ್ತರಿಸಿಕೊಳ್ಳಲು ಮುಂದಾದಾಗ ಶಿವ ಪ್ರತ್ಯಕ್ಷನಾಗುವುದು ಕೂಡ ಕಾವ್ಯಗಳು ನಿರೂಪಿಸುವ ಕಥೆಗಿಂತ ಭಿನ್ನವಾಗಿಲ್ಲ. ಅಲ್ಲಿ ಆಕೆಯ ಪ್ರೀತಿಯ ಪರಾಕಾಷ್ಠತೆಯನ್ನು ಗ್ರಹಿಸಬಹುದು. ಹಂತಿಯ ಹಾಡಿನ ಅಂತ್ಯದಲ್ಲಿ ಬರುವ-

ಶಿವಶರಣೆ ನಿನ್ನಾಡ ಭವದೊಳಗೆ ಹಾಡುವುದು
ಶಿವಪದಕೆ ಮಿಗಿಲು ನಿತ್ಯದಲಿ ಕೊನೆಯುಂಟೆ
ಶಿವಭಕ್ತಿಸಾರ ತಿಳಿಸುದಕೆ

ಎಂಬ ನುಡಿಗಳು ಈಕೆಯ ವ್ಯಕ್ತಿತ್ವವನ್ನು ಜನಪದರು ಗ್ರಹಿಸಿದ ಬಗೆಗೆ ಸಾಕ್ಷಿಯಾಗಿದೆ.

ಕಲ್ಯಾಣಮ್ಮ

ಈಕೆಗೆ ಸಂಬಂಧಿಸಿದಂತೆ ಪ್ರತ್ಯೇಕ ಹಾಡುಗಳು ಸದ್ಯದಲ್ಲಿ ಕಂಡುಬಂದಿಲ್ಲವಾದರೂ ಹರಳಯ್ಯನ ಮೇಲಿರುವ ಹಂತಿಯ ಹಾಡಿನಲ್ಲಿ ಈಕೆಯ ಪ್ರಸ್ತಾಪ ಸಂಕ್ಷಿಪ್ತವಾಗಿಯಾದರೂ ಆಗಿದೆ. ವೀರಶೈವ ಕಾವ್ಯಗಳಲ್ಲಿ ಈಕೆಯ ಪಾತ್ರ ಪ್ರಧಾನವಾಗಿಲ್ಲ. ಹಂತಿಯ ಪದಗಳು ಈಕೆಯನ್ನು ಜಂಗಮ ಸಮೂಹಕ್ಕೆ ಹಡೆದವ್ವ ಎಂದು ಬಣ್ಣಿಸಿದ್ದು ಆಕೆಯ ವಾತ್ಸಲ್ಯ ಮತ್ತು ಜಂಗಮ ಸೇವೆಯನ್ನು ಧ್ವನಿಸುತ್ತದೆ. ಒಮ್ಮೆ ಹರಳಯ್ಯ ಬಸವಣ್ಣನಿಗೆ ಶರಣು ಎಂದಾಗ ಆತ ಶರಣು ಶರಣು ಎಂದು

ಪ್ರತಿವಂದಿಸುತ್ತಾನೆ. ಬಸವಣ್ಣ ಒಂದು ಶರಣು ಹೆಚ್ಚಾಗಿ ಹೇಳಿದ ಆತನ ಋಣ ತೀರಿಸುವುದು ಹೇಗೆಂಬ ಚಿಂತೆ ಹರಳಯ್ಯನನ್ನು ಕಾಡುತ್ತದೆ. ಆಗ ಕಲ್ಯಾಣಮ್ಮ ಒಂದು ಜೊತೆ ಪಾದರಕ್ಷೆ ಮಾಡಿ ಬಸವಣ್ಣನಿಗೆ ಅರ್ಪಿಸಿರೆಂದು ಸಲಹೆ ನೀಡುವುದು ಈಕೆಯ ಜಾಣ್ಮೆಯನ್ನು ತೋರಿಸುತ್ತದೆ. ಈಕೆಗೂ ಬಸವಣ್ಣನೆಂದರೆ ಅಪಾರ ಗೌರವ. ಹರಳಯ್ಯ ತನ್ನ ಬಲದೊಡೆಯನ್ನೂ ಹೆಂಡತಿಯ ಎಡದೊಡೆಯನ್ನೂ ಕೊಯ್ದು ಒಣಗಿಸಿ ಹದಮಾಡಿ ಸುಂದರವಾದ ಪಾದರಕ್ಷೆಗಳನ್ನು ಸಿದ್ಧಪಡಿಸಿದಾಗಲೂ ವಿಚಲಿತಳಾಗುವುದಿಲ್ಲ. ಈ ಜೋಡುಗಳನ್ನು ಮಧುವಯ್ಯ ಮೆಟ್ಟಲು ಹೋಗಿ ಕುಷ್ಠರೋಗ ಪೀಡಿತನಾಗುವ ಮೂಲಕ ಹರಳಯ್ಯನ ಕಥೆ ವಿಭಿನ್ನ ಜಾಡು ಹಿಡಿಯುತ್ತದೆ. ಜನಪದದಲ್ಲಿ ಕಂಡುಬರುವ ಕಲ್ಯಾಣಮ್ಮ ಅನುಕೂಲಸತಿಯಾಗಿ ಪತಿಯ ಮಾರ್ಗದಲ್ಲಿಯೇ ನಡೆದು ಜಂಗಮ ಸೇವೆ ಮಾಡುತ್ತ ಜೀವನದಲ್ಲಿ ಸಾರ್ಥಕತೆ ಪಡೆದಿದ್ದಾಳೆ.

ಮಾದೇವಿ

ಹರಳಯ್ಯನ ಹಾಡಿನಲ್ಲಿ ಎಡೆಪಡೆದ ಮಾದೇವಿ ಸಾಹಿತ್ಯಿಕವಾಗಿಯೂ ದಾಖಲಾಗಿದ್ದಾಳೆ. ಶರಣರ ಮನೆಗೆ ನೀರು ಹೊತ್ತು ತರುವುದು ಈಕೆಯ ಕಾಯಕ.

> ಕರೆಸಿ ಹೇಳಿದರವರು ಹಿರಿಯ ದಾದಿಯನಂದು
> ಪರಮ ಶಿವಭಕ್ತಳಾ ದಾದಿ ಮಾದೇವಿ
> ಹರನೆಂದು ನೆನೆಸಿ ನೀರೆರೆದು

ಹೀಗೆ ಪರಮ ಶಿವಭಕ್ತಳಾಗಿದ್ದಳು. ಮಧುವರಸನ ಮನೆಗೆ ನೀರು ತುಂಬುತ್ತಿದ್ದ ಈಕೆ ಒಂದು ದಿನ ಕತ್ತಲಾಯಿತೆಂದು ದೂರ ಹೋಗಲಾರದೆ ಹರಳಯ್ಯ ಬಳಸಿದ ನೀರಿನ ಮಡುವಿನಲ್ಲಿ ನಿಂತ ನೀರನ್ನೇ ತೆಗೆದುಕೊಂಡು ಬಂದು ಮಧುವರಸನ ಮನೆಯ ಹಂಡೆಗೆ ತುಂಬಿಸಿದಳು. ಇದನ್ನರಿಯದೆ ಮಿಂದ ಆತನಿಗೆ ಹಾವುಗೆ ಮೆಟ್ಟಿದ್ದ ತಾಪ ಶಮನಗೊಳ್ಳುತ್ತದೆ. ಹರಳಯ್ಯನ ಹಿರಿಮೆಯನ್ನು ಸಾರಲು ರೂಪುಗೊಂಡಿದ್ದರೂ ಆ ಕಾಲದಲ್ಲಿ ಶರಣರ ಒಡನಾಟದಲ್ಲಿ ಮಾದೇವಿಯಂಥ ಊಳಿಗದವಳು ಕೂಡ ಆಧ್ಯಾತ್ಮ ಸಾಧನೆಯಲ್ಲಿ ತೊಡಗಲು ಸಾಧ್ಯವಾಯಿತು.

ಮಲ್ಲಿಗಮ್ಮ

ಮಾಚಯ್ಯನ ಪತ್ನಿಯಾದ ಮಲ್ಲಿಗಮ್ಮ ಮಾಚಯ್ಯನ ಹಾಡಿನಲ್ಲಿ ಪ್ರಾಸಂಗಿಕವಾಗಿ ಹಾದು ಹೋಗುತ್ತಾಳೆ. ಈಕೆಗೆ ಕಾಯಕತತ್ವದಲ್ಲಿ ಅಮಿತವಾದ ಭಕ್ತಿ ವಿಶ್ವಾಸ. ಹಾಗಾಗಿ ಪ್ರಾಣತೆತ್ತು ಪತಿಯ ಕಾಯಕಕ್ಕೆ ಕುಂದುಂಟಾಗದಿರುವಂತೆ ನೋಡಿಕೊಳ್ಳುತ್ತಾಳೆ. ಮಾಚಯ್ಯ ಬಿಜ್ಜಳನ ಬಟ್ಟೆ ಒಗೆಯಲು ನಿರಾಕರಿಸಿದ್ದರಿಂದ ಎಲ್ಲ ಕೆರೆ ತೊರೆಗಳಿಗೂ ಕಾವಲು ಹಾಕಿ ಬಟ್ಟೆ ಒಗೆಯಲು ಅಡ್ಡಿಯುಂಟುಮಾಡುತ್ತಾನೆ. ಜಂಗಮರಿಗೆ ಮಡಿ ಬಟ್ಟೆ ಕೊಡುವುದು ಹೇಗೆಂದು ಮಾಚಯ್ಯ ಯೋಚಿಸುತ್ತಿರುವಾಗ ಮಲ್ಲಿಗಮ್ಮ ನನ್ನನ್ನೇ ಹಿಂಡಿ ಒಗೆದು ಕಾಯಕ ಮಾಡಿರೆಂದು ಹೇಳುವುದು ದಿಟ್ಟತನದ ಪ್ರತೀಕ-

> ಹಿಡಿದಿ ಹಾಸಿದ ಮಾಚ ಮಡದಿಯೆದೆ ತಾ ಕೊಯ್ದು
> ಒಡನೆ ಬಲುಚಿಮ್ಮಿ ಬಿಸಿರಗುತ ಹೊಳೆಯಾಗಿ
> ಮಡುಗಟ್ಟಿ ನೀರ ಕೆರೆಯಾತು

ಹೀಗೆ ಪತಿಯ ಕಾಯಕ ನಿಷ್ಠೆಗೆ ಎಡೆಕೊಟ್ಟು ಪ್ರಾಣಾರ್ಪಣೆ ಮಾಡಿದ ಸಾಧ್ವಿ ಈಕೆ. ಆ ಮಡು ಕಲ್ಯಾಣದಲ್ಲಿ ಮಾಚಯ್ಯನ ಕೆರೆ ಎಂದು ಹೆಸರಾಗಿದ್ದರೂ ಇದರಲ್ಲಿ ಪ್ರಾಣತೆತ್ತು ಲೋಕದ ಕಣ್ಣಿಗೆ ಅದೃಶ್ಯಳಾಗಿ ಉಳಿದವಳು ಮಲ್ಲಿಗಮ್ಮ. ಸತಿಯ ಸಾಧನೆಯನ್ನು ಪತಿಯ ಮೂಲಕವೇ ನೋಡುತ್ತಿದ್ದ ಸಮಾಜದ ಮನೋಧರ್ಮಕ್ಕೆ ಕನ್ನಡಿ ಹಿಡಿಯುವಂತಿದೆ.

ಸಾತವ್ವ

ಈಕೆ ಮೇದರ ಕೇತಯ್ಯನ ಮಡದಿ. ನಿತ್ಯವೂ ಮೊರ ಹೆಣೆದು ಪೇಟೆಗೆ ತೆಗೆದುಕೊಂಡು ಹೋಗಿ ವಿಕ್ರಯಿಸಿ ಸಿಕ್ಕಿದ ಅಲ್ಪ ಹಣದಲ್ಲಿಯೇ ಜಂಗಮ ದಾಸೋಹ ಮಾಡುತ್ತಿದ್ದ ಉದಾರಿ. ಮೇದರ ಕೇತಯ್ಯನ ಹಾಡಿನಲ್ಲಿ ಈಕೆಯ ವೃತ್ತಾಂತ ಕ್ವಚಿತ್ತಾಗಿಯಾದರೂ ಕಾಣಿಸಿಕೊಂಡಿದೆ. ವೀರಶೈವ ಕಾವ್ಯಗಳಲ್ಲಿ ಮೇದರ ಕೇತಯ್ಯ ಬಿದಿರು ಕಡಿಯಲು ಹೋದಾಗ ಶಿವ ಹೊನ್ನು ಸುರಿಯುವಂತೆ ಮಾಡುವುದು, ಈತ ಹೊನ್ನು ಸುರಿಯುವ ಗಿಡವನ್ನು ಬಿಟ್ಟು ಎತ್ತರದ ಗಿಡವೇರಿ ಕಡಿಯುವಾಗ ಕಾಲು ಜಾರಿ ಕೆಳಗೆ ಬಿದ್ದು ಅಸುನೀಗುವುದಿದೆ. ಜನಪದದಲ್ಲಿ ಈತನಿಗೆ ನಂದಾದೀಪದ ಕಾಯಕ. ಇಲ್ಲಿ ದೀಪ ನಂದುವುದೆಂದು ಈತ ಖಿಡ್ಗದ ಮೇಲೆ ಬಿದ್ದಾಗ ಮುರಿದ ಅಲಗನ್ನು ಸಾತವ್ವನಿಂದಲೇ ಕೀಳಿಸಿಕೊಂಡು ಗತಪ್ರಾಣನಾಗುತ್ತಾನೆ. ಸಾತವ್ವ ಶೋಕಭರಿತಳಾಗಿ "ಶರೀರ ವಿಲ್ಲದೆ ಲಿಂಗಭಂಗ ನಿನಗ ಹೇಗೆ? ನೀನು ಶಿವಬೆಳಕು, ನಿನ್ನೊಡನೆ ಸಂಗಮ ಸೇರಿದನು" ಎಂದು ರೋದಿಸುತ್ತಾಳೆ. ಈಕೆಯ ಮಾತುಗಳು ಅನುಭಾವಿಯ ನುಡಿಗಳಂತಿವೆ.

ದಾನವ್ವ

ಶರಣ ಅಮುಗಯ್ಯನ ಮಡದಿಯಾದ ದಾನವ್ವನ ವೃತ್ತಾಂತ ಕಾವ್ಯ ಮತ್ತು ಜನಪದ ಸಾಹಿತ್ಯದಲ್ಲಿ ಏಕರೀತಿಯಲ್ಲಿದೆ. ಅಮುಗಯ್ಯ ತನ್ನ ಊರು ಬಿಟ್ಟು ಕಲ್ಯಾಣಕ್ಕೆ ಹೋಗಲು ನಿರ್ಧರಿಸಿ ಗಂಟುಮೂಟೆ ಕಟ್ಟುವಾಗ ದಾನವ್ವನ ಪ್ರಸಕ್ತಿ ಬರುತ್ತದೆ. ಅಮುಗಯ್ಯ ಮೂರು ಹೊರೆ ಮಾಡಿ ಒಂದನ್ನು ತಾನು ಹೊತ್ತು ಇನ್ನೊಂದನ್ನು ದಾನವ್ವನಿಗೆ ಹೊರಿಸುತ್ತಾನೆ. ಆಗ ದಾನವ್ವ ಮೂರನೇ ಹೊರೆಯನ್ನು ಯಾರು ಹೊರಬೇಕೆಂದು ಕೇಳುತ್ತಾಳೆ. ಮೂರನೆಯದನ್ನು ಶಿವ ತರುತ್ತಾನೆ ಎಂದು ಅಮುಗಯ್ಯ ಶಿವಪುರ ತಲುಪಿದಾಗ ಅಲ್ಲಿ ಮೂರನೇ ಹೊರೆ ಇರುತ್ತದೆ. ಮುಂದೆ ಈತನ ಕಥೆಯೇ ಚಾಲನೆ ಪಡೆದರೂ ದಾನವ್ವ ಶಿವಭಕ್ತೆಯಾಗಿದ್ದಳೆಂದೂ ಶಿವ ಈ ದಂಪತಿಗಳಿಗೆ ಒಲಿದಿದ್ದನೆಂದು ಅರಿಯಬಹುದಾಗಿದೆ.

ಕೇತಲದೇವಿ

ಕುಂಬಾರ ಗುಂಡಯ್ಯನ ಪತ್ನಿ ಕೇತಲ ದೇವಿ. ವೀರಶೈವ ಕಾವ್ಯಗಳ ಪ್ರಕಾರ ಲಿಂಗಕ್ಕೆ ಪಾವುಡ ಹಾಕುವುದು ಈಕೆಯ ನಿಯಮ. ಒಮ್ಮೆ ವಸ್ತ್ರ ದೊರೆಯದಿದ್ದಾಗ ತನ್ನ ಚರ್ಮವನ್ನೇ ತೆಗೆದು ಪಾವುಡದಂತೆ ಧರಿಸಿದಳೆಂದು ನಿರೂಪಿಸಲಾಗಿದೆ.

ಜನಪದ ಗುಂಡಯ್ಯನ ಹಾಡಿನಲ್ಲಿ ಕೇತಲದೇವಿಯ ವಿಚಾರ ಒಂದು ತ್ರಿಪದಿಯಲ್ಲಿ ಮಿಂಚಿ ಮಾಯವಾಗುತ್ತದೆ -

ಮಡದಿ ಕೇತಲ ದೇವಿ ಒಡನಾಡಿ ಗುಂಡನಿಗೆ
ಎಡೆಬಿಡದೆ ಸೇವೆ ಮಾಡುತಲಿ ಬತ್ತಿಯೊಳು
ಬಿಡದೇರಿ ಎಣ್ಣೆಯುರಿದಂತೆ

ಎಂಬುದರಿಂದ ಈಕೆ ಪತಿಯ ಸಾಧನೆಯಲ್ಲಿ ಒತ್ತಾಸೆಯಾಗಿದ್ದಳೆಂದು, ಆತನ ಅಧ್ಯಾತ್ಮಿಕ ಬದುಕಿನಲ್ಲಿಯೂ ಮಹತ್ವದ ಪಾತ್ರ ವಹಿಸಿರಬೇಕೆಂದು ಊಹಿಸಬಹುದು.

ಗಂಗಾದೇವಿ

ಮಾದಾರ ಚೆನ್ನಯ್ಯನ ಸಹಧರ್ಮಿಣಿ ಗಂಗಾದೇವಿ. ಇವರಿಬ್ಬರ ದಾಂಪತ್ಯ ಅನ್ಯೋನ್ಯ. ಈ ಬಗ್ಗೆ ಜನಪದ ಕವಿ-

ಗಂಡ ಭಕ್ತನು ಹಣತೆ ಹೆಂಡತಿಯು ಶಿವ ಬತ್ತಿ
ಉಂಡ ಬಾಳುವೆಯು ಹಣತೆಣ್ಣೆ ಕಾಯಕವು
ಕಂಡ ಶಿವಬೆಳಕು ಜಗದೊಳಗೆ

ಎಂದು ಸೊಗಸಾಗಿ ವರ್ಣಿಸಿದ್ದಾನೆ. ಒಮ್ಮೆ ಶಿವ ಚೆನ್ನಯ್ಯನ ಭಕ್ತಿಗೆ ಮೆಚ್ಚಿ ಅವನ ಮೈಯಲ್ಲಿ ಬೆರೆಯುತ್ತಾನೆ. ಗಂಗಾದೇವಿಗೆ ಇದರ ಅರಿವಾಗದೆ ಗಂಡ ಹೊರೆ ಹೊತ್ತು ದಣಿದಿದ್ದಾನೆಂದು ಅಡುಗೆ ಮಾಡಲು ಹೊರಟಳು. ಮನೆಯಲ್ಲಿ ಸ್ವಲ್ಪವೇ ಜೋಳ ಬಿಟ್ಟರೆ ಬೇರೇನೂ ಇರಲಿಲ್ಲ. ಆಗ ಶಿವನನ್ನು ಧ್ಯಾನಿಸುತ್ತ ಆ ಜೋಳವನ್ನೇ ಬೀಸಿ ಅಂಬಲಿ ಸಿದ್ಧಪಡಿಸಿ ಗಂಡನಿಗೆ ನೀಡಿದಳು. ಆತ ಒಂದಿಷ್ಟು ಬಿಡದಂತೆ ಸಂಪೂರ್ಣ ಕುಡಿದ. ಶಿವನಿಗೆ ಎಡೆ ಮಾಡಲು ಅಂಬಲಿ ಇಲ್ಲವಲ್ಲವೆಂದು ಯೋಚಿಸುತ್ತಿರುವಾಗ ಆತ ಪ್ರತ್ಯಕ್ಷನಾಗಿ ನಿಜರೂಪು ತೋರುತ್ತಾನೆ. ಹೀಗೆ ಗಂಗಾದೇವಿ ಪತಿಯ ಮೂಲಕವೇ ಶಿವನನ್ನು ಕಾಣುತ್ತಾಳೆ.

ಚಂಗಳವ್ವ

ಸಿರಿಯಾಳ ಸೆಟ್ಟಿಯ ಕಥೆ ವೀರಶೈವ ಸಾಹಿತ್ಯದಲ್ಲಿ ಬಹಳ ಪ್ರಸಿದ್ಧವಾದುದು. ಇದರಲ್ಲಿನ ಒಂದು ಪಾತ್ರವಾದ ಚಂಗಳೆಯನ್ನು ಡೊಳ್ಳಿನ ಹಾಡುಗಳಲ್ಲಿ ಶ್ಲಾಘಿಸಲಾಗಿದೆ. ಶಿವ ಒಂದು ದಿನ ಊರಾಡಲು ಹೋಗಿ ಚಂಗಳೆಯ ಮನೆಯಲ್ಲಿಯೂ ಬೇಡುತ್ತಾನೆ. ಆಕೆ ಈ ಜಂಗಮರೂಪಿಗೆ ಕೊಡಲು ಮುತ್ತು ರತ್ನವನ್ನೇ ಮೊರದಲ್ಲಿ ತರುತ್ತಾಳೆ. ಇದು ಆಕೆಯ ಸಿರಿವಂತಿಕೆಯನ್ನೂ ಸೂಚಿಸುತ್ತದೆ. ಭಕ್ತಳನ್ನು ಪರೀಕ್ಷಿಸುವ ಉದ್ದೇಶವಿರುವ ಶಿವನಿಗೆ ಮುತ್ತು ರತ್ನವಾಗಲಿ ಬೆಳ್ಳಿ ಬಂಗಾರವಾಗಲಿ ಬೇಡವಾಗಿದೆ. ನಮಗೆ ಇದಾವುದೂ ಕಡಿಮೆಯಿಲ್ಲವೆಂದು ಶಿವ 'ಹಸಿವಾಗಿದೆ ನಿಮ್ಮ ಮಗನನ್ನು ಪಲ್ಲೇದ ಮಾಡಿ ಕೊಡಬೇಕು' ಎಂದು ಆಘಾತಕರವಾದ ಬೇಡಿಕೆಯನ್ನೇ ಮುಂದಿಡುತ್ತಾನೆ. ಚಂಗಳವ್ವೆಗೆ ಸಹಜವಾಗಿ ದುಃಖವಾದರೂ ಬಹುಬೇಗ ಚೇತರಿಸಿಕೊಂಡು ಕೊಟ್ಟ ಮಾತನ್ನು ನಡೆಸಿಕೊಡುವತ್ತ ಯೋಚಿಸುತ್ತಾಳೆ. ಶಿವನ ಅಣತಿಯಂತೆ ಶಾಲೆಗೆ ಹೋಗಿದ್ದ ಮಗನನ್ನು ಕರೆತಂದು ಆತನ ಕುತ್ತಿಗೆ ಕತ್ತರಿಸಿ, ಈಳಿಗೆ ಮಣೆಯಲ್ಲಿ ಸಣ್ಣಗೆ ಹೆಚ್ಚಿ, ತಾಮ್ರದ ತಪ್ಪಲೆಯಲ್ಲಿ ಬೇಯಿಸಿ, ಉಪ್ಪುಕಾರ ಹಾಕಿ ಅಡುಗೆ ಮಾಡುವುದು ನರಭಕ್ಷಣೆಯ ಆದಿ ಕಾಲದ ಪಳೆಯುಳಿಕೆಯಾಗಿದೆ. ಚಂಗಳೆ ಊಟ ಬಡಿಸಿದಾಗ ಶಿವ ಆಕೆಗೆ ನಿನ್ನ ಮಗನೂ 'ಬಿನ್ನಾಯ' ಮಾಡಲಿ ಕರೆ ಎನ್ನುತ್ತಾನೆ. ನನಗಿರುವುದು ಒಬ್ಬನೇ ಮಗ ಎಂದರೂ ಆತ ಶಾಲೆಗೆ ಹೋಗಿ ಕರೆದುಕೊಂಡು ಬಾ ಎಂದು ಹಟ ಹಿಡಿಯುತ್ತಾನೆ. ಆಕೆ ಶಾಲೆಗೆ ಹೋಗಿ ಚೀಲಾಳ ಎಂದಾಗ ಮಗ ಓಡಿ ಬಂದು ಅಚ್ಚರಿ ಮೂಡಿಸುತ್ತಾನೆ. ಹೀಗೆ ಚಂಗಳೆ ಶಿವನ ಪರೀಕ್ಷೆಯನ್ನು ದಿಟ್ಟೆಯಾಗಿ

ಎದುರಿಸಿದಾಗ " ಏನ ಬೇಡತಿ ಬೇಡು, ಬೇಡಿದ ಭಾಗ್ಯ ಕೊಡುತ್ತೇನೆ " ಎಂದು ಭಕ್ತೆಗೆ ಮಣಿಯುತ್ತಾನೆ. ಚಂಗಳವ್ವ ಯಾವ ಸಿರಿಸಂಪತ್ತನ್ನು ಆಶಿಸದೆ ಗುರುವಿನ ಆಸರೆ ಬೇಡುವುದು ಆಕೆಯ ಪಕ್ವ ಮನಸ್ಸಿನ ಪ್ರತಿಬಿಂಬ.

ಅನಲಾಯಿ

ಪಾತಿವ್ರತ್ಯಕ್ಕೆ ಮತ್ತೊಂದು ಹೆಸರೇ ಅನಲಾಯಿ ಎಂಬಂತೆ ಡೊಳ್ಳಿನ ಈಕೆಯ ಕಥೆ ಬಿತ್ತರಗೊಂಡಿದೆ. ಈಕೆ ತ್ಯಾಗ ಔದಾರ್ಯ ಕಷ್ಟ ಸಹಿಷ್ಣುತೆಗಳಿಂದ ಆದರ್ಶ ಶರಣೆಯಾಗಿ ಚಿತ್ರಿತಳಾಗಿದ್ದಾಳೆ. ಈಕೆಗೆ ಬಾಲ್ಯದಲ್ಲಿಯೇ ಭಕ್ತಿಯ ಬೀಜ ಮೊಳಕೆಯೊಡೆದಿರುತ್ತದೆ. ತಾಯಿ ಅನಸೂಯ ಮದುವೆಯ ಪ್ರಸ್ತಾಪ ಮಾಡಿದಾಗ "ಮದುವೆಯಲ್ಲಿ ಸುಖವಿಲ್ಲವ್ವ ದೇವರ ಸೇವೆ ಮಾಡಿ ಮುಕ್ತಿ ಹೊಂದುತ್ತೇನೆ" ಎಂದು ಮದುವೆಗೆ ವಿರೋಧಿಸಿ, ಮನೆಯನ್ನು ತ್ಯಜಿಸಿ, ನಿರಾಹಾರಿಯಾಗಿ ಪಾರ್ವತಿಯನ್ನು ಕುರಿತು ತಪಸ್ಸು ಮಾಡುತ್ತಾಳೆ. ಈಕೆಯ ತಪಃಶಕ್ತಿಯಿಂದ ವನ ಹೊತ್ತಿ ಉರಿಯುತ್ತದೆ. ಆಗ ತಾಯಿ ಅನಸೂಯೆ ತನ್ನ ಗಂಡನ ಪಾದೋದಕವನ್ನು ತಳಿದು ತಾಪವನ್ನು ನಂದಿಸುತ್ತಾಳೆ. ಅನಲಾಯಿಗೆ ತಪಸ್ಸು ತ್ಯಜಿಸಿ ಮನೆಗೆ ಹೋಗಿ ಹೆಳವನನ್ನು ಮದುವೆಯಾಗುವಂತೆ ಅಶರೀರವಾಣಿಯಾಗುತ್ತದೆ. ಅದರಂತೆ ಆಕೆ ಹೆಳವನನ್ನು ಕೈ ಹಿಡಿದು ಆತನ ಸೇವೆಯಲ್ಲಿ ನಿರತಳಾಗುತ್ತಾಳೆ. ಒಮ್ಮೆ ಗಂಡನನ್ನು ಹೊತ್ತು ನಡೆಯುತ್ತಿರುವಾಗ ಪಾತರದವಳು ಮಿಂದ ನೀರು ಹರಿಯುವುದನ್ನು ಕಂಡು ಆಕೆಯ ಸಾಮೀಪ್ಯ ಬಯಸಿದಾಗ ಅನಲಾಯಿ ಆತನ ಇಚ್ಛೆಯನ್ನು ನೆರವೇರಿಸುತ್ತಾಳೆ. ಪಾತರದವಳ ಮನೆಯಿಂದ ಗಂಡನನ್ನು ಹೊತ್ತು ಬರುವಾಗ ಆತನ ಕಾಲುಗಳು ತಪಸ್ಸಿನಲ್ಲಿದ್ದ ಮುನಿಯ ತಲೆಗೆ ತಗುಲಿಬಿಡುತ್ತದೆ. ಮುನಿ ಕುಪಿತನಾಗಿ ಬೆಳಗಾಗುವುದರಲ್ಲಿ ನಿನ್ನ ತಲೆ ಸಾವಿರ ಹೋಳಾಗಲೆಂದು ಶಪಿಸುತ್ತಾನೆ. ಆಗ ಅನಲಾಯಿ ತನ್ನ ಪಾತಿವ್ರತ್ಯದ ಬಲದಿಂದ ಸೂರ್ಯೋದಯವಾಗುವುದನ್ನೇ ತಡೆಯುವುದು, ಸೂರ್ಯನಿಲ್ಲದೆ ದೇವತೆಗಳು ಹಾಹಾಕಾರಪಡುವುದು, ಶಿವನಿಗೆ ಮೊರೆ ಇಡುವುದು, ಶಿವ ಹೆಳವನಿಗೆ ಕಾಲು ಕೊಡುವುದು ಮುಂತಾದ ಘಟನೆಗಳು ಪಾತಿವ್ರತ್ಯದ ಹಿರಿಮೆಯನ್ನು ಎತ್ತಿಹಿಡಿಯುವಂತಿವೆ. ಪತಿಯೆ ದೈವ, ಪಾತಿವ್ರತ್ಯದ ಪರಿಪಾಲನೆಯಲ್ಲಿ ಸತಿ ಎಲ್ಲ ತ್ಯಾಗಕ್ಕೂ ಸಿದ್ಧಳಾಗಿರಬೇಕೆಂದು ಬಯಸುವ ಸಮಾಜ ಅನಲಾಯಿಯ ಕಥೆಯ ಮೂಲಕ ತನ್ನ ಸಂದೇಶವನ್ನು ನೀಡಲೆತ್ನಿಸುವುದು ಸ್ಪಷ್ಟವಾಗಿದೆ.

ನಂಬಿಯಕ್ಕ

ಈಕೆ ಕಾವ್ಯಗಳಲ್ಲಿ ನಿಂಬಿಯಕ್ಕ ಎಂಬ ಹೆಸರಿನಿಂದ ಪರಿಚಿತೆ. ಅಲ್ಲಿ ಈಕೆ ಗಣಿಕೆ. ಜನಪದದಲ್ಲಿ ಈ ಅಂಶ ಕೈಬಿಡಲಾಗಿದೆ. ಇಲ್ಲಿ ಚಂಗಳೆಯ ಕಥೆಗೆ ಪೂರಕವಾಗಿ ಈಕೆಯ ಕಥೆ ಕಾಣಿಸಿಕೊಳ್ಳುತ್ತದೆ. ಶಿವನು ಚಂಗಳೆಗೆ ನಿನಗಿಂತ ಮೇಲಾದ ಭಕ್ತರನ್ನು ತೋರಿಸುತ್ತೇನೆ ಎಂದು ಸಿರಿಯಾಳನಿಗೆ ಜಂಗಮ ವೇಷ ತೊಡಿಸಿ ತಾನು ಆತನ ಶಿಷ್ಯನಂತೆ ನಟಿಸಿ ನಂಬಿಯಕ್ಕನ ಮನೆಗೆ ತೆರಳುತ್ತಾರೆ. ಈಕೆ ಬಡವೆ. ಜಂಗಮರ ಮನೆಗೆ ನೀರು ಹಾಕುತ್ತ ಬಂದ ಹಣದಲ್ಲಿ ಜಂಗಮ ದಾಸೋಹ ಮಾಡುತ್ತಿದ್ದಳು. ಅದೊಂದು ದಿನ ಕೂಲಿ ಮನೆಯಲ್ಲಿ ಕೊಟ್ಟ ಸಾಮಗ್ರಿಯಲ್ಲಿಯೇ ಕಡಬು ಕಜ್ಜಾಯ ಸಿದ್ಧಪಡಿಸಿ ನೀರಿಗೆ ಹೋಗಿರಲು ಇತ್ತ ದನ ಕಾಯಲು ಹೋಗಿದ್ದ ಆಕೆಯ ಏಳು ವರ್ಷದ ಕುವರ ಮನೆಗೆ

ಹಿಂದಿರುಗಿ ಮಾಡಿದ್ದ ಅಡುಗೆಯನ್ನು ಬಡಿಸಿಕೊಂಡು ಉಣ್ಣ ತೊಡಗಿದ. ನಂಬಿಯಕ್ಕ ಮನೆಗೆ ಬಂದು ನೋಡಿ ಮೀಸಲಳಿಯಿತೆಂದು ಮಗನಿಗೆ ಹೊಡೆದಾಗ ಆತ ಅಲ್ಲಿಯೇ ಪ್ರಾಣ ಬಿಟ್ಟ. ಸತ್ತ ಕೂಸನ್ನು ಮಣ್ಣು ಮಾಡಿ ಬಂದು ಹೊಸ ನೀರು ತಂದು, ಶಿವನಿಗೆ ಬೇರೆ ಅಡುಗೆ ಮಾಡಿ ಆಹ್ವಾನಿಸಿದಳು. ಶಿವ ಮಕ್ಕಳಿಲ್ಲದ ಮನೆಯಲ್ಲಿ ಉಣ್ಣುವುದಿಲ್ಲವೆಂದ. ಆಕೆ ಮಗ ದನ ಕಾಯಲು ಹೋಗಿದ್ದಾನೆಂದು ಹೇಳಿದರೂ ಶಿವ ಕೇಳದೆ ಹಠ ಹಿಡಿದು ಉಣ್ಣದೆ ಹೊರಡಲು ಸಿದ್ಧನಾದಾಗ ಈಕೆ ಶಿವನಿಗೂ ಬಡಿದಳು. ಇದನ್ನು ಕಂಡು ಸಿರಿಯಾಳ ನಡುಗತೊಡಗಿದ. ಆಗ ಶಿವ ನಂಬಿಯಕ್ಕನ ದೃಢ ಭಕ್ತಿಗೆ ಮೆಚ್ಚಿ ಕಂದನ ಜೀವವನ್ನೂ ಸಾಯುಜ್ಯ ಪದವಿಯನ್ನೂ ನೀಡಿದ. ಈ ಪ್ರಸಂಗದಿಂದ ಸಿರಿಯಾಳನ ಅಹಂಕಾರ ತಗ್ಗುತ್ತದೆ. ಹೀಗೆ ಜನಪದರು ಈಕೆಯ ಕಥೆಯನ್ನು ಅಹಂಕಾರ ನಿರಸನಕ್ಕೆ ಬಳಸಿಕೊಂಡಿರುವುದು ಸ್ಪಷ್ಟ.

ಅಕ್ಕ ನಾಗಮ್ಮ

ಈಕೆಯದು ಅಪೂರ್ವ ವ್ಯಕ್ತಿತ್ವ. ಚೆನ್ನಬಸವಣ್ಣನನ್ನು ಕುರಿತ ಹಾಡಿನಲ್ಲಿ ಈಕೆಯ ವೃತ್ತಾಂತ ದೀರ್ಘವಾಗಿ ಬಂದಿದೆ. ಕಕ್ಕಯ್ಯನ ಪತ್ನಿ ಕಲ್ಯಾಣಿ ಗಂಡನಿಗೆ ಎಡೆಮಾಡಿ ತೆಗೆದುಕೊಂಡು ಹೋಗುವಾಗ ಬಿದ್ದ ಒಂದು ಚೂರನ್ನು ಇರುವೆ ಒಯ್ದು, ಬಸವಣ್ಣ ತರುತ್ತಿದ್ದ ಪ್ರಸಾದದಲ್ಲಿ ಸೇರಿ, ನಾಗಮ್ಮ ಪ್ರಸಾದ ಸೇವಿಸಿದಾಗ ಆಕೆಯಲ್ಲಿ ಚೆನ್ನಬಸವಣ್ಣ ಜನನವಾದ ಸಂಗತಿಯು ಕಾವ್ಯಗಳು ವರ್ಣಿಸುವ ರೀತಿಯಲ್ಲಿಯೇ ಜನಪದದಲ್ಲಿಯೂ ಕಾಣಿಸಿಕೊಂಡಿದೆ. ಈಕೆಯ ಉಲ್ಲೇಖ ಮಾದಿಗ ಸಮುದಾಯದಲ್ಲಿ ಪ್ರಚಲಿತವಿರುವ ಜೋಗಳ ಪದದಲ್ಲಿದೆ.

ಆರಲಗೆ ತಟ್ಟಲಗೆ ನೀಲಮಾಣಿಕನಿಟ್ಟ
ಮ್ಯಾಲೆ ಮೂಜಗದ ಹರಳೊತ್ತಿ
ಮ್ಯಾಲೆ ಮೂಜಗದ ಹರಳೊತ್ತಿ ತಟ್ಟಲಗೆ
ನಾಗಮ್ಮ ವೀಭೂತಿ ಧರಿಸ್ಯಾಳೆ *

ಎಂದು ಆರಂಭವಾಗುವ ಈ ಹಾಡಿನಲ್ಲಿ ಈಕೆ ಚೆನ್ನಬಸವಣ್ಣನಿಗೆ ಜನ್ಮ ನೀಡುವುದು ಬೆನ್ನಿನ ಮೂಲಕ. ಅವಿವಾಹಿತ ತಾಯಿಯಾಗಿ ನಾಗಮ್ಮ ಅನೇಕ ಆರೋಪಗಳನ್ನು ಎದುರಿಸಬೇಕಾಯಿತು. ಆಕೆ ತನ್ನ ಗೌರವ ಪೂರ್ಣ ವ್ಯಕ್ತಿತ್ವದಿಂದಾಗಿ ಅವುಗಳಿಂದ ಪಾರಾಗುವುದು, ಎಂತಹ ಸಂದರ್ಭದಲ್ಲಿಯೂ ತಾಳ್ಮೆಗೆಡದ ಬಸವಣ್ಣ ಸೋದರಿಯನ್ನು ಪ್ರೀತಿಯಿಂದ ನಡೆಸಿಕೊಳ್ಳುವ ರೀತಿ ಅನನ್ಯ. ನಾಗಮ್ಮನ ಮೇಲೆ ಅಪವಾದ ಹೊರಿಸಿದಾಗ-

ಬಾಳು ಬಾಳೊ ಜಂಗಮರಿಗೆ ನಾಗಮ್ಮ ತಾಯಿ ಕಾಣೊ
ಹಾಳು ನಿಂದಕವ ನುಡಿಬ್ಯಾಡ ಬಿಜ್ಜಳನೆ
ನೀ ಹಾಳಾಗುವಂಥ ಫಲ ಬಂತು

ಎಂದು ಬಸವಣ್ಣ ರಾಜನಿಗೆ ತಿಳಿಸುವಲ್ಲಿ ನಾಗಮ್ಮ ಹಿರಿಯ ವ್ಯಕ್ತಿಯಾಗಿ, ತಾಯಿಯಾಗಿ ಜಂಗಮ ಸಮುದಾಯದಲ್ಲಿ ತನ್ನ ಕರ್ತವ್ಯ ನಿರ್ವಹಿಸುತ್ತಿದ್ದ ಚಿತ್ರ ಮೂಡುತ್ತದೆ.

* ಈ ಭಾಗವನ್ನು ಒದಗಿಸಿದವರು ಡಾ. ಮೈಲಹಳ್ಳಿ ರೇವಣ್ಣ ಅವರು.

ಮಲುಹಣಿ

ಈಕೆ ಹುಟ್ಟಿನಿಂದ ಗಣಿಕೆ ಪದ್ಮಕ್ಕನ ಮಗಳಾದರೂ ಭಕ್ತಿಯಲ್ಲಿ ಬ್ರಾಹ್ಮಣ ಮಲುಹಣನ ಮನಃ ಪರಿವರ್ತನೆಗೆ ಕಾರಣಳಾದ ಶರಣೆ. ಗದ್ದಗಿ ಮಠರು ಸಂಗ್ರಹಿಸಿರುವ ಮಲ್ಲಮಲ್ಲಣಿಯಲ್ಲಿ ಹಾಡುಗಾರ್ತಿ ಸಾವಂತ್ರಾದೇವಿ ಆರಂಭದಲ್ಲಿಯೇ-

ಮಲ್ಲಮಲ್ಲಾಣಿ ಕೂಟ ಎಲ್ಲ ಶಿವಪದ ಮಾತ
ಹೊಲ್ಲಲ್ಲ ಸತ್ಯ ಶಿವಪದಕ |ಶಿ| ಮಲ್ಲಾಣಿ
ಸೊಲ್ಲ ಶಿವ ಮೆಚ್ಚಿ ಕರೆದೊಯ್ದ || ಶಿವ ಶಿವನೆ

ಎಂದು ಆಕೆ ಗಣಿಕತ್ವದಿಂದ ಕೈಲಾಸತ್ವದ ಕಡೆಗೆ ಪಲ್ಲಟಗೊಂಡಿದ್ದನ್ನು ಸೂಚಿಸಿದ್ದಾರೆ. ಮಲುಹಣ ಮಲುಹಣಿಯೊಡನೆ ಪ್ರಣಯದಲ್ಲಿ ಸಿಕ್ಕಿಕೊಂಡಿರುತ್ತಾನೆ. ಆಗ ಮಲುಹಣಿಯ ತಾಯಿ ಪದ್ಮಕ್ಕ ಇಬ್ಬರನ್ನೂ ಅಗಲಿಸುತ್ತಾಳೆ.ಇದರಿಂದ ಮಲುಹಣ ಹುಚ್ಚನಂತಾಗುತ್ತಾನೆ. ಆಗ ಮಲುಹಣಿ ತೋರುವ ಸಂಯಮ ಮೆಚ್ಚುವಂತಹುದು. ರೂಪಿಗೆ ಮರುಳಾಗಿ ತನ್ನ ಹಿಂದೆ ಬಿದ್ದ ಮಲುಹಣನಿಗೆ

ಎನ್ನ ಮ್ಯಾಗಿನ ಗ್ಯಾನ ಎನ್ನ ಮ್ಯಾಗಿನ ಚಿತ್ತ
ಪನ್ನಂಗಧರಗ ಶಿವಗಿಡೊ ನೀ ಮಲ್ಲಾಣ
ಮುನ್ನ ಕಾಣುವಿ ಶಿವಪದವ

ಎಂದು ಹೇಳಿ ಆತನ ಮನಸ್ಸನ್ನು ಶಿವನೆಡೆಗೆ ತಿರುಗಿಸಿದ್ದು ಮಹತ್ವದ ಸಾಧನೆ.

ತಿರುನೀಲಕಂಠನ ಪತ್ನಿ

ಹರಿಹರನಲ್ಲಿ ಈಕೆಯ ಹೆಸರು ಮುತ್ತೈದೆ ಎಂದಿದೆ. ಇದು ಸಾಂಕೇತಿಕವಾಗಿಯೂ ಬಂದಿರಬೇಕು. ತಿರುನೀಲಕಂಠನ ಹಾಡಿನಲ್ಲಿ ಈಕೆಯ ಪ್ರಸಂಗವಿದೆ. ಈಕೆ ಗಂಡ ಪಾತರದವಳ ಮನೆಗೆ ಹೋಗಿ ಬಂದನೆಂದು 'ನನ್ನ ಬಳಿ ಬರಬೇಡ ಮುಟ್ಟಿದರೆ ಶಿವನಾಣೆ' ಎಂದು ಕಠಿಣ ನಿರ್ಧಾರ ಕೈಗೊಂಡು ತನ್ನ ಭಾಷೆಯನ್ನು ಮುಪ್ಪಿನವರೆಗೂ ನಡೆಸುತ್ತಾಳೆ -

ಪತಿವ್ರತಾಸ್ತ್ರೀಯಳ ಸತಿಯ ಬಿಟ್ಟು
ಪರಸತಿಯ ನೋಡಿ ಬಂದೆ ಇಂದು
ಹ್ಯಾಂವ ಹತ್ತೇತಿ ಅವರಿಬ್ಬರಿಗೆ
ಹೆಂಡತಿ ಮರತಾನೊ ಮಾಕಾಂತ

ಹೀಗೆ ತಮ್ಮ ದಾಂಪತ್ಯದ ೪೦ ವರ್ಷವನ್ನು ಪರಸ್ಪರ ಹತ್ತಿರವಿದ್ದೂ ದೂರವಾಗಿಯೇ ಕಳೆಯುವುದನ್ನು ಈ ಹಾಡಿನಲ್ಲಿ ಗಮನಿಸಬಹುದು.

ಹೇಮರೆಡ್ಡಿ ಮಲ್ಲಮ್ಮ

ಭಕ್ತಿ ಮತ್ತು ಪಾತಿವ್ರತ್ಯಕ್ಕೆ ಹೆಸರಾದ ಹೇಮರೆಡ್ಡಿ ಮಲ್ಲಮ್ಮನ ಕಥೆ ಶರಣರಾಟದಲ್ಲಿ ಜನಮೆಚ್ಚುಗೆಗೆ ಪಾತ್ರವಾಗಿದೆ. ಈಕೆ ರಾಮಾಪುರದ ನಾಗಿರೆಡ್ಡಿ ನಾಗಮ್ಮ ದಂಪತಿಗಳ ಪುತ್ರಿ. ಹಿರಿಯರ ಆಯ್ಕೆಗೆ ಮಣಿದು ಭರಮಶೆಟ್ಟಿ ಎಂಬ ಪೆದ್ದನನ್ನು ವಿವಾಹವಾಗುತ್ತಾಳೆ. ಸಂಸಾರದಲ್ಲಿದ್ದರೂ ಈಕೆಯ ದೃಷ್ಟಿಯೆಲ್ಲ ಶಿವನೆಡೆಗೆ. ಸದಾಕಾಲ ಭಕ್ತಿ ಪರವಶತೆಯಲ್ಲಿರುತ್ತಿದ್ದ

ಈಕೆಯನ್ನು ಅತ್ತೆ ನಾದಿನಿಯರು ನಾನಾ ರೀತಿಯಲ್ಲಿ ಹಿಂಸಿಸುತ್ತಾರೆ. ಮನೆಯಿಂದ ಹೊರಹಾಕಲು ಯೋಚಿಸುತ್ತಾರೆ. ವಿವಿಧ ಬಗೆಯ ಪರೀಕ್ಷೆಗೆ ಈಡು ಮಾಡುತ್ತಾರೆ. ಭಗವಂತನ ಕೃಪೆಯಿಂದ ಮಲ್ಲಮ್ಮ ಎಲ್ಲ ಸಂಕಟಗಳಿಂದ ಪಾರಾಗಿ ಮುಕ್ತಿ ಪಡೆಯುತ್ತಾಳೆ.

ಹೀಗೆ ಜನಪದ ಸಾಹಿತ್ಯದಲ್ಲಿ ಪ್ರಾಚೀನ ಶರಣೆಯರ ಪೈಕಿ ಕೆಲವರನ್ನು ವಿಶೇಷವಾಗಿ ಪರಿಭಾವಿಸಲಾಗಿದೆ. ಪೂರ್ವೋಕ್ತ ಶರಣೆಯರಲ್ಲದೆ ಬಸವಣ್ಣನ ಹಾಡಿನಲ್ಲಿ ಮುಕ್ತಾಯಿ, ಜಾತಿಗರ ಚೌಡಯ್ಯನ ಹಾಡಿನಲ್ಲಿ ಕಾರಿಕಾಲಮ್ಮ ಹಾಗೂ ಪಿಟ್ಟವ್ವೆಯರನ್ನು ಸಾಂದರ್ಭಿಕವಾಗಿ ಉಲ್ಲೇಖಿಸಲಾಗಿದೆ. ಒಟ್ಟಿನಲ್ಲಿ ಶರಣೆಯರ ಬದುಕು ಮತ್ತು ವ್ಯಕ್ತಿತ್ವ ಜನಪದರಿಗೆ ಸ್ಫೂರ್ತಿ ನೀಡಿರುವುದು ಮೇಲಿನ ನಿದರ್ಶನಗಳಿಂದ ಶ್ರುತಪಡುತ್ತದೆ. ಶರಣೆಯರ ಕಥೆಗಳನ್ನು ತಮ್ಮ ಹಾಡುಗಳ ಮೂಲಕ ಪುನಾರೂಪಿಸಿಕೊಂಡು ಹೆಣ್ಣು ಮಕ್ಕಳಿಗೆ ಪಾತಿವ್ರತ್ಯದ ಮೌಲ್ಯ, ಶಿವಭಕ್ತಿಯ ಮಹತ್ವ ಮೊದಲಾದ ಅಂಶಗಳನ್ನು ತಿಳಿಸಲೆತ್ನಿಸಿದ್ದಾರೆ. ಪತಿಯೇ ಪರದೈವ ಎಂದು ಭಾವಿಸುವ ಶರಣೆಯರೇ ಸ್ತ್ರೀ ಸಮುದಾಯಕ್ಕೆ ಮಾದರಿ (Role model) ಆಗಲೆಂಬ ಹಂಬಲವೂ ಇದ್ದಂತಿದೆ. ಜನಪದ ಮನಸ್ಸನ್ನು ಸೂರೆಗೊಂಡವರೂ ಅಕ್ಕಮಹಾದೇವಿಯಂಥ ವೈಚಾರಿಕೆ ಶರಣೆಯರಿಗಿಂತ ಮಿಗಿಲಾಗಿ ಮುಗ್ಧ ಭಕ್ತಿಯನ್ನು ಪ್ರಕಟಿಸಿದ ಶರಣೆಯರು. ಇವರ ಶಿವಭಕ್ತಿ ದೃಢನಂಬಿಕೆಯಿಂದ ಭಾವುಕತೆಯಿಂದ ಕೂಡಿದ್ದಾಗಿದೆ. ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂಬಂತೆ ಕೆಲವು ಶರಣೆಯರು ತಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಬದಿಗಿಟ್ಟು, ಪುರುಷನ ಮೋಕ್ಷ ಸಾಧನೆಯಲ್ಲಿ ಹೆಗಲು ನೀಡಿದ್ದಾರೆ. ವೀರಶೈವದ ಪ್ರಮುಖ ತತ್ವವಾದ ಕಾಯಕದ ಬಗ್ಗೆ ಅಪಾರ ಗೌರವ ಹೊಂದಿರುವುದರ ಜೊತೆಗೆ ತಾವು ಆಚರಿಸುತ್ತಿದ್ದ ನಿಯಮಕ್ಕೆ ಕಿಂಚಿತ್ ಕೊರತೆಯಾದರೂ ತಮ್ಮ ಪ್ರಾಣವನ್ನು ಅಥವಾ ಮುದ್ದುಕುವರನನ್ನು ಬಲಿ ನೀಡಲು ಹಿಂಜರಿಯದವರಾಗಿದ್ದಾರೆ. ಜನಪದ ಸಾಹಿತ್ಯದಲ್ಲಿ ಶರಣೆಯರನ್ನು ಕುರಿತ ಅಧ್ಯಯನದಿಂದ ವೀರಶೈವ ಧರ್ಮವು ಸಮಾಜದ ಮೂಲೆ ಮುಡುಕಲುಗಳನ್ನು ತಲುಪಿದ ರೀತಿಯನ್ನು ಅರಿಯಬಹುದು.

ಆಧಾರ ಗ್ರಂಥಗಳು

೧. ಮಲುಹಣ ಮಲುಹಣಿ : (ಸಂ) ಡಾ. ಬಿ.ಎಸ್. ಗದ್ದಗಿ ಮಠ
೨. ಕನ್ನಡ ಜಾನಪದ ಗೀತೆಗಳು : (ಸಂ) ಡಾ. ಬಿ.ಎಸ್. ಗದ್ದಗಿ ಮಠ
೩. ನಾಲ್ಕು ನಾಡ ಪದಗಳು : (ಸಂ) ಡಾ. ಬಿ.ಎಸ್. ಗದ್ದಗಿ ಮಠ
೪. ಉತ್ತರ ಕರ್ನಾಟಕದ ಬಯಲಾಟಗಳು : ಡಾ. ಬಸವರಾಜ ಮಲಶೆಟ್ಟಿ
೫. ಜೀವನ ಜೋಕಾಲಿ (ಭಾಗ ೬) : ಡಾ. ಎಂ. ಎಸ್. ಸುಂಕಾಪುರ
(ಡೊಳ್ಳಿನ ಹಾಡು)
೬. ಡೊಳ್ಳಿನ ಹಾಡು : (ಸಂ) ಎಸ್. ಬಸವರಾಜು
೭. ವೃತ್ತಿಗಾಯಕರ ಕಾವ್ಯಗಳು: (ಸಂ) ಡಾ. ಜೀ. ಶಂ. ಪರಮಶಿವಯ್ಯ
೮. ದೇವರ್ ಬಂದಾವೆ ಬನ್ನಿರೇ: (ಸಂ) ಶಿವಾನಂದ ಗುಬ್ಬಣ್ಣನವರ

* * * * *

ಕುಡ್ಲು ಕುಂದೂರು : ಜಾನಪದೀಯ ಅಧ್ಯಯನ

ಡಾ. ಎಂ. ಬೈರೇಗೌಡ

ಬಿ. ಆರ್. ಸತ್ಯನಾರಾಯಣ

ಕರ್ನಾಟಕದ ದಕ್ಷಿಣ ಭಾಗವಲ್ಲಿ ಬಯಲು ಸೀಮೆ, ಮಲೆನಾಡು ಮತ್ತು ಘಟ್ಟಪ್ರದೇಶ ಮೂರೂ ಮುಪ್ಪುರಿಗೊಂಡು ಹಾಸನ ಜಿಲ್ಲೆ ಮೈದಳೆದಿದೆ. ಜೈನಧರ್ಮದ ಕೇಂದ್ರವಾದ ಶ್ರವಣಬೆಳಗೊಳ ಕಳ್ಬಪ್ಪು ಎಂಬ ಹೆಸರಿನಲ್ಲಿ ಕ್ರಿ.ಪೂ. ಮೂರನೇ ಶತಮಾನದ ಹೊತ್ತಿಗೆ ಅಖಂಡ ಭಾರತದ ಮನೆ ಮಾತಾಗಿತ್ತು. ಹಾಸನ ಜಿಲ್ಲೆ ಗಂಡುಮೆಟ್ಟಿನ ನಾಡು. ಜಗದ್ವಿಖ್ಯಾತ ಶಿಲ್ಪಕಲೆಗಳ ಆಗರ ಬೇಲೂರು-ಹಳೇಬೀಡನ್ನು ತನ್ನೊಡಲಲ್ಲಿ ಸೇರಿಸಿಕೊಂಡಿರುವ ಪುಣ್ಯಭೂಮಿ. ಇವೆಲ್ಲಕ್ಕೂ ಕಲಶವಿಟ್ಟಂತೆ ಬಾಹ್ಯಾಕಾಶ ನಿಯಂತ್ರಣ ಕೇಂದ್ರವು ಹಾಸನ ಜಿಲ್ಲಾ ಕೇಂದ್ರದಲ್ಲಿದ್ದು, ವಿಜ್ಞಾನ ಪ್ರಪಂಚದ ಗಮನವನ್ನು ತನ್ನೆಡೆಗೆ ಸೆಳೆದಿದೆ.

ಜಗತ್ತಿನಲ್ಲಿಯೇ ಹೆಸರಾಗಿರುವ ಐವತ್ತೇಳುವರೆ ಅಡಿ ಎತ್ತರದ ಏಕಶಿಲೆಯ ಗೊಮ್ಮಟನ ವಿಗ್ರಹವಿರುವ ಶ್ರವಣಬೆಳಗೊಳ ಚನ್ನರಾಯಪಟ್ಟಣಕ್ಕೆ ಅಪೂರ್ವ ಇತಿಹಾಸವಿದೆ. ಸುಮಾರು ನಾಲ್ಕುನೂರು ವರ್ಷಗಳ ಹೊಯ್ಸಳ ದೊರೆಗಳ ಆಳ್ವಿಕೆಯಲ್ಲಿ ಅಮೃತನಾಥಪುರ > ಕೊಳತೂರು ಇತ್ಯಾದಿ ಹೆಸರುಗಳಿಂದ ಇದು ಪ್ರಖ್ಯಾತವಾಗಿತ್ತು. ೧೫೭೪ರ ಸುಮಾರಿನಲ್ಲಿ ಕಾನಕಾನಹಳ್ಳಿಯ ದೊಡ್ಡ ಬಸವಯ್ಯ ಎಂಬ ಒಡೆಯ ಇಲ್ಲಿನ ಕೋಟೆಯನ್ನು ಕಟ್ಟಿಸಿದ ಎಂಬ ಉಲ್ಲೇಖವಿದೆ. ಮುಂದೆ ಕೊಳತ್ತೂರು ಹೆಸರಿನ ಅಗ್ರಹಾರವಾಗಿ ಅನಂತರ ಹೊಳೆನರಸೀಪುರ ಲಕ್ಕಪ್ಪನಾಯಕ ತನ್ನ ಮಗ ಚನ್ನರಾಯನಿಗೆ ಜಹಗೀರಿ ಕೊಟ್ಟಿದ್ದರಿಂದ ಚನ್ನರಾಯಪಟ್ಟಣ ಎಂದು ಹೆಸರಾಯಿತು.

ಚನ್ನರಾಯಪಟ್ಟಣ ಮತ್ತು ಅರಸೀಕೆರೆ ರಸ್ತೆಯ ಹದಿನೈದನೇ ಕಿ.ಮೀ. ನಲ್ಲಿರುವ ಮೂಡನಹಳ್ಳಿಯಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿದೆ ಕುಡ್ಲುಕುಂದೂರು. ಹೊಯ್ಸಳರ ಎರಡನೇ ವೀರಬಲ್ಲಾಳನ ಆಸ್ಥಾನದಲ್ಲಿ ಮುಖ್ಯ ದ್ವಾರಪಾಲಕನಾದ (ಪ್ರತಿಹಾರಗ್ರಣಿ) ಚಿಕ್ಕತಮ್ಮ ಈ ಊರಿನವನು. ಹದಿಮೂರನೇ ಶತಮಾನಕ್ಕೆ ಸೇರಿದ ಶಾಸನ ಸಂ. ೫೩ರಲ್ಲಿ (V.ಚನ್ನರಾಯಪಟ್ಟಣ-೧೯೦) ಕುಂದೂರು ಎಂಬ ಉಲ್ಲೇಖವಿದೆ. ಈ ಊರಿನಲ್ಲಿ ಹೊಯ್ಸಳರ ಚನ್ನಕೇಶವ ದೇವಾಲಯ ಮತ್ತು ಮಲ್ಲಿಕಾರ್ಜುನ ದೇಗುಲಗಳು ಪೂರ್ಣ ಶಿಥಿಲಾವಸ್ಥೆಯಲ್ಲಿವೆ.

ಕುಡ್ಲು ಕುಂದೂರಿನ ಆಜೂ-ಬಾಜೂ ಕ್ಷೇತ್ರ ಕಾರ್ಯ ನಡೆಸಿದಾಗ ಲಭ್ಯವಾದ ಆಕರಗಳ ಆಧಾರದ ಮೇಲೆ ಅಲ್ಲಿನ ಜನರ ನಂಬಿಕೆಗಳು, ಸ್ಥಳನಾಮ ಐತಿಹ್ಯಗಳನ್ನು ದಾಖಲಿಸುವ ಪ್ರಯತ್ನವೇ ಈ ಲೇಖನ. ಕುಡ್ಲು ಕುಂದೂರನ್ನು ಅಲ್ಲಿನ ಜನಪದರು ಗೀತೆಯೊಂದನ್ನು ಹಾಡುತ್ತಾರೆ. ಅದರ ಕೆಲವು ಸಾಲುಗಳನ್ನು ಗಮನಿಸಬಹುದು.

ಕುಡಲು ಕುಂದೂರು ಅಡವಿರಂಗಾಪುರ
ಅಡವಿಲ್ಯಾಕೆಣ್ಣೆ ಕಡದುಃಖ! ನಿನ ಗಂಡ
ಕುಡಲು ಬಾಯಲ್ಲಿ ಹತವಾದ||

ಈ ಗೀತೆಯ ಹಿಂದೆ ರೋಚಕವಾದ ಐತಿಹ್ಯವೊಂದು ಅಡಗಿದೆ. ಚಾಮರಾಜಪುರದಿಂದ ಪಶ್ಚಿಮಕ್ಕಿರುವ ಮೂಡನಹಳ್ಳಿ, ಕುಂದೂರು ಗ್ರಾಮ ಮತ್ತು ಕುಂದೂರು ಮಠಗಳಿವೆ. ಇವುಗಳಲ್ಲಿ ಕುಂದೂರು ಪ್ರಾಚೀನವಾದ ಸ್ಥಳ ಎಂಬುದಕ್ಕೆ ಶಾಸನಾಧಾರಗಳಿವೆ. ಹೊಯ್ಸಳರ ವೀರಬಲ್ಲಾಳನ ಕಾಲದಿಂದಲೂ ಈ ಗ್ರಾಮ ಅಸ್ಥಿತ್ವದಲ್ಲಿತ್ತು. ಇಲ್ಲಿರುವ ಹೊಯ್ಸಳ ಶೈಲಿಯ ಚನ್ನಕೇಶವ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ವಿರೂಪವಾಗಿದ್ದು ಶಿಥಿಲಾವಸ್ಥೆಯಲ್ಲಿವೆ. ಕುಂದೂರಿಗೆ ಕುಡ್ಲುಕುಂದೂರು ಎಂಬ ಹೆಸರು ಬರಲು ಕಾರಣವೇನೆಂದು ಅಲ್ಲಿನ ಹಿರಿಯರನ್ನು ವಿಚಾರಿಸಿದರೆ ಬಹು ಸ್ವಾರಸ್ಯವಾದ ಐತಿಹ್ಯವೊಂದನ್ನು ಹೇಳುತ್ತಾರೆ:

ಬಹು ಹಿಂದೆ ಕುಂದೂರಿನ ಪಾಳೇಗಾರನಿಗೆ ಒಬ್ಬಳೇ ಮಗಳಿದ್ದಳಂತೆ. ಒಳ್ಳೆಯ ಕಡೆಗೆ, ಒಳ್ಳೆಯ ವ್ಯಕ್ತಿಗೆ, ಶೂರನಾದವನಿಗೆ ಮಗಳನ್ನು ಕೊಟ್ಟು ವಿವಾಹ ಮಾಡುವ ಹಂಬಲ ಆತನದು. ಅದಕ್ಕಾಗಿ ಒಂದು ಪಂಥವನ್ನು ಏರ್ಪಡಿಸಿದನಂತೆ. ಈಗ ಊರಿರುವ ಉತ್ತರ ದಿಕ್ಕಿನಲ್ಲಿರುವ ತನ್ನ ಇಪ್ಪತ್ತಾರು ಎಕರೆ ಬಯಲಿನಲ್ಲಿ ಬೆಳೆದು ಕಟಾವಿಗೆ ಬಂದಿದ್ದ ರಾಗಿಯನ್ನು ಒಂದೇ ರಾತ್ರಿಯಲ್ಲಿ ಕೊಯ್ದು ಹಾಕಿದವನಿಗೆ ತನ್ನ ಮಗಳನ್ನು ಕೊಡುವುದಾಗಿ ಘೋಷಿಸಿದ. ಪಾಳೇಗಾರನ ಮನೆಯಲ್ಲಿಯೇ ಕೆಲಸ ಮಾಡುತ್ತಿದ್ದ ಮೂರು ಮಂದಿ ಆಳುಗಳಲ್ಲಿ ಇಬ್ಬರು ಆಸೆಯಿಂದ ಪ್ರಯತ್ನಪಟ್ಟು ಸಾಧ್ಯವಾಗದೆ ದೇಶಾಂತರ ಹೊರಟುಹೋದರು. ಮೂರನೆಯವನು ಹೇಗಾದರೂ ಮಾಡಿ ಒಡೆಯನ ಮಗಳನ್ನು ಮದುವೆಯಾಗಬೇಕೆಂದು ಆಲೋಚಿಸುತ್ತಿದ್ದ.

ಅದೇ ಚಿಂತೆಯಲ್ಲಿ ಒಬ್ಬ ಕಮ್ಮಾರನ ಬಳಿಗೆ ಬಂದು ತನ್ನ ವ್ಯಥೆಯನ್ನು ತೋಡಿಕೊಂಡ. ಕೂಡಲೇ ಆಚಾರಿ ನಿನ್ನ ಆಸೆ ಕೈಗೂಡಲು ನಾನು ಸಹಾಯ ಮಾಡುತ್ತೇನೆ. ಸಿಡಿಲು ಬಡಿದಾಗ ಬರುವ ಮಿಂಚು ಕೊನೆಗೊಳ್ಳುವ ಸ್ಥಳದಿಂದ ಒಂದು ಕುಡವನ್ನು (ಕುಡುಗೋಲು ಮಾಡಲು ಬೇಕಾದ ಲೋಹದ ತುಂಡು) ತೆಗೆದುಕೊಂಡು ಬಾ ಎಂದು ಹೇಳುತ್ತಾನೆ. ಅದರಂತೆ ಇವನು ಒಂದು ಕಂಚಿನ ತಣಿಗೆಯನ್ನು ಕಣದ ಬದಿಯಲ್ಲಿನ ಬಗ್ಗಡದ ಗುಂಡಿಯಲ್ಲಿಡುತ್ತಾನೆ. ಸಿಡಿಲೊಂದು ನೇರವಾಗಿ ಬಂದು ಬಗ್ಗಡದ ಗುಂಡಿಯಲ್ಲಿನ ತಟ್ಟೆಗೆ ಬಡಿಯುತ್ತದೆ. ಹಾಗೆ ಸಿಡಿಲು ಬಡಿದ ಕೂಡಲೇ ಅದೊಂದು ಕುಡವಾಗಿ ಮಾರ್ಪಾಟಾಗುತ್ತದೆ. ಅದನ್ನು ತಂದು ಕುಲುಮೆ ಆಚಾರಿಗೆ ಕೊಡುತ್ತಾನೆ.

ಕೂಡಲೇ ಆಚಾರಿ ಹರಿತವಾದ ಕುಡಲೊಂದನ್ನು ತಯಾರಿಸಿಕೊಟ್ಟು, ಇದನ್ನು ನೆಲದ ಮೇಲಿಡಬೇಡ, ಕವೆಗಡ್ಡಿಗಳನ್ನು ಇಟ್ಟು ಅದರ ಮೇಲೆ ಕುಡಲು ಇರಿಸಿ ಪೂಜೆ ಮಾಡಿ ಕೈ ಮುಗಿದು ನೀನು ಕೊಯ್ಯಬೇಕೆಂದಿರುವ ರಾಗಿ ಹೊಲದ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಹಿಡಿ ಕೊಯ್ದು ಹಾಕಿ ಕೈಮುಗಿದು ನಿಂತುಕೋ. ಎಲ್ಲವೂ ತಾನಾಗೆ ಕೊಯ್ದುಕೊಳ್ಳುತ್ತದೆಂದು ಹೇಳಿದ. ಹಾಗೆಯೇ

ಯಾವುದೇ ಕಾರಣಕ್ಕೂ ಈ ಕುಡಗೋಲನ್ನು ನಿನ್ನ ಶರೀರಕ್ಕೆ ಮುಟ್ಟಿಸಿಕೊಳ್ಳಬೇಡವೆಂದೂ ಎಚ್ಚರಿಕೆ ನೀಡಿದ್ದ. ಆ ಕುಡುಗೋಲಿನ ಹರಿತದ ಬಗ್ಗೆ ವಕ್ತೃಗಳು ಹೇಳುತ್ತಾರೆ: 'ತಲೆಯ ಕೂದಲೊಂದನ್ನು ಎರಡು ಭಾಗವಾಗಿ ಮಾಡುವಷ್ಟು ಹರಿತವಾಗಿತ್ತು ಆ ಕುಡ್ಲು' ಎಂದು.

ಆಚಾರಿ ಹೇಳಿದಂತೆಯೇ ಹರಿತವಾದ ಕುಡುಗೋಲನ್ನು ತಂದು ಹೊಲದ ಹೊತ್ತುಟ್ಟುವ ದಿಕ್ಕಿನಲ್ಲಿ (ಪೂರ್ವ) ನಿಂತು ಕವೆಗಡ್ಡಿಗಳ ಮೇಲೆ ಇಟ್ಟು, ಪೂಜೆ ಮಾಡಿ ಕೈ ಮುಗಿದು ನಾಲ್ಕು ದಿಕ್ಕಿನಲ್ಲಿ ನಾಲ್ಕು ಓಡಿ ರಾಗಿ ಹುಲ್ಲನ್ನು ಕೊಯ್ಯುತ್ತಾನೆ. ಕಮ್ಮಾರ ಹೇಳಿದಂತೆಯೇ ಬೆಳಗಾಗುವಷ್ಟರಲ್ಲಿ ಕೊಯ್ಲಿಗೆ ಬಂದಿದ್ದ ರಾಗಿ ಹೊಲವೆಲ್ಲಾ ಕಟಾವಾಗಿ ಅರಿ ಬೀಳುತ್ತದೆ. ಇದರಿಂದ ಮದವೇರಿದ ಆ ಯುವಕ ಆಳೊಬ್ಬನ ಕೈಲಿ ಊರ ಗೌಡನಿಗೆ ಸುದ್ದಿ ಮುಟ್ಟಿಸಿ, ಆತನ ಮಗಳ ಕೈಲಿ ಊಟ ಕಳುಹಿಸುವಂತೆ ಹೇಳಿರುತ್ತಾನೆ. ಇತ್ತ ಅರಿ ಬಿದ್ದಿದ್ದ ಇಡೀ ಹೊಲವನ್ನು ನೋಡಿ ಅಹಂಕಾರದಿಂದ ಆಚಾರಿಯ ಮಾತನ್ನು ಮರೆತು ಕುಡಲನ್ನು ತನ್ನ ಬಲದ ಹೆಗಲಿನ ಮೇಲಿಟ್ಟುಕೊಳ್ಳುತ್ತಾನೆ. ಕುಡಲು ಶರೀರವನ್ನು ತಾಕಿದ ಕೂಡಲೇ ಇಡೀ ದೇಹವನ್ನೇ ಸೀಳಿಕೊಂಡು ಎರಡು ಭಾಗವಾಗುತ್ತಾನೆ.

ತಂದೆಯ ಆಣತಿಯಂತೆ ಮಂಕರಿಯೊಂದರಲ್ಲಿ ಹಿಟ್ಟು, ಹೊತ್ತುಕೊಂಡು ಬಂದ ಮಗಳು ಈ ದೃಶ್ಯವನ್ನು ನೋಡಿ ಗಾಬರಿಯಿಂದ ಹಿಟ್ಟಿನ ಕುಕ್ಕೆಯನ್ನು ನೆಲದ ಮೇಲಿಡುತ್ತಾಳೆ. ಕೂಡಲೇ ಅದು ಕಲ್ಲಾಗುತ್ತದೆ. ಸೀಳಿಕೊಂಡ ಆತ ಕೂಡ ಕಲ್ಲಾಗುತ್ತಾನೆ. ನಂತರ ನೋಡ ನೋಡುತ್ತಿದ್ದಂತೆಯೇ ಹಿಟ್ಟು, ಹೊತ್ತುಕೊಂಡು ಬಂದ ಬಾಲೆಯೂ ಕಲ್ಲಾಗುತ್ತಾಳೆ. ಅವಳ ಜೊತೆಯಲ್ಲಿ ಬಂದಿದ್ದ ಮೂವರು ಗೆಣೆಗಾತಿಯರು ಮತ್ತು ನಾಯಿ, ಬೆಕ್ಕುಗಳೆಲ್ಲಾ ಕಲ್ಲಾಗುತ್ತವೆ. ಸೀಳಿದ ಚಪ್ಪಟೆ ಕಲ್ಲಿನ ಅಕ್ಕ-ಪಕ್ಕ ಸಾಲಾಗಿರುವ ಕಲ್ಲುಗಳನ್ನು ತೋರಿಸಿ ಹಿಟ್ಟಿನ ಕುಕ್ಕೆ, ಕಲ್ಲಾದ ಬಾಲೆ, ಗೆಣೆಗಾತಿಯರು ಮತ್ತು ನಾಯಿ, ಬೆಕ್ಕುಗಳೆಂದು ಈಗಲೂ ಊರ ಜನರು ತೋರಿಸುತ್ತಾ ಅಂದಿನಿಂದ ನಮ್ಮ ಊರಿಗೆ ಕುಡ್ಲುಕುಂದೂರು ಎಂದು ಹೆಸರಾಯಿತೆಂದು ಹೇಳುತ್ತಾರೆ.

ಊರಿನ ಪೂರ್ವಕ್ಕೆ ಅಂದರೆ ಮೂಡನಹಳ್ಳಿಯಿಂದ ಕುಂದೂರಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಸಿಗುವ ಕೆಂಪಾರಕಟ್ಟೆ, ಕೆರೆ ಏರಿಯ ಪಶ್ಚಿಮ ತುದಿಯಲ್ಲಿ ದಾರಿಯ ಎಡಬದಿಗಿರುವ ದೋಸರಗದ್ದೆ (ಜೋಯಿಸರ ಗದ್ದೆಯಿರಬಹುದು) ಯಲ್ಲಿ ಒಂದೇ ಸಾಲಿನಲ್ಲಿ ಏಳೆಂಟು ವಿವಿಧ ಆಕೃತಿಯ ಕಲ್ಲುಗಳಿವೆ. ಅವುಗಳಲ್ಲಿ ಒಂದು ಕಲ್ಲು ೧೫-೨೦ ಅಡಿ ಎತ್ತರ, ಸುಮಾರು ಆರು ಅಡಿ ಅಗಲ ಮತ್ತು ಸುಮಾರು ಎರಡು ಅಡಿ ದಪ್ಪವಾಗಿ ಚಪ್ಪಟೆಯಾಕಾರದಲ್ಲಿ ಎರಡು ಭಾಗಗಳಾಗಿ ಸೀಳಿ ನಿಂತಿದೆ. ಒಂದೊಂದು ಕಲ್ಲುಗಳ ಬಗೆಗೂ ಒಂದೊಂದು ವಿವರಗಳನ್ನು ಅಲ್ಲಿನ ಜನಪದರು ನೀಡುತ್ತಾರೆ. ಕೊಡ್ಲಿಂದ ಕೊಯ್ದ ಆ ಯುವಕನ ಕಲ್ಲಿಗೆ ಕುಡ್ಲುರಾಯನೆಂದು ಹೆಸರಿಸುತ್ತಾರೆ.

ಕುಡ್ಲು ಕುಂದೂರಿನ ಜನರು ತಮ್ಮ ಹೊಲ ಕೊಯ್ಲಿಗೆ ಬಂದಾಗ ಕುಡ್ಲು ಕಲ್ಲಿಗೆ ಪೂಜೆ ಮಾಡುತ್ತಾರೆ. ಹೊಲದ ಕೊಯ್ಲಿನ ಕೆಲಸ ಸುಗಮವಾಗಲೆಂದು ಕುಡ್ಲುರಾಯನಲ್ಲಿ ಪ್ರಾರ್ಥಿಸುತ್ತಾರೆ. ಆ ಗೌಡನ ಮಗಳು ತನ್ನೂರಿನಿಂದ ಹೊಲದೆಡೆಗೆ ನಡೆದು ಬಂದ ದಾರಿಯ ಇಕ್ಕೆಲಗಳಲ್ಲಿ ಮಳೆಯೇ ಬರದಿದ್ದರೂ ಪಯಿರು ನೀರಿನ ಮೇಲಿದ್ದಂತೆ ಬಹಳ ಸೊಂಪಾಗಿ ಬೆಳೆಯುತ್ತದೆ ಎಂದು ಜನ

ನಂಬಿಕೆಯಿಂದ ಹೇಳುತ್ತಾರೆ. ಕರ್ನಾಟಕ ರಾಜ್ಯ ಗ್ಯಾಸೆಟ್ಟೆಯರಿನಲ್ಲಿ ಇಲ್ಲಿ ನಿಂತಿರುವ ಸೀಳಿದ ಕಲ್ಲನ್ನು ಕುಡ್ಲುಕಲ್ಲು ಎಂದು ದಾಖಲಿಸಿದ್ದಾರೆ. (Govt. of India, Gazetteer, Mysore state. Hassan dist. P.649-650)

ಚನ್ನರಾಯಪಟ್ಟಣ ತಾಲ್ಲೂಕು ಕುಡ್ಲುಕುಂದೂರಿನ ಈ ಪ್ರದೇಶದಲ್ಲಿ ಸುತ್ತಾಡುವಾಗ ಕಂಡ ಇನ್ನೂ ಹಲವು ಸ್ಥಳಗಳ ಬಗೆಗಿನ ಜನರ ನಂಬಿಕೆ. ಅವುಗಳೊಂದಿಗೆ ಥಳಕು ಹಾಕಿಕೊಂಡ ಐತಿಹ್ಯಗಳನ್ನು ಗಮನಿಸಬಹುದು.

ಚಾಮರಾಜಪುರ

ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲ್ಲೂಕು ಬಾಗೂರು ಹೋಬಳಿಯ ಒಂದು ಹಳ್ಳಿ. ಈಗ ಅಲ್ಲೊಂದು ಇಲ್ಲೊಂದು ಎಂಬಂತೆ ಹತ್ತು ಹನ್ನೆರಡು ಮನೆಗಳಿರಬಹುದು. ಮೈಸೂರು ಜಿಲ್ಲೆಯಾದ್ಯಂತ ಚಾಮರಾಜ, ಕೃಷ್ಣರಾಜ, ನರಸಿಂಹರಾಜ ಇತ್ಯಾದಿ ಹೆಸರುಗಳಿಂದ ಆರಂಭವಾಗುವ ಪೇಟೆ, ಪಟ್ಟಣ, ನಗರ, ಪುರ ಮತ್ತು ಬಡಾವಣೆಗಳು ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತವೆ. ಆದರೂ ಚನ್ನರಾಯಪಟ್ಟಣದಂಥ ಒಳನಾಡು ಬಯಲು ಪ್ರದೇಶದಲ್ಲಿ ಇವುಗಳ ಸಂಖ್ಯೆ ಇಲ್ಲವೇ ಇಲ್ಲವೆನ್ನುವಷ್ಟು ವಿರಳ. ಈ ಹಳ್ಳಿಯು ಸುಮಾರು ಮೂವತ್ತು ವರ್ಷಗಳ ಹಿಂದೆ ಒಂದು ಮನೆಯೂ ಇರದಿದ್ದ ಕುರುಚಲು ಕಾಡಾಗಿತ್ತು. ಆದರೆ ತಾಲ್ಲೂಕು ಕಚೇರಿಗಳ ದಾಖಲೆಗಳಲ್ಲಿ ಈ ಊರಿನ ಹೆಸರಿದೆ. ಇತ್ತೀಚಿನ ಜನರಿಗೆ ಇಲ್ಲೊಂದು ಚಾಮರಾಜಪುರವೆಂಬ ಊರಿತ್ತೆಂಬುದೇ ಗೊತ್ತಿಲ್ಲ. ಈಗೀಗ ತೋಟ ತುಡಿಕೆಗಳಾಗಿ ಜನವಸತಿ ಆರಂಭವಾಗಿದೆ. ಈ ಊರಿನ ಮೂಲವನ್ನರಸಿ ಹೊರಟವರಿಗೆ, ಚಾಮರಾಜಪುರದಿಂದ ಪೂರ್ವಕ್ಕೆ ಒಂದು ಕಿ.ಮೀ. ದೂರದಲ್ಲಿರುವ ಕುಂಬಾರ ಹಳ್ಳಿಯ ದೊಡ್ಡೇಗೌಡ (೭೫) ಅವರು ಹೇಳುವ ವಿಚಾರ ಚಿಂತನೆಗೆ ಒಳಪಡಿಸುತ್ತದೆ.

ಹಿಂದೊಮ್ಮೆ ಮೈಸೂರಿನ ಚಾಮರಾಜ ಒಡೆಯರ ಆಳ್ವಿಕೆಯ ಕಾಲ. ಒಮ್ಮೆ ಶಿವಮೊಗ್ಗೆಯಿಂದ ಮೈಸೂರಿಗೆ ಹೋಗುವಾಗ ಇಲ್ಲಿ ಅವರ ವಾಹನ ಕೆಟ್ಟು ಹೋಗಿ, ಒಂದು ರಾತ್ರಿ ಅಲ್ಲಿಯೇ ಉಳಿದುಕೊಳ್ಳಬೇಕಾಯ್ತು. ಅಂಥ ಸಂದರ್ಭದಲ್ಲಿ ಈ ಆಯಕಟ್ಟಿನ ಜಾಗದಲ್ಲಿ ಒಂದು ಊರು ಇಲ್ಲದಿರುವ ಬಗ್ಗೆ ಯೋಚಿಸಿ, ಅಲ್ಲಿಂದ ಪೂರ್ವಕ್ಕೆ ಇರುವ ಬಾಗೂರು, ಪಶ್ಚಿಮದ ಕುಂದೂರು ಮತ್ತು ದಕ್ಷಿಣಕ್ಕಿರುವ ಬ್ಯಾಡರ ಹಳ್ಳಿಯ ಕೆಲವು ಜನರನ್ನು ಕರೆಸಿ ಅಲ್ಲೊಂದು ಊರನ್ನು ಕಟ್ಟುವಂತೆ ಹೇಳಿ, ಅವರಿಗೆ ಅಲ್ಲಿಯೇ ಸಾಕಷ್ಟು ಜಮೀನು ಕೊಡಿಸಿದರಂತೆ ಚಾಮರಾಜ ಒಡೆಯರು ಕಟ್ಟಿಸಿದ ಆ ಊರಿಗೆ ಚಾಮರಾಜಪುರವೆಂದು ಹೆಸರಾಯಿತು. ಈಗಲೂ ಚಾಮರಾಜಪುರ ವ್ಯಾಪ್ತಿಯಲ್ಲಿ ಬರುವ ಭೂ ಪ್ರದೇಶವು ಮೇಲೆ ಹೇಳಿದ ಊರುಗಳ ಜನರಿಗೇ ಸೇರಿವೆ. ಕೆಲವರು ಹೊರಗಿನಿಂದ ಬಂದು ಹಾಳು ಬಿದ್ದು ಮತ್ತೆ ಕುರುಚಲು ಕಾಡಾಗಿದ್ದ ಜಮೀನನ್ನು ಕೊಂಡು ಸಾಗುವಳಿಗೆ ಸಿದ್ಧ ಮಾಡಿಕೊಂಡು ತೋಟಗಳಲ್ಲಿಯೇ ಮನೆ ಮಾಡಿಕೊಂಡು ಬದುಕುತ್ತಿದ್ದಾರೆ.

ಹುಚ್ಚಮ್ಮನ ಬಾವಿ

ಚಾಮರಾಜಪುರದಿಂದ ಪೂರ್ವಕ್ಕಿರುವ ಸಂ (ಸೊಂ)ಬಕಟ್ಟೆ ಒಂದು ಚಿಕ್ಕ ಕೆರೆ. ಅದರ

ಒಳಗಿರುವ ಒಂದು ಕಲ್ಲುಬಾವಿಯನ್ನು ಹುಚ್ಚಮ್ಮನ ಬಾವಿಯೆಂದು ಈಗಲೂ ಕರೆಯುತ್ತಾರೆ. ಸಂಬಕಟ್ಟೆ ಎಂದು ಹೆಸರು ಬರಲು ಕಾರಣಗಳು ತಿಳಿಯದಿದ್ದರೂ, ಅದರಲ್ಲಿನ ಹುಚ್ಚಮ್ಮನ ಬಾವಿಯ ಬಗೆಗೆ ಕುತೂಹಲಕಾರಿಯಾದ ವಿವರಗಳನ್ನು ದೊಡ್ಡೇಗೌಡರೇ ನೀಡುತ್ತಾರೆ. ಚಾಮರಾಜ ಒಡೆಯರು ಇಡೀ ರಾತ್ರಿ ಕಾಡಿನ ನಡುವೆ ಕಳೆಯಬೇಕಾದಾಗ ಅವರ ಸೇವೆಗೆ ನಿಯೋಜಿತಳಾಗಿದ್ದ ಹುಚ್ಚಮ್ಮ ಎಂಬಾಕೆಯ ಸೇವೆಯನ್ನು ಮೆಚ್ಚಿದ ಒಡೆಯರು ಅವಳಿಗೂ ಸಾಕಷ್ಟು ಕಾಣಿಕೆ, ಉಡುಗೊರೆಗಳನ್ನು ನೀಡಿದರು. ಊರ ಜನರ ಕುಡಿವ ನೀರಿನ ಬವಣೆಯನ್ನು ಅರಿತಿದ್ದ ಹುಚ್ಚಮ್ಮ ಜನರ ಅನುಕೂಲಕ್ಕಾಗಿ ಕುಡಿವ ನೀರಿನ ಬಾವಿಯೊಂದನ್ನು ಕಟ್ಟುವಂತೆ ಒಡೆಯರನ್ನು ಬೇಡಿಕೊಂಡಾಗ ಒಪ್ಪಿದ ಮಹಾರಾಜರು ಬಾವಿಯೊಂದನ್ನು ನಿರ್ಮಿಸಿ ಅದಕ್ಕೆ ಹುಚ್ಚಮ್ಮನ ಬಾವಿಯೆಂದು ನಾಮಕರಣ ಮಾಡಿದರೆಂದು ತಿಳಿದುಬರುತ್ತದೆ. ಬಹಳ ವ್ಯವಸ್ಥಿತವಾಗಿ ಕಟ್ಟಿದ ಚೌಕಾಕಾರದ ಕಲ್ಲು ಬಾವಿ ಈಗ ನೀರಿಲ್ಲದೆ ಪಾಳುಬಿದ್ದು ಅದರಲ್ಲಿ ಕುರುಚಲು ಗಿಡಗಳು ಬೆಳೆದು ವಿನಾಶದ ಅಂಚಿನಲ್ಲಿದೆ.

ಕುಂದೂರಿನ ರಂಗದ ಮಂಟಪ

ಕುಂದೂರಿನ ಮುಂಭಾಗದಲ್ಲಿ ಸುಮಾರು ಇನ್ನೂರು ಅಡಿ ಉದ್ದ, ನೂರಕ್ಕೂ ಹೆಚ್ಚು ಅಡಿ ಅಗಲದ ಹೆಬ್ಬಂಡೆಯೊಂದಿದೆ. ಅದರ ಮುಂದೆ ವಿಶಾಲವಾದ ಊರೊಟ್ಟಿನ ಜಾಗವಿದೆ. ಊರಿನ ಸಾಮೂಹಿಕ ಉತ್ಸವಗಳು, ಕುಣಿತ, ನಾಟಕಗಳಿಗೆ ಇದು ಮೀಸಲು. ಇದರ ಪಶ್ಚಿಮದ ತುದಿಗೆ ಸುಮಾರು ಐವತ್ತು ಅಡಿ ಎತ್ತರದ ಸಿಮೆಂಟಿನ ಗೋಪುರಾಕೃತಿಯ ಮಂಟಪವಿದೆ. ಇದೇ ರಂಗನ ಕುಣಿತದ ಮಂಟಪ. ಹಿಂದೆ ಯುಗಾದಿಯ ಸಂದರ್ಭದಲ್ಲಿ ನಡೆಯುತ್ತಿದ್ದ ರಂಗನ ಕುಣಿತದ ಆರಂಭಕ್ಕೆ ಮುನ್ನ ಒಂದೆರಡು ತಿಂಗಳಲ್ಲಿ ಮರಮುಟ್ಟುಗಳಿಂದ ತಾತ್ಕಾಲಿಕವಾಗಿ ನಿರ್ಮಾಣವಾಗುತ್ತಿದ್ದ ರಂಗನ ಕುಣಿತದ ಮಂಟಪ ಇತ್ತೀಚೆಗೆ ಶಾಶ್ವತವಾಗಿಯೇ ಇರುವಂತೆ ನಿರ್ಮಾಣಗೊಂಡಿದೆ. ಯುಗಾದಿಗೆ ಮೊದಲು ಊರಿಗೆ ಯುವಕರು ಮತ್ತು ಹಿರಿಯರೆಲ್ಲರೂ ಕೂಡಿ ರಂಗನ ಕುಣಿತದ ಮಂಟಪವನ್ನು ಅಲಂಕರಿಸಿ ಅದರ ಮೇಲೆ ಬಸವೇಶ್ವರ (ನಂದಿ) ಮತ್ತು ಬೀರಲಿಂಗೇಶ್ವರ ದೇವರನ್ನು ಕೂರಿಸಿ ಮಧ್ಯರಾತ್ರಿಯವರೆಗೂ ರಂಗ ಕುಣಿಯುತ್ತಾರೆ.

ರಂಗದ ಕುಣಿತಕ್ಕೆ ತಮಟೆ ಅಥವಾ ಜೋಡಿ ತಮಟೆಗಳು ಪ್ರಧಾನ ವಾದ್ಯಗಳು. ವಿವಿಧ ವಯೋಮಾನದ ಐವತ್ತರಿಂದ ನೂರು ಜನರು ಸಾಮೂಹಿಕವಾಗಿ ರಂಗದ ಕುಣಿತದಲ್ಲಿ ಪಾಲ್ಗೊಳ್ಳುತ್ತಾರೆ. ಕೆಲವು ವರ್ಷಗಳ ಹಿಂದೆ ಕಲ್ಲು ಕಂಬಗಳ ಮೇಲೆ ಮರದ ಅಟ್ಟಣೆಯನ್ನು ಎತ್ತರವಾಗಿ ಕಟ್ಟಿ ಸಿಂಗರಿಸುತ್ತಿದ್ದರು. ಇಂದು ಸಿಮೆಂಟಿನ ಶಾಶ್ವತ ಮಂಟಪ ಊರ ಮಧ್ಯಭಾಗದಲ್ಲಿ ರಾರಾಜಿಸುತ್ತಿದೆ. ಮೊದಲಿಗೆ ಬೀರಲಿಂಗೇಶ್ವರ ದೇವರನ್ನು ಮಾತ್ರ ಕೂರಿಸುವ ಪದ್ಧತಿಯಿತ್ತು. ಕಾಲಾಂತರದಲ್ಲಿ ಬಸವಣ್ಣ (ನಂದಿ)ನನ್ನೂ ಕೂರಿಸುವ ಪದ್ಧತಿ ರೂಢಿಗೆ ಬಂದುದಾಗಿ ಊರ ಹಿರಿಯರು ಹೇಳುತ್ತಾರೆ. ಇದಕ್ಕೆ ಪೂರಕವಾಗಿ ಈ ಊರಿನಲ್ಲಿ ಹೆಗ್ಗಡೆಗಳು (ಕುರುಬರು) ವಾಸಿಸುತ್ತಿದ್ದುದರ ಬಗೆಗೆ ಶಾಸನಾಧಾರಿತ ಉಲ್ಲೇಖಗಳಿವೆ. ಅಷ್ಟೇ ಅಲ್ಲದೆ, ಈ ಊರಿಗೆ ಸೇರಿರುವ ಮಠವನ್ನು ಸ್ಥಾಪಿಸಿದವರು ತಿಪಟೂರಿನ ಬಳಿಯ ಕುರುಬ ಸಮಾಜಕ್ಕೆ ಸೇರಿದ ರಂಗಾಪುರ ಮಠದವರು.

ಆದರೆ ಈಗ ಮಠವು ಒಕ್ಕಲಿಗ ಸಮಾಜದವರ ವಶದಲ್ಲಿದೆ. ಪ್ರಸ್ತುತ ಕುಂದೂರಿನಲ್ಲಿ ಕುರುಬರು ವಾಸಿಸುತ್ತಿಲ್ಲದಿದ್ದರೂ ಬೀರಲಿಂಗೇಶ್ವರನ ಪೂಜೆಯನ್ನು ಗಮನಿಸಿದಾಗ ಮೇಲಿನ ವಿಷಯಕ್ಕೆ ಪೂರಕವಾದ ಬೆಂಬಲ ದೊರೆಯುತ್ತದೆ.

ಕುಂದೂರಿನ ಬಸವಣ್ಣನ ಗುಡಿ

ಊರ ಮುಂದಿನ ಹೆಬ್ಬಂಡೆಯ ಮೇಲೆ ಬಸವಣ್ಣನ ಗುಡಿಯಿಂದ ಗುಡಿ ಮೂಲದಲ್ಲಿ ಕೇವಲ ಕಲ್ಲಿನ ಮಂಟಪವಿದ್ದಂತೆ ತೋರುತ್ತದೆ. ಸುಮಾರು ನೂರು ವರ್ಷಗಳ ಈಚೆಗೆ ಗುಡಿಯ ರೂಪ ನೀಡಲಾಗಿದೆ. ಅದರ ಮುಖಮಂಟಪದಂತಿರುವ ಮಂಗಳೂರು ಹೆಂಚಿನ ಛಾವಣಿಯಿರುವ ರಚನೆ ತೀರಾ ಇತ್ತೀಚಿನದು. ಆದರೆ ಅದರಲ್ಲಿನ ನಂದಿ ವಿಜಯನಗರೋತ್ತರ ಕಾಲಕ್ಕೆ ಸೇರಿದ್ದಾಗಿರಬಹುದು. ನುಣುಪು ಬಳಪದ ಕಲ್ಲನ್ನು ಬಳಸಿ ಅತ್ಯಂತ ಸುಂದರವಾದ ಕುಸುರಿ ಕೆತ್ತನೆಯಿಂದ ಆಕರ್ಷಕವಾಗಿ ಕಾಣುವಂತೆ ಕೆತ್ತಲಾಗಿದೆ. ಗೆಜ್ಜೆಸರಗಳು, ಹಗ್ಗದ ಗಂಟುಗಳು, ಕೋಡುಗಳ ಅಲಂಕಾರ ಮನಸೂರೆಗೊಳಿಸುತ್ತದೆ. ಗರ್ಭಗುಡಿಯು ಅತ್ಯಂತ ಕಿರಿದಾಗಿದ್ದು ಅದರಲ್ಲಿನ ಕುಸುರಿ ಕಲೆಗಳನ್ನು ಕ್ಯಾಮರಾದಲ್ಲಿ ಸೆರೆಹಿಡಿಯಲು ಕಷ್ಟವಾಗುತ್ತದೆ. ಒಳಭಾಗದಲ್ಲಿಯೇ ಮತ್ತೊಂದು ಚಿಕ್ಕ ನಂದಿಯ ವಿಗ್ರಹವಿದ್ದು, ರಂಗನ ಕುಣಿತದ ಸಂದರ್ಭದಲ್ಲಿ ಬೀರಲಿಂಗೇಶ್ವರನ ಜೊತೆಯಲ್ಲಿ ಪ್ರತಿಷ್ಠಾಪಿಸಲಾಗುತ್ತದೆ.

ಚನ್ನಕೇಶವ ದೇವಸ್ಥಾನ

ರಂಗನ ಕುಣಿತದ ಮಂಟಪದ ಬಲಭಾಗದಲ್ಲಿ ಊರ ಹೆಬ್ಬಾಗಿಲು ಇನ್ನೂ ಸುಸ್ಥಿತಿಯಲ್ಲಿದ್ದು ಅದು ಮೈಸೂರು ಒಡೆಯರ ಕಾಲದಲ್ಲಿ ಗ್ರಾನೈಟ್ ಕಲ್ಲುಕಂಬಗಳನ್ನು ಬಳಸಿ ನಿರ್ಮಿಸಿದಂತೆ ಗೋಚರಿಸುತ್ತದೆ. ಹೆಬ್ಬಾಗಿಲನ್ನು ದಾಟಿ ಕುಂದೂರಿನ ಪೂರ್ವಕ್ಕಿರುವ ದೇವಸ್ಥಾನದ ಕಂಬ ಮತ್ತು ಚನ್ನಕೇಶವಸ್ವಾಮಿಯ ವಿಗ್ರಹಗಳನ್ನು ಗಮನಿಸಿದಾಗ ಇದೊಂದು ಹೊಯ್ಸಳ ಶೈಲಿಯ ದೇವಾಲಯವೆಂದು ಸುಲಭವಾಗಿ ಹೇಳಬಹುದು. ಶಿಥಿಲಾವಸ್ಥೆ ತಲುಪುವುದನ್ನು ಗಮನಿಸಿ ಅದನ್ನು ಇಟ್ಟಿಗೆಗಳನ್ನು ಬಳಸಿ ಪುನರ್ನಿರ್ಮಿಸಿರುವಂತೆ ಗೋಚರಿಸುತ್ತದೆ. ಅದಲು ಬದಲಾಗಿರುವ ಕಂಬಗಳು, ಛಾವಣಿಯಲ್ಲಿರುವ ಭುವನೇಶ್ವರಿಗಳು ಈ ಅಂಶಗಳನ್ನು ಪುಷ್ಟೀಕರಿಸುತ್ತವೆ. ವಿಗ್ರಹವು ತುಂಬಾ ಸುಂದರವಾಗಿದ್ದು, ಸುಮಾರು ಐದು ಅಡಿ ಎತ್ತರವಿದೆ. ಪೀಠಭಾಗವೇ ಸುಮಾರು ಎರಡು ಅಡಿಗಳಷ್ಟು ಎತ್ತರವಿದ್ದು, ಅದರಲ್ಲಿ ಗರುಡನ ರಚನೆಯಿದೆ.

ಮಲ್ಲಿಕಾರ್ಜುನ ದೇವಾಲಯ

ಕುಂದೂರಿನ ಪೂರ್ವ ಮತ್ತು ಉತ್ತರ ದಿಕ್ಕಿನಲ್ಲಿ ಆವರಿಸಿದಂತೆ ವಿಶಾಲವಾದ ಕೆರೆಯೊಂದಿದೆ. ಕೆರೆಯ ಮಧ್ಯಭಾಗದಲ್ಲಿ ಮಲ್ಲಿಕಾರ್ಜುನ ಗುಡಿಯಿದ್ದು, ಕೃಷ್ಣರಾಜ ಸಾಗರದ ಮಧ್ಯದ ದೇಗುಲವನ್ನು ನೆನಪಿಗೆ ತರುತ್ತದೆ. ಇದೂ ಕೂಡ ಹೊಯ್ಸಳ ಕಾಲದ ದೇವಾಲಯವಾಗಿದ್ದು, ಕಂಬಗಳು, ಭುವನೇಶ್ವರಿಗಳು ಆಕರ್ಷಕವಾಗಿವೆ. ಆದರೆ ಇಡೀ ದೇವಾಲಯದ ಭಿತ್ತಿಯನ್ನು ಮಣ್ಣಿನಿಂದ ಮುಚ್ಚಿ ಗುಪ್ತ ಮಾಡಲಾಗಿದೆ. ಕೆರೆಯ ನೀರು ಒಳನುಗ್ಗದಂತೆ ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆಯೆಂದರೂ ದೇವಾಲಯದ ಸಂಪೂರ್ಣ ಸೌಂದರ್ಯವನ್ನು ಹಾಳುಗೆಡವಿದೆ. ಇದರ

ಮುಂದೆ ಬಲಭಾಗದಲ್ಲಿ ಅರ್ಧಕ್ಕೆ ತುಂಡಾದ ವಿಷ್ಣುವಿನ ವಿಗ್ರಹ ಹೊಯ್ಸಳರ ಕಾಲದ್ದಾಗಿದ್ದು, ಬೇಲೂರು, ಹಳೇಬೀಡಿನ ದೇವಾಲಯಗಳ ವಿಷ್ಣು ವಿಗ್ರಹಗಳಷ್ಟೇ ಅಲಂಕಾರದಿಂದ ಕೂಡಿದೆ. ಈ ಊರಿನಲ್ಲಿ ಸುಂದರವಾದ ಹೊಯ್ಸಳ ದೇವಾಲಯವೊಂದಿದ್ದು ಅದು ಹಾಳಾಗಿರುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಎಡಪಾರ್ಶ್ವದಲ್ಲಿ ಬಿದ್ದಿರುವ ಸೂರ್ಯ ವಿಗ್ರಹವೊಂದು ಮಳೆ, ಛಳಿ, ಗಾಳಿ, ಬಿಸಿಲುಗಳಿಂದ ಕುರೂಪವಾಗಿದೆ. ದೇವಾಲಯದ ಹಿಂದಕ್ಕೆ ಸುಮಾರು ಮೂವತ್ತು ಅಡಿ ಉದ್ದ ಅಗಲದ ಕಲ್ಲು ಬಾವಿಯಿದೆ. ಅದರ ನೀರು ಪಾಚಿ ಕಟ್ಟಿಕೊಂಡು ಯಾವುದೇ ಬಳಕೆಗೆ ಯೋಗ್ಯವಾಗಿಲ್ಲ. ಕೆರೆ ತುಂಬಿದಾಗ ದೇವಾಲಯ ಮತ್ತು ಕಲ್ಲು ಬಾವಿ ಇವೆರಡೂ ಮುಳುಗಡೆಯಾಗುತ್ತವೆ

ಕುಂದೂರು ಮಠ

ಕುಂದೂರಿನಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಕುಂದೂರು ಮಠವು ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ಕೋಡಿ ರಂಗಾಪುರದ ಕುರುಬ ಸಮುದಾಯಕ್ಕೆ ಸೇರಿದ ಮಠದ ಶಾಖೆಯಾಗಿ ಸ್ಥಾಪನೆಯಾಗಿದೆ. ಆದರೆ ಈಗ ಒಕ್ಕಲಿಗರ ಮಠವಾಗಿ ಬದಲಾಗಿದೆ. ಮಠದಲ್ಲಿ ಇಂದಿಗೂ ಕುರಿ ಸಾಕಣೆ ಒಂದು ಕಸುಬಾಗಿದ್ದು, ಸುಮಾರು ಇನ್ನೂರಕ್ಕೂ ಹೆಚ್ಚು ಕುರಿಗಳಿವೆ. ಮಠದ ಸುತ್ತ ಮೂರು ಸುತ್ತು ಕಲ್ಲಿನ ಪೌಳಿ (ಗೋಡೆ) ಯಿದೆ. ಮೊದಲ ಸುತ್ತನ್ನು ದಾಟಿದರೆ ದನಗಳ ಕೊಟ್ಟಿಗೆ, ಕುರಿಯ ಕೊಪ್ಪಲು, ಕುದುರೆಯ ಲಾಯ ಮತ್ತು ಉಗ್ರಾಣಗಳಿವೆ. ಎರಡನೆಯ ಸುತ್ತಿನ ಗೋಡೆಗೆ ದೊಡ್ಡ ಹೆಬ್ಬಾಗಿಲಿದೆ. ಅದರ ಮುಂದೆ ಸುಮಾರು ಐವತ್ತು ಅಡಿ ಎತ್ತರದ ಗರುಡಗಂಬವಿದೆ. ಅದರ ವೈಶಿಷ್ಟ್ಯವೆಂದರೆ ಕೆಳಹಂತದಲ್ಲಿ ಪೂರ್ವಕ್ಕೆ ಗಣಪತಿ, ಉತ್ತರಕ್ಕೆ ಗರುಡ, ದಕ್ಷಿಣಕ್ಕೆ ಆಂಜನೇಯ ಮತ್ತು ಪಶ್ಚಿಮಕ್ಕೆ ಯತಿಯೊಬ್ಬನ ಉಬ್ಬುಶಿಲ್ಪಗಳಿರುವುದನ್ನು ಕಾಣಬಹುದು.

ಮಠದಲ್ಲಿ ಶಿವ ಮತ್ತು ವಿಷ್ಣು ದೇವಾಲಯಗಳೆರಡೂ ಇರುವುದು ಇಲ್ಲಿನ ವಿಶೇಷ. ಇದೊಂದು ಹರಿಹರ ಸಮನ್ವಯ ಕೇಂದ್ರವಾಗಿದ್ದರ ಕುರುಹುಗಳಾಗಿರಬಹುದು. ಎರಡನೆಯ ಪೌಳಿಯನ್ನು ದಾಟಿದರೆ ಎಡಕ್ಕೆ ಹಿರಿಯ ಸ್ವಾಮೀಜಿಗಳ ಸಮಾಧಿಗಳಿವೆ. ಅಷ್ಟೇ ಅಲ್ಲದೆ ಚಾಮುಂಡೇಶ್ವರಿಯ ಪುಟ್ಟ ಗುಡಿಯೊಂದಿದೆ. ಇದರಲ್ಲಿನ ಮಹಿಷಾಸುರ ಮರ್ಧಿನಿಯ ಉಬ್ಬು ಶಿಲ್ಪ ಆಕರ್ಷಕವಾಗಿದ್ದರೂ ಅದಕ್ಕೀಗ ವಿಪರೀತವಾದ ಬಣ್ಣಗಳನ್ನು ಬಳಿಯಲಾಗಿದೆ. ಈ ಮಠದ ಮೊದಲ ಸ್ವಾಮೀಜಿ ಜೀವಂತರಾಗಿ ಸಮಾಧಿಯಾದರೆಂದು ಹೇಳಲಾಗುತ್ತಿದ್ದು, ಅವರ ಸಮಾಧಿಯು ಅಲ್ಲೇ ಇದೆ. ಕುದುರೆ ಮತ್ತು ಬಸವಣ್ಣನ ಸಮಾಧಿಗಳು ಇಲ್ಲಿವೆ. ಸುಮಾರು ಇಪ್ಪತ್ತೈದು ಮೆಟ್ಟಿಲುಗಳನ್ನು ಹತ್ತಿ ಮೂರನೇ ಪೌಳಿಯನ್ನು ದಾಟಬೇಕು. ಅದನ್ನು ಗಿರಿ ಎಂದು ಕರೆಯುತ್ತಾರೆ. ಬಾಗಿಲಿಗೆ ಎದುರಾಗಿ ಶ್ರೀರಂಗನಾಥ ದೇವಾಲಯವೂ, ಅದರ ಎಡಬದಿಗೆ ಶಿವಾಲಯವೂ ಇದೆ. ಇವೆರಡರ ನಡುವೆ ಮಠಾಧಿಪತಿಗಳು ವಾಸಿಸುವ ಎರಡಂತಸ್ತಿನ ಮನೆಯಿದೆ.

ಕುಂದೂರಿನ ಕುದುರೆ

ಕುಂದೂರು ಮಠದಲ್ಲಿ ಬಲಶಾಲಿಯಾದ ಕುದುರೆಯಿದ್ದುದರ ಬಗೆಗೆ ಹೇಳುತ್ತಾರೆ. ಈ

ಹಿನ್ನೆಲೆಯಲ್ಲಿ 'ಕುಂದೂರಯ್ಯ ಕುದ್ರೆ ಕೊಡು ಹತ್ತಿ ನೋಡಾನ, ಬಾಗೂರಯ್ಯ ಬಾಗ್ಲು ತಗಿ ಬಗ್ಗಿ ನೋಡಾನ' ಇದೊಂದು ಹಾಸನ ಮತ್ತು ಮಂಡ್ಯ ಜಿಲ್ಲೆಯಲ್ಲಿ ಪ್ರಚಲಿತವಿರುವ ಜನಪ್ರಿಯ ಶಿಶುಪ್ರಾಸ. ಕುಂದೂರು ಕುದುರೆಯ ಬಗೆಗೆ ವಕ್ತೃಗಳು ಹೇಳುವ ಒಂದೆರಡು ಘಟನೆಯನ್ನು ತಿಳಿಯೋಣ :

ಮಠದ ಹಿಂದಿನ ಸ್ವಾಮೀಜಿಯ ಹೆಸರು ನಂಜಯ್ಯ. ಆ ಹೆಸರಿನೊಂದಿಗೆ ಕುದುರೆ ಸೇರಿ ಕುದುರೆ ನಂಜಯ್ಯ ಎಂದೇ ಖ್ಯಾತರಾಗಿದ್ದರು. ಒಮ್ಮೆ ಕಳ್ಳರು ಮಠದ ಕುರಿಗಳನ್ನು ಕದ್ದು ಲಾರಿಯಲ್ಲಿ ತುಂಬಿಕೊಂಡು ಹೋಗುವುದನ್ನು ರಂಗನಾಥನು ಸ್ವಾಮೀಜಿಗೆ ಕನಸಿನಲ್ಲಿ ತಿಳಿಸಿದನಂತೆ. ಕೂಡಲೇ ಎಚ್ಚರಗೊಂಡ ಸ್ವಾಮೀಜಿ, ಲಾಯದಲ್ಲಿದ್ದ ಕುದುರೆಗೆ ಜೀನೂ ಹಾಕದೆ ಹತ್ತಿ ಲಾರಿಯನ್ನು ಹಿಂಬಾಲಿಸಿ ಸಕಲೇಶಪುರದ ಬಳಿ ಹಿಡಿದರಂತೆ. ಮತ್ತೊಮ್ಮೆ ಕುದುರೆ ಮತ್ತು ಕಾರುಗಳಿಗೆ ಪಂದ್ಯ ಏರ್ಪಟ್ಟು ಚನ್ನರಾಯಪಟ್ಟಣದಿಂದ ಕುಂದೂರು ಮಠಕ್ಕೆ ಕಾರನ್ನು ಹಿಂದೆ ಹಾಕಿ ಕುದುರೆಯೇ ಮೊದಲು ತಲುಪಿತೆಂದು ಹೇಳುತ್ತಾರೆ. ಒಂದೇ ಓಟದಲ್ಲಿ ಓಡಿ ಬಂದ ಕೂಡಲೇ ನೀರು ಕುಡಿದು ಸತ್ತುಹೋಯಿತು. ದೇಗುಲದ ಪಕ್ಕದಲ್ಲಿರುವ ಸಮಾಧಿಯೇ ಆ ಕುದುರೆ ಸಮಾಧಿ.

ವಿಜಯನಗರ ಸ್ಥಾಪನೆಯ ಹಿಂದಿರುವ ಐತಿಹ್ಯವೇ ಕುಂದೂರು ಮಠದ ಸ್ಥಾಪನೆಯ ಹಿಂದೆ ಕೂಡ ಇದೆ. ಬೇಟೆ ನಾಯಿಗಳನ್ನು ಮೊಲಗಳು ದುರುಗುಟ್ಟಿ ನೋಡಿದ ವಿವರಗಳನ್ನು ಇಲ್ಲಿನ ಜನರು ಹೇಳುತ್ತಾರೆ. ಮಠದ ಪೂರ್ವಕ್ಕೆ ದೇಗುಲವೊಂದಿದ್ದು, ಅದನ್ನು ಕೆಳಗಲ ಸುಬ್ಬಪ್ಪನ ಗುಡಿಯೆಂದು ಕರೆಯುತ್ತಾರೆ. ಮಠದ ಪಶ್ಚಿಮಕ್ಕೆ ಇರುವ ಗುಡಿಯನ್ನು ಮೇಗಳ ಸುಬ್ಬಪ್ಪನ ಗುಡಿಯೆಂದು ಕರೆಯಲಾಗುತ್ತಿದೆ. ಈ ಎರಡೂ ಗುಡಿಗಳಲ್ಲೂ ಹುತ್ತಗಳಿದ್ದು ಪೂಜೆಗೊಳ್ಳುತ್ತಿವೆ. ಮೇಗಳ ಗುಡಿಯಿಂದ ಒಂದು ನಾಯಿಯು, ಕೆಳಗಲ ಗುಡಿಯಿಂದ ಒಂದು ಮೊಲವು ಹೊರಟು ಈಗ ಮಠವಿರುವಲ್ಲಿ ಕಚ್ಚಾಡಿದ್ದರಿಂದ ಅಲ್ಲಿ ಮಠವನ್ನು ಸ್ಥಾಪಿಸಲಾಯಿತೆಂಬ ಐತಿಹ್ಯವಿದೆ. ಇಲ್ಲಿ ವರ್ಷಕ್ಕೊಮ್ಮೆ ಸುಬ್ರಹ್ಮಣ್ಯದಲ್ಲಿ ರಥೋತ್ಸವ ನಡೆಯುವ ದಿನವೇ ಜಾತ್ರೆ ನಡೆಯುತ್ತದೆ. ಷಷ್ಠಿ ಜಾತ್ರೆ ಎಂದು ಕರೆಯುವ ಈ ಹಬ್ಬದಲ್ಲಿ ರಂಗನಾಥ ಮತ್ತು ಸುಬ್ರಹ್ಮಣ್ಯರಿಬ್ಬರಿಗೂ ರಥೋತ್ಸವವಿರುತ್ತದೆ.

ರಂಗನಾಥಸ್ವಾಮಿ ದೇವಾಲಯ

ಕುಂದೂರಿನ ರಂಗನಾಥ ವಿಗ್ರಹವು ಚಿಕ್ಕದಾದರೂ ಆಕರ್ಷಕವಾಗಿದೆ. ಶೇಷಶಯನನಾಗಿರುವ ರಂಗನಾಥಸ್ವಾಮಿಯಿರುವ ಗರ್ಭಗುಡಿಯ ಇಕ್ಕೆಲಗಳಲ್ಲಿ ಗರ್ಭಗುಡಿಯ ರೀತಿಯಲ್ಲಿರುವ ಚಿಕ್ಕ ಕೋಣೆಗಳಲ್ಲಿ ಶ್ರೀದೇವಿ ಮತ್ತು ಭೂದೇವಿಯವರ ವಿಗ್ರಹಗಳಿವೆ. ಈ ಎರಡೂ ವಿಗ್ರಹಗಳಿಗೂ ಪ್ರಭಾವಳಿಗಳಿದ್ದು, ನೋಡಲು ಬಲು ಆಕರ್ಷಕವಾಗಿದೆ. ಮೂರ್ತಿ ಮತ್ತು ವಾಸ್ತುಶಿಲ್ಪದ ಆಧಾರದ ಮೇಲೆ ಇದು ವಿಜಯನಗರೋತ್ತರ ಕಾಲದ ರಚನೆಯೆಂದು ಹೇಳಬಹುದು. ಶಿವಾಲಯವೂ ಅದೇ ಕಾಲಕ್ಕೆ ಸೇರಿದ ರಚನೆಯಾಗಿದೆ. ರಂಗನಾಥನ ಗುಡಿಯಂತೆ ಮೂಲ ಗರ್ಭಗುಡಿಯ ಇಕ್ಕೆಲಗಳಲ್ಲಿ ಚಿಕ್ಕ ಚಿಕ್ಕ ಕೊಠಡಿಗಳಿದ್ದು, ಎಡಭಾಗದ ಕೋಣೆಯಲ್ಲಿ ಪ್ರಭಾವಳಿಯಿಂದ ಕೂಡಿದ ಪಾರ್ವತಿಯ ವಿಗ್ರಹವಿದೆ. ಬಲಭಾಗದ ಕೋಣೆ ಖಾಲಿಯಿದ್ದು ಗಣಪತಿಯ ವಿಗ್ರಹವನ್ನು ಮೂಲ ಗರ್ಭಗುಡಿಯ ಲಿಂಗದ ಮುಂದೆ ಇಡಲಾಗಿದೆ.

ಮೆಳೆಯಮ್ಮ

ಕುಂದೂರು ಮಠದ ದಕ್ಷಿಣಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಮೆಳೆಯಮ್ಮನ ಗುಡಿಯಿದೆ. ಇದೊಂದು ರಕ್ತದೇವತೆ. ಪ್ರತಿದಿನ ನೂರಾರು ಕುರಿ, ಕೋಳಿ ಮತ್ತು ಹಂದಿಗಳು ಬಲಿಯಾಗುತ್ತವೆ. ಮೆಳೆಯಮ್ಮ ಇಲ್ಲಿ ನೆಲೆಸಿದ್ದರ ಬಗ್ಗೆ ಇರುವ ಐತಿಹ್ಯ ಹೀಗಿದೆ:

ಎತ್ತಿನ ಗಾಡಿಯೊಂದರಲ್ಲಿ ಹೋಗುತ್ತಿದ್ದ ತಂದೆ ಮಕ್ಕಳಿಬ್ಬರು ಯಾವಾಗಲೂ ಕಳಚಿಕೊಳ್ಳುತ್ತಿದ್ದ ಗುಜ್ಜುಗೋಲನ್ನು (ತಡಿಕೆಯ ಕೋಲು)ಬಿಗಿ ಮಾಡಿಕೊಳ್ಳಲು ಇಟ್ಟುಕೊಂಡಿದ್ದ ಕಲ್ಲು ಇಲ್ಲಿಗೆ ಬಂದಾಗ ಗಾಡಿಯಿಂದ ಬಿದ್ದು ಹೋಯಿತಂತೆ. ಎತ್ತಿಕೊಳ್ಳಲು ಹೋದರೆ ಅದು ಬರುವುದಿಲ್ಲ. ಯಾವುದೋ ದೇವರ ಮಹಿಮೆಯೆಂದು ಯೋಚಿಸಿದ ತಂದೆ ಮಗ ಅದಕ್ಕೆ ಹೂವಿಟ್ಟು ಪೂಜಿಸಿ ಹೋಗುತ್ತಾರೆ. ಅದೇ ದೇವರಾಗಿ, ಸುತ್ತಲೂ ಮೆಳೆಯಿದ್ದುದರಿಂದ ಮೆಳೆಯಮ್ಮ ಎಂಬ ಹೆಸರು ಪ್ರಚಲಿತವಾಗಿದೆ. ಇಂದಿಗೂ ದೇಗುಲದ ಸುತ್ತ ಮುಳ್ಳುಕಂಟಿಗಳ ಮೆಳೆಗಳಿರುವುದನ್ನು ಕಾಣಬಹುದು. ಇಲ್ಲಿ ಕುರಿ, ಕೋಳಿ, ಹಂದಿ ಮುಂತಾದ ಪ್ರಾಣಿಗಳನ್ನು ಬಲಿಕೊಟ್ಟು, ಇಲ್ಲಿಯೇ ಅಡಿಗೆ ಮಾಡಿ ಎಡೆಯಿಟ್ಟು ಪೂಜೆ ಮಾಡಿ ಊಟ ಮಾಡಿಹೋಗುತ್ತಾರೆ.ಮೆಳೆಯಮ್ಮನಿಗೆ ಹೊಲಸುಆಗುವುದಿಲ್ಲ. ಅವಳಿಗೇನಿದ್ದರೂ ಹಣ್ಣು ಕಾಯಿ ಮಾತ್ರ. ಮಾಂಸದ ಎಡೆಯೇನಿದ್ದರೂ ಗುಡಿಯ ಮುಂದಿರುವ ಭೂತಪ್ಪಗಳಿಗೆ ಎಂಬ ಅಭಿಪ್ರಾಯ ಅಲ್ಲಿನ ಲಿಂಗಾಯಿತ ಅರ್ಚಕರದು. ಈ ಭೂತಪ್ಪಗಳೆಂದು ಕರೆಯುವ ಏಳೆಂಟು ಕರಿಯ ಕಲ್ಲುಗುಂಡುಗಳು ಗುಡಿಯ ಮುಂದಿವೆ. ಇಲ್ಲಿ ಹಾಕಲಾಗುವ ಮಾಂಸದ ಎಡೆಯನ್ನು ತಿನ್ನಲು ಇಪ್ಪತ್ತು ಮೂವತ್ತು ನಾಯಿಗಳು ಅಲ್ಲಿಯೇ ವಾಸಿಸುತ್ತಿವೆ. ಅವುಗಳು ಒಂದು ವರ್ಷಕ್ಕಿಂತ ಹೆಚ್ಚು ಬದುಕುವುದಿಲ್ಲ ಎಂಬ ನಂಬಿಕೆಯಿದೆ. ಇತ್ತೀಚೆಗೆ ನಾಯಿಗಳ ಬದಲು ಕೆಲವು ಭಿಕ್ಷುಕರೇ ಆ ಎಡೆಯನ್ನು ಎತ್ತಿಕೊಳ್ಳುತ್ತಿದ್ದಾರೆ. ಇಲ್ಲಿ ಬಂದು ಅಡಿಗೆ ಮಾಡಿಕೊಂಡು ಊಟ ಮಾಡಿ ಹೋಗುವವರ ಅನುಕೂಲಕ್ಕಾಗಿ ಒರಳುಕಲ್ಲು, ರುಬ್ಬುಗುಂಡುಗಳ ವ್ಯವಸ್ಥೆಯಿದೆ. ಅಲ್ಲದೆ ಶೆಡ್ಡುಗಳ ವ್ಯವಸ್ಥೆ ಕೂಡ ಇದೆ.

ವೀರಮಾಸ್ತಿಕಲ್ಲು

ಕುಂದೂರಿನ ಪೂರ್ವಕ್ಕೆ ಕುಪ್ಪುಕಲ್ಲು ಇರುವ ದೋಸರ (ಜೋಯಿಸರ) ಗದ್ದೆಯ ಬಳಿಯಲ್ಲಿಯೇ ನೆಲದಲ್ಲಿ ಹೂತು ಹೋಗಿದ್ದ ಒಂದು ಕಲ್ಲನ್ನು ಎತ್ತಿ ನೋಡಲಾಗಿ ಅದು ಒಂದು ವೀರಮಾಸ್ತಿಕಲ್ಲು ಎಂದು ತಿಳಿದುಬಂತು. ಇದೂ ಕೂಡ ವಿಜಯನಗರೋತ್ತರ ಕಾಲದ ಒಂದು ಗ್ರಾಮ್ಯ ರಚನೆಯೆನ್ನಬಹುದು. ಸ್ತ್ರೀ ಪುರುಷರಿಬ್ಬರಿಗೂ ಒಂದೇ ಬಗೆಯ ತುರುಬು ಗಂಟಿರುವುದು ಈ ವೀರಮಾಸ್ತಿಕಲ್ಲಿನ ವಿಶೇಷತೆ. ಕುಂದೂರಿನ ಜನರು ಇದನ್ನು ಗಾಳಿಕಲ್ಲು ಎಂದು ಕರೆಯುತ್ತಿದ್ದಾರೆ.

ಬೃಂದಾವನ

ಊರಿನ ಹರಿಜನ ಕಾಲನಿಯ ಪೂರ್ವತ್ತ[illegible] ತಿಪ್ಪೆಯೊಂದರಲ್ಲಿ ಒಂದು ಸಮಾಧಿಯಿದೆ. ಸುಮಾರು ನೂರು ವರ್ಷಗಳಷ್ಟು ಹಳೆಯ[illegible]ದ ಇದು ಈಗ ಶಿಥಿಲವಾಗಿದೆ. ಕಲ್ಲುಗಳನ್ನು ಬಂಧಿಸಲು

ಈ ಭಾಗವನ್ನು ಒದಗಿಸಿದವರು ಡಾ. ಮೈಲಹಳ್ಳಿ ರೇವಣ್ಣ ಅವರು

ಕಬ್ಬಿಣದ ಸಲಾಕೆಗಳು ಮತ್ತು ಮೊಳೆಗಳನ್ನು ಬಳಸಿ ನಿರ್ಮಿಸಿದ್ದಾರೆ. ಇದರ ಮೇಲೆ ಎರಡು ಸಾಲಿನ ಶಾಸನವಿದ್ದು, ಅದರ ಪಾಠ ಹೀಗಿದೆ :

೧. ವಬೇನಾಗಸಂದ್ರದಬಲರಾಂ ಜ
೨. ಮೇದಾರ್ರು ಉ್ರಂದಾವನಾ

ಗ್ರಾಮದೇವತೆಗಳಾದ ಮೆಳೆಯಮ್ಮ, ಚಿಕ್ಕಮ್ಮ, ಕೋಡಿಯಮ್ಮ, ನಲ್ಲೂರ ದೊರೆಕಾಳಿಯನ್ನು ಕುರಿತಂತೆ ವಿಪುಲವಾದ ಜನಪದ ಗೀತ ಸಾಹಿತ್ಯವನ್ನು ಕುಂದೂರು ಸುತ್ತಮುತ್ತಲಿನ ಜನಪದರು ಹಾಡುತ್ತಾರೆ. ಮಾದರಿಗಾಗಿ ಕೆಲವು ಗೀತೆಗಳ ತುಣುಕುಗಳನ್ನು ಮುಂದೆ ಕೊಡಲಾಗಿದೆ.

ಊರುಗ್ ಮುಂದಾದ ಉರಗಾದ ಮರವಿಲ್ಲ
ಊರುಗ್ ತಕನಾದ ಗೌಡಿಲ್ಲ! ಮೂಡಲ
ಮುಳ್ಳು ಬಾಗಲಲ್ಲಿ ಹರಿಸೇವೆ!

ಉತ್ತದ ಕೋವೆಲ್ಲಿ ಹುಟ್ಟಿದಲ್ಲ ಪುಟ್ಟುಮಾರಿ
ಮೂರು ಕೋವೆಗೆ ಮೂರು ಜಡೆಯಾಗಿ !ದಂಡಿನ ಚಿಕ್ಕಿ
ಉಟ್ಟವಳೆ ಗಂಗೆ ದಡದೆಲ್ಲಿ!

ಹಾದೀಯ ಗುಡಿಸೀರಿ ಬೀದೀಯ ಗುಡಿಸೀರಿ
ರಾಜ ಮಲ್ಲಿಗೆಯ ಹರವೀರೀ! ಈ ಊರ
ರಾಣಿ ಬಂದೂರ ಹೋಗುತಾಳೆ!

ಕೊಲ್ಲಾಪುರದಿಂದ ಎಂದು ಬಂದೆ ಪುಟ್ಟುಮಾರಿ
ಕಟ್ಟು ನರಿಗೆ ಸೀರೆ ಕಣುಕಪ್ಪು! ಭರಣೀಯ
ಬಿಟ್ಟು ಬಂದ ನಿನ್ನ ಮಲೆನಾಡ!

ಮೂಗ್ಗು ನಾಮಾವ ಆಣೆಮ್ಯಾಲಿಟ್ಟುಕೊಂಡು
ಎಲಿಗೋಗಿದ್ದೆ ದೊರೆಕಾಳಿ! ಬೆಂಗಳೂರು
ಹೆಗ್ಗಾಣಿಗನ ಜೋನೀನ ಮನೆಯ ಮುರಿಯಾಕೆ!

ಬಂದ ಬರಸೀಗೆ ಇಕ್ಕವಳೆ ಮುಳ್ಳವಗೆ
ನುಚ್ಚು ನುರಿಯಾದೋ ನಿನ್ನಲಗೇ !ಕುಂದೂರ
ಎಣ್ಣೆತ್ತೊರೊಟ್ಟೆ ಉರಿಯಾಲಿ!

ಆಚೆ ಕೋಡಿಲಿ ನಾನು ಈಚೆ ಕೋಡಿಲಿ ನೀನು
ಬಾಸೆಯ ಕೊಡೆ ಬಲಗೈಲಿ! ಕೋಡಿಯಮ್ಮ
ಬಾಸೆ ತಪ್ಪೋರ ಮಗುಳಲ್ಲ!

ಕೆರೆಯ ಕೋಡೀಲಿ ಕೆಂದೂಳು ಏನಮ್ಮ
ಮಡಿವಾಳರಣ್ಣೆ ಮಡಿ ಉಟ್ಟು! ಕೋಡ್ಯಮ್ಮ
ಮರಿಗುದರೆಯೇರಿ ಬರುತಾಳೆ!

ಅಕ್ಕಕ್ಕ ತಂಗೇರು ಲೆಕ್ಕಕ್ಕೇಳೂ ಮಂದಿ
ಮಡಿ ಉಟ್ಟು ಮ್ಯಾಲೆ ಚದುರೇರು! ಆಡಿದ ಮಾತು
ಸನ್ನರೆಯ ಮ್ಯಾಲಡುಕೆ ಒಡೆದಂಗೆ!

ದಂಡಿಗೋಗೋ ಮಕ್ಕಳಿಂದ ಎದ್ರುಬ್ಯಾಡಿ ಬೆಚ್ಚಬ್ಯಾಡಿ
ಮುಂದೆ ಹೋಗ್ಯವಳೆ ರಣದುರ್ಗಿ! ದಂಡಿನ ಚಿಕ್ಕಿ
ಮಂಜಿನ ಬಲೆಯ ಬುಡುತಾಳೆ!

ಮೂಡಲಾಗಿರುವುದು ಯಾವಗಿರಿ ಪರ್ವತ
ಸೂರ್ಯ ರಾಮಚಂದ್ರುನಂಗೆ ಒಳೆಯುವ !ಕಲ್ಲು ಕಂಬಾದ
ವಾರೇಲಿ ಇವರ ಗೆಳುತಾನಾ!

ನಾಗುಬೆತ್ತಾವ ದರಿಸವನೆ
ಹಣೆಗೆ ಬಸಿತಾವ ದರಿಸವನೆ! ಪುಟ್ಟುಸ್ವಾಮಿ
ಸ್ವಾಮಿ ಕುಳಿಯಾದಲಿ ಸೂ ಜಾಣ!

ಅಲ್ಲಿ ನೋಡುಬ್ಯಾಡ ಇಲ್ಲಿ ನೋಮುಬ್ಯಾಡ
ಹುಡುಕ್ಯಾಡಬ್ಯಾಡ ರಣದೆಲ್ಲಿ! ಮೆಳೆಯಲ್ಲಿ
ಒಪ್ಪಿಸಿಕೊಳ್ಳೆ ಅವರ ಹರಕೇಯ!

ಮಾಯಕಾತಿ ಉಣ್ಣುಬಾರೆ ಮಂತ್ರಗಾತಿ ಉಣ್ಣುಬಾರೆ
ಮಾಯತಂತ್ರುಗಾತಿ ಉಣ್ಣುಬಾರೆ! ಮೆಳೆಯಮ್ಮ
ಮಧ್ಯೆ ಮಾನವರು ಹಸಿದವರೆ!

ಒಪ್ಪತ್ತಿನೂಟ ಚುಚ್ಚಿದ ಬಾಯಿಬೀಗ
ಉಕ್ಕ ಮರಳಲ್ಲಿ ಬರುಲಾರೆ! ಮೆಳೆಯಮ್ಮ
ಒಪ್ಪಿಸಿಕೊಳ್ಳೆ ನಿನ ಹರಕೇಯ!

ಹರಕೆ ಒಪ್ಪಿಸೋಕೆ ಚಿಕ್ಕೋಳ ಪುಟ್ಟೋಳ
ಸುತ್ತಿ ಬಾರೆ ಎನ್ನ ತಾಳೇಯ! ಬಾಗುಲು ಮುಂದೆ
ಒಪ್ಪಿಸಿ ನಿನ್ನ ಹರಕೇಯ!

ಕಾಡುಮಲ್ಲಿಗೆ ಹೂವ ಜೋಡಿಸಿಕುಯ್ಯೋಳೆ
ಜೋಡಡ್ಡೆ ಮ್ಯಾಲೆಬರುವೋಳೆ! ಚಿಕ್ಕಮ್ಮ
ಕೋಡ್ಯಮ್ಮಗೆ ಜೋಡಿನ ಕೈಯ ಮುಗುದೆವು!

ಹೆಬ್ಬಾಗುಲೇಲಿ ಅಬ್ಬಾರುವೇನಮ್ಮ
ಒಬ್ಬ ತಾಯಿಗೊಬ್ಬ ಮಗನುಟ್ಟಿ! ಚಿಕ್ಕ ಬಾಗುಲೆಲಿ
ಹೆಬ್ಬುಲಿ ಹಿರಿದು ಬರುತಾನೆ!

ಕಲ್ಲು ಬಾವಿ ಸುತ್ತ ಗೊಲ್ಲರು ಕಾವಲು
ಜಪಕ ಕುಂತವರೆ ಮುನಿಗೋಳು! ಮೆಳೆಯಮ್ಮ
ಎಲ್ಲಿ ಮೊಗೆದಮ್ಮ ಜಲದೀಯಾ!

ಪೂಜಾರಿ ಬರುವಾಗ ಬರಿಗೈಲಿ ಬರುನಿಲ್ಲ
ಬಲಗೈಲಿ ಗಿಂಡಿ ಇಡಕೊಂಡು ! ಪೂಜಾರಿ
ಸ್ನಾನ ಮಾಡೋದು ಬೆಳುಗಾದೋ!

ಹಲಸಿನ ಮರದಡಿಯ ನಿಲಿಸಮ್ಮ ಕುದುರೇಯ
ಕರಸಮ್ಮ ನಿನ್ನ ಕುಲದೋರ! ಬಾಂದವರ
ನಡುಸಮ್ಮ ನಿನ್ನ ಪರುಸೇಯಾ!

ಹಾರುವೆಯ್ನು ಮಗಳೇನೆ ಗೀರುವಯ್ನು ಮಗುಳೇನೆ
ಗಂಧುದಾರುವಯ್ನು ಮಗುಳೇನೆ! ಮೆಳೆಯಮ್ಮ
ಈ ಊರೆಣ್ಣುಗಳು ಹೌದೇನೆ!

ಹಾರುವರಟ್ಟೀಲಿ ಗಾರೆ ಜಗುಲಿಮ್ಯಾಲೆ
ಆಡಾಡಿ ಅರುಸಣ ಅರೆಯೋಳೆ !ಕೋಡಿಯಮ್ಮ
ಹಬ್ಬವೇನೆ ನಿನ್ನ ತೌರೇಲಿ!

ಮುಂಗೋಳಿ ಕೂಗೀತು ಹೊತ್ತು ಹುಟ್ಟೀತು
ರಂಬೆ ಕೋಡಿಯಮ್ಮ ಬೆವುತಾಳೋ ! ಕೋಡಿಯಮ್ಮ
ಹತ್ತವುಳೆ ಗೊಂಬೆ ಹೊಸುತೇರ!

ಗಾಳಿ ಇಡಕೊಂಡು ಮೂಲುಗ್ ಕೂಡಿಕೊಂಡು
ಹೂಳಿಯ ಸೆಬ್ಬೆ ಮುರಕೊಂಡು! ಕೋಡಿಯಮ್ಮ
ಗಾಳಿಗಂಡ ಅವುದೇನೇ!

ಬಾಳೆಹಣ್ಣಿನಂತೆ ಬಾಗಿತಲ್ಲೆ ಈ ಊರು
ಬಾಗುವಂತರು ಬಣಜಿಗರು ! ಕೇರಿಲ್ಲಿ
ಬಾಳೆಹಣ್ಣಿನಂತ ಪಲಿ (ರಿ) ವಾರ!

ಇ (ನಿ)ಂಬೆ ಹಣ್ಣಿನಂತೆ ತುಂಬಿತಲ್ಲೆ ಈ ಊರು
ಲಿಂಗವಂತಾರು ಬಣಜಿಗರು! ಕೇರಿಲ್ಲಿ
ನಡುಸಮ್ಮ ನಿನ್ನ ಪರುಸೇಯಾ!

ಕುಡಲು ಕುಂದೂರಿಗೇ ಕೊಡದಿರೆಣ್ಣುಮಕ್ಕಳಾ
ಅರವಿ ದೊಡ್ಡೋವು ಕೆರೆದೂರ! ಕುಂದೂರ
ಕೊಡಗರಿಗೆಣ್ಣ ಕೊಡಬ್ಯಾಡಿ!

ಕುಡಲು ಕುಂದೂರಿಗೆ ಕೊಡಿರಮ್ಮ ನಿಮ್ಮೆಣ್ಣ
ಅರವಿ ಚಿಕ್ಕಾವು ಕೆರೆ ಹತ್ತಿರ! ಕುಂದೂರ
ಕೊಡಗರಿಗೆಣ್ಣ ಕೊಡಿರಮ್ಮ!

ಹೊತ್ತಿನಂತೆ ಎದ್ದು ಯಾರ್‍ಯಾರ ನೆನುದೇವೂ
ಎಳ್ಳು ಜೀರಿಗೆ ಬೆಳೆಯೋಳಾ! ಭೂಮಿತಾಯ
ಎದ್ದೊಂದು ಘಳಿಗೆ ನೆನುದೇವೂ!

ಗುಡುಗುಡು ಗುಡ್ಡಂತು ಗುಡಗಲ್ಲು ಬಡ್ಡಂತು
ನಂಜನಗೂಡಿನ ಮ್ಯಾಲೆ ಮಳೆಬಿತ್ತು! ನಂಜಪ್ಪ
ಇವ್ನ ಗೊಂಬೆ ತೇರೀಗೆ ಅರಿಬಿತ್ತೋ!

ಬೋರೆಮ್ಯಾಲೊಂದು ಬೋರಾಡೊದೇನಮ್ಮ
ಹಾವಾಯ್ತೆ ಇವಳ ಮಡುಲಲ್ಲಿ! ಮಾಯಾದ
ಬೂದ್ಯೆತೆ ಇವಳ ಮಡುಲಲ್ಲಿ!

ನಂಜನಗೂಡಿನಲ್ಲಿ ಕಲ್ಲಿಲ್ಲ, ಮುಳ್ಳಿಲ್ಲ
ಸಾಸುವೆ ತ್ವಾರ ಗಿಡುವಿಲ್ಲ! ನಂಜಪ್ಪ
ಸೋಸಿಬಿಟ್ಟವನೆ ದವ್ವನಾವಾ!

ಕಡಲೆಕಾಯಂಗೆ ಕಡುದವರೆ ಬಸುವಾನ
ಕುಡಲೂರಲವರೆ ಶರುಣಾರು! ಶಿವಭಕುತರು
ಕಡುದವ್ರ ಚನ್ನ ಬಸುವಾನಾ!

ಉದ್ದಿನ ಕಾಯಂಗೆ ತಿದ್ದವರೆ ಬಸುವಾನ
ದುದ್ದದಲವರೆ ಶರಣಾರು! ಶಿವಭಕುತಾರು
ದ್ದವರೆ ಚನ್ನುಬಸುವಾನಾ !

ಬಾಗೂರ ಹೆಣ್ಣೆ ಬೇಗ ನಡೆದು ಬಾರೆ
ಭೀಮ ನಿಂತವನೆ ಬಿಸುಲೆಲ್ಲಿ ! ನಿನಗಂಡ
ಬ್ಯಾಗಾನೆ ಅಡುಗೆ ಮಾಡಮ್ಮ !

ತಾಯಿಮನೆ ಜೊಯೀತಿ ತಣ್ಣಾಗೆ ಉರಿಯಲಿ
ತಣ್ಣೀರು ಮೀದು ಮಡಿಯುಟ್ಟು ! ಬರುವಾಗ
ತಣ್ಣಾನೆ ಉರಿಯೆ ಜಗಜ್ಯೋತಿ !

ಕತ್ತಲೆಯ ಮನೆ ಎತ್ತಿರಮ್ಮ ಜ್ಯೋತಿಯ
ಮುತ್ತಿನಣತೆಗೆ ಹವುಳಾದ ! ಬತ್ತಿಯನಾಕಿ
ಎತ್ತೀರಿ ಕೋಡಿಯಮ್ಮನ ಅರುಮನೆಗೆ !

ಅಂತಂತುರುಕೆ ಸುಣ್ಣ ತುದಿಗೆಲ್ಲ ಕೆಮ್ಮಣ್ಣು
ಮಂತ್ರ ಕೋಡಿಯವ್ನ ಅರುಮನೆ! ಒಳಗಡೆ
ಕಂಚಿನವೇಳು ಹರಿವಾಣ!

ಒಪ್ಪತ್ತಿನೂಟ ಚುಚ್ಚಿದ ಬಾಯಿಬೀಗ
ಉಕ್ಕೊ ಮರಳೆಲ್ಲಿ ಬರುವಾರು! ಕೋಡ್ಯಮ್ಮ
ಒಪ್ಪಿಸಿಕೊಳ್ಳೆ ಅರುಕೇಯಾ!

ಕಾಕನಾಕಿನುಭಂಟ ಕೆರೆಯ ಕೋಡಿಲಿಬುಟ್ಟಾ
ಉಲ್ಲಂಗಿಸೀಮ ದೊರೆಮಗ! ಕಿತುಕಾಕೊ
ಕಣುವೆ ಬಾಗುಲುಗೆ ಕದುವಾದೋ!

ಹಾರಿ ಹೊರಟಾವಲ್ಲೆ ಕಿರಿತುಳ್ಳಾಲಿಗೇ
ಕೇರಿ ಕೇರಿಲ್ಲಿ ಮೆರೆಯೋಳಿಗೆ! ಕೋಡ್ಯಮ್ಮನಿಗೆ
ಹಾರಿತೊಂಟಾವ್ರು ಅಯನೂರೂ!

ಆರುತಿ ಇಡಕೊಂಡೂ ಅಂಗೈ ನೊಂದಾವ್ರು
ಮುಂಗಯ್ಯ ಹವುಳ ಜಡುದಾವ್ರೋ! ಕೋಡ್ಯಮ್ಮ
ಎಷ್ಟೊತ್ತೆ ನಿನ್ನ ಅಯಭೋಗಾ!

ಕುಡಲು ಕುಂದೂರು ಅಡವಿರಂಗಾಪುರಾ
ಅಡವಿಲ್ಯಾಕೆಣ್ಣೆ ಕಡುದುಃಖ! ನಿನಗಂಡ
ಕುಡುಲು ಬಾಯೆಲ್ಲಿ ಹತುವಾದ!

* * * * *

ಜನಪದ ದಾಸ ಸಂಪ್ರದಾಯ

ಡಾ. ಎಂ. ನಂಜಯ್ಯ ಹೊಂಗನೂರು

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಆಗ್ನೇಯ ದಿಕ್ಕಿಗೆ ಸುಮಾರು ೨೪ ಕಿ.ಮೀ ದೂರದಲ್ಲಿ ಶ್ವೇತಾದ್ರಿ ಸರಣಿ ಇದೆ. ಅದರ ಮೇಲಿರುವ ಗ್ರಾಮವೇ ಬಿಳಿಗಿರಿರಂಗನ ಬೆಟ್ಟ. ಸುಮಾರು ಮೂರು ಸಾವಿರ ಜನಸಂಖ್ಯೆ ಹೊಂದಿರುವ ಇದು ಸಮುದ್ರಮಟ್ಟದಿಂದ ೫,೦೯೧ ಅಡಿ ಎತ್ತರದಲ್ಲಿದೆ. ಈ ಸ್ಥಳವನ್ನು ಬಿಳಿಗಿರಿರಂಗನ ಬೆಟ್ಟ, ಬೆಳಿಕಲ್ಲು ಮತ್ತು ಶ್ವೇತಾದ್ರಿ ಎಂಬ ನಾನಾ ಹೆಸರುಗಳಿಂದ ಕರೆಯುತ್ತಾರೆ. ಈ ಬೆಟ್ಟದ ಮೇಲಿರುವ ದೇವಸ್ಥಾನದ ಬಳಿ ಇರುವ ಕಮರಿ ಕಲ್ಲು ಬೆಳ್ಳಗಿರುವುದರಿಂದ ಇದನ್ನು ಬಿಳಿಗಿರಿ ಎಂದು ಕರೆಯುವ ಪ್ರತೀತಿ ಇದೆ. ಇದು ಕರ್ನಾಟಕ ರಾಜ್ಯದ ಪುಣ್ಯಕ್ಷೇತ್ರಗಳಲ್ಲಿ ಒಂದೆನಿಸಿಕೊಂಡಿದೆ.

ಈ ಬೆಟ್ಟವನ್ನು ಏರಲು ಎರಡು ರಸ್ತೆಗಳಿವೆ. ಅದರಲ್ಲಿ ಚಾಮರಾಜನಗರದಿಂದ ನಾಗವಳ್ಳಿ, ನಲ್ಲೂರು, ನವೋದಯ ಪಾಠಶಾಲೆ ಮತ್ತು ಕ್ಯಾತೇದೇವರ ಗುಡಿಯ ದಟ್ಟ ಅರಣ್ಯದ ಮಾರ್ಗವಾಗಿ ಹೋಗುವ ೩೬ ಕಿ.ಮೀ. ದೂರದ ಒಂದು ರಸ್ತೆ. ಯಳಂದೂರಿನಿಂದ ಗುಂಬಳ್ಳಿ, ಯರಗಂಬಳ್ಳಿ ಮತ್ತು ಕೃಷ್ಣಯ್ಯನ ಕಟ್ಟೆ ಮಾರ್ಗವಾಗಿ ಹೋಗುವ ೨೪ ಕಿ.ಮೀ. ದೂರದ ಇನ್ನೊಂದು ರಸ್ತೆ. ಅಲ್ಲದೆ ಅನೇಕ ಕಾಲುದಾರಿಗಳು, ಅಡ್ಡ ರಸ್ತೆಗಳು ಬೆಟ್ಟದ ತಪ್ಪಲಿನ ಅನೇಕ ಕಡೆಗಳಲ್ಲಿ ಕಂಡು ಬಂದು ; ಸಾವಿರಾರು ಜನ ಭಕ್ತಾದಿಗಳು ಇಲ್ಲಿಂದ ನಡೆದು ಹೋಗುತ್ತಾರೆ. ಬೆಟ್ಟದ ಇಳಿಜಾರು ಪ್ರದೇಶದಲ್ಲಿ ದಟ್ಟವಾದ ಕಾಡು ಹಬ್ಬಿದ್ದು, ತೇಗ, ಗಂಧ, ಹೊನ್ನೆ, ಮತ್ತಿ, ಜಾಲ, ಬೆಜ್ಜಲು, ಬನ್ನಿ, ಬಿದಿರು ಇನ್ನೂ ಮುಂತಾದ ಬೆಲೆಬಾಳುವ ಉಪಯುಕ್ತ ಮರಗಳು ಬೆಳೆದಿವೆ. ಸುಮಾರು ೧೦ ರಿಂದ ೧೫ ಅಡಿ ಉದ್ದದ ಒಂದು ರೀತಿಯ ಬಾಳೆಹುಲ್ಲುಗಳು ಅಲ್ಲಲ್ಲಿ ವ್ಯಾಪಕವಾಗಿ ಬೆಳೆದಿರುವುದನ್ನು ಕಾಣಬಹುದು. ಇಲ್ಲಿಯ ಕಾಡಿನಲ್ಲಿ ಹುಲಿ, ಚಿರತೆ, ಆನೆ, ಕರಡಿ, ಕಾಡು ಕೋಣ, ಕಾಡು ಎಮ್ಮೆ, ಕುರಿ, ಕೋಳಿ, ಜಿಂಕೆಗಳು ಸಾಧಾರಣವಾಗಿ ಕಂಡುಬರುತ್ತವೆ. ಬೆಟ್ಟದ ಸುತ್ತ ಮುತ್ತಣ ಪ್ರದೇಶಗಳಲ್ಲಿ ಆನೆ ಹಂದಿಗಳ ಹಾವಳಿ ಹೆಚ್ಚಾಗಿದೆ. ಇಲ್ಲಿ ಹವಾಗುಣ ಹಿತಕರವಾಗಿದ್ದು, ಬೆಟ್ಟದ ಎತ್ತರ ಪ್ರದೇಶದ ದೇವಾಲಯವಿರುವ ಕಲ್ಲಿನ ಶಿಖರದಿಂದ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯವನ್ನು ವೀಕ್ಷಿಸಬಹುದು. ಅನೇಕ ಕೆರೆಕಟ್ಟೆಗಳು, ಎತ್ತರವಾದ ಕಟ್ಟಡಗಳು, ಬೆಟ್ಟಗುಡ್ಡಗಳು, ನೀಲಗಿರಿ ಬೆಟ್ಟಸಾಲುಗಳು ಮತ್ತು ಕಾವೇರಿ ನದಿಯ ದೃಶ್ಯಗಳು ದೂರದಿಂದ ಸುಂದರವಾಗಿ ಕಾಣುತ್ತವೆ.

ಇಲ್ಲಿ ಕಳೆದ ಹತ್ತು ವರ್ಷಗಳಿಂದ ಬುಡಕಟ್ಟು ಸಮುದಾಯ ವ ಸೋಲಿಗರ ಪುರೋಭಿವೃದ್ಧಿಗಾಗಿ ತಲೆ ಎತ್ತಿರುವ ಡಾ. ಎಚ್. ಸುದರ್ಶನ್ ನೇತೃತ್ವದ ಸ್ವಾಮಿ ವಿವೇಕಾನಂದ

ಗಿರಿಜನ ಕಲ್ಯಾಣ ಕೇಂದ್ರವಿದೆ ಹಾಗೂ ಆಧ್ಯಾತ್ಮ ತತ್ವಗಳ ಸಂದೇಶವನ್ನು ಸಾರುವ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸ್ವಾಮಿ ನಿರ್ಮಲಾನಂದಾಜೀ ಅವರ ವಿಶ್ವಮಾನವ ಕಲ್ಪನೆಯ "ವಿಶ್ವಶಾಂತಿನಿಕೇತನ" ದಟ್ಟವಾದ ಕಾಡಿನ ಮಧ್ಯಭಾಗದ ಸೋಮರಸನ ಕೆರೆಯ ಎರಡು ದಡಗಳಲ್ಲಿ ನಿರ್ಮಾಣಗೊಂಡಿವೆ. ಬೆಟ್ಟದ ಮೇಲಿನ ಕೆಲವೆಡೆಗಳಲ್ಲಿ ಕಾಫಿ, ಕಿತ್ತಳೆ, ಬಾಳೆ, ಹಿಪ್ಪುನೇರಳೆ ಮತ್ತು ಹಣ್ಣು ತರಕಾರಿ ಬೆಳೆಯುವ ಸಣ್ಣ ತೋಟಗಳಿವೆ. ಕರ್ನಾಟಕ ಸರ್ಕಾರದವರು ಒಂದು ರೇಷ್ಮೆ ಸಂಶೋಧನಾ ಕೇಂದ್ರವನ್ನೂ ಒಂದು ಪ್ರವಾಸಿ ಬಂಗಲೆಯನ್ನೂ ಸ್ಥಾಪಿಸಿ, ಅದರ ಸುತ್ತಲೂ ಸಿಂಕೋನ ಮರಗಳನ್ನು ಬೆಳೆಸಿದ್ದಾರೆ. ಪ್ರಕೃತಿ ಸೌಂದರ್ಯದ ಮಡಿಲಿನಲ್ಲಿರುವ ಈ ತಾಣ ಜನಾಕರ್ಷಣೆಯ ಸ್ಥಳವಾಗಿದೆ.

ಬಿಳಿಗಿರಿರಂಗನ ದೇವಸ್ಥಾನ ಬೆಟ್ಟದ ನೆತ್ತಿಯ ಮೇಲಿದೆ. ಪ್ರಾಕಾರ, ನವರಂಗ ಹಾಗೂ ಮುಖಮಂಟಪಗಳಿವೆ. ದೇವಾಲಯ ದ್ರಾವಿಡ ಶೈಲಿಯ ಕಟ್ಟಡ. ಮುಖ್ಯ ದೇವರಾದ ಬಿಳಿಗಿರಿ ರಂಗಸ್ವಾಮಿ ಸುಮಾರು ನಾಲ್ಕೂವರೆ ಅಡಿಗಳಷ್ಟು ಎತ್ತರವಿರುವ ಸುಂದರ ಶಿಲಾಮೂರ್ತಿ. ಸ್ಥಳ ಪ್ರತೀತಿಯ ಪ್ರಕಾರ ಇಲ್ಲಿಯ ಮೂಲದೇವರನ್ನು ವಶಿಷ್ಠರು ಪ್ರತಿಷ್ಠಾಪಿಸಿದರು. ವಿಷ್ಣುವರ್ಧನರಾಯ ಎಂಬುವವನು ದೇವಾಲಯದ ಜೀರ್ಣೋದ್ಧಾರ ಮಾಡಿದ ಇಲ್ಲಿಯ ಬಿಳಿಕಲ್ಲು ತಿರುವೆಂಕಟನಾಥನಿಗೆ ಹದಿನಾಡಿನ ಮುದ್ದರಾಜ ೧೬೭೭ರಲ್ಲಿ ದತ್ತಿ ಬಿಟ್ಟ ವಿಷಯವನ್ನು ಇಲ್ಲಿರುವ ತಾಮ್ರಶಾಸನ ತಿಳಿಸುತ್ತದೆ. ದಿವಾನ್ ಪೂರ್ಣಯ್ಯನವರು ಈ ದೇವಾಲಯದ ಸೇವೆಗಾಗಿ ಎರಡು ಗ್ರಾಮಗಳನ್ನು ದತ್ತಿಯಾಗಿ ಬಿಟ್ಟರೆಂದು ತಿಳಿಯುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಬಿಳಿಗಿರಿಯನ್ನು ದಕ್ಷಿಣ ತಿರುಪತಿ ಎಂದು ಕರೆಯಲಾಗಿದೆ. ಪ್ರಚಲಿತ ಕಥೆಯೊಂದರ ಪ್ರಕಾರ ಒಮ್ಮೆ ವೆಂಕಟೇಶ್ವರನ ಪತ್ನಿ 'ಅಲುಮೇಲು ಮಂಗಮ್ಮ' ಅಭ್ಯಂಗ ಸ್ನಾನ ಮಾಡಲು ಇಷ್ಟಪಟ್ಟು ಸೀಗೆಕಾಯಿಯನ್ನು ತರಲು ಪತಿದೇವನಿಗೆ ಕೇಳಿಕೊಂಡಳು. ಅದರಂತೆ ವೆಂಕಟೇಶ ಸೀಗೆಕಾಯಿ ತರಲು ಶ್ವೇತಾದ್ರಿ ಅರಣ್ಯಕ್ಕೆ ಬಂದ. ಆಗ ಅಲ್ಲಿ ಸುಂದರ ಸೋಲಿಗ ಹೆಣ್ಣೊಬ್ಬಳನ್ನು ಕಂಡು ಅವಳಲ್ಲಿ ಅನುರಕ್ತನಾಗಿ ಅಲ್ಲಿಯೇ ನೆಲಸಿದನಂತೆ. ಆದ್ದರಿಂದಲೇ ಈಗಲೂ ಈ ಬೆಟ್ಟದಲ್ಲಿ ನೆಲಸಿರುವ ಸೋಲಿಗರು ಬಿಳಿಗಿರಿ ರಂಗಸ್ವಾಮಿಯನ್ನು ತಮ್ಮ ನೆಂಟಭಾವನೆಂದು ಭಾವಿಸುತ್ತಾರೆ.

ಬಿಳಿಗಿರಿ ರಂಗಸ್ವಾಮಿಯ ರಥೋತ್ಸವ ಪ್ರತಿವರ್ಷ ವೈಶಾಖಮಾಸದಲ್ಲಿ ನಡೆಯುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಬೂದಿತಿಟ್ಟಿನ ಮಾದಿಗರು ಶ್ರದ್ಧಾಭಕ್ತಿಗಳಿಂದ ಒಂದು ಜೊತೆ ದೊಡ್ಡ (ಒಂದು ಅಡಿ ಒಂಭತ್ತು ಅಂಗುಲ ಪ್ರಮಾಣದ)ಪಾದರಕ್ಷೆಗಳನ್ನು ಚರ್ಮದಿಂದ ತಯಾರಿಸಿ ಬಿಳಿಗಿರಿ ರಂಗನಾಥನಿಗೆ ಎರಡು ವರ್ಷಕ್ಕೊಮ್ಮೆ ಸಮರ್ಪಿಸುವ ಸಂಪ್ರದಾಯವಿದೆ. ದೇವಸ್ಥಾನದಿಂದ ಸುಮಾರು ೧೬ ಕಿ.ಮೀ. ದೂರದಲ್ಲಿ ಭಾರ್ಗವಿ ಎಂಬ ನದಿ ಮನೋಹರವಾಗಿ ಹರಿಯುತ್ತದೆ. ಪರಶುರಾಮ ಮಾತೃಹತ್ಯಾದೋಷ ಪರಿಹಾರಕ್ಕಾಗಿ ಈ ಪರ್ವತದ ಮೇಲೆ ತಪಸ್ಸನ್ನಾಚರಿಸಿ ಗಂಗಾ ನದಿಯ ನೀರಿನಿಂದ ಭಗವಂತನ ಪಾದಗಳನ್ನು ತೊಳೆದುದರಿಂದ ಆ ನೀರಿನಿಂದಲೇ ಒಂದು ಪುಣ್ಯನದಿ ಉದ್ಭವಿಸಿರುವುದಾಗಿಯೂ ಇದನ್ನೇ 'ಭಾರ್ಗವಿ ನದಿ' ಎಂದು ಕರೆಯಲಾಯಿತು ಎಂದು ಐತಿಹ್ಯ. ಈ ನದೀ ತೀರದಲ್ಲೇ ವೈಖಾನಸವಾಲ ಬಿಲ್ಯಾದಿಮುನಿ ಪುಂಗವರು ತಪಸ್ಸನ್ನು ಆಚರಿಸಿದರು. ಈ

ಸ್ಥಳದಲ್ಲಿಯೇ ದೊಡ್ಡ ಸಂಪಿಗೆ ಎಂಬ ಮಹಾ ವೃಕ್ಷವಿದೆ. ಈ ಮರದ ಮೂರು ಕೊಂಬೆಗಳು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಸಂಕೇತವೆಂದು ಕರೆಯಲಾಗಿದೆ. ಈ ವೃಕ್ಷದ ಸಮೀಪದಲ್ಲಿಯೇ ಮಹಾದೇವನು ದುರ್ಗಾದೇವಿಯು ಸನ್ನಿಹಿತರಾಗಿರುತ್ತಾರೆಂದೂ ಪ್ರತೀತಿ. ಈ ಹೆಮ್ಮರದ ಬುಡದಲ್ಲಿ ಗುಂಡಗಿರುವ ಕಪ್ಪಾದ ಕಲ್ಲುಗಳು ಸಾಲಿಗ್ರಾಮಗಳೆಂದು ನಂಬಿಕೆ. ಬೆಟ್ಟದ ಮೇಲೆ ಗಂಗಾಧರೇಶ್ವರ ಎಂಬ ಇನ್ನೊಂದು ಗುಡಿ ಇದೆ. ಭಸ್ಮಾಸುರನಿಗೆ ವರದಾನ ಮಾಡಿ ಅವನಿಂದಲೇ ವಂಚಿತರಾದ ರುದ್ರದೇವನ ಸಂರಕ್ಷಣೆಗಾಗಿ ಶ್ವೇತಾದ್ರೀಶ ಮೋಹಿನೀ ರೂಪ ತಾಳಿ ಅಸುರನನ್ನು ಭಸ್ಮೀಭೂತನನ್ನಾಗಿ ಮಾಡಿದನೆಂದೂ, ಅನಂತರದ ರುದ್ರದೇವ ಗಂಗಾಧರನೆಂಬ ಹೆಸರಿನಿಂದ ಈ ಸ್ಥಳದಲ್ಲೇ ನೆಲಸಿದ ನೆಂದೂ ಪ್ರತೀತಿ.

ಶ್ವೇತಾದ್ರಿ ಬೆಟ್ಟದೊಡೆಯ ಬಿಳಿಗಿರಿ ರಂಗಸ್ವಾಮಿಯ ಭಕ್ತರು ಹೊಂಗನೂರಿನ ಬಹುತೇಕ ಎಲ್ಲ ಜಾತಿ ಸಮುದಾಯದವರಲ್ಲಿ ಕಂಡು ಬಂದರೂ, ಪ್ರಸ್ತುತ ಲೇಖನದಲ್ಲಿ ದಲಿತವರ್ಗದ ಸಂಪ್ರದಾಯವನ್ನು ಮಾತ್ರ ಕುರಿತು ವಿವೇಚಿಸಲಾಗಿದೆ. ಇನ್ನಿತರ ಸಂಪ್ರದಾಯಗಳಿಗಿಂತ ದಾಸ ಸಂಪ್ರದಾಯ ಈ ಊರಿನಲ್ಲಿ ಹೆಚ್ಚು ಪ್ರಚಲಿತವಾಗಿದ್ದು, ಅನೇಕ ಒಕ್ಕಲುಗಳು ಬಿಳಿಗಿರಿರಂಗನ ಭಕ್ತರಾಗಿ ಪ್ರತಿಯೊಂದು ಶನಿವಾರದಲ್ಲೂ ಸ್ಮರಿಸುತ್ತಾರೆ. ದಾಸರು, ಮಂಟೇಲಿಂಗಯ್ಯನ ನೀಲಗಾರರು, ಮಲೆಯಮಾದೇಶ್ವರನ ದೇವರಗುಡ್ಡರಿಗಿಂತ ಭಿನ್ನವಾದ ಆಚಾರ, ವಿಚಾರ ಮತ್ತು ನಂಬಿಕೆ ನಡಾವಳಿಗಳನ್ನು ಹೊಂದಿದ್ದಾರೆ. ಗ್ರಾಮದ ಎಲ್ಲಾ ದೇವತಾ ಕಾರ್ಯಗಳಲ್ಲಿ ಅಂದರೆ ಮದುವೆ, ಹುಟ್ಟು, ಸಾವು, ಗೃಹಪ್ರವೇಶ, ಹಬ್ಬ-ಹರಿದಿನ ಹರಿಸೇವೆ, ಚಿಕ್ಕ ಜಾತ್ರೆ ಮತ್ತು ದೊಡ್ಡ ಜಾತ್ರೆಯ ವಿಶೇಷ ಸಂದರ್ಭಗಳಲ್ಲಿ ದಾಸರ ಪಾತ್ರ ಹಿರಿದಾದುದು. ಹುಟ್ಟಿದ ಮಗುವಿಗೆ ನಾಮಕರಣ ಮಾಡುವವರು;ಸತ್ತ ಮುಟ್ಟು ಹೆತ್ತ ಮುಟ್ಟು ಕಳೆಯುವವರು ಈ ದಾಸರು. ಹೊಸದಾಗಿ ಮನೆಗೆ ಹೋಗುವಾಗ, ಹೊಲಗದ್ದೆಗಳಲ್ಲಿ ಹರಿಸೇವೆ ಮತ್ತು ಮಲ್ಲಂಡೆ ಮಾಡುವಾಗ ದಾಸಯ್ಯನನ್ನು ಕರೆದು ದೇವರ ಪೂಜೆ ಮಾಡಿಸುತ್ತಾರೆ. ಸಾಧಾರಣವಾಗಿ ದಾಸರಿಲ್ಲದ ಊರುಗಳೇ ಕಾಣಬರುವುದಿಲ್ಲ. ಒಂದು ವೇಳೆ ಇವರಿಲ್ಲದಿದ್ದರೆ ಊರಿನ ಎಲ್ಲಾ ದೇವತಾ ಕಾರ್ಯಗಳು ಕುಂಠಿತಗೊಳ್ಳುತ್ತವೆ. ಹೊಂಗನೂರಿನಲ್ಲಿ ನೆಲೆಗೊಂಡಿರುವ ಜನಗಳಲ್ಲಿ ಶೇ. ೫೦ರಷ್ಟು ಕುಟುಂಬಗಳು ಬಿಳಿಗಿರಿ ರಂಗನ ಒಕ್ಕಲುಗಳಾಗಿದ್ದು ಅವನ ಮಹಿಮೆಯನ್ನು ಕೊಂಡಾಡುತ್ತಾರೆ. ಈ ಊರಿನಿಂದ ಸುಮಾರು ೧೨ ಕಿ.ಮೀ. ದೂರದಲ್ಲಿ ಶ್ವೇತಾದ್ರಿ ನೆತ್ತಿಯಲ್ಲಿ ಬಿಳಿಗಿರಿರಂಗನ ಬೆಟ್ಟವನ್ನು ಕಾಣಬಹುದು. ಇಲ್ಲಿಯ ಅನೇಕ ಭಕ್ತರು ಕಾಲು ದಾರಿಯಲ್ಲಿ ಕಾಡು ಮೇಡು ಹತ್ತಿ ರಂಗನ ದರ್ಶನ ಪಡೆಯುತ್ತಾರೆ. ಈ ಬಿಳಿಗಿರಿ ರಂಗನ ಬೆಟ್ಟವೇ ಎಲ್ಲಾ ದಾಸರಿಗೂ ಮೂಲ ಕೇಂದ್ರವಾಗಿದೆ. ಇಲ್ಲಿ ದಲಿತರು, ಗಾಣಿಗರು, ಪರಿವಾರದವರು, ಅಗಸರು, ಒಕ್ಕಲಿಗರು, ಕುರುಬರು ಮತ್ತು ಉಪ್ಪಾರರು ತಮ್ಮ ಆರಾಧ್ಯ ದೈವ ರಂಗನ ಸ್ಮರಣೆಗಾಗಿ ದೊಡ್ಡ ತೇರು ಬೀದಿಯ ಆಜುಬಾಜಿನಲ್ಲಿ ಒಂದೊಂದು ಬಿಡದಿ ಮತ್ತು ಮಂಟಪಗಳನ್ನು ಕಟ್ಟಿಕೊಂಡಿದ್ದಾರೆ.

ಶ್ರಾವಣ ಮಾಸದಲ್ಲಿ ಪ್ರತಿಯೊಬ್ಬ ದಾಸನು ಪ್ರತಿಯೊಂದು ಶನಿವಾರದಲ್ಲೂ ಬೆಟ್ಟಕ್ಕೆ ಹೋಗಿ ಪೂಜೆ ಮಾಡಿಬರುತ್ತಾನೆ. ಸಂಕ್ರಾಂತಿಯ ಸಂದರ್ಭದಲ್ಲಿ ಗಿರಿಯ ಮೇಲಿರುವ ಚಿಕ್ಕ

ತೇರನ್ನು ಎಳೆದು ಚಿಕ್ಕ ಜಾತ್ರೆಯನ್ನು ಮಾಡುತ್ತಾರೆ. ಆ ಸಂದರ್ಭದಲ್ಲಿ ಊರಿನಲ್ಲಿ ಪ್ರತಿಯೊಬ್ಬರೂ ಮೀಸಲಾಗಿಟ್ಟ ಹೊಸ ಭತ್ತವನ್ನು ತೆಗೆದು ಕುಟ್ಟಿ ಅಕ್ಕಿ ಮಾಡಿ ಬೆಲ್ಲ, ಕಾಯಿ, ಕಜ್ಜಾಯ, ಕಡಲೆಪುರಿ ಇನ್ನೂ ಮುಂತಾದ ಪದಾರ್ಥಗಳನ್ನು ಮಿಶ್ರಣ ಮಾಡಿ ಬೇಟೆ ಮಣೆ (ಮಣೆ ಸೇವೆ) ಮಾಡಿಸಿ, ದೇವರಿಗೆ ಅರ್ಪಿಸಿ ಉಳಿದ ಬೇಟೆ ಮಣೆ ಅಕ್ಕಿಯನ್ನು ಮನೆಗೆ ತರುತ್ತಾರೆ. ಈ ಜಾತ್ರೆಗೆ ಹೊಸದಾಗಿ ಮದುವೆಯಾದ ಜೋಡಿಗಳು ಹೋಗಿ ಪೂಜೆ ಮಾಡಿ ದೇವರಿಗೆ ಅಡ್ಡಬಿದ್ದು ವಂದಿಸಿ, ರಂಗನ ಚಿಕ್ಕ ತೇರಿಗೆ ಬಾಳೆ ಹಣ್ಣು ಜವನೆ ಎಸೆಯುವರು. ಇದೇ ಮಾದರಿಯಲ್ಲಿ ಮೇ ತಿಂಗಳಿನಲ್ಲೂ ದೊಡ್ಡ ಜಾತ್ರೆ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಸಂದರ್ಭದಲ್ಲೂ ಸಾವಿರಾರು ಜನ ಸೇರಿದ್ದು ಮದುವೆಯಾದ ನವ ಜೋಡಿಗಳು ರಂಗನ ತೇರಿಗೆ ಹಣ್ಣು ಜವನೆ ಎಸೆದು ಕೈ ಮುಗಿಯುತ್ತಾರೆ. ಸೋಲಿಗರು ತಮ್ಮ ಪೋಡುಗಳಲ್ಲಿ ಬೆಳೆದಿರುವ ದವಸಧಾನ್ಯ ಮತ್ತು ಹಾವು ಮೆಕ್ಕೆ ಕಾಯಿಗಳನ್ನು ಎಸೆದು ತಮ್ಮ ರಂಗಭಾವನನ್ನು ಕೂಗುತ್ತಾ, ಹಾಡುತ್ತಾ ಕುಣಿಯುವರು. ತೇರು ಹರಿದು ಮುಗಿದ ಮೇಲೆ ಎಲ್ಲರೂ ತಮ್ಮ ತಮ್ಮ ಮಂಟಪಗಳನ್ನು ಸೇರಿ. ನೀರು ಮಜ್ಜಿಗೆ, ಪಾನಕ, ಹೆಸರು ಬೇಳೆ ಕೋಸಂಬರಿ ಮಾಡಿ ಬಂದಿರುವ ಪರುಸೆಗೆಲ್ಲ ಹಂಚಿ ಸಂಜೆ ವೇಳೆಗೆ "ಮಂಟಪೋತ್ಸವ" ಮಾಡಿಸುವರು.

ಮರುದಿನ ಜಾತ್ರೆಗೆ ಬಂದಿದ್ದ ಜನರೆಲ್ಲರೂ ತಾವು ತಂದಿದ್ದ ಕುರಿ, ಕೋಳಿ, ಹಂಡೆ, ಮಡಿಕೆ, ಕುಡಿಕೆ, ಮಕ್ಕರಿ ಮೊದಲಾದ ಸಾಮಾನುಗಳೆಲ್ಲವನ್ನೂ ಹೊತ್ತುಕೊಂಡು ಸೋಮರಸನ ಕೆರೆಯ ಬದಿಗೆ ಹೊರಡುವರು. ಹಾಗೆಯೇ ಮುಂಜಾನೆ ಎದ್ದು ಊರಿನಿಂದ ಬಂದ ಜನ ಇವರ ಜೊತೆಗೂಡಿ ಒಂದು ಸ್ಥಳವನ್ನು ಹಿಡಿದು (ಹರಿಸೇವೆ ಮಾಡಲು) ಸ್ವಚ್ಛಗೊಳಿಸುವರು. ಅನಂತರ ಪ್ರತಿಯೊಂದು ಗುಂಪಿನವರು ಹೊಸ ಹರಿವೆಯಿಂದ ನೀರನ್ನು ತಂದು ಪೂಜೆ ಮಾಡಿ ಮರಿವದರಿಸಿ ಕೋಯ್ದು ಸ್ವಚ್ಛಗೊಳಿಸಿ ಒಲೆ ಹೊಡ್ಡಿ ಅಡಿಗೆ ಮಾಡಿ ದೇವರಿಗೆ ಎಡೆ ಇಟ್ಟು, ಎಲ್ಲರೂ ಪಂಕ್ತಿಯಲ್ಲಿ ಕೂತು ಊಟ ಮಾಡಿ ಅಂದೇ ಊರಿಗೆ ಹಿಂದಿರುಗುವರು.

ದಾಸನ ಬಿಡುವ ಕ್ರಮ

ಬಿಳಿಗಿರಿರಂಗನ ಒಕ್ಕಲಿಗೆ ಸೇರಿದ್ದವರು ತಮ್ಮ ಮಗನನ್ನು ದಾಸನನ್ನಾಗಿ ಬಿಡಬೇಕಾದರೆ ಕನಿಷ್ಠ ೧೨ ವರ್ಷದಿಂದ ೧೭ ವರ್ಷದೊಳಗಿರಬೇಕು. ದೇವರ ಹೆಸರಿನಲ್ಲಿ ಒಂದು ವರ್ಷ ಮೊದಲೆ ಮರಿಯೊಂದಕ್ಕೆ ತೀರ್ಥ ಪ್ರಸಾದ ಹಾಕಿ ಬಿಟ್ಟಿರುತ್ತಾರೆ. ಅವರು ಹಣಕಾಸೆಲ್ಲವನ್ನು ಹೊಂದಿಸಿಕೊಂಡ ಮೇಲೆ ದಾಸ ಯಜಮಾನಸೊಂದಿಗೆ ಕೂತು ಸಮಾಲೋಚಿಸಿ ಒಂದು ನಿಗದಿಯಾದ ದಿನವನ್ನು ಗೊತ್ತುಪಡಿಸಿಕೊಳ್ಳುತ್ತಾರೆ. ಆ ದಿನ ಎಲ್ಲ ದಾಸರು ಸ್ನಾನ ಮಾಡಿ ಲಾಂಛನಗಳ ಸಮೇತ ಬಂದು ದಾಸನಾಗುವ ವ್ಯಕ್ತಿಯನ್ನು ಕರೆದು ಹಸೆಮಣೆ ಮೇಲೆ ಕೂರಿಸಿ ಮಂಡೆ ಚೌರ, ಸ್ನಾನಾದಿಗಳನ್ನು ಮಾಡಿಸಿ ; ಗಂಧ ಕುಂಕುಮ ಇಡಿಸಿ ಹೊಸಬಟ್ಟೆಗಳನ್ನು ಅವನಿಗೆ ತೊಡಿಸಿ ಐದು ಜನ ಮುತ್ತೈದೆಯರನ್ನು ಕರೆಸಿ ಅಕ್ಕಿಶಾಸ್ತ್ರ ಮಾಡಿ. ಕಂಕಣಧಾರಣೆ ಮಾಡುವರು. ಅನಂತರ ಎಲ್ಲಾ ದಾಸರು ಸೇರಿ ಗುರುಗಳ ಮನೆಯಿಂದ ದೊಡ್ಡ ದೇವರನ್ನು (ಹರಿಗೆ) ತಂದು ರಂಗೋಲಿ ಬಿಟ್ಟು ಅದರ ಮೇಲೆ ಕೂರಿಸಿ ಕಡ್ಲೆಪುರಿ, ಕಾಯಿ, ಬಾಳೆಹಣ್ಣು ಗಂಧದಕಡ್ಡಿಯಿಂದ

ಪೂಜೆ ಮಾಡಿ ದೇವರ ಹೆಸರಿನಲ್ಲಿ ಬಿಟ್ಟಿರುವ ಮರಿಗೆ ತೀರ್ಥವನ್ನು ಹಾಕಿ ವದರಿಸುವರು. ಅನಂತರ ವದರಿದ ಮರಿಯನ್ನು ಕುಯ್ದು ಅಡಿಗೆ ಮಾಡಿ ರಾತ್ರಿ ವೇಳೆಯಲ್ಲಿ ಎಲ್ಲಾ ದಾಸರು ಸೇರಿ ನಾಲ್ಕು ಚೆಂಬು ಮಧ್ಯ ಒಂದು ಕಳಸಕ್ಕೆ ನೂಲೆಳೆದು ಗಂಧಾಕ್ಷತೆ ಇಟ್ಟು ಪೂಜೆ ಮಾಡುವರು. ಆಮೇಲೆ ಹೊಸದಾಸನನ್ನು ಕಳಸದ ಮುಂದೆ ಕೂರಿಸಿ ತೆರೆಹಾಕಿ ಮೂರು ಸಾರಿ "ಅಡಿನ್‌ದಾಸು, ಅಡಿನ್‌ದಾಸು, ಅಡಿನ್‌ದಾಸು" ಎಂದು ಹೇಳಿ ಅಡ್ಡ ಕೆಡುವರು. ಇದಾದ ಸ್ವಲ್ಪ ಸಮಯದ ನಂತರ ಗಂಜಳ, ಎಳೆನೀರು, ಕಲ್ಲು ಸಕ್ಕರೆ, ತುಳಸಿ ರಸವನ್ನು ಅವನ ಹೊಟ್ಟೆಗೆ ಕೊಟ್ಟು ತೆರೆತೆಗೆದು ಕಳಸದ ಮುಂದೆ ಕೂರಿಸಿ ; ಒಂದು ಹೊಸ ಮಣ್ಣಿನ ತಟ್ಟೆಯಲ್ಲಿ (ಪಾಸಾಲೆ) ಬೆಂಕಿ ಕೆಂಡವನ್ನು ತುಂಬಿ ಶಂಕು, ಚಕ್ರವಿರುವಂತಹ ಮುದ್ರೆ ಕೋಲನ್ನು ಬೆಂಕಿಯಲ್ಲಿ ಕಾಯಿಸಿ ಬಲಗಡೆ ಭುಜದಲ್ಲಿ ಚಕ್ರದ ಗುರುತನ್ನು, ಎಡಗಡೆ ಭುಜದಲ್ಲಿ ಶಂಖುವಿನ ಗುರುತನ್ನು ಒತ್ತುವರು. ಅನಂತರ ಅವನ ಕೈಯಲ್ಲಿ ಒಂದು ಜೊನ್ನೆ ಮಾಂಸ, ಮತ್ತೊಂದು ಕೈಯಲ್ಲಿ ಸೇಂದಿ ಅಥವಾ ಸಾರಾಯಿ ಹಿಡಿಸಿ ಗುರುಗಳು ತುಳಸಿಯಿಂದ ಎತ್ತಿ ದೇವರಿಗೆ ಆರಾಧಿಸುವರು. ಕೊನೆಗೆ ದಾಸನ ಬಿಡುವ ಕಾರ್ಯಕ್ರಮದಲ್ಲಿ ಬಂದು ಭಾಗವಹಿಸಿದ ದಾಸರೆಲ್ಲ ಊಟ ಮಾಡಿ ಅವರವರ ಮನೆಗೆ ಹಿಂದಿರುಗುವರು.

ಮಾರನೆಯ ದಿನ ಬೆಳಿಗ್ಗೆ ಮತ್ತೆ ಎಲ್ಲಾ ದಾಸರು ಬಂದು ಸೇರುತ್ತಾರೆ. ಒಬ್ಬ ಮುಖ್ಯ ದಾಸಯ್ಯ (ಸಮರಯ್ಯ) ಹಸೆಮಣೆಯ ಮೇಲೆ ಹೊಸದಾಸನನ್ನು ನಿಲ್ಲಿಸಿ ತುಳಸೀಮಾಲೆ ಮತ್ತು ರುದ್ರಾಕ್ಷಿ ಮಾಲೆಯನ್ನು ಹಾಕಿ ಕಣಜ, ಶಂಖು, ಜಾಗಟೆ ಕೊಟ್ಟು, ಹಣೆಗೆ ಎರಡು ಬಿಳಿನಾಮ ಮಧ್ಯೆ ಒಂದು ಕೆಂಪು ನಾಮವನ್ನಿಟ್ಟು ಪಾದಪೂಜೆ ಮಾಡಿದರೆ ಉಳಿದೆಲ್ಲಾ ದಾಸರು ತಮ್ಮ ಲಾಂಛನಗಳಿಂದ ಕುಟ್ಟಿ ಶಬ್ದ ಮಾಡುತ್ತಾರೆ. ಮನೆತನದ ತಂದೆ, ತಾಯಿಗಳು ದೇವರನ್ನು ಪ್ರಾರ್ಥಿಸುತ್ತ ಪಾದಪೂಜೆ ಮಾಡಿ ಕಣಜಕ್ಕೆ ಐದುಕಾಲು ರೂಪಾಯಿ, ಐದು ಪಾವು ಧಾನ್ಯ ಹಾಕಿ ಕಾಲಿಗೆ ಶರಣು ಮಾಡಿಕೊಳ್ಳುವರು.

ಪಾದಪೂಜೆಯಾದ ಬಳಿಕ ಎಲ್ಲಾ ದಾಸರು ಹೊಸ ದಾಸನ ಸಮೇತ ಊರಿನ ದೇಶ ಶೆಟ್ಟರಲ್ಲಿಗೆ ಹೋಗಿ ಅವರಿಗೆ ಎಲೆ ಅಡಿಕೆ, ತೆಂಗಿನಕಾಯಿ ಕೊಟ್ಟು, ಅವರಿಂದ ಆಶೀರ್ವಾದ ಪಡೆದ ನಂತರ ಇಡೀ ಊರಲ್ಲಿ ಭಿಕ್ಷೆ ಮಾಡಿ (ಉಪಧಾನ) ಮನೆಗೆ ಹಿಂದಿರುಗುತ್ತಾರೆ. ಹೀಗೆ ಬಂದವರನ್ನು ಮನೆಯ ಮುಂಭಾಗದಲ್ಲಿ ನಿಲ್ಲಿಸಿ ಆರತಿ ಬೆಳಗಿ, ಒಳಗೆ ಬರಮಾಡಿಕೊಂಡು ಊಟೋಪಚಾರ ಮಾಡಿಸುತ್ತಾರೆ. ಈ ಸಂದರ್ಭದಲ್ಲಿ ಎಲ್ಲಾ ದಾಸರು ಉಪಧಾನ ಮಾಡಿ ತಂದಿದ್ದ ಹಣ ಮತ್ತು ದವಸ ಧಾನ್ಯಗಳೆಲ್ಲವನ್ನು ಸಮನಾಗಿ ಹಂಚಿಕೊಂಡು ತಮ್ಮ ತಮ್ಮ ಮನೆಗೆ ಹಿಂದಿರುಗುವರು. ಹೊಸದಾಗಿ ಬಿಟ್ಟ ದಾಸನ ಜೊತೆ ಒಬ್ಬ ಅನುಭವಿ ದಾಸನು ಪ್ರತಿ ಶನಿವಾರ ಊರಿನ ಪ್ರತಿಯೊಂದು ಮನೆಗೂ ಹೋಗಿ ಭಿಕ್ಷೆ ಮಾಡಿಸಿ ಕರೆದುಕೊಂಡು ಬರುತ್ತಾನೆ. ಇದಾದ ಐದು ವಾರದ ನಂತರ ಅವನು ದಾಸರ ಗುಂಪಿಗೆ ಸೇರಿಕೊಳ್ಳುತ್ತಾನೆ.

ದಾಸಯ್ಯ ಮದುವೆಯಾದ ಮೇಲೆ ಗಂಡು, ಹೆಣ್ಣು ಇಬ್ಬರೂ ಮುದ್ರೆಧಾರಣೆ ಮಾಡಿಸಿಕೊಂಡು ದಾಸರ ಪಣಕಟ್ಟಿಗೆ ಸೇರಬೇಕಾಗುತ್ತದೆ. ಆದರೆ ದಾಸ ಮನೆತನದ ಹೆಣ್ಣನ್ನು ತಂದು ಮದುವೆ ಮಾಡಿಕೊಂಡರೆ ಮುದ್ರೆ ಧಾರಣೆಯ ಅವಶ್ಯಕತೆ ಇರುವುದಿಲ್ಲ. ಹೊಸದಾಗಿ ಮದುವೆಯಾದ

ದಾಸಯ್ಯ ಯಜಮಾನ್ ಸಮರಯ್ಯನ ಹತ್ತಿರ ಹೋಗಿ 'ನಾನು ಮುದ್ರೆ ಧಾರಣೆ ಮಾಡಿಸಿಕೊಳ್ಳಬೇಕು' ಅಂತ ಕೇಳಿಕೊಂಡಾಗ, ಯಜಮಾನ್ ಸಮರಯ್ಯ ಮುದ್ರೆಧಾರಣೆಗೆ ಸಂಬಂಧಪಟ್ಟ ಎಲ್ಲಾ ಪದಾರ್ಥಗಳನ್ನು ಹೇಳಿ ಅವನಿಂದ ತರಿಸುತ್ತಾನೆ. ರಾತ್ರಿ ವೇಳೆ ಎಲ್ಲಾ ದಾಸರುಗಳು ಶುಚಿಯಾಗಿ ಲಾಂಛನಗಳ ಸಮೇತವಾಗಿ ಮನೆಗೆ ಬಂದು ದೇವರನ್ನು ಧಾನ್ಯದ ಮೇಲೆ ಕುಳ್ಳಿರಿಸಿ ಮುಂದೆ ರಂಗೋಲಿ ಇಟ್ಟು ನಾಲ್ಕು ಚಂಬು, ಒಂದು ಕಳಸ ಅದರ ಮೇಲೆ ಒಂದು ತೆಂಗಿನ ಕಾಯಿ ಇಟ್ಟು ಪೂಜಿಸಿ ಕಳಸದ ಹಿಂದಕ್ಕೆ ಒಂದು ಕಾಯಿ ಹೊಡೆದು ಗಂಡ ಹೆಂಡತಿಗೆ ತೀರ್ಥ ಇಟ್ಟು ನಾಮಧರಿಸಿ "ಅಡಿನ್ ದಾಸು, ಅಡಿನ್ ದಾಸು, ಅಡಿನ್ ದಾಸು" ಎಂದು ಮೂರು ಬಾರಿ ಅಡ್ಡ ಬೀಳಿಸುತ್ತಾರೆ. ಇದಾದನಂತರ ಅವರನ್ನು ಹಾಸಿದ ಕರಿಕಂಬಳಿಯ ಮೇಲೆ ಕುಳ್ಳಿರಿಸಿ ಹೊಸ ಮಣ್ಣಿನ ಬಟ್ಟಲಿನಲ್ಲಿ ಕೆಂಡವನ್ನು ತುಂಬಿ ತಂದು ಶಂಖ ಚಕ್ರದ ಮುದ್ರೆಯನ್ನು ಕಾಯಿಸಿ ಬಲಭುಜಕ್ಕೆ ಶಂಖುವಿನ ಗುರುತನ್ನೂ, ಎಡಭುಜಕ್ಕೆ ಚಕ್ರದ ಗುರುತನ್ನೂ ಹಾಕುವರು. ಗಂಡ ಹೆಂಡತಿಯರಿಬ್ಬರಿಗೂ ಪೂಜೆ ಮಾಡಿ ತೀರ್ಥ ಪ್ರಸಾದ ಕೊಟ್ಟ ಬಳಿಕ ಅವರಿಬ್ಬರ ಎರಡು ಕೈಯಲ್ಲಿ ಮಾಂಸ, ಸಾರಾಯಿ ಅಥವಾ ಹೆಂಡ ಹಿಡಿಸಿ ಪಂಕ್ತಿಯಲ್ಲಿ ಕುಳಿತಿರುವ ಎಲ್ಲಾ ದಾಸರ ಬಾಯಿಗೆ ಒಂದೊಂದು ಮಾಂಸದ ತುಂಡನ್ನು ಹಾಕಿ, ಸ್ವಲ್ಪ ಸ್ವಲ್ಪವೇ ಸಾರಾಯಿಯನ್ನು ಕುಡಿಸಿ ಉಳಿದೆಲ್ಲವನ್ನೂಗಂಡ ಹೆಂಡತಿಯರಿಬ್ಬರೂ ಉಪಯೋಗಿಸುತ್ತಾರೆ. ಮುದ್ರೆಧಾರಣೆ ಮಾಡುವುದಕ್ಕೂ ಮೊದಲು ಯಜಮಾನ್ ಸಮರಯ್ಯ ಹೆಣ್ಣಿನ ತಂದೆ ತಾಯಿಯನ್ನು ಕರೆಸಿ ಇದುವರೆವಿಗೂ ನಿಮ್ಮ ಮಗಳು, ನಿಮ್ಮ ಸಂಪ್ರದಾಯದಲ್ಲಿದ್ದಳು. ಆದರೆ, ಈಗ ನಮ್ಮ ಸಂಪ್ರದಾಯಕ್ಕೆ ಸೇರಿಸಿಕೊಳ್ಳುತ್ತೇವೆ. ಇದಕ್ಕೆ ನಿಮ್ಮ ಒಪ್ಪಿಗೆ ಇದೆಯೇ? ಎಂದು ಕೇಳಿದಾಗ ತಂದೆ, ತಾಯಿ ಇಬ್ಬರೂ 'ಒಪ್ಪಿಗೆ' ಎಂದಾಕ್ಷಣವೇ ಮುದ್ರೆಯನ್ನು ಹಾಕುತ್ತಾರೆ.

ಶವಸಂಸ್ಕಾರ

ಊರಿನಲ್ಲಿ ಯಾರಾದರೂ ದಾಸರು ಅಥವಾ ಅವನ ಕುಟುಂಬದವರು ಸತ್ತು ಹೋದರೆ ಸಂಬಂಧಪಟ್ಟವರು ತಕ್ಷಣದಲ್ಲೇ ಯಜಮಾನ್ ಸಮರಯ್ಯನಿಗೆ ತಿಳಿಸುತ್ತಾರೆ. ಸಮರಯ್ಯನ ಮುಖಾಂತರ ಸುದ್ದಿ ತಿಳಿದ ಮೇಲೆ ಎಲ್ಲಾ ದಾಸರು ಬಂದು ಸೇರಿಕೊಳ್ಳುತ್ತಾರೆ. ಒಂದು ವೇಳೆ ಅವರು ಈ ದಾಸಯ್ಯನ ಉತ್ತರ ಕ್ರಿಯಾದಿ ಕಾರ್ಯಕ್ರಮದಲ್ಲಿ ಭಾಗವಹಿಸದಿದ್ದರೆ ದಾಸರ ನ್ಯಾಯ ವ್ಯವಸ್ಥೆಯ ಅಡಿಯಲ್ಲಿ ತಪ್ಪು ವಿಧಿಸುವ ಸಂದರ್ಭ ಉಂಟು. ಕಾಯಿಸಿದ ಬಿಸಿ ನೀರಿನಿಂದ ಹೆಣವನ್ನು ತೊಳೆದು ಹೊಸ ಬಟ್ಟೆ ಉಡಿಸಿ ಕುರ್ಚಿಯ ಮೇಲೆ ಕೂರಿಸಿ ಶೃಂಗರಿಸುವರು. ಅದಾದ ನಂತರ ದಾಸಯ್ಯನ ಕಳೇಬರಕ್ಕೆ ಕಾಯಿ ಹೊಡೆದು ಪೂಜೆ ಮಾಡಿ ಹಣೆಗೆ ನಾಮವಿಟ್ಟು, ಬಾಯಿಗೆ ತುಳಸೀ ದಳದಿಂದ ತೀರ್ಥವನ್ನು ಚಿಮುಕಿಸಿ, ತುಳಸೀ ಮಾಲೆಯನ್ನು ಕೊರಳಿಗೆ ಹಾಕಿ, ಶಂಖು, ಜಾಗಟೆಗಳ ನಾದದೊಂದಿಗೆ ಮಂಗಳಾರತಿ ಮಾಡಿ ಸ್ಮರಿಸುವರು. ಅನಂತರ ನಾಲ್ಕು ಜನ ದಾಸರು ಕೈಯಲ್ಲಿ ಗಂಧದ ಕಡ್ಡಿಯನ್ನು ಹಿಡಿದು ಚಟ್ಟದ ಮೇಲೆ ಮಲಗಿಸಿರುವ ಹೆಣವನ್ನು ಸ್ಮಶಾನಕ್ಕೆ ಒಯ್ಯುತ್ತಾರೆ. ಹಳ್ಳದ ನಾಲ್ಕು ಮೂಲೆಗೂ ಕುಂಕುಮವನ್ನು ಧರಿಸಿ ಕಳೇಬರವನ್ನು ಒಳಗೆ ಮಲಗಿಸಿ ಮೇಲೆ ತುಳಸೀ ಮಾಲೆಯನ್ನು ಹಾಕಿ ; ತಲೆಯ ಹಿಂದುಗಡೆ ಒಂದು ಕಾಲು ರೂಪಾಯಿ ಇಟ್ಟು, ಹೆಣಕ್ಕೆ

ಹೊದಿಸಿದ ಬಟ್ಟೆಯನ್ನು ನಾಲ್ಕು ಇಂಚಿನಷ್ಟು ಅಗಲ ಹರಿದುತಂದು ಯಜಮಾನ್ ಸಮರಯ್ಯನಿಗೆ ಕೊಡುತ್ತಾರೆ. ಸಮರಯ್ಯ ತಿರುಮಂತ್ರ ಹೇಳಿ (ರಂಗನ ಸ್ಮರಣೆ) 'ಶ್ರೀರಾಮ ರಾಮ ಗೋವಿಂದಾ ಅನ್ನಿ, ಇಹಲೋಕ ಬಿಟ್ಟು ಪರಲೋಕವನ್ನು ಸೇರಿರುವ ರಂಗಯ್ಯನಿಗೆ ದೇವರ ಸದ್ಗತಿ ಉಂಟಾಗಲಿ' ಎಂದಾಗ ಎಲ್ಲರೂ 'ಗೋವಿಂದಾ' ಎಂದು ಕೂಗುವರು. ಸ್ಮಶಾನಕ್ಕೆ ಹೋಗಿದ್ದ ಜನಗಳೆಲ್ಲಾ ಒಂದೊಂದು ಹಿಡಿ ಮಣ್ಣನ್ನು ಹಾಕಿ ಸಮಾಧಿ ಕಟ್ಟುವರು. ಅನಂತರ ಸಮಾಧಿಗೆ ಹೋಗಿದ್ದ ಜನರೆಲ್ಲ ಕೈಕಾಲು ಮುಖ ತೊಳೆದುಕೊಂಡು ವಾಪಸಾಗುವರು. ಕೊನೆಯಲ್ಲಿ ಒಬ್ಬ ವ್ಯಕ್ತಿ ಒಂದು ಚೆಂಬಿನಲ್ಲಿ ನೀರನ್ನು ತಂದು ಊರಿನ ಮುಂಭಾಗದ ರಸ್ತೆಯಲ್ಲಿ ಅಡ್ಡಲಾಗಿ ಹುಯ್ಯು; ಸ್ವಲ್ಪ ಹೊತ್ತು ಎಲ್ಲರೂ ಅಲ್ಲಿ ಕುಳಿತು ಸತ್ತ ವ್ಯಕ್ತಿಯ ಮನೆಯನ್ನು ಮೆಟ್ಟಿ ದೇವರ ಪಟಕ್ಕೆ ಕೈಮುಗಿದು ಅವರವರ ಮನೆಗೆ ತೆರಳಿ ಸ್ನಾನ ಮಾಡುವರು.

ಹನ್ನೊಂದನೆಯ ದಿನಕ್ಕೆ ಸರಿಯಾಗಿ ಸತ್ತ ಮನೆಯವರು ಸಮರಯ್ಯನ ಹತ್ತಿರ ಹೋಗಿ ಉತ್ತರ ಕ್ರಿಯಾದಿ ಇದೆ ಎಂದು ತಿಳಿಸಿಬರುತ್ತಾರೆ. ಇತ್ತ ಸಮರಯ್ಯ ಎಲ್ಲ ದಾಸರಿಗೂ ಈ ಸುದ್ದಿ ತಿಳಿಸುತ್ತಾನೆ. ಮನೆ ಕೋಣೆ ಎಲ್ಲವನ್ನು ತೊಳೆದು ಸ್ವಚ್ಛಗೊಳಿಸಿ ಮನೆಮಂದಿಯೆಲ್ಲಾ ಸ್ನಾನ ಮಾಡಿ ಮಡಿಯಾಗುತ್ತಾರೆ. ಯಜಮಾನ್ ಸಮರಯ್ಯ ಸತ್ತವನ ಮನೆಯಿಂದ ಮೂರು ನಿಂಬೆ ಹಣ್ಣು ಮತ್ತು ಹಸಿನೂಲಿನುಂಡೆ ತಂದು, ಬಿದಿರ ಕಡ್ಡಿಯಲ್ಲಿ ಚಕ್ರವನ್ನು ಕಟ್ಟಿ ಚಕ್ರಕ್ಕೆ ನಿಂಬೆ ಹಣ್ಣನ್ನು ಸಿಕ್ಕಿಸಿ, ನಿಂಬೆ ಹಣ್ಣಿಗೆ ಮೂರು ನಾಮ ಇಡುವನು. ಚಕ್ರಕ್ಕೆ ಹೆಣದಿಂದ ಹರಿದು ತಂದಿದ್ದ ಬಟ್ಟೆಯನ್ನು ಧರಿಸಿ, ತುಳಸೀ ಮಾಲೆಯನ್ನು ಹಾಕಿ, ಎಲ್ಲ ದಾಸರೂ ಮನೆಗೆ ಹೋಗಿ ಧಾನ್ಯದ ಮೇಲೆ ದೊಡ್ಡ ದೇವರನ್ನು ಇಟ್ಟು ಅದರ ಪಕ್ಕದಲ್ಲಿ ಈ ಚಕ್ರವನ್ನು ಇಡುತ್ತಾರೆ. ಈ ಚಕ್ರದ ಹಿಂದೆ ಒಂದು ಮೊನೆ ಬಾಳೆ ಎಲೆಯನ್ನು ನಿಲ್ಲಿಸಿ, ಬಾಳೆ ಎಲೆಗೆ ನಾಮ ಇಟ್ಟು, ಅದರ ಬದಿಯಲ್ಲಿ ಒಂದು ದಂಡಕೋಲನ್ನು ನಿಲ್ಲಿಸುವರು. ಸತ್ತ ದಾಸನು ಬದುಕಿದ್ದಾಗ ತಿನ್ನುತ್ತಿದ್ದ ಎಲ್ಲಾ ಪದಾರ್ಥಗಳನ್ನು ಎಡೆ ಇಟ್ಟು, ಪೂಜೆ ಮಾಡಿ, ಕೆಂಡ ತುಂಬಿದ ಹೊಸ ಮಣ್ಣಿನ ಭಟ್ಟಲಿನಲ್ಲಿ ಮುದ್ರೆಕೋಲನ್ನು ಕಾಯಿಸಿ ಕುಟುಂಬದವರಿಗೆಲ್ಲಾ ಮುದ್ರೆ ಒತ್ತುವರು. ಅದೇ ದಿನ ಮರಿ ಕುಯ್ದು ಅಡಿಗೆ ಮಾಡಿ ತಿಂಡಿ ತೀರ್ಥಗಳ ಸಮೇತ ಎಲ್ಲಾ ದಾಸರು 'ತೀರ್ಪಳ್ಳಿ'ಗೆ ಅಂದರೆ ಸಮಾಧಿ ಮಾಳಕ್ಕೆ ಹೋಗುವರು. ಹಾಗೆ ಹೋಗುವಾಗ, ಒಂದು ಹೊಸ ಗುಂಬ, ಎಲೆ ಅಡಿಕೆ, ತೆಂಗಿನ ಕಾಯಿ, ಐದು ಅರಳಿ ಎಲೆ, ನಾಲ್ಕು ಮೊಗೆ, ಒಂದು ಮಣ್ಣಿನ ದೀಪ, ಒಂದು ನೂಲಿನುಂಡೆ, ತೆಗೆದುಕೊಂಡು ಹೋಗ್ತಾರೆ. ಇದಕ್ಕೂ ಮುಂಚೆ ಒಬ್ಬ ದಾಸಯ್ಯ ಸಮಾಧಿಗೆ ಹೋಗಿ ಸಮಾಧಿ ಮತ್ತು ಅದರ ಸುತ್ತಮುತ್ತಲಿನ ಜಾಗವನ್ನೆಲ್ಲಾ ಸಾರಿಸಿ ರಂಗೋಲಿ ಇಟ್ಟು, ಸಮಾಧಿಯ ಮೇಲೆ ಒಂದು ತುಳಸೀ ಗಿಡ ನೆಟ್ಟು ಕಾಯಿ ಹೊಡೆದು ಪೂಜೆ ಮಾಡಿ ದೀಪವಿಡಲು ಸಮಾಧಿಯ ಮೇಲೆ ಒಂದು ಮಣ್ಣಿನಿಂದ ಗೂಡನ್ನು ಮಾಡಿ ಬಂದಿರುತ್ತಾನೆ.

ಅಂದು ಸಂಜೆ ೮ ರ ವೇಳೆಗೆ ದಾಸರೆಲ್ಲ ತಮ್ಮ ತಮ್ಮ ಲಾಂಛನಗಳ ಸಮೇತ ಸಿದ್ಧಪಡಿಸಿರುವ ಅಡಿಗೆ, ತಿಂಡಿ ತಿನಿಸು, ಲಾಟೀನು ಮತ್ತು ಪೂಜಾ ಸಾಮಾನುಗಳೆಲ್ಲವನ್ನು 'ತೀರ್ಪಳ್ಳಿಗೆ'ತೆಗೆದುಕೊಂಡು ಹೋಗುವರು. ಸಮಾಧಿಯ ಮೇಲೆ ನಾಲ್ಕು ಮೂಲೆಯಲ್ಲೂ ನಾಲ್ಕು ಮೊಗೆಯನ್ನು ಇಟ್ಟು,

ಮಧ್ಯದಲ್ಲಿ ಚಕ್ರವನ್ನು ಬಾಳೆ ಎಲೆ ಸಮೇತ ದಂಡಕೋಲಿನೊಂದಿಗೆ ನೆಡುವರು. ಚಕ್ರದ ಮುಂದೆ ಒಂದು ಮೊನೆ ಬಾಳೆ ಎಲೆಯನ್ನು ಹಾಸಿ ಅದರ ಮೇಲೆ ಅನ್ನ, ಬಾಡು, ಮೊಟ್ಟೆ, ಸಾರಾಯಿ, ಕರಿಮೀನು, ಸೀಗಡಿ, ಸೊಪ್ಪು, ಧೂಮಪಾನ ಮತ್ತು ಸಿಹಿತಿಂಡಿಗಳನ್ನು ಇಟ್ಟು ಎಡೆ ಹಾಕಿ ಪೂಜೆ ಮಾಡುವರು. ಅನಂತರ ಚಕ್ರ ಮತ್ತು ನಾಲ್ಕು ಮೂಲೆಯಲ್ಲಿರುವ ಗುಂಬಗಳಿಗೆ ನೂಲಿನಿಂದ ಎಳೆಹಾಕಿ, ಒಂದು ತಟ್ಟೆಗೆ ಎಣ್ಣೆಯನ್ನು ಹಾಕಿಕೊಂಡು ಐದು ಜನ ಮುಖ್ಯದಾಸರು ದರ್ಬೆಹುಲ್ಲನ್ನು, ಚಿತ್ತದ ಕೋಲನ್ನು ಹಿಡಿದು ಕೋಲಿನ ತುದಿಗೆ ಎಣ್ಣೆಯನ್ನು ಸವರಿಕೊಂಡು ಮಂತ್ರ ಹೇಳಿ ಚಕ್ರದ ನಿಂಬೆಹಣ್ಣಿಗೆ ಕೋಲಿನಿಂದ ಎಣ್ಣೆಯನ್ನು ತೊಟ್ಟಿಸಿ ಬಂದಿರುವ ಎಲ್ಲಾ ದಾಸರುಗಳಿಗೆ ಕೋಲಿನಿಂದ ಒಂದೊಂದು ಸಾರಿ ಹೊಡೆಯಲಾಗುತ್ತದೆ. ತರುವಾಯ ಎಲ್ಲರೂ ಸಮಾಧಿಯ ಸುತ್ತ ಪಂಕ್ತಿಯಲ್ಲಿ ಕೂತು ಊಟ ಮಾಡಿದ ಬಳಿಕ, ಪಕ್ಕದಲ್ಲಿ ಸೌದೆಯಿಂದ ಬೆಂಕಿ ಹಾಕಿ, ಸತ್ತುಹೋದ ವ್ಯಕ್ತಿಯ ಮನೆಯ ಯಜಮಾನನನ್ನು ಸಮಾಧಿಯ ಮುಂದೆ ಕೂರಿಸಿ ಚಕ್ರಕ್ಕೂ ಅವನ ಕೈಗೂ ದಾರಕಟ್ಟಿ ಎಕ್ಕದ ಕಡ್ಡಿ ಮತ್ತು ಎಳತಣಿಗೆಗಳಿಂದ ಮೂರು ಸಾರಿ... "ಸ್ವಪ್ನದಲ್ಲಿ, ಸಾರಕದಲ್ಲಿ -ಜನಮಂದಿ- ಮಕ್ಕ ಮಂದಿ, ಬಂಧು ಬಳಗದಲ್ಲಿ ಕಾಣಿಸಿಕೊಳ್ಳದೆ ಸ್ವಾಮಿ ಪಾದವನ್ನು ಸೇರಿಕೋ" ಅಂತ ಸಮರಯ್ಯನು ಹೇಳಿಕೊಟ್ಟಿದ್ದನ್ನು ಹೇಳಿ ದಾರವನ್ನು ಕಿತ್ತು ಹಾಕುತ್ತಾನೆ. ಆಗ ಅವನನ್ನು ಸಮಾಧಿಯಿಂದ ಸ್ವಲ್ಪ ದೂರ ಕರೆದುಕೊಡು ಹೋಗಿ ನಿಲ್ಲಿಸುತ್ತಾರೆ. ಆ ಸಂದರ್ಭದಲ್ಲಿ ಅವನ ಜೊತೆಯಲ್ಲಿ ಇಬ್ಬರು ದಾಸರು ಸಹ ಇರುತ್ತಾರೆ.

ಇದೆಲ್ಲಾ ಆದ ಮೇಲೆ ಸಮಾಧಿಯ ಮೇಲೆ ನೆಟ್ಟಿರುವ ಚಕ್ರವನ್ನು ಬಾಳೆ ಎಲೆ ಸಮೇತ ಬೆಂಕಿಗೆ ಹಾಕಿ ಸುಟ್ಟು, ತೀರ್ಪಳ್ಳಿಗೆ ಹೋಗಿದ್ದವರೆಲ್ಲರೂ ಹಿಂದಿರುಗುತ್ತಾರೆ. ಯಜಮಾನ್ ಸಮರಯ್ಯ ಮಾತ್ರ ಸಮಾಧಿಯ ಬಳಿ ಉಳಿದುಕೊಂಡು ದಂಡದ ಕೋಲಿನಿಂದ ಸಮಾಧಿಯ ಮೇಲಿರುವ ಗುಂಬಕ್ಕೆ ಒಂದೇ ಏಟಿನಿಂದ ಹೊಡೆದು ಹಿಂದಕ್ಕೆ ತಿರುಗಿ ನೋಡದೆ ಮನೆ ಸೇರಿಕೊಳ್ಳುತ್ತಾನೆ. ತದನಂತರ ದೇವರ ಮನೆಗೆ ಹೋಗಿ ಪೂಜೆ ಮಾಡಿ ಮಂಗಳಾರತಿ ಎತ್ತಿ ಎಲ್ಲರಿಗೂ ತೀರ್ಥಪ್ರಸಾದ ಕೊಟ್ಟು, ಮೂರು ಸಾರಿ ಮನೆಮುಂದಿಗೆಲ್ಲಾ ಎಕ್ಕದ ಕಡ್ಡಿ ಎಲೆತಣಿಗೆಯಿಂದ ನೀವಳಿಸಿ "ಸ್ವಪ್ನದಲ್ಲಿ, ಸಾರಕದಲ್ಲಿ, ಜನಮಂದಿ ಬಂಧುಬಳಗದಲ್ಲಿ ಕಾಣಿ ಸಿಕೊಳ್ಳದೆ ತುಳಸಿ ಮಳಿಗೆ ಮಾಡಿಕೊಂಡು ಸ್ವಾಮಿ ಪಾದಾರವನ್ನು ಸೇರಿಕೋ" ಅಂತ ಹೇಳಿಸಿ ಕೈಯಲ್ಲಿ ಹಿಡಿಸಿದ್ದ ಪ್ರಸಾದವನ್ನು ದೇವರ ಮುಂದೆ ಹಾಕಿಸುತ್ತಾನೆ. ಕೊನೆಗೆ ಎಲ್ಲರೂ ಒಬ್ಬೊಬ್ಬರಾಗಿ ತೀರ್ಥಪ್ರಸಾದ ತೆಗೆದುಕೊಂಡ ಮೇಲೆ, ದೇವರನ್ನು ಪ್ರಾರ್ಥಿಸುತ್ತ ಪೂಜೆ ಪುನಸ್ಕಾರ ಮಾಡಿ ಸಮರಯ್ಯ ಊಟ ಮಾಡಿಕೊಂಡು ತನ್ನ ಮನೆಗೆ ಹಿಂದಿರುಗುತ್ತಾನೆ.

ಬಿಳಿಗಿರಿ ರಂಗನಾಥ ಸ್ವಾಮಿ ಜಾತ್ರೆ ಮತ್ತು ಹರಿಸೇವೆ

ಹೊಂಗನೂರಿನಿಂದ ಪೂರ್ವಕ್ಕೆ ಸುಮಾರು ೧೬ ಕಿ.ಮೀ. ದೂರದಲ್ಲಿರುವ ಬೆಟ್ಟವೇ ಬಿಳಿಗಿರಿರಂಗನ ಕ್ಷೇತ್ರ. ಒಂದು ಕಾಲಕ್ಕೆ ಗ್ರಾಮದ ಎಲ್ಲಾ ಜನರು ಈ ಬೆಟ್ಟದ ಸಾಲಿನಿಂದ ಮರ, ಸೌದೆ, ಬಿದಿರು ಮತ್ತು ಹುಲ್ಲುಗಳನ್ನು ತಂದು ಅದನ್ನು ಮಾರಿ ಬದುಕುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಅರಣ್ಯಪಾಲಕರ ಕಾವಲು ಪಡೆ ಬಿಗಿಯಾಗಿರುವುದರಿಂದ ಕೇವಲ ಸಣ್ಣಪುಟ್ಟ ಸೌದೆಗಳನ್ನು

ತಂದು ಅದನ್ನು ಮಾರಿ ಜೀವನ ನಡೆಸುತ್ತಿದ್ದಾರೆ. ಈ ಬೆಟ್ಟದಂಚಿನಲ್ಲಿ ಮೋಡ ತಡೆದು ಮಳೆ ಬಂದರೆ ಈ ಊರಿನ ಹಿರಿಕೆಯನ್ನು ಆಶ್ರಯಿಸಿರುವ ರೈತರಿಗೆ ಅನುಕೂಲವಾಗುತ್ತದೆ.

ಬಿಳಿಗಿರಿರಂಗನ ಬೆಟ್ಟದ, ಬಿಳಿಗಿರಿರಂಗನಾಥ ಹೊಂಗನೂರಿನ ಬಹುಸಂಖ್ಯಾತ ಜನರ ಆರಾಧ್ಯದೈವ. ಏನಾದರೂ ಚೆನ್ನಾಗಿ ಮಳೆಹುಯ್ದು ಒಳ್ಳೆಯ ಬೆಳೆಯಾದರೆ ಅದಕ್ಕೆ 'ರಂಗನ ಕೃಪೆ' ಎನ್ನುವಂತಹ ಜನರು ಇಲ್ಲಿ ಹೆಚ್ಚು. ರೈತರು ಮಾಡಿದಂತಹ ಫಸಲನ್ನು ಹಂದಿ, ಆನೆ, ಹೆಗ್ಗಣ, ತೋಡ ಮತ್ತು ಪಕ್ಷಿಗಳಿಂದ ರಕ್ಷಿಸಲು ರಂಗನ ದೇವಸ್ಥಾನದಿಂದ ತೀರ್ಥ ಪ್ರಸಾದವನ್ನು ಬೆಳೆಗೆ ತಂದಿಟ್ಟರೆ ಸಾಕು ಯಾವ, ಪ್ರಾಣಿ, ಪಕ್ಷಿಗಳು ಕೂಡ ಸುಳಿಯುವುದಿಲ್ಲ ಎಂಬ ನಂಬಿಕೆ ಇಂದಿಗೂ ಜನಜನಿತವಾಗಿದೆ. ಹೀಗೆ ಬಿಳಿಗಿರಿ ರಂಗನಾಥ ಊರಿನ ಸಮಸ್ತ ಜನ, ಜಾನುವಾರುಗಳಿಗೆ ರಕ್ಷಿತನಾಗಿರುವುದರಿಂದ ಇಲ್ಲಿಯ ಜನರು ತಮ್ಮ ಗದ್ದೆಗಳಿಂದ ಹೊಸ ಭತ್ತ ಬಂದಾಗ ಮೊದಲ ಐದು ಸೇರು ಭತ್ತವನ್ನು ರಂಗಸ್ವಾಮಿಯ 'ಬೇಟೆ ಮಣೆ'ಗಾಗಿ ಮೀಸಲಿಡುತ್ತಾರೆ. ಹಾಗೆಯೇ ಕೆಲವು ಹರಕೆ ಹೊತ್ತ ಜನಕೂಡ ಬಿಳಿಗಿರಿರಂಗನ ಹೆಸರಿನಲ್ಲಿ ಒಂದೊಂದು ಮರಿಯನ್ನು ಬಿಟ್ಟು ಹರಿಸೇವೆಯನ್ನು ಮಾಡುತ್ತಾರೆ.

ಚಿಕ್ಕ ಜಾತ್ರೆ

ಇದು ಬಿಳಿಗಿರಿರಂಗನ ಬೆಟ್ಟದ ಮೇಲಿರುವ ದೇವಸ್ಥಾನದ ಸುತ್ತಲೂ ನಡೆಯುವ ಒಂದು ವಿಶಿಷ್ಟ ರೀತಿಯ ರಥೋತ್ಸವವಾಗಿದೆ. ಸುಗ್ಗಿಯ ಕಾಲದಲ್ಲಿ ಊರಿನಲ್ಲೆಲ್ಲಾ ಕಾರ್‌ಭತ್ತ ಬಂದು ಸಂತುಷ್ಟಿಯನ್ನು ತಂದಿರುತ್ತದೆ. ಅದೇ ಸಂದರ್ಭದಲ್ಲಿ ಸಂಕ್ರಾಂತಿ ಹಬ್ಬ ಬಂದು ಎಲ್ಲರಲ್ಲಿಯೂ ಸುಗ್ಗಿಯ ಹಿಗ್ಗನ್ನು ಸಂಕೇತಿಸುತ್ತಿರುತ್ತದೆ. ಈ ಸಂದರ್ಭದಲ್ಲಿ ಹೊಂಗನೂರಿನ ಪ್ರತಿಯೊಂದು ಮನೆಯವರೂ ಮೀಸಲಾಗಿಟ್ಟ ಭತ್ತವನ್ನು ತೆಗೆದು ಕುಟ್ಟಿ ಅಕ್ಕಿಮಾಡಿ ತೆಗೆದುಕೊಂಡು ಕಾಲ್ನಡಿಗೆಯಲ್ಲಿಯೇ ಹೋಗಿ ಬೆಟ್ಟವನ್ನು ತಲುಪುವರು. ಇತ್ತೀಚೆಗೆ ಕೆಲವರು ಬಸ್ಸಿನಲ್ಲೂ ಹೋಗುತ್ತಾರೆ. ಆದರೆ ಕಾಲ್ನಡಿಗೆಯಲ್ಲಿ ಹೋಗುವವರು ಹಿರಿಕೆರೆ ಮಾರ್ಗವಾಗಿ ಜೋಡಿಕಟ್ಟೆಯಲ್ಲಿ ನೀರು ಕುಡಿದು, ವಡ್ಡನ ಕಟ್ಟೆಯಲ್ಲಿ ಕೈಕಾಲು, ಮುಖ ತೊಳೆದು ಮೂಡ್ಲಾಗಿ ನಿಂತು ನಮಸ್ಕರಿಸಿ ಸ್ವಲ್ಪ ಹೊತ್ತು ವಿಶ್ರಾಂತಿ ಪಡೆದು ಮುಂದೆ ಬೆಟ್ಟದ ದಾರಿಯನ್ನು ಹಿಡಿಯುವರು. ಹೋಗುತ್ತಾ ಹೋಗುತ್ತಾ ಕಗ್ಗಾನಿ ಒಡ್ಡು ಹತ್ತಿಹೋದರೆ ಆಲಸ್ಥಿ ಸಿಗುತ್ತದೆ. ಮುಂದೆ ನಡೆದರೆ ಜಯಪ್ಪನ ಕೊಳ ಜಡೆರುದ್ರನ ದೇವಸ್ಥಾನ ; ಇದಾದ ನಂತರ 'ಎಂಜಲಗೆರೆ ' ಸಿಗುತ್ತದೆ. ಅಲ್ಲಿ ಎಲ್ಲರೂ ಬೇಟೆ ಮಣೆ ಅಕ್ಕಿ ಪೊಟ್ಟಣವನ್ನು ಸ್ವಲ್ಪ ಹೊತ್ತು ನೀರಿನಲ್ಲಿ ನೆನೆಹಾಕಿಕೊಂಡು ಮುಂದೆ ಗಿರಿಯನ್ನು ತಲುಪುವರು.

ಬೆಟ್ಟದ ಮೇಲೆ ಒಂದು ಚಿಕ್ಕತೇರಿದೆ. ಇದನ್ನು ಸಂಕ್ರಾಂತಿಯ ಜಾತ್ರೆಯ ಸಂದರ್ಭದಲ್ಲಿ ಆಚರಿಸುತ್ತಾರೆ. ಇದನ್ನೇ ಚಿಕ್ಕ ಜಾತ್ರೆ ಎಂದು ಕರೆಯುವರು. ಈ ಸಂದರ್ಭದಲ್ಲಿ ಹೊಸದಾಗಿ ಮದುವೆಯಾದ ಹೆಣ್ಣು-ಗಂಡುಗಳು ಸ್ವಾಮಿಯ ತೇರಿಗೆ ಕೈ ಮುಗಿದು ಅಡ್ಡಬಿದ್ದು ಹಣ್ಣು ಜವನೆಯನ್ನು ಎಸೆದರೆ ; ಉತ್ಕೃಷ್ಟವಾದ ಬೆಳೆಯನ್ನು ಬೆಳೆದವರು ಭತ್ತ, ರಾಗಿ, ಜೋಳ, ಎಳ್ಳು, ಕಂಬು, ನವಣೆ, ಅಲಸಂದೆ ಮತ್ತು ಹುರಳಿಧಾನ್ಯಗಳನ್ನು ಎರಚುವರು. ಹರಕೆ ಹೊತ್ತವರು ಹುಲಿ ವಾಹನ, ಗರುಡವಾಹನ, ಚಿಕ್ಕದೇವರು, ದೊಡ್ಡ ದೇವರುಗಳನ್ನು ಪೂಜಿಸಿ ದೇವಸ್ಥಾನದ ಸುತ್ತ

ಮೆರವಣಿಗೆ ಮಾಡಿಸುವರು. ಅಂದಿನ ವಿಶೇಷವೇನೆಂದರೆ 'ಮಣೆ ಸೇವೆ'; ಅಂದರೆ ಪ್ರತಿಯೊಬ್ಬರೂ ತಾವು ನೆನೆಸಿಕೊಂಡು ಹೋಗಿದ್ದ ಅಕ್ಕಿಯನ್ನು ಬಿಚ್ಚಿ ಅದಕ್ಕೆ ಕಡ್ಲೆಪುರಿ, ಬೆಲ್ಲ, ಕಜ್ಜಾಯ, ಎಳ್ಳು ಮುಂತಾದ ಪದಾರ್ಥಗಳನ್ನು ಹಾಕಿ ಬೆರಸಿ; ದಾಸಯ್ಯನ ಕೈಯಿಂದ ಕಾಯಿಹೊಡೆಸಿ ಅದನ್ನು ಕೂಡ ಸಣ್ಣ ಸಣ್ಣಗೆ ಸೆರೆದಾಕಿ, 'ಬೇಟೆಮಣೆ ಅಕ್ಕಿ' ತಯಾರುಮಾಡುತ್ತಾರೆ. ಆಗ ಬಂದಿದ್ದ ಪರುಸೆ ಎಲ್ಲ ಒಂದೊಂದು ಹೋಳು ಅಕ್ಕಿ ಮತ್ತು ಪೂಜೆ ಸಾಮಾನುಗಳ ಜೊತೆಗೆ ಒಂದೂ ಕಾಲು ರೂಪಾಯಿ ಕಾಣಿಕೆಯನ್ನು ಕೊಟ್ಟು ರಂಗನ ಭಕ್ತರಾದ ದಾಸರುಗಳಿಂದ ಮಣೆಸೇವೆ ಮಾಡಿಸುತ್ತಾರೆ. ದೇವಸ್ಥಾನದ ಸುತ್ತಲೂ ಐದು ಕಡೆ ಒಂದು ವಸ್ತ್ರವನ್ನು ಹಾಸಿ ಅದರ ಮೇಲೆ ಐದುಗುಡ್ಡೆ ಅಕ್ಕಿಯನ್ನು ಹಾಕಿ ಎಲ್ಲ ದಾಸರು ಅದನ್ನು ಸುತ್ತುವರಿದು ಶಂಖವನ್ನು ಊದುತ್ತಾ, ಜಾಗಟೆಯನ್ನು ಕುಟ್ಟುತ್ತಾ, ಮಣೆಸೇವೆಗೆ ಚಾಲನೆ ನೀಡುವರು. ಅಷ್ಟರಲ್ಲಿ ಮುಖ್ಯ ದಾಸಯ್ಯ ತನ್ನ ಕೈಯಲ್ಲಿ ಒಂದು 'ದಂಡಕೋಲನ್ನು' ಹಿಡಿದು ರಂಗನ ಸ್ಮರಣೆಯನ್ನು ಮಾಡಿ... ಆಬರಕ್.... ಆ.... ಗೋಬರಕ್... ಆ' ಎಂದು ಹೇಳುವ ಸಮಯಕ್ಕೆ ಉಳಿದ ದಾಸರು ಮತ್ತು ಅಲ್ಲಿ ನೆರೆದಿದ್ದ ಜನರು ಮುಖ್ಯದಾಸಯ್ಯನನ್ನು ಸುತ್ತುವರಿದು ಕೂಗುತ್ತಾ, ತಿರುಗುತ್ತಾ ಆರ್ಭಟಿಸಿ, ಅಬ್ಬರಿಸಿ ಕೊನೆಗೆ ಅಕ್ಕಿಯ ಗುಡ್ಡೆಯ ಮೇಲೆ ಬೀಳುತ್ತಾರೆ. ಈ ರೀತಿ ದೇವಸ್ಥಾನದ ಸುತ್ತಲೂ ಮಣೆಸೇವೆ ಮಾಡಿದ ಮೇಲೆ ಉಳಿದ ಅಕ್ಕಿಯನ್ನು ಎಲ್ಲರೂ ಹಂಚಿಕೊಳ್ಳುತ್ತಾರೆ. ಅನಂತರ ಒಂದು ಸೀಸಕ್ಕೆ ತೀರ್ಥವನ್ನು ಹಾಕಿಸಿಕೊಂಡು, ಅರಿಶಿನ ಕುಂಕುಮಗಳನ್ನು ಕಟ್ಟಿಕೊಂಡು, ತಳಿಗೆ ಅನ್ನ, ಹೂವು ಇನ್ನೂ ಮುಂತಾದ ಪ್ರಸಾದಗಳನ್ನು ಪಡೆದುಕೊಂಡು, ನಾಲ್ಕು ಅಥವಾ ಐದು ಗಂಟೆಯ ವೇಳೆಗೆ ಕಾಲ್ನಡಿಗೆಯಲ್ಲಿಯೇ ಬೆಟ್ಟವನ್ನು ಇಳಿದು ಊರನ್ನು ತಲುಪುವರು. ಕಾಡಿನೊಳಗೆ ಬರುವಾಗ ಮುತ್ತುಗದ ಎಲೆ, ಬಿದಿರು, ಕಳಲೆ, ಸೌದೆ ಮೊದಲಾದ ಸಾಮಾನುಗಳನ್ನು ಹೊತ್ತುಕೊಂಡು ಬರುತ್ತಾರೆ.

ದೊಡ್ಡ ಜಾತ್ರೆ

ಇದು ಸಾಮನ್ಯವಾಗಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ನಡೆಯುತ್ತದೆ. ನಾಡಿನಾದ್ಯಂತ ಲಕ್ಷಾಂತರ ಜನ ಬಂದು ಸೇರಿ ಮಾಡುವ ಜಾತ್ರೆ ಇದಾದುದರಿಂದ ಇದನ್ನು ಬಿಳಿಗಿರಿ ರಂಗನಾಥನ ದೊಡ್ಡ ಜಾತ್ರೆ ಎಂದು ಕರೆಯುವರು. ಈ ಜಾತ್ರೆ ಮುಖ್ಯವಾಗಿ ನಾಡಿನ ಜನಗಳಿಗಿಂತ ಬುಡಕಟ್ಟು ಜನರಾದ ಸೋಲಿಗರಿಗೆ ವಿಶೇಷವಾದುದು. ಮೇ ತಿಂಗಳ ಸಂದರ್ಭದಲ್ಲಿ ಗಿರಿಯ ಕೆಳಗಡೆ ಇರುವ ದೊಡ್ಡ ತೇರಿಗೆ ಶೃಂಗರಿಸಿ ಪೂಜೆ ಮಾಡಿ ಎಳೆಯಲು ಸಾವಿರಾರು ಜನ ಕಾಯ್ದುಕೊಂಡಿರುತ್ತಾರೆ. ಒಂದು ವಿಶೇಷವೇನೆಂದರೆ ಬಿಳಿಗಿರಿ ರಂಗಸ್ವಾಮಿಯ ವಾಹನವಾದ ಗರುಡ ಬಂದು 'ಬಿಜ್ಜು' ಮಾಡುವವರೆಗೂ ತೇರು ಮುಂದೆ ಹೋಗುವುದಿಲ್ಲ. ಆಕಾಶದಿಂದ ಹಾರಿ ಬಂದ ಗರುಡ ತೇರಿನ ಸುತ್ತಲೂ ಹಾರಾಡಿ ತೇರಿಗೆ ಬಿಜ್ಜು ಮಾಡಿದ ತಕ್ಷಣವೇ ಜನರೆಲ್ಲಾ ಕೂಗಿಕೊಳ್ಳುತ್ತಾರೆ. ಆಗ ತೇರು ಮುಂದೆ ಸಾಗುತ್ತದೆ. ನೆರೆದಿದ್ದ ಜನರೆಲ್ಲ ಹಣ್ಣು ಜವನ, ಹೂವು ಮತ್ತು ಚಿಲ್ಲರೆ ಕಾಸುಗಳನ್ನು ಎಸೆದು ಕೈಮುಗಿದು 'ಬಿಳಿಗಿರಿ ರಂಗಾ' ಎಂದು ಕೂಗಿ ಕೊಳ್ಳುತ್ತಾರೆ. ಸೋಲಿಗರೆಲ್ಲರೂ ಕುಟುಂಬ ಸಮೇತವಾಗಿ ಬಂದು ತಮ್ಮ ರಂಗ ಭಾವನನ್ನು ನೆನೆಯುತ್ತಾ, ಕುಣಿಯುತ್ತಾ, ಹಾಡುತ್ತಾ, ಕೋಡಿನೊಳಗೆ ಬೆಳೆದಿರುವ 'ಹಾವು ಮೆಕ್ಕೆಕಾಯಿ'ಯನ್ನು ತೇರಿಗೆ ಎಸೆಯುತ್ತಾರೆ. ಹೀಗೆ ಸುಮಾರು

ಹನ್ನೆರಡು ಗಂಟೆಯ ಹೊತ್ತಿಗೆ ಬಿಳಿಗಿರಿ ರಂಗನ ರಥೋತ್ಸವ ಕಾರ್ಯಕ್ರಮ ಮುಗಿಯುತ್ತದೆ.

ಮಾರನೆಯ ದಿನ ಎಲ್ಲರೂ ಸೋಮ ಅರಸನ ಕೆರೆಯ ಅಂಚಿಗೆ ಹೋಗುತ್ತಾರೆ. ಅಷ್ಟರಲ್ಲಿ ಊರಿಂದ ಮರಿ, ಅಕ್ಕಿ ಮತ್ತು ಸಂಬಾರ ಪದಾರ್ಥಗಳನ್ನು ಹೊತ್ತು ತಂದ ಜನ ಇವರ ಜೊತೆಗೂಡಿ, ಎಲ್ಲರೂ ಸೇರಿ ಹರಿಸೇವೆ ಮಾಡುವ ಜಾಗವನ್ನು ಸ್ವಚ್ಛ ಮಾಡಿ, ಕೆಲವರು ಒಲೆ ಹಾಕಿದರೆ, ಮತ್ತೆ ಕೆಲವರು ಕಾಡಿನೊಳಗೆ ಹೋಗಿ ಸೌದೆ ತರುತ್ತಾರೆ. ಉಳಿದವರು ತಮ್ಮ ತಮ್ಮ ಸಾಮಾನುಗಳೆಲ್ಲವನ್ನೂ ಒಂದು ಕಡೆ ಇಟ್ಟು ದಾಸರುಗಳೊಡನೆ ಹೊಸ ನೀರು ತರಲು ಸೋಮ ಅರಸನ ಕೆರೆಗೆ ಹೋಗುವರು. ಕೆರೆಯೊಳಗೆ ಇಳಿದ ಕೆಲವರು ಸ್ನಾನ ಮಾಡಿ, ಹೊಸ ಹರಿವೆ, ಹಂಡೆಗಳನ್ನು ತೊಳೆದು ನೀರು ತುಂಬಿ ದಡದ ಮೇಲಿಟ್ಟು ಪೂಜೆ ಮಾಡಿ ಅದನ್ನು ದಾಸರ ಮಾರ್ಗದರ್ಶನದಲ್ಲಿ ಹರಿಸೇವೆಮಾಳಕ್ಕೆ ತರುತ್ತಾರೆ. ಅನಂತರ ಊರೊಟ್ಟಿನ ಮರಿ ಮತ್ತು ಹರಕೆ ಹೊತ್ತವರ ಮರಿಗಳನ್ನು ಸಾಲಾಗಿ ನಿಲ್ಲಿಸಿ ಅವುಗಳ ಮೈಗೆ ತೀರ್ಥಪ್ರಸಾದಗಳನ್ನಿಟ್ಟು ಕೈಮುಗಿಯುತ್ತಾರೆ. ಸ್ವಲ್ಪ ಸಮಯದಲ್ಲೇ ಸಾಲಾಗಿ ನಿಂತಿದ್ದ ಮರಿಗಳೆಲ್ಲವೂ ಕಾಲ್ಕೆದರಿ ವದರುತ್ತವೆ. ವದರಿದ ಮರಿಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಕೊಯ್ದು ತೊಳೆದು ಅಡಿಗೆ ಮಾಡುವರು. ಸುಮಾರು ೩ ಗಂಟೆಗೆ ಸರಿಯಾಗಿ ಎಲ್ಲರೂ ಊಟಕ್ಕೆ ಕೂರುವರು. ಆದರೆ ಬಿರುದು ಬಾವಲಿಗಳನ್ನು ಹೊಂದಿರುವ ದಾಸರು (ರಂಗರು) ಮತ್ತು ದೇವರಗುಡ್ಡರು (ಮಹದೇವರು) ಮಾತ್ರ ಪ್ರತ್ಯೇಕವಾಗಿ ಕೂತು ತಮ್ಮ ಲಾಂಛನಗಳಿಂದ ಕುಟ್ಟಿ ಊರೊಟ್ಟಿನ ಊಟಕ್ಕೆ ಚಾಲನೆ ನೀಡುವರು. ಆ ವೇಳೆಗಾಗಲೇ ಮುಖ್ಯದಾಸಯ್ಯ ಮತ್ತು ಯಜಮಾನರುಗಳು ದೇವರಿಗೆ ಎಡೆ ಇಟ್ಟು ಪೂಜಿಸಿ ಅನ್ನ, ಬಾಡನ್ನು ಪಂಕ್ತಿಗೆ ವ್ಯವಸ್ಥಿತವಾಗಿ ಬಡಿಸಿರುತ್ತಾರೆ. ಈ ಸಂದರ್ಭದಲ್ಲಿ ದಾಸರು, ದೇವರಗುಡ್ಡರು ಮತ್ತು ಯಜಮಾನರುಗಳಿಗೆ ಎರಡೆರಡು ಕೈ ಬಾಡನ್ನು (ಎರಡು ಸಾರಿ)ಹೆಚ್ಚಾಗಿ ಹಾಕುತ್ತಾರೆ. ಹೀಗೆ ಪಂಕ್ತಿಗೂಡಿದ ಮೇಲೆ ಒಬ್ಬ ಮುಖ್ಯದಾಸಯ್ಯ ಒಂದು ಎಲೆ ಒಂದಿಷ್ಟು ಅನ್ನ, ಒಂದೆರಡು ಬಾಡನ್ನು ಹಾಕಿಕೊಂಡು ಪಂಕ್ತಿಯ ಸುತ್ತಲೂ (ಉಪ್ಪುಪ್ಪು ಪ್ರಸಾದ) ಒಂದೊಂದು ಅನ್ನವನ್ನು ಇಟ್ಟುಕೊಂಡು ಬಂದು ಗೋವಿಂದನ ಇಕ್ಕಿಸಿದ ಮೇಲೆ ಎಲ್ಲರೂ ಊಟಕ್ಕೆ ಕೈ ಬಿಡುತ್ತಾರೆ.

ಹೀಗೆ ಊಟ ಮುಗಿದ ತರುವಾಯ ಎಲ್ಲರೂ ತಮ್ಮ ತಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡು ಕೆಲವರು ಕಾಲ್ನಡಿಗೆಯಲ್ಲಿ ಮತ್ತೆ ಕೆಲವರು ಬಸ್ಸಿನಲ್ಲಿ ವಾಪಾಸಾದರೆ; ಅಳಿದುಳಿದವರು ಊರೊಟ್ಟಿನಲ್ಲಿ ಉಳಿದಿದ್ದ ಅನ್ನ, ಸಾರುಗಳ ಹಂಡೆಗಳನ್ನು ಹೊತ್ತುಕೊಂಡು ಮಂಟಪಕ್ಕೆ ಬರುವರು. ಅವರು ಅಂದು ರಾತ್ರಿ ಗಿರಿಯಲ್ಲಿಯೇ ತಂಗಿದ್ದು ಮಾರನೇದಿನ ಬೆಳಗಿನ ಜಾವ ಎದ್ದು ಬೆಟ್ಟವನ್ನು ಇಳಿದು ವಡ್ಡನಕಟ್ಟೆಯನ್ನು ತಲುಪುವರು. ಹೀಗೆ ನಡೆದು ಬಂದಂಥ ಪರುಸೆಗೆ ಬಿಳಿಗಿರಿರಂಗನಾಥನ ಕೆಲವು ಶ್ರೀಮಂತ ಭಕ್ತರು ತಮ್ಮ, ತಮ್ಮ ಮಂಟಪಗಳಲ್ಲಿ ನೀರುಮಜ್ಜಿಗೆ, ಪಾನಕ, ಅಂಬಲಿ, ಸೊಪ್ಪು ಹೆಸರುಬೇಳೆ ಮತ್ತು ಕೋಸಂಬರಿಗಳನ್ನು ನೀಡುವರು. ಈ ರೀತಿ ಬರುವ ಪರುಸೆಗೆ ಅರವಟ್ಟಿಗೆಗಳನ್ನು ಏರ್ಪಡಿಸಿ ತಮ್ಮ ಕಷ್ಟವನ್ನು ಪರಿಹರಿಸಿಕೊಳ್ಳುವಂತಹ ಜನರಿಗೇನು ಅಂದು ಕಡಿಮೆ ಇರಲಿಲ್ಲ. ಆದರೆ ಇತ್ತೀಚೆಗೆ ಈ ಸಂಪ್ರದಾಯ ಬಹಳ ಕಡಿಮೆಯಾಗುತ್ತಿದೆ.

ಈ ದೊಡ್ಡ ಜಾತ್ರೆಯ ಸಂದರ್ಭದಲ್ಲಿ ಹೊಂಗನೂರೊಂದರಲ್ಲೇ ಸುಮಾರು ಐವತ್ತು

ಅರವತ್ತು ಮರಿಗಳನ್ನು ಬಿಳಿಗಿರಿರಂಗನಿಗೆ ಒಪ್ಪಿಸಿ ಹರಿಸೇವೆ ಮಾಡಿದರೆ, ನಾಡಿನ ಬೇರೆ, ಬೇರೆ ಮೂಲೆಗಳಿಂದ ಬಂದ ಭಕ್ತರು ಸಾವಿರಾರು ಮರಿಗಳನ್ನು ಬಲಿಕೊಟ್ಟು ಹರಿಸೇವೆ ಮಾಡಿ ಬಿಳಿಗಿರಿರಂಗನನ್ನು ಸ್ಮರಿಸುವರು.

ಬಿದಿರು ಮೆಳೆ ಸೇವೆ

ಈ ಬಿದಿರು ಮೆಳೆ ಸೇವೆ ಇಂದಿನ ನಾಗರಿಕ ಸಮಾಜಕ್ಕೆ ತೀರ ವಿಚಿತ್ರ ಎನಿಸಬಹುದು. ಆದರೆ ಹಿಂದೆ ತಪ್ಪದೇ ನಡೆಯುತ್ತಿದ್ದ ಒಂದು ಸಾಂಪ್ರದಾಯಿಕ ಆಚರಣೆಯಾಗಿದೆ. ಇದು ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ರೇಣುಕಾಂಬೆಯ ಹೆಸರಿನಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆಯನ್ನು ನೆನಪಿಗೆ ತರುತ್ತದೆ. ಬಿಳಿಗಿರಿರಂಗಯ್ಯ ಸೋಲಿಗರ ಮಗಳಾದ ಕುಸುಮಾಲೆಯ ಜೊತೆ ದಿನಪೂರ್ತಿ ಬಿದಿರು ಮೆಳೆಯ ಅಡಿಯಲ್ಲಿ ಮಲಗಿ ಸರಸಸಲ್ಲಾಪ ಆಡುತ್ತಿದ್ದನೆಂಬ ಕಥೆ ಜನಜನಿತವಾಗಿದೆ. ಜಾತ್ರೆಯ ಸಂದರ್ಭದಲ್ಲಿ ಕೆಲವು ಹೆಂಗಸರು ಬಿದಿರು ಮೆಳೆ ಕೆಳಗೆ ಗುಡಿಸಿ, ಸಾರಿಸಿ ರಂಗೋಲಿ ಇಟ್ಟು, ಕಾಯಿಹೊಡೆದು ಪೂಜೆ ಮಾಡಿ ಪರಪುರುಷರಿಂದ ಲೈಂಗಿಕ ಸುಖವನ್ನು ಪಡೆಯುವ ಪದ್ಧತಿ ಇತ್ತು. ಇದು ಕಾಡಿನೊಳಗೆ ಯಾರ ಕಣ್ಣಿಗೂ ಕಾಣದ ಹಾಗೆ ನಡೆಯುತ್ತಿತ್ತು.

ಕೆಲವು ಹೆಂಗಸರಿಗೆ ಮಕ್ಕಳಾಗದೆ ಇದ್ದರೆ, ಯುವತಿಯರಿಗೆ ಮದುವೆ ಮುಂಜಿಯಾಗದೆ ಇದ್ದರೆ ಅಥವಾ ಯಾವುದಾದರೊಂದು ಕಾಯಿಲೆಯಿಂದ ಬಳಲುತ್ತಿದ್ದರೆ, ಅಂತಹವರು ಮುಂಬರುವ ಜಾತ್ರೆಯ ಸಮಯದಲ್ಲಿ 'ಬಿದಿರು ಮೆಳೆ ಸೇವೆ' ಮಾಡುತ್ತೇವೆಂದು ಹರಕೆ ಮಾಡಿಕೊಳ್ಳುತ್ತಿದ್ದರಂತೆ. ಅದರಂತೆ ಹರಕೆ ಹೊತ್ತವರು ಜಾತ್ರೆಯ ಸಂದರ್ಭದಲ್ಲಿ ಯಾರ ಕಣ್ಣಿಗೂ, ಕಿವಿಗೂ ಬೀಳದ ಹಾಗೆ ಒಂದು ಬಿದಿರು ಮೆಳೆ ಬುಡವನ್ನು ಸ್ವಚ್ಛಗೊಳಿಸಿ ಪರಪುರುಷನಿಂದ ಲೈಂಗಿಕ ಕ್ರಿಯೆಗಾಗಿ ಕಾಯುತ್ತಿದ್ದರಂತೆ. ಏಕೆಂದರೆ ಜಾತ್ರೆಯ ಸಂದರ್ಭದಲ್ಲಿ ಸಹಸ್ರಾರು ಜನ ರಂಗನ ಭಕ್ತರು ಬರುತ್ತಾರೆ. ಅವರ ಜೊತೆಯಲ್ಲಿ ಕೂಡುವುದೆಂದರೆ ಬಿಳಿಗಿರಿರಂಗನಾಥನೇ ಇವರುಗಳ ವೇಷದಲ್ಲಿ ಬಂದು ತಮ್ಮನ್ನು ಕೂಡಿದನೆಂಬ ನಂಬಿಕೆಯಿಂದ. ಅಲ್ಲದೆ ಈ ರೀತಿಯ ಲೈಂಗಿಕ ಕ್ರಿಯೆಯಿಂದ ನಮ್ಮ ಪಾಪವೆಲ್ಲ ನಿವಾರಣೆಯಾಗಿ ಗಂಡ ಸಿಗುವ ಮತ್ತು ಮಕ್ಕಳಾಗುವ ಫಲ ದೊರೆಯುತ್ತದೆ ಎಂಬ ನಂಬಿಕೆ ಕೂಡ ಅವರದು. ಇದನ್ನೇ 'ಬಿದಿರು ಮೆಳೆ ಸೇವೆ' ಎಂದು ಕರೆಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಪದ್ಧತಿ ಕಂಡುಬರುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬೆಟ್ಟದಲ್ಲಿರುವ ರಥದಲ್ಲಿ ಕೆತ್ತಲಾಗಿರುವ ಬಿಳಿಗಿರಿರಂಗಯ್ಯ ಮತ್ತು ಕುಸುಮಾಲೆಯ ಪ್ರೇಮಪ್ರಸಂಗದ ಚಿತ್ರಗಳು ಜನರನ್ನು ಆಕರ್ಷಿಸುತ್ತವೆ.

ಸಂಪ್ರೋಕ್ಷಣೆ

ಗ್ರಾಮದಲ್ಲಿ ಸಮರ್ಪಕವಾಗಿ ಮಳೆ, ಬೆಳೆಯಾಗದೆ, ಬರಪೀಡಿತ, ಕಾಲರಾ, ಮಲೇರಿಯಾ, ಮೊದಲಾದ ಪ್ರತಿಕೂಲ ಪರಿಸ್ಥಿತಿ ಕಾಣಿಸಿಕೊಂಡಾಗ ಗ್ರಾಮದ ಮುಖಂಡರೆಲ್ಲ ಒಂದೆಡೆ ಊರ ಚಾವಡಿಯಲ್ಲಿ ಸೇರಿ ತಮ್ಮ ಗ್ರಾಮಕ್ಕೆ ಬಂದಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸುತ್ತಾರೆ. ಈ ಒಂದು ಹಿನ್ನೆಲೆಯಲ್ಲಿ ಊರಿನ ಪ್ರಮುಖ ಬೀದಿಗಳಲ್ಲಿ ರಾಮಾಯಣ, ಮಹಾಭಾರತ, ಮತ್ತೇ ಐರಾವತದ ಕಥೆಗಳನ್ನು ವಾರಗಟ್ಟಲೆ ಹಾಡಿಸುವುದು. ಇದರಿಂದ ಗ್ರಾಮಕ್ಕೆ ಏನಾದರೂ

ಒಳ್ಳೆಯದಾದರೆ ಸರಿ, ಇಲ್ಲದೇ ಹೋದರೆ ಊರಿನ ಮುಖಂಡರು ಮತ್ತು ದಾಸರುಗಳು ಬಾವಿತಡಿಗೆ ಹೋಗಿ ಪೂಜೆ ಮಾಡಿ ಬಿಳಿಗಿರಿರಂಗನನ್ನು ನೆನೆಯುತ್ತಾ... 'ನಮ್ಮಪ್ಪಾ.. ಮುಂಬರುವ ದಿನಗಳಲ್ಲಿ ನಮ್ಮೂರಿನ ಕೆರೆ ಕಟ್ಟೆಗಳಿಗೆ ನೀರು ಬಂದು, ಸಂತುಷ್ಟಿಯಾದರೆ ಹಾಗೂ ಬಂದ ಕಷ್ಟ ಬಯಲಾಗಿ ಜನ ಜಾನುವಾರುಗಳಿಗೆ ಯಾವುದೇ ವಿಧವಾದ ರೋಗರುಜಿನ ಬಾರದಿರುವಂತೆ ಕಾಯ್ದುಕೊಂಡರೆ ಹೊಸದಾಗಿ ಬಂದ ಬೆಳೆಯಿಂದ ದೊಡ್ಡದಾಗಿ ಮರಿಬಿಟ್ಟು ಸಂಪ್ರೋಕ್ಷಣೆ ಮಾಡುತ್ತೇವೆ' ಎಂದು ಹರಕೆ ಮಾಡಿಕೊಳ್ಳುತ್ತಾರೆ.

ಹೀಗೆ ಹರಕೆ ಮಾಡಿಕೊಂಡ ವಾರದೊಳಗೆ ಮೂಡಣ ದಿಕ್ಕಿನಿಂದ ಮೋಡ ತಡೆದು ಮಳೆ ಹುಯ್ದು ಕೆರೆ ಕಟ್ಟೆ ತುಂಬುತ್ತಿತ್ತು. ಇದರಿಂದಾಗಿ ಜನರೆಲ್ಲರೂ ಒಳ್ಳೆಯ ಬೆಳೆಯನ್ನು ಬೆಳೆದು ಸಂತುಷ್ಟಿಯನ್ನು ಕಾಣುತ್ತಿದ್ದರು. ಇಂತಹ ಸಂದರ್ಭದಲ್ಲಿ ಗ್ರಾಮದ ಮುಖಂಡರೆಲ್ಲ ಒಂದು ಕಡೆ ಸೇರಿ ಸಂಪ್ರೋಕ್ಷಣೆ ಮಾಡುವ ವಿಚಾರದ ಬಗ್ಗೆ ಚರ್ಚಿಸಿ ಒಂದು ದಿನವನ್ನು ನಿಗದಿ ಮಾಡಿಕೊಳ್ಳುತ್ತಾರೆ. ಅಷ್ಟೊತ್ತಿಗಾಗಲೇ ಗ್ರಾಮದ ಪ್ರತಿಯೊಂದು ಕುಟುಂಬದವರು ಸಂಪ್ರೋಕ್ಷಣೆಗಾಗಿ ಒಂದೊಂದು ಕೊಳಗ ಅಕ್ಕಿ, ಇಪ್ಪಿಪ್ಪತ್ತು ರೂಪಾಯಿಗಳನ್ನು ಕೊಟ್ಟಿರುತ್ತಾರೆ. ಈ ಹಣದಿಂದ ಪೂಜೆ ಸಾಮಾನು ಮತ್ತು ಮರಿಯನ್ನು ಕೊಂಡು ತಂದು ಊರಿಂದ ಹೊರಗೆ ಸಂಪ್ರೋಕ್ಷಣೆ ಮಾಡಲು ತಯಾರಿರುತ್ತಾರೆ.

ಊರಿನಲ್ಲಿ ಸಂಪ್ರೋಕ್ಷಣೆ ಮಾಡುವ ನಾಲ್ಕೈದು ದಿನಗಳ ಮುಂಚಿತವಾಗಿಯೇ, ನಮ್ಮೂರಿನಲ್ಲಿ ಸಂಪ್ರೋಕ್ಷಣೆ ನಡೆಯುತ್ತದೆ. ಅದರ ಪ್ರಯುಕ್ತ ನಿಮ್ಮೂರಿನ ಸರ್ವಜನರೂ ಬರಬೇಕೆಂದು ಹೇಳಿ ಕಾಗದ ಪತ್ರಗಳನ್ನು ಕಳುಹಿಸಿರುತ್ತಾರೆ. ಸಂಪ್ರೋಕ್ಷಣೆಯ ದಿನ ಊರಿನ ಎಲ್ಲಾ ಜನರು ತಮ್ಮ ಮನೆ ಕೋಣೆಗಳನ್ನು ತೊಳೆದು ತಾವೂ ಕೂಡ ಶುಚಿಯಾಗುವುದರ ಜೊತೆಗೆ ತಮ್ಮೆಲ್ಲಾ ಕೆಲಸ ಕಾರ್ಯಗಳಿಗೆ ರಜೆ ಹೇಳಿರುತ್ತಾರೆ. ಅಂದು ಊರಿನ ಯಜಮಾನರು ಮತ್ತು ದಾಸರು ಬಾವಿತಡಿಗೆ ಹೋಗಿ ಮರಿವದರಿಸಿ ಪೂಜೆ ಮಾಡಿದರೆ, ಕೆಲವರು ಅಡಿಗೆ ಮಾಡುವುದರಲ್ಲಿ ಕಾರ್ಯಪ್ರವೃತ್ತರಾಗುತ್ತಾರೆ. ಅಡಿಗೆಯೆಲ್ಲಾ ಸಿದ್ಧವಾದ ಮೇಲೆ ಅತ್ರಾಳುವಿನಿಂದ ಬೀದಿ ಬೀದಿಗೆಲ್ಲಾ ಸುದ್ದಿ ಮುಟ್ಟಿಸುತ್ತಾರೆ. ಆಗ ಹೆಂಗಸು ಮಕ್ಕಳಾದಿಯಾಗಿ ಸಂಪ್ರೋಕ್ಷಣೆ ಮಾಡುವ ಸ್ಥಳಕ್ಕೆ ಹೋಗಿ ಊಟ ಮಾಡುತ್ತಾರೆ. ಆದರೆ ಬಸುರಿ, ಬಾಣಂತಿಯರು ಮತ್ತು ರೋಗರುಜಿನದಿಂದ ನರಳುತ್ತಿರುವವರಿಗೆ, ಅವರವರ ಮನೆಗೆಯೇ ತಲುಪಿಸುತ್ತಾರೆ. ಮೊದಲು ಗಂಡಸರ ಊಟ ಅನಂತರ ಹೆಂಗಸರ ಊಟ.

ಒಟ್ಟಿನಲ್ಲಿ ಜನಪದ ದಾಸ ಸಂಪ್ರದಾಯ ಬೇರೆ ಸಂಪ್ರದಾಯಗಳಿಗಿಂತ ಭಿನ್ನವಾದ ನೆಲೆಯಲ್ಲಿ ಅನಾವರಣಗೊಂಡಿದೆ. ಈ ಸಂಪ್ರದಾಯದ ಮೂಲಕ ಕಾಡಿನ ಸಮಾಜ ಮತ್ತು ನಾಡಿನ ಸಮಾಜಗಳ ನಡುವೆ ಸಾಂಸ್ಕೃತಿಕ ಕೊಳು ಕೊಡುಗೆಗಳು ಏರ್ಪಟ್ಟಿರುವಂತಹ ವಿಚಾರ ಕಂಡು ಬರುತ್ತದೆ. ರಂಗನಾಥಸ್ವಾಮಿಯ ಮೇಲಿನ ಅನನ್ಯಭಕ್ತಿ, ಚಾಚೂತಪ್ಪದೆ ಅನುಸರಿಸುವ ನಂಬಿಕೆ, ಆಚರಣೆ ಮತ್ತು ಸಂಪ್ರದಾಯಗಳು ಮತ್ತಷ್ಟು ಜೀವಂತಗೊಂಡಿವೆ. ಕಷ್ಟ ಬಂದಾಗ ದೇವರಲ್ಲಿ ಹರಕೆ ಮಾಡಿಕೊಳ್ಳುವುದು, ಅದೇ ರೀತಿ ಸಂತುಷ್ಟಿಯಾದಾಗ ಎಲ್ಲರೂ ಸೇರಿ ಒಗ್ಗಟ್ಟಿನಿಂದ ದೇವರನ್ನು ತೃಪ್ತಿಪಡಿಸುವ ಪ್ರಕ್ರಿಯೆಯಲ್ಲಿ ಸಮಾಜದ ಐಕ್ಯತೆಯನ್ನು ಗುರುತಿಸಬಹುದಾಗಿದೆ. ಆದರೆ ಜಾತ್ರೆಯ

ಸಂದರ್ಭದಲ್ಲಿ ಇಲ್ಲಿ ನಡೆಯುವಂಥ ಬಿದಿರು ಮೆಳೆ ಸೇವೆಯಂತಹ ಆಚರಣೆ ತುಂಬಾ ಗಂಭೀರವಾದುದು. ಹೀಗೆ ಈ ಸಂಪ್ರದಾಯಗಳ ಮೂಲಕ ಜನಪದರ ಬದುಕಿನ ಆಶೋತ್ತರಗಳನ್ನು ಗುರುತಿಸಬಹುದು.

* * * * *

ಮಕ್ಕಳ ಜನಪದ ಆಟಗಳು

ಎಚ್. ಟಿ. ಸರೋಜ

ನಾಗರಿಕತೆ ಇಂದು ನಮ್ಮನ್ನೆಲ್ಲ ಆವರಿಸಿ ತನ್ನ ಬಿಗಿ ಮುಷ್ಟಿಯಲ್ಲಿ ಹಿಡಿದಿಟ್ಟುಕೊಂಡಿದೆ. ಪಾಶ್ಚಾತ್ಯ ಸಂಸ್ಕೃತಿಗೆ ಮೊರೆ ಹೋದ ನಾವು ನಮ್ಮ ಸಂಸ್ಕೃತಿಯನ್ನು ಕಡೆಗಣಿಸುತ್ತಿರುವುದರಿಂದ ಬದುಕಿನ ಸ್ವರೂಪವೇ ಬದಲಾಗುತ್ತಿದೆ. ಸಹಜತೆ ದೂರ ಸರಿದು ಯಾಂತ್ರಿಕ ಬದುಕಿಗೆ ಒಳಗಾಗುತ್ತಿದ್ದೇವೆ. ಇದಕ್ಕೆಲ್ಲ ಕಾರಣ ದೂರದರ್ಶನ ಹಾಗೂ ಪ್ರಚಾರ ಮಾಧ್ಯಮಗಳೇ ಎಂದರೆ ತಪ್ಪಾಗಲಾರದು. ಹೀಗೆ ದೂರದರ್ಶನದ ಮೋಹಕ್ಕೆ ಬಲಿಯಾದ ಇಂದಿನ ಮಕ್ಕಳು ಇಡೀ ದಿನ ದೂರದರ್ಶನದ ಮುಂದೆ ಕುಳಿತು ಕಾಲಹರಣ ಮಾಡುತ್ತಿರುವುದರಿಂದ ಕ್ರಿಯಾಶೀಲತೆ ಕಳೆದುಕೊಂಡು ನಿಷ್ಕ್ರಿಯರಾಗುತ್ತಿದ್ದಾರೆ. ಅದರಲ್ಲೂ ಇಂದು ಕ್ರಿಕೆಟಿನ ಅಬ್ಬರ ಆರ್ಭಟ ಹೇಳತೀರದು. ಅಮೆರಿಕನ್ನರಿಂದ 'ಮೂರ್ಖರ ಆಟ' ಎಂಬ ಬಿರುದಿಗೆ ಒಳಗಾದ ಕ್ರಿಕೆಟ್ ಎಲ್ಲರನ್ನೂ ಸೋಮಾರಿಗಳನ್ನಾಗಿ ಮಾಡುತ್ತಿದೆ. ಜೊತೆಗೆ ಗ್ರಾಮೀಣ ಮಕ್ಕಳ ಬದುಕಿನ ಮೇಲೂ ತನ್ನ ಉರಿನಾಲಿಗೆ ಚಾಚಿದೆ. ಆದ ಕಾರಣ ಮಕ್ಕಳು ಆಧುನಿಕ ಹಾಗೂ ವಿದ್ಯುನ್ಮಾನ ಆಟಗಳ ಜಾಲಕ್ಕೆ ಬಲಿಯಾಗಿ ಜನಪದ ಆಟಗಳಿಂದ ದೂರ ಸರಿಯುತ್ತಿದ್ದಾರೆ ಎಂಬುದು ವಿಷಾದದ ಸಂಗತಿ.

ಆಟಗಳು ಮಾನವನ ಬದುಕಿನಲ್ಲಿ ಮಹತ್ತರವಾದ ಪಾತ್ರ ವಹಿಸುತ್ತವೆ. ಅದರಲ್ಲೂ ಗ್ರಾಮೀಣ ಜನರಿಗೆ ಸುಲಭವಾಗಿ ಮನರಂಜನೆ ಒದಗಿಸುವ ಸಾಧನವೆಂದರೆ ಆಟಗಳು ಮಾತ್ರ. ಮಾನವ ಭೂಮಿ ಮೇಲೆ ಹುಟ್ಟಿದಂದಿನಿಂದಲೇ ಹುಟ್ಟಿಕೊಂಡ ಆಟಗಳಿಗೆಪುರಾತನ ಇತಿಹಾಸವಿದೆ. ಮಗು ತೊಟ್ಟಿಲಲ್ಲಿ ಕೈಕಾಲು ಅಲುಗಾಡಿಸುತ್ತಿದ್ದರೆ ಸಾಕು, ಮಗು ಆಟವಾಡುತ್ತಿದೆ ಎನ್ನುತ್ತೇವೆ. ಒಬ್ಬರಾಡಿದರೂ ಆಟವೇ, ಇಬ್ಬರಾಡಿದರೂ ಆಟವೇ. ನೂರಾರು ಜನ ಕೂಡಿ ಆಡಿದರೂ ಆಟವೇ. ಹಾಗಾದರೆ 'ಆಟ' ಎಂದರೇನು? ಎಂಬ ಪ್ರಶ್ನೆ ಎದುರಾಗುತ್ತದೆ. 'ಆಟ' ಎಂಬ ಪದ ಬಹಳ ಪ್ರಶ್ನಾರ್ಥಕ ಹಾಗೂ ಕುತೂಹಲಕಾರಿಯಾದದ್ದು. ಮಾನವನ ಮನಃ ಪ್ರವೃತ್ತಿಯಿಂದ ಜನ್ಮ ತಾಳಿದ ಆಟಗಳು ಇಂದು ಬೇರೆ ಬೇರೆ ಅರ್ಥಗಳನ್ನು ಪಡೆದುಕೊಂಡಿದೆ. ಜನಪದ ಆಟಗಳನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯವನ್ನು ಸೂಚಿಸಿರುವುದು ಕಂಡುಬರುತ್ತದೆ.

"ಪರಂಪರಾಗತ ಸಲಕರಣೆಗಳನ್ನು ಬಳಸಿಕೊಂಡು ಮನೆಯ ಒಳಗೆ ಹೊರಗೆ ಆಡಲಾಗುವ ಯಾವುದೇ ಗುಂಪಿನ, ಜನತೆಯ ಆಟಗಳೇ ಜನಪದ ಆಟಗಳು" ಎಂಬುದಾಗಿ ಅಂಬಳಿಕೆ ಹಿರಿಯಣ್ಣ ಅವರು ವ್ಯಾಖ್ಯಾನಿಸಿದರೆ ಅರವಿಂದ ಮಾಲಗತ್ತಿಯವರು 'ಯಾವುದೇ ಚಟುವಟಿಕೆಗೆ 'ಆಟ'ವೆಂದು ಕರೆದಿದ್ದು, ಕ್ರಿಯೆಯನ್ನು ಸೂಚಿಸುವ ಶಬ್ದಗಳ ಜೊತೆಗೆ 'ಆಟ'ವೆಂಬ ಪದ ಸೇರಿಕೊಂಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ಮೇಲಿನ 'ಆಟ' ಪದದ ವ್ಯಾಖ್ಯಾನಗಳನ್ನು ಗಮನಿಸಿದಾಗ ಬೇಸರ ಕಳೆಯಲು ಕೆಲವು ನೈಸರ್ಗಿಕ ವಸ್ತುಗಳೊಂದಿಗೆ ತಮಗಿಷ್ಟವಾದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಕ್ರಿಯೆಗೆ 'ಜನಪದ ಆಟ'ಗಳು ಎನ್ನಬಹುದು.

ಜನಪದ ಆಟಗಳಲ್ಲಿ ದೊಡ್ಡವರ ಆಟಗಳೇ ಬೇರೆ, ಮಕ್ಕಳ ಆಟಗಳೇ ಬೇರೆ. ನಾವು ಇಲ್ಲಿ ಮಕ್ಕಳ ಜನಪದ ಆಟಗಳ ಕಡೆಗೆ ಗಮನಹರಿಸಬೇಕಾಗಿದೆ. ಮಕ್ಕಳ ಆಟಗಳು ಎಂದ ಕೂಡಲೇ ವೈವಿಧ್ಯಮಯವಾದ ಆಟಗಳು ನಮ್ಮ ಕಣ್ಮುಂದೆ ಸುಳಿಯುವುದರ ಜೊತೆಗೆ ಕ್ಷಣ ಕಾಲ ನಮ್ಮನ್ನು ಬಾಲ್ಯಕ್ಕೆ ಕೊಂಡೊಯ್ಯುತ್ತವೆ. ಮಕ್ಕಳ ಆಟಗಳನ್ನು ಹೆಸರಿಸುತ್ತ ಹೋದರೆ ಪಟ್ಟಿ ಬೆಳೆಯುತ್ತ ಹೋಗುತ್ತದೆ. ಮಕ್ಕಳ ಆಟಗಳನ್ನು ಒಳಾಂಗಣದ ಆಟಗಳು ಹಾಗೂ ಹೊರಾಂಗಣದ ಆಟಗಳು ಎಂದು ವಿಂಗಡಿಸಲಾಗಿದೆ.

ಒಳಾಂಗಣದ ಆಟಗಳ ಗುಂಪಿಗೆ, ಚೌಕಬಾರ, ಏಣಿಕಲ್ಲು (ಆಣೆಕಲ್ಲು),ಚನ್ನೆಮಣೆ ಅಡುಗೆ ಯಾಟ, ಬಳೆಚೂರಿನಾಟ, ಕಳ್ಳಪೊಲೀಸ್, ಉಪ್ಪುಪ್ಪು ಜೀರಿಗೆ (ನಾಲ್ಕು ಮೂಲೆಯಾಟ), ಅವಲಕ್ಕಿ ಪವಲಕ್ಕಿ, ಚುಕ್ಕೆಯಾಟ, ಬೆಂಕಿಕಾಯಿಸುವಾಟ ಮುಂತಾದವುಗಳು ಸೇರುತ್ತವೆ.

ಹೊರಾಂಗಣದ ಆಟಗಳಲ್ಲಿ ಮುಖ್ಯವಾಗಿ ಕುಂಟೆಬಿಲ್ಲೆ, ಒಂಟಿಕಾಲು, ಕುಂಟಿಡಿಯುವಾಟ, ಗಿರ್‌ಗಿಟ್ಲೆ, ರತ್ತೋರತ್ತೋ ರಾಯನ ಮಗಳೆ, ಗೋಲಿ, ಬುಗರಿ, ಲಗೋರಿ, ಚೆಂಡಾಟ, ಮರಕೋತಿಯಾಟ, ಚಿನ್ನಿದಾಂಡು, ಜೂಟಾಟ, ಕೆರೆದಡ, ಚರಂಡಿದಾಟುವಾಟ, ಕಲ್ಲುಗೆದಿಯುವಾಟ, ಗಣಪತಿ ಆಟ, ಬಸ್ಸಿನಾಟ, ಸ್ಕೂಲಾಟ, ಗಜ್ಜುಗದಾಟ, ಚಂದಮಾಮನಾಟ, ಮದುವೆ ಆಟ, ಬೇಸಾಯದಾಟ, ಬೀಸುವುದು, ಕುಟ್ಟುವುದು, ಬಿತ್ತುವುದು, ಕುಂತರ್ ನಿಂತರ್ ಹಿಡಿಯುವಾಟ, ಅಕ್ಕಿ ರಾಗಿ ಮಾಡುವುದು, ಹರಗುವುದು, ಕಳೆ ತೆಗೆಯುವುದು, ಅದ್ದುಬದ್ದು ಅವರೆಕಾಯಿ, ಹುಲಿ ಹಸುವಿನಾಟ, ಟೋಪಿಯಾಟ, ಕಣ್ಣುಮುಚ್ಚಾಲೆ, ಅಗಸನಾಟ, ಅಮೃತ ವಿಷದಾಟ, ಕಪ್ಪೆ ಗೂಡಿ ನಾಟ, ಮಳೆ ಬಂತು ಗಿಳಿ ಪೋಪೋ , ಐಸ್‌ಪೈಸ್ ಆಟ, ರಾಜರಾಣಿ (ಏಡಿ ಬಿಲ್ಲೆ) ಷರಾಪ್ ಆಟ, ಕೋಲಾಟ (ಕಲ್ಲು ಸಗಣಿಯಾಟ), ಜೋಕಾಲಿ, ಗೌಡಗೌಡ ಕುಂಬಳ ಕಾಯಿ ಬೇಕು, ಒಂಟೆತ್ತಿನ ಗಾಡಿಯಾಟ, ಕಡ್ಡಿ ಮಣ್ಣಿನ ಆಟ (ಇಟ್ಟಿನ ಬ್ಯಾಡ್ಸ) ಇವುಗಳನ್ನು ಗುರ್ತಿಸಬಹುದು.

ಕಲ್ಲು, ಮಣ್ಣು, ಮರಳು, ಕಪ್ಪೆಚಿಪ್ಪು, ತೆಂಗಿನ ಚಿಪ್ಪು, ಹರಿದ ಬಟ್ಟೆಚೂರು, ಒಡೆದ ಬಳೆ ಚೂರು, ಹುಣಸೆ ಬೀಜ, ಹಾಲುವಾಣದ ಬೀಜ, ಜಾಲಿಬೀಜ, ಅಂಟುವಾಳದ ಕಾಯಿ, ನೀಲಗಿರಿಕಾಯಿ, ಇದ್ದಿಲ ತುಂಡು, ಗುಲಗಂಜಿ, ಹೆಂಚಿನ ಚೂರು, ಮಡಿಕೆ ಚೂರು, ಕುಡಿಕೆ, ಹಗ್ಗ,ದಾರ, ಬಳಪದ ತುಂಡು, ಕಲ್ಲಿನ ಹರಳು, ಹಳೆ ಬೆಂಕಿ ಪೊಟ್ಟಣ, ಮರದ ತುಂಡು, ಹೂವು ಕಾಯಿ, ಹಣ್ಣುಗಳು, ಮರದ ಟೊಂಗೆಗಳು, ಹುಲ್ಲು ಕಡ್ಡಿಗಳು, ಕಬ್ಬಿಣದ ಚೂರುಗಳು, ತಗಡು, ಹಳೆ ಸೀಸೆ, ಮಂಕರಿ, ಮೊರ, ಜರಡಿ, ತಟ್ಟೆ, ಲೋಟ, ಚೆಂಬು, ಚಮಚ, ನೀರು ಇವೆಲ್ಲ ಮಕ್ಕಳಿಗೆ ಆಟದ ಸಾಮಾನುಗಳಾಗುತ್ತಿದ್ದವು.

ಮಕ್ಕಳ ಆಟಗಳಿಗೆ ಪೂರ್ವಯೋಜಿತ ಸಿದ್ಧತೆಯಾಗಲಿ, ನಿಗದಿ ಪಡಿಸಿದ ಆಟದ ಮೈದಾನವಾಗಲಿ ಅಗತ್ಯವಿಲ್ಲ. ಜೊತೆಗೆ ಗುರುವಿನ ತರಬೇತಿ, ಮಾರ್ಗದರ್ಶನವಾಗಲಿ ಬೇಕಿಲ್ಲ.

ಹಾಗಾಗಿ ಮಕ್ಕಳು ಖರ್ಚಿಲ್ಲದೆ ಎಲ್ಲೆಂದರಲ್ಲಿ ಹೇಗೆಂದರೆ ಹಾಗೆ ಸರ್ವಸ್ವತಂತ್ರವಾಗಿ ಆಟವಾಡುತ್ತಾರೆ. ಅವರಿಗೆ ಬೇಕಾಗಿರುವುದು ಸಮವಯಸ್ಸಿನ ಮಕ್ಕಳು ಮಾತ್ರ. ಚೂರು ಪಾರು ಸ್ಥಳ ಸಿಕ್ಕರೆ ಸಾಕು ತಮ್ಮ ಕೈಚಳಕದಿಂದ ವೈವಿಧ್ಯಮಯ ಆಟಗಳನ್ನು ಆಡಿ ಸಂತೋಷಪಡುತ್ತಾರೆ. ಮಕ್ಕಳಿಗೆ ಬೇಕಾದ ಆಟದ ಸಾಮಾನುಗಳನ್ನು ಖರೀದಿಸಲು ಸಂತೆ, ಪೇಟೆಗಳಿಗೆ ಹೋಗುವ ಗೋಜಿಲ್ಲ. ಮಕ್ಕಳ ಆಟಿಕೆಗಳು ಕಲ್ಲು, ಮಣ್ಣು, ಮರದ ತುಂಡಿನಿಂದ ಮಾಡಿದ್ದುಗಳಾಗಿರುವುದರಿಂದ ಕ್ಷಣಾರ್ಧದಲ್ಲಿಯೇ ಆಟಿಕೆಗಳನ್ನು ತಯಾರಿಸಿಕೊಳ್ಳಬಲ್ಲರು. ಉಪಯೋಗಿಸಿ ಮೂಲೆಗೆ ಎಸೆದ ಹಳೆಯ ವಸ್ತುಗಳೇ ಸಾಕು ಇವರಾಟಕ್ಕೆ. ಅಂದಿನ ಮಕ್ಕಳಿಗೆ ಈಗಿನಂತೆ ಶಾಲೆ, ಕಾನ್ವೆಂಟ್, ಶಿಶುವಿಹಾರಗಳ ಕಾಟವಾಗಲಿ, ಪುಸ್ತಕಗಳ ಹೊರೆಯಾಗಲಿ ಇರಲಿಲ್ಲ. ಪ್ರಕೃತಿಯ ಮಕ್ಕಳಾದ ಇವರು ಪರಿಸರದಲ್ಲಿ ದೊರೆಯುವ ವಸ್ತುಗಳನ್ನೇ ಆಟಕ್ಕೆ ಬಳಸಿಕೊಂಡು ಬೆಳಿಗ್ಗೆಯಿಂದ ರಾತ್ರಿ ಮಲಗುವವರೆಗೂ ಕುಣಿದು ಕುಪ್ಪಳಿಸುತ್ತಿದ್ದರು. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಆಟವಾಡದೆ ಸುಮ್ಮನೆ ಕುಳಿತುಕೊಂಡು ಕಾಲ ಕಳೆಯುವ ಮಕ್ಕಳೇ ಇಲ್ಲ ಎನ್ನಬಹುದು. ತಿಂಡಿ ಊಟದ ವೇಳೆಯಲ್ಲಿ ಮಾತ್ರ ಅವರಿಗೆ ವಿರಾಮ. ಸ್ನಾನದ ಮೈಗೆ ಮಣ್ಣಿನ ಧೂಳೇ ಪೌಡರ್ ಆಗಿರುತ್ತಿತ್ತು. ಮಕ್ಕಳ ಆಟಗಳಲ್ಲಿ ಕಥೆ, ಒಗಟು ಪ್ರಾಸ, ಮಾತು, ಪ್ರಶ್ನೆ, ಉತ್ತರಗಳಿವೆ. ಆಟದಲ್ಲಿ ಬರುವ ಕಳ್ಳ, ಕಳ್ಳಿ, ಕುಂಟ, ಕುರುಡ, ಮೂಗ, ಕಿವುಡ, ಗಂಡ, ಹೆಂಡತಿ, ಅಣ್ಣ, ತಮ್ಮ, ಅಕ್ಕ, ತಮ್ಮ, ತಂಗಿ, ಮದುವೆಯ ವಧು, ವರ, ಪ್ರಾಣಿ, ಪಕ್ಷಿ ಎಲ್ಲ ಪಾತ್ರಗಳನ್ನು ಮಕ್ಕಳೇ ನಿರ್ವಹಿಸುತ್ತವೆ. ಆಟಗಳಲ್ಲಿ ಕೈ ಚಪ್ಪಾಳೆ ಹಾಕುವುದರ ಮೂಲಕ ಹಿಡಿಯುವವರನ್ನು ಆಯ್ಕೆ ಮಾಡಲಾಗುವುದು. ಇವರನ್ನು ಕಳ್ಳ-ಕಳ್ಳಿ ಎಂದು ಕರೆಯುವರು. 'ಅಂಬಾ' ಎನ್ನುತ್ತ ಕೈಯನ್ನು ಬಾಯಿಗೆ ಅಡ್ಡ ಹಿಡಿಯುವುದರ ಮೂಲಕ ಕಳ್ಳ-ಕಳ್ಳಿಯಾಗುವುದನ್ನು ತಪ್ಪಿಸಿಕೊಳ್ಳಬಹುದು.

ಗ್ರಾಮೀಣ ಮಕ್ಕಳು ಹಿಂದಿನಿಂದಲೂ ಆಡಿಕೊಂಡು ಬಂದಿರುವ ಕೆಲವು ಆಟಗಳ ಕಡೆಗೆ ಗಮನಹರಿಸಿ ಅವುಗಳ ಕಿರು ಪರಿಚಯ ಇಲ್ಲಿ ಮಾಡಿಕೊಡಲು ಪ್ರಯತ್ನಿಸಲಾಗಿದೆ. ಸಾಮಾನ್ಯವಾಗಿ ಮಕ್ಕಳ ಆಟಗಳು ಹಾಗೂ ಆಟಿಕೆಗಳು ಒಂದೇಯಾಗಿದ್ದರೂ ಪ್ರಾದೇಶಿಕ ಭಿನ್ನತೆಯನ್ನು ಕಾಣಬಹುದು.

೧ ಚೌಕಾಬಾರ (ಕಟ್ಟೆ ಮನೆಯಾಟ)

ಈ ಆಟದಲ್ಲಿ ಎರಡರಿಂದ ನಾಲ್ಕು ಜನ ಪಾಲ್ಗೊಳ್ಳಬಹುದು. ಹುಣಸೆ ಬೀಜದ ಬೇಳೆ (ಚವೆ) ಹಾಗೂ ಕವಡೆಗಳನ್ನು ಆಟಕ್ಕೆ ಬಳಸುವರು. ಕಲ್ಲು, ಕಡ್ಡಿ, ಬಳೆಚೂರು ಮುಂತಾದುವನ್ನು 'ಕಾಯಿ'ಗಳಾಗಿ ಉಪಯೋಗಿಸುವರು. ಚೌಕಾಬಾರದಲ್ಲಿ ಐದು ಮನೆಯಾಟ, ಏಳು ಮನೆಯಾಟ ಎಂಬುದಾಗಿ ಎರಡು ರೀತಿಯ ಆಟಗಳಿವೆ. ಐದು ಮನೆಯಾಟದಲ್ಲಿ ನಾಲ್ಕು ಚವೆ, ನಾಲ್ಕು ಕಾಯಿಗಳಿರುತ್ತವೆ ನಾಲ್ಕು ಗಟ್ಟೆ ಮನೆಗಳಿದ್ದು, ಒಂದು ಹಣ್ಣಿನ ಮನೆಯಿರುತ್ತದೆ. ಗಟ್ಟೆಮನೆಯಿಂದ ಬಲಗೈ ಮುಂದಾಗಿ ಕಾಯನ್ನು ನಡೆಸಿಕೊಂಡೋಗಿ 'ಕಡತರ ಕಾಯಿ' ಸಿಕ್ಕಿದ ಮೇಲೆ ಒಳ ನುಗ್ಗಿ ಹಣ್ಣು ಮಾಡಬೇಕು. ಕಡತರಕಾಯಿ ಸಿಕ್ಕದಿದ್ದರೆ ಒಳ ನುಗ್ಗುವಂತಿಲ್ಲ. ನಾಲ್ಕು ಚವೆಗಳು ಅಂಗಾತ ಬಿದ್ದರೆ ನಾಲ್ಕು ಎಂದು, ಮಕಡಾ ಬಿದ್ದರೆ ಎಂಟು ಎಂಬುದಾಗಿ ಲೆಕ್ಕ ಹಾಕಲಾಗುವುದು. ಈ

ಆಟದಲ್ಲಿ ಹೊರಗಿನ ಮನೆಯಾಟ, ಒಳಗಿನ ಮನೆಯಾಟ ಎಂಬುದಾಗಿ ಎರಡು ರೀತಿಯ ಆಟಗಳಿವೆ. ಒಳಗಿನ ಮನೆಯಾಟದಲ್ಲಿ ಒಳಗಿನ ಹಣ್ಣಿನ ಮನೆಯೇ ಗಟ್ಟಿಮನೆಯಾಗಿದ್ದು, ಒಂದು ಬಿದ್ದರೆ ಕಾಯನ್ನು ಹೊರಗೆಳೆದು ಕಡತರಕಾಯಿ ಸಿಕ್ಕಿದ ಮೇಲೆ ಎಡಗೈ ಮುಂದಾಗಿ ಕಾಯಿ ನಡೆಸಿಕೊಂಡು ಬಂದು ತನ್ನ ಗಟ್ಟಿ ಮನೆಯಲ್ಲಿ ಹಣ್ಣು ಮಾಡಬೇಕು. ಮೊದಲು ಯಾರು ಎಲ್ಲ ಕಾಯಿಗಳನ್ನು ಹಣ್ಣು ಮಾಡುವರೋ ಅವರು ಗೆದ್ದಂತೆ.

ಏಳು ಮನೆಯಾಟದಲ್ಲಿ ಸಾಮಾನ್ಯವಾಗಿ ಇಬ್ಬರೂ ಒಟ್ಟಾಗಿ ಸೇರಿ ಆಡುವ ಜೋಡಿಯಾಟ ಕಂಡುಬರುತ್ತದೆ. ಆರು 'ಚವೆ' ಗಳಿದ್ದು ಆರು ಕಾಯಿಗಳಿರುತ್ತವೆ. ಐದು ಮನೆಯಾಟದಂತೆಯೇ ಆಟ ಸಾಗುತ್ತದೆ.

ಚೌಕಾಬಾರದಲ್ಲಿ ಕೆಲವು ನಿಯಮಗಳು ಕಂಡು ಬರುತ್ತವೆ. ಗಟ್ಟಿ ಮನೆ ಬಿಟ್ಟು ಬೇರೆ ಎಲ್ಲಾದರೂ ಕಾಯಿಗಳನ್ನು ಕಡಿಯಬಹುದು. ಒಳ ನುಗ್ಗಿದ ಮೇಲೆ ಎರಡು ಕಾಯಿಗಳನ್ನು ಒಟ್ಟಿಗೆ ಹಾಕಿ ನಡೆಸುವುದಕ್ಕೆ ಜುಗ್ಗ ಎನ್ನುವರು. ಎರಡು, ನಾಲ್ಕು ಬಿದ್ದರೆ ಮಾತ್ರ ಜುಗ್ಗವನ್ನು ಮುಂದೆ ಸಾಗಿಸಬೇಕು. ಜುಗ್ಗದಿಂದ ಮಾತ್ರ ಜುಗ್ಗವನ್ನು ಕಡಿಯಬೇಕು. ಜುಗ್ಗದೊಳಗೆ (ಸಿಕ್ಕಿ) ಬಿದ್ದ ನಂತರವೇ ಮುಂದೆ ಕಾಯಿ ಸಾಗಿಸಬೇಕು. ಜುಗ್ಗದೊಳಗೆ ಸಿಕ್ಕಿ ಬೀಳದೆ ಮುಂದೆ ಹೋಗುವಂತಿಲ್ಲ. ಕೆಲವೊಮ್ಮೆ ಈ ನಿಯಮವನ್ನು ತಮ್ಮ ಅನುಕೂಲಕ್ಕೆ ತಕ್ಕ ಹಾಗೆ ಬದಲಾಯಿಸಿಕೊಳ್ಳುವರು.

೨. ಅಣೆ ಕಲ್ಲು (ಏಣ ಕಲ್ಲು)

ಈ ಆಟದಲ್ಲಿ ಎರಡರಿಂದ ನಾಲ್ಕು ಮಕ್ಕಳು ಭಾಗವಹಿಸಬಹುದು. ಈ ಆಟದಲ್ಲಿ ಹೆಣ್ಣು ಮಕ್ಕಳು ಮಾತ್ರ ಕಂಡುಬರುತ್ತಾರೆ. ಗೋಲಿಗಿಂತ ಸ್ವಲ್ಪ ದೊಡ್ಡ ಗಾತ್ರದ ಗುಂಡನೆಯ ಐದು ಕಲ್ಲುಗಳೇ ಆಟಿಕೆಗಳು. ಒಂದು ಸುತ್ತಿನ ಆಟದಲ್ಲಿ ಸುಮಾರು ಇಪ್ಪತ್ತು ಆಟಗಳಿರುತ್ತವೆ. ಐದು ಕಲ್ಲುಗಳಿರುವ ಕಾರಣ ಒಂದೊಂದೂ ಆಟವನ್ನು ಐದೈದು ಬಾರಿ ಆಡಬೇಕು. ಒಂದರಗಲ್ಲು, ಎರಡರಗಲ್ಲು, ಮೂರ್ರಗಲ್ಲು, ನಾಲ್ಕರಗಲ್ಲು, ಗುಂಪು, ಹೂವೆತ್ತು, ತಕ್ಕಡಿ, ಸೆಣಪಿ, ತುರ್ಕ, ಎದೆಮುಟ್ಟು, ಗಂಟ್ಲುಗಾಣ, ತುಟಿಮುಟ್ಟು, ಗಲ್ಲಮುಟ್ಟು, ಹಣೆಮುಟ್ಟು, ನತ್ತಿಸುಳಿ ಮುಟ್ಟು, ಕಂಕುಳ ಮುಟ್ಟು, ಕಳ್ಳಗುಣಿ ಮುಟ್ಟು, ಸವರ ಮುಟ್ಟು, ಕುಕ್ಕ, ಬಿಟ್ರುಗಲ್ಲು, ಹತ್ತಿಪ್ಪತ್ತು. ಹೀಗೆ ಒಂದರ ನಂತರ ಮತ್ತೊಂದರಂತೆ ಆಟ ಸಾಗುತ್ತದೆ. ಮೊದಲು ಆಟದಲ್ಲಿ ಗೆದ್ದವರು ಎದುರು ಪಾರ್ಟಿಗೆ 'ಗಂಡಯ್ಯ'ನನ್ನು ಕೊಡುವರು (ಅಂದರೆ ಕೊನೆಯ ಆಟ ಮುಗಿದ ನಂತರ ಒಂದು ಕಲ್ಲನ್ನು ಕೊಡುವುದು). ಆ ಕಲ್ಲನ್ನು ಪುನಃ ಆಟಕ್ಕೆ ಸೇರಿಸಿಕೊಳ್ಳುವಂತಿಲ್ಲ. ಗಂಡಯ್ಯನನ್ನು ಕೊಟ್ಟ ನಂತರ ಕಲ್ಲು ಕಡಿಮೆಯಾದಂತೆ ಆಟಗಳು ಕಡಿಮೆಯಾಗುತ್ತವೆ. (ನಾಲ್ಕು ಕಲ್ಲಿದ್ದರೆ ಒಂದೊಂದು ಆಟವನ್ನು ನಾಲ್ಕು ಭಾರಿ ಮಾತ್ರ ಆಡಬೇಕು) ಕಲ್ಲನ್ನು ಹಿಡಿಯುವಾಗ ಅಥವಾ ಕೈ ತಾಕಿದರೆ ಆಟ ಹೋದಂತೆ.

ಈ ಆಟದಲ್ಲಿ ಗಂಡಯ್ಯನನ್ನು ಕೊಡುವುದು ಮುಂದೆ ಬರಲಿರುವ ಗಂಡನನ್ನು ನೆನಪು ಮಾಡುವಂತಹದ್ದಾಗಿದೆ. ಈ ಆಟದಿಂದ ಮಕ್ಕಳಿಗೆ ಲೆಕ್ಕದ ಪರಿಚಯವಾಗುತ್ತದೆ. ಜೊತೆಗೆ ನೆನಪಿನ ಶಕ್ತಿ ಹೆಚ್ಚುತ್ತದೆ.

೩. ಅಡುಗೆಯಾಟ (ಅಡುಗೆ-ಗುಡಿಗೆ)

ಇದು ಹೆಸರೆ ಸೂಚಿಸುವಂತೆ ತಾಯಿ ಮನೆಯಲ್ಲಿ ಮಾಡುವ ಅಡುಗೆ ಕೆಲಸದ ಅನುಕರಣೆಯಾಗಿದೆ. ಆಟಕ್ಕೆ ತೆಂಗಿನ ಚಿಪ್ಪು, ಹೆಂಚಿನ ಚೂರು, ಕುಡಿಕೆ, ಲೋಟಗಳೇ ಪಾತ್ರೆಗಳು, ಕಲ್ಲು ಮಣ್ಣು ಅನ್ನ ಮುದ್ದೆ, ರಸ್ತೆ ಬದಿಯಲ್ಲಿ ಬೆಳೆದು ನಿಂತ ಗಿಡ ಮರಗಳ ಸೊಪ್ಪು ಕಾಯಿಗಳೇ ಸಾಂಬಾರಿಗೆ ತರಕಾರಿಗಳಾಗುತ್ತವೆ. ಈ ಆಟದಲ್ಲಿ ತಂದೆ ತಾಯಿ, ಮಕ್ಕಳ ಪಾತ್ರಗಳು ಕಂಡುಬರುತ್ತವೆ. ಅಡುಗೆ ಮಾಡಿದಂತೆ, ಊಟಕ್ಕೆ ಬಡಿಸಿದಂತೆ, ಊಟ ಮಾಡಿದಂತೆ ಪಾತ್ರೆ ತೊಳೆದಂತೆ ಎಲ್ಲವೂ ನಟನೆಯ ಮೂಲಕವೇ ಸಾಗುತ್ತದೆ. ತಮಗಿಷ್ಟವಾದ, ನೆನಪಿನಲ್ಲಿ ಉಳಿದುಕೊಂಡ ತಿಂಡಿಗಳ ಹೆಸರೇಳುತ್ತ ಊಟಕ್ಕೆ ಬಡಿಸುವರು, ಹೊಲಕ್ಕೆ ಊಟ ತೆಗೆದುಕೊಂಡು ಹೋಗುವುದು, ಗಂಡನ ಕೈಗೆ ನೀರು ಹಾಕುವುದು, ಊಟಕ್ಕೆ ಬಡಿಸುವುದು ಇವೆಲ್ಲವನ್ನೂ ಗಮನಿಸಿದರೆ ಒಂದು ಕುಟುಂಬದ ಚಿತ್ರಣವೇ ಕಣ್ಮುಂದೆ ಬರುತ್ತದೆ. ದೊಡ್ಡವರು ಮಾಡುವ ಕೆಲಸ ಕಾರ್ಯಗಳನ್ನು ಮಕ್ಕಳು ಹೀಗೆ ಅನುಕರಿಸುತ್ತಾರೆ ಎಂಬುದಕ್ಕೆ ಈ ಆಟ ಸಾಕ್ಷಿ.

೪. ಬಳೆಗೋರಿಯಾಟ

ಈ ಆಟದಲ್ಲಿ ಒಡೆದ ಬಳೆಚೂರುಗಳೇ ಆಟಿಕೆಗಳಾಗುತ್ತವೆ. ಹೆಣ್ಣು ಮಕ್ಕಳು ಮಾತ್ರ ಪಾಲ್ಗೊಳ್ಳುತ್ತಾರೆ. ಬಹುಶಃ ಹೆಣ್ಣು ಮಕ್ಕಳು ತೊಡುವ ಬಳೆಯಾಗಿರುವುದರಿಂದ ಗಂಡು ಮಕ್ಕಳ ಪಾತ್ರ ಕಂಡುಬರುವುದಿಲ್ಲವೇನೋ. 'ಅಂಬಾ' ಕಟ್ಟುವುದರ ಮೂಲಕ ಆಟ ಆರಂಭಿಸುವರು. ಎಲ್ಲರೂ ಸಮನಾಗಿ ಎಣಿಸಿಕೊಟ್ಟ ಬಳೆಚೂರುಗಳನ್ನು ತನ್ನ ಮುಂಗೈ ಮೇಲೆ ಎಸೆದುಕೊಂಡು ಎದುರು ಕುಳಿತವಳಿಗೆ ಯಾವುದೆಂದು ಕೇಳುವಳು. ಆಗ ಯಾವುದಾದರೊಂದು ಬಳೆಚೂರನ್ನು ತೋರಿಸುವಳು. ಅವಳು ತೋರಿಸಿದ ಬಳೆ ಚೂರು ಕೆಳಗೆ ಬೀಳದಂತೆ ತನ್ನ ಬೆರಳ ಸಂದಿಗೆ ಸಿಕ್ಕಿಸಿಕೊಂಡು ಕೆಳಗೆ ಬಿದ್ದ ಬಳೆ ಚೂರುಗಳನ್ನೆಲ್ಲ ಆರಿಸಿ ತನ್ನ ಎಡಗೈ ಹಸ್ತಕ್ಕೆ ತುಂಬಿಸಿಕೊಳ್ಳಬೇಕು. ಬಳೆ ಎತ್ತಿಕೊಳ್ಳುವಾಗ ಬೆರಳ ಮಧ್ಯದಲ್ಲಿ ಸಿಕ್ಕಿಸಿಕೊಂಡ ಬಳೆ ಕೆಳಗೆ ಬಿದ್ದರೆ ಆಟ ಹೋದಂತೆ. ಆಗ ಮುಂದಿನವರಿಗೆ ಆಟ ಬಿಟ್ಟುಕೊಡಬೇಕು. ಬಳೆ ಚೂರು ಬೀಳದಂತೆ ಎಲ್ಲ ಬಳೆಗಳನ್ನು ಆಯ್ದುಕೊಂಡರೆ ಎಲ್ಲ ಬಳೆಗಳು ಅವಳಿಗೆ ಸೇರುತ್ತವೆ. ಹೆಚ್ಚು ಬಳೆ ಸಂಪಾದಿಸಿದವರೇ ಗೆದ್ದಂತೆ.

ಇದು ಆಟವಾಡುವವರ ಕೈಚಳಕವನ್ನು ಅವಲಂಬಿಸಿದೆ. ಜಾಣ್ಮೆಯಿಂದ ಸೂಕ್ಷ್ಮವಾಗಿ ಈ ಆಟವಾಡಬೇಕು.

೫. ಉಪ್ಪುಪ್ಪು ಜೇರಿಗೆ (ನಾಲ್ಕು ಮೂಲೆಯಾಟ)

ಈ ಆಟಕ್ಕೆ ಮನೆಯೊಳಗಿನ ನಾಲ್ಕು ಮೂಲೆ ಅಥವಾ ಕಂಬಗಳೇ ಸಾಕು. ಕೈ ಚಪ್ಪಾಳೆ ಹಾಕಿ ಕಳ್ಳ/ಕಳ್ಳಿಯನ್ನು ನೇಮಿಸುವರು. ಒಬ್ಬೊಬ್ಬರು ಒಂದೊಂದು ಕಂಬ ಅಥವಾ ಮೂಲೆ ಹಿಡಿದು ನಿಲ್ಲುವರು. ಕಳ್ಳ/ಕಳ್ಳಿ ಉಪ್ಪುಪ್ಪು ಜೀರಿಗೆ ಉಪ್ಪುಮಾಳಿಗೆ ಜೀರಿಗೆ ಎಂದು ಒಂದೊಂದು ಕಂಬದ ಬಳಿಗೂ ಹೋಗಿ ಕೇಳುವರು. ಬೇಡ ಎಂದರೆ ಪಕ್ಕದ ಕಂಬ/ಮೂಲೆ ಬಳಿಗೆ ಹೋಗುವಳು. ಕಳ್ಳ/ಕಳ್ಳಿ ಆ ಕಡೆ ಹೋದ ಕೂಡಲೇ ಒಬ್ಬರಿಗೊಬ್ಬರು ಮೂಲೆ ಬದಲಾಯಿಸಿಕೊಳ್ಳಲು ಓಡುವರು. ಹಾಗೆ ಓಡುವ ಸಂದರ್ಭದಲ್ಲಿ ಕಳ್ಳ/ಕಳ್ಳಿಗೆ ಸಿಕ್ಕಿದರೆ ಆಟದಿಂದ ಔಟ್ ಆದಂತೆ. ಆಗ ಅವರೇ

ಕಳ್ಳರಾಗಿ ಹಿಡಿಯಬೇಕಾಗುತ್ತದೆ.

ಈ ಆಟದಲ್ಲಿ ಉಪ್ಪಿನ ಗುಣ ಸ್ವಭಾವ ತಿಳಿಸಲಾಗಿದೆ. ಜೊತೆಗೆ ಕಳ್ಳರನ್ನು ಕೂಡ ಹತ್ತಿರ ಬಂದರೆ ಅಪಾಯ ಎಂಬುದರ ಸಂಕೇತವಾಗಿದೆ. ಕಳ್ಳ ಬಂದು ಹಿಡಿದರೆ ಔಟ್ ಆಗುವೆನೆಂಬ ಭಯದಲ್ಲಿ ಅವರು ಉಪ್ಪನ್ನು ನಿರಾಕರಿಸುವರು.

೬. ಉದ್ದಿನ ಮೂಟೆಯಾಟ

ಸಮ ವಯಸ್ಸಿನ ಮಕ್ಕಳೆಲ್ಲ ಒಂದೆಡೆ ಸೇರಿ ಆಡುವಾಟವಿದು. ಮಕ್ಕಳೆಲ್ಲ ವೃತ್ತಾಕಾರವಾಗಿ (ಗುಂಪಾಗಿ) ಕುಳಿತು ತಮ್ಮ ಕೈಗಳ ಮುಷ್ಟಿಯನ್ನು ಒಂದರ ಮೇಲೊಂದರಂತೆ ಇಡುವರು. ಯಾರಾದರೊಬ್ಬರು ತನ್ನ ಎಡಗೈ ಮುಷ್ಟಿಯನ್ನು ಮೇಲಿಟ್ಟು ಬಲಗೈನ ತೋರು ಬೆರಳಿನಿಂದ ಒಂದೊಂದೇ ಮುಷ್ಟಿಯನ್ನು ತೋರಿಸುತ್ತ ಇದೆಂಥ ಮೂಟೆ? ಇದೆಂಥ ಮೂಟೆ? ಎಂಬುದಾಗಿ ಮೇಲಿನಿಂದ ಕೆಳಕ್ಕೆ ಕೇಳುತ್ತ ಹೋದಂತೆ, ಮಕ್ಕಳು ತಮಗಿಷ್ಟ ಬಂದಂತೆ ಕಡ್ಲೆ ಮೂಟೆ, ಸಕ್ಕರೆ ಮೂಟೆ, ಕಡ್ಲೆಪುರಿ ಮೂಟೆ ಎಂಬುದಾಗಿ ಉತ್ತರ ಕೊಡುವರು. ಆಮೇಲೆ ಎಣ್ಣೆ ಹಚ್ಚಲೆ? ಬೆಣ್ಣೆ ಹಚ್ಚಲೆ? ಕರಿ ಕಂಬಳಿ ಹೊದಿಸಲೆ ಬಿಳಿಕಂಬಳಿ ಹೊದ್ದಿಸಲೆ, ಚಿನ್ನದ ಕತ್ತಿಯಲ್ಲಿ ಹೊಡೆಯಲೆ, ಬೆಳ್ಳಿಕತ್ತಿಯಲ್ಲಿ ಹೊಡೆಯಲೆ? ಎಂಬುದಾಗಿ ಕೇಳಿ, ಬೆಣ್ಣೆ ಹಚ್ಚಿದಂತೆ, ಬಿಳಿ ಕಂಬಳಿ ಹೊದಿಸಿದಂತೆ, ನಟಿಸಿ, ಕೊನೆಗೆ ಚಿನ್ನದ ಕತ್ತಿಯಲ್ಲಿ ಹೊಡೆಯಲೆಂದು ಕೈ ಎತ್ತಿದ ಕೂಡಲೇ ಮಕ್ಕಳೆಲ್ಲ ತಕ್ಷಣವೇ ಕೈಗಳನ್ನು ಹಿಂದಕ್ಕೆ ತೆಗೆದುಕೊಳ್ಳುವರು. ಆಗ ಹೊಡೆಯಲು ಹೊರಟವನು ನಿರಾಶನಾಗಿ ಮಕ್ಕಳನ್ನು ಕುರಿತು:

ಪ್ರಶ್ನೆ: ಕೈ ಕೈ ಎಲ್ಲಿಗೆ ಹೋದ್ದೋ?	ಉತ್ತರ: ಸಂತೆಗೆ ಹೋದ್ದೋ
ಸಂತೇಲಿ ಏನ್ ತಂದೆ?	ಬಾಳೆ ಹಣ್ಣು ತಂದೆ.
ಬಾಳೆ ಹಣ್ಣು ಏನ್ ಮಾಡ್ದೆ?	ತಿಂದು ತಿಂದು ಕದದ ಮೂಲೆಗೆ ಹಾಕ್ದೆ.
ಕದ ಏನ್ ಕೊಡ್ತು?	ಚಕ್ಕೆ ಕೊಡ್ತು.
ಚಕ್ಕೆ ಏನ್ ಮಾಡ್ದೆ?	ಒಲೆಗೆ ಹಾಕ್ದೆ.
ಒಲೆ ಏನ್ ಕೊಡ್ತು?	ಬೂದಿ ಕೊಡ್ತು.
ಬೂದಿ ಏನ್ ಮಾಡ್ದೆ?	ತಿಪ್ಪೆಗೆ ಹಾಕ್ದೆ.
ತಿಪ್ಪೆ ಏನ್ ಕೊಡ್ತು?	ಗೊಬ್ಬರ ಕೊಡ್ತು.
ಗೊಬ್ಬರ ಏನ್ ಮಾಡ್ದೆ?	ಹೊಲಕ್ಕೆ ಹಾಕ್ದೆ.
ಹೊಲ ಏನ್ ಕೊಡ್ತು?	ಗರಿಕೆ ಕೊಡ್ತು.
ಗರಿಕೆ ಏನ್ ಮಾಡ್ದೆ?	ಹಸುಗೆ ಹಾಕ್ದೆ.
ಹಸು ಏನ್ ಕೊಡ್ತು?	ಹಾಲು ಕೊಡ್ತು.
ಹಾಲು ಏನ್ ಮಾಡ್ದೆ?	ಕಾಯಿಸಲು ಪಾತ್ರೆಗೆ ಹಾಕಿಟ್ಟೆ.
ಪಾತ್ರೆಗೆ ಏನ್ ಬಿತ್ತು?	ನೊಣ ಬಿತ್ತು.
ನೊಣವ ಕೈಲಿ ತೆಗ್ದೆಯಾ? ಕಡ್ಡಿಯಲಿ ತೆಗ್ದೆಯಾ?	ಕಡ್ಡಿಯಲ್ಲಿ ತೆಗ್ದೆ?

ಎಂದು ಉತ್ತರ ಕೊಡುವನು. ಕಡ್ಡಿಯಲ್ಲಿ ಹೇಗೆ ತೆಗ್ದೆ? ಹೀಗೆ ತೆಗ್ದೆ ಅಂತೇಳಿ ಏಟು ಕೊಡುವನು.

ಕತ್ತಿಯಲ್ಲಿ ಹೊಡೆಯಲು ಹೋದಾಗ ತಪ್ಪಿಸಿಕೊಂಡ ಪರಿಣಾಮವಾಗಿ ಈಗ ಏಟು ತಿನ್ನಬೇಕಾಗುತ್ತದೆ. ಹೇಗಾದರೂ ಸರಿ ಹೊಡೆಯಲೇಬೇಕು ಎನ್ನುವ ದೃಷ್ಟಿಯಲ್ಲಿ ಈ ರೀತಿಯ ಪ್ರಶ್ನೆಗಳನ್ನು ಕೇಳಿ ಸಂದಿಗ್ಧತೆಗೆ ಸಿಲುಕಿಸಿ ಸೇಡು ತೀರಿಸಿಕೊಳ್ಳುವುದೇ ಈ ಆಟದ ಉದ್ದೇಶ. ಅಂದುಕೊಂಡದ್ದನ್ನು ಮಾಡಿ ತೀರಿಸಲೇಬೇಕು ಎಂಬ ಛಲ ಮಕ್ಕಳಲ್ಲಿರುವುದನ್ನು ಈ ಆಟದಿಂದ ಗಮನಿಸಬಹುದು.

ಮಕ್ಕಳು ಕೇಳುವ ಹಾಗೂ ಕೊಡುವ ಪ್ರಶ್ನೆ ಉತ್ತರಗಳಿಂದ ಕೊಡುಕೊಳ್ಳುವಿಕೆ ಕಂಡುಬರುತ್ತದೆ. ಒಂದು ವಸ್ತುವಿನಿಂದ ಇನ್ನೊಂದನ್ನು ಹೇಗೆ ಪಡೆದುಕೊಳ್ಳಬಹುದು ಎಂಬುದು ಚಿತ್ರಿತವಾಗಿದೆ.

೭. ಕೂಸುಮರಿ ಮಾರುವಾಟ

ಮನೆಯೊಳಗೆ ಸಣ್ಣ ಮಕ್ಕಳು ಅಳುತ್ತಿದ್ದ ಸಂದರ್ಭದಲ್ಲಿ ಸುಮ್ಮನಾಗಿಸುವ ಸಲುವಾಗಿ ಮಕ್ಕಳು ಈ ಆಟವಾಡುವರು. ಅಳುವ ಮಗುವನ್ನು ಬೆನ್ನಿನ ಮೇಲೆ ಕೂಸು ಮರಿ (ಹೊತ್ತು ಕೊಂಡು) ಮಾಡಿಕೊಂಡು ಅಲ್ಲಿದ್ದವರ ಬಳಿ ಹೋಗಿ 'ಕೂಸು ಬೇಕೆ ? ಕೂಸು ಮರಿ ಬೇಕೆ? ಎಂದು ಕೇಳುವರು. ಆಗ ಕೂಸನ್ನು ಕೊಳ್ಳಲು ಮುಂದೆ ಬಂದು, ನಿಮ್ಮ ಕೂಸಿಗೆ ಏನೇನು ಕೆಲಸ ಗೊತ್ತು? ಏನೇನು ಕೆಲಸ ಮಾಡುತ್ತದೆ ? ಎಂಬುದಾಗಿ ಕೇಳುವರು. ನಮ್ಮ ಕೂಸಿಗೆ ಎಲ್ಲ ಕೆಲಸ ಗೊತ್ತು (ಹೆಣ್ಣು ಮಗುವಾಗಿದ್ದರೆ ಹೆಂಗಸರು ಮಾಡುವ ಕೆಲಸಗಳನ್ನೂ, ಗಂಡು ಮಗುವಾಗಿದ್ದರೆ ಗಂಡಸರು ಮಾಡುವ ಕೆಲಸವನ್ನೂ ಹೇಳುವರು) ಹೇಳಿದ ಕೆಲಸಗಳನ್ನೆಲ್ಲ ಮಾಡುತ್ತದೆ ಎಂದು ಹೇಳುವರು. ಒಪ್ಪಿಗೆಯಾದರೆ ಕೂಸನ್ನು ಕೊಳ್ಳಲು ಮುಂದೆ ಬಂದು ಕೂಸಿಗೆ ಬೆಲೆ ಎಷ್ಟು? ಎಂದು ಕೇಳಿ, ಐನೂರು, ಸಾವಿರ ರೂಪಾಯಿ ಬೆಲೆ ಹೇಳಿದಾಗ, ಹಣ ಕೊಟ್ಟಂತೆ ನಟಿಸಿ, ಮಗುವನ್ನು ಅವರಿಂದ ಪಡೆಯುವರು.

ಕೆಲವೊಮ್ಮೆ ನಮ್ಮ ಕೂಸಿಗೆ ಯಾವ ಕೆಲಸಗಳೂ ಗೊತ್ತಿಲ್ಲ. ಊಟ ಮಾಡಿ ನಿದ್ದೆ ಮಾಡುತ್ತದೆ ಎಂದರೆ ಕೊಳ್ಳಲು ಯಾರೂ ಮುಂದೆ ಬರುವುದಿಲ್ಲ. ಇದೊಂದು ತಮಾಷೆಯ ಆಟವಾಗಿದೆ ಅಲ್ಲದೆ ಕೂಸಿಗೆ ಏನೇನು ಕೆಲಸ ಗೊತ್ತು ಎಂದು ಕೇಳಿದಾಗ, ಮುಂದೆ ದೊಡ್ಡವರಾಗಿ ಮಾಡಬೇಕಾಗಿರುವ ಎಲ್ಲ ಕೆಲಸಗಳನ್ನು ಪರಿಚಯಿಸುವುದರ ಜೊತೆಗೆ ಇಂಥಿಂಥ ಕೆಲಸಗಳನ್ನು ಮಾಡಬೇಕು ಎಂಬುದನ್ನು ಲಿಂಗಾಧಾರದ ಮೇಲೆ ನಿರ್ದೇಶಿಸಲಾಗುತ್ತದೆ.

೮. ಸೋಮನ ಕುಣಿತ

ಹಬ್ಬ ಜಾತ್ರೆಯಂತಹ ಸಂದರ್ಭದಲ್ಲಿ ಕಂಡು ಬರುವ ಸೋಮನ ಕುಣಿತದ ಅನುಕರಣೆಯೇ ಈ ಆಟ. ಮೊರವನ್ನು ತಲೆಯ ಮೇಲೆ ಉದ್ದುದ್ದವಾಗಿ ಹೊತ್ತುಕೊಂಡು ಅದರ ಮೇಲೆ ಹಳೇ ಸೀರೆಯನ್ನು ಹೊದ್ದಿಸಿ ಕುಣಿಯುವರು.

೯. ಅವಲಕ್ಕಿ ಪವಲಕ್ಕಿ

ಮಕ್ಕಳೆಲ್ಲ ವೃತ್ತಾಕಾರವಾಗಿ ಕುಳಿತು ತಮ್ಮ ಎರಡೂ ಹಸ್ತಗಳನ್ನು ಮಕಾಡೆಯಾಗಿ ನೆಲದ

ಮೇಲಿಡುವರು. ಯಾರಾದರೊಬ್ಬರು ತನ್ನ ತೋರುಬೆರಳಿನಿಂದ ಎಲ್ಲರ ಕೈಗಳ ಮೇಲೂ ಬೆರಳಿಡುತ್ತ

ಅವಲಕ್ಕಿ ಪವಲಕ್ಕಿ
ಕಂಚಿನ ಮಿಣಿ ಮಿಣಿ
ಡಾಮ್ ಡೂಮ್
ಡಸ್ ಪುಸ್

ಎಂದು ಹೇಳುತ್ತ ಸಾಗುವರು. ಪುಸ್ ಎಂಬ ಪದ ಯಾರ ಕೈ ಮೇಲೆ ಕೊನೆಗೊಳ್ಳುವುದೋ ಅವರು ಕೈಯನ್ನು ಅಂಗಾತವಾಗಿಡಬೇಕು. ಪುನಃ ಅದೇ ರೀತಿ ಆಟ ಮುಂದುವರೆಯುವುದು. ಇನ್ನೊಮ್ಮೆ ಪುಸ್ ಎಂಬ ಶಬ್ದದಿಂದ ಕೊನೆಗೊಂಡರೆ ಕೈಯನ್ನು ಓಂದಕ್ಕೆ ತೆಗೆದುಕೊಳ್ಳಬೇಕು. ಕೊನೆಗೆ ಒಂದೇ ಹಸ್ತ ಉಳಿದುಕೊಂಡಾಗ ನೆಲ ಮತ್ತು ಹಸ್ತಕ್ಕೆ ಅಥವಾ ಹಸ್ತ ಹಾಗೂ ಹಣೆಗೆ ಬೆರಳನ್ನು ಇಡುತ್ತ ಇನ್ನೊಂದು ರೀತಿಯ ಹಾಡು ಆರಂಭಿಸಲಾಗುವುದು.

ಅಪ್ಪಂಡ್ಕಪ್ಪಂಡ ರಾಯರ ಮುದ್ದೆ
ಉರಾಳಜ್ಜಿ ಹಣೆ ಪಟ್ಟು ಹೊಡ್ನು
ಕಲ್ಕಟ್ಟಮ್ಮ ನೆಲಪಟ್ಟು ಹೊಡ್ನು
ಮಾವಿನ ಸೀರೆ ಮಲ್ಲಿಗೆ ಉಡ್ಸಿ
ಚೊಯ್ ಚೊಟಕ್

ಎಂದು ಹೇಳಿ ತನ್ನ ಕೈಯನ್ನು ಓಂದಕ್ಕೆ ತೆಗೆದುಕೊಳ್ಳುವರು. ಇಲ್ಲಿಗೆ ಆಟ ಮುಕ್ತಾಯವಾಗುತ್ತದೆ. ಬೇಕಾದರೆ ಪುನಃ ಮೊದಲಿನಂತೆಯೇ ಆಟ ಆರಂಭಿಸಬಹುದು.

೧೦. ಬೆಂಕಿ ಕಾಯಿಸುವಾಗ ಜಾಗ ಮಾಡಿಕೊಳ್ಳುವಾಟ

ಚಳಿಗಾಲ ಹಾಗೂ ಮಳೆಗಾಲದಲ್ಲಿ ಮಕ್ಕಳೆಲ್ಲ ಒಂದೆಡೆ ಸೇರಿ ಬೆಂಕಿಕಾಯಿಸಿಕೊಳ್ಳುವ ಸಂದರ್ಭದಲ್ಲಿ ಸರಿಯಾದ ಜಾಗ ಸಿಕ್ಕದಿದ್ದರೆ, ಯಾರಾದರೊಬ್ಬರು, ಮಕ್ಕಳೆ ನಾನೊಂದು ಕಥೆ ಹೇಳುವೆ ಎಂದು ಮಕ್ಕಳನ್ನು ನಂಬಿಸಿ, ಜಾಗ ಆಕ್ರಮಿಸುವನು. ನಿಜವೆಂದು ನಂಬಿದ ಮಕ್ಕಳು ಕುತೂಹಲ ತೋರಿ ಕುಳಿತಿದ್ದರೆ, ತನ್ನ ಕೈಯನ್ನು ನಟನೆಗೆ ಬಳಸುತ್ತಾ ಒಂದು ಊರಿನಲ್ಲಿ ಒಬ್ಬ ಗೌಡ ಇದ್ದ. ಅವನು ಒಂದು ಕುಂಬಳ ಕಾಯಿ ಗಿಡ ಹಾಕಿದ್ದ. ಅದು ಬೆಳೆಯುತ್ತ ಬೆಳೆಯುತ್ತ ದೊಡ್ಡದಾಯಿತು. ಹೂವು ಬಿಟ್ಟು, ಕಾಯಿ ಬಿಟ್ಟಿತು. ಸಣ್ಣ ಕಾಯಿಯಾಗಿದ್ದ ಕುಂಬಳ ಕಾಯಿ ಇಷ್ಟು ದಪ್ಪವಾಯಿತೆಂದು ತನ್ನ ಕೈಯಿನ ಗಾತ್ರವನ್ನು ಅಗಲ ಮಾಡಿ ತೋರಿಸು ತ್ತ ಪಕ್ಕದವರನ್ನು ಬೀಳಿಸಿ ಜಾಗ ಆಕ್ರಮಿಸಿ, ರೇಗಿಸಿ ನಗುವರು.

ಯುಕ್ತಿ ಹಾಗೂ ಉಪಾಯದಿಂದ ತನ್ನ ಕೆಲಸ ಸಾಧಿಸಿಕೊಳ್ಳುವ ಬುದ್ಧಿವಂತಿಕೆಯನ್ನು ಈ ಆಟ ತೋರುತ್ತದೆ. ಇದೊಂದು ಮನರಂಜನೆಯಾಟವಾಗಿದೆ.

೧೧. ಗಿರ್‌ಗಿಟ್ಲೆ

ಈ ಆಟ ಇಂದಿನ ಜಾಯಿಂಟ್‌ವೀಲನ್ನು ನೆನಪಿಗೆ ತರುತ್ತದೆ. ಕೆಲವು ಮಕ್ಕಳು

ವೃತ್ತಾಕಾರವಾಗಿ ಕಾಲು ಚಾಚಿ ಕುಳಿತುಕೊಳ್ಳುವರು. ಕುಳಿತಷ್ಟೇ ಸಂಖ್ಯೆಯ ಮಕ್ಕಳು ಅವರ ಪಕ್ಕದಲ್ಲಿ ನಿಲ್ಲುವರು. ಕುಳಿತವರ ಕೈಗಳನ್ನು ನಿಂತ ಮಕ್ಕಳು ಹಿಡಿದುಕೊಂಡು ಗರಗರನೆ ತಿರುಗಿಸುವರು. ಹೀಗೆ ಸ್ವಲ್ಪ ಹೊತ್ತು ತಿರುಗಿಸಿದ ನಂತರ ನಿಂತವರನ್ನು ಕುಳಿತವರು ತಿರುಗಿಸುವರು. ಹೀಗೆ ಆಟ ಮುಂದುವರೆಯುತ್ತದೆ. ಇದನ್ನು ಹೆಣ್ಣು ಮಕ್ಕಳು ಮಾತ್ರ ಆಡುವರು.

೧೨. ಚರಂಡಿ ದಾಟುವಾಟ

ಮಕ್ಕಳಿಗೆ ಒಂದು ಚರಂಡಿ ಸಿಕ್ಕರೂ ಸಾಕು. ಎಲ್ಲ ಒಟ್ಟಿಗೆ ಜಮಾಯಿಸಿಬಿಡುತ್ತಾರೆ. ಚಪ್ಪಾಳೆ ಹಾಕಿ ಕಳ್ಳ/ಕಳ್ಳಿಯನ್ನು ನೇಮಿಸುವರು. ಮಕ್ಕಳೆಲ್ಲ ಚರಂಡಿಯ ಎರಡು ದಡಗಳಲ್ಲಿ ನಿಂತುಕೊಳ್ಳುವರು. ಕಳ್ಳ/ಕಳ್ಳಿ ಚರಂಡಿ ಒಳಗೆ ನಿಂತು ಒಂದು ದಡದಿಂದ ಇನ್ನೊಂದು ದಡಕ್ಕೆ ನೆಗೆಯುವಾಗ ಸಿಕ್ಕಿದರೆ ಔಟಾದಂತೆ.

ಈ ಆಟದಲ್ಲಿ ಮಕ್ಕಳು ಓಡಾಡುವುದರಿಂದ, ನೆಗೆದಾಡುವುದರಿಂದ ದೇಹಕ್ಕೆ ವ್ಯಾಯಾಮವಾಗುತ್ತದೆ.

೧೩. ಉರುಳುವಾಟ

ಎತ್ತರವಾದ ದಿಬ್ಬ (ದಿಣ್ಣೆ) ಗಳ ಮೇಲೆ ಮಲಗಿ ಅಲ್ಲಿಂದ ಕೆಳಗೆ ಜಾರಿ ಉರುಳುವರು. ಇದು ಒಂದು ರೀತಿಯಲ್ಲಿ ' ಉರುಳು ಸೇವೆ ' ಯನ್ನು ನೆನಪಿಗೆ ತರುತ್ತದೆ. ಬಹುಶಃ ದೇವರಿಗೆ ಅರ್ಪಿಸುವ ಉರುಳು ಸೇವೆಯನ್ನು ನೋಡಿ ಮಕ್ಕಳೇ ಆಟವನ್ನು ಅನುಕರಿಸಿಕೊಂಡು ಬಂದಿರಬಹುದು. ಇದು ಇಂದಿನ ಜಾರುಗುಪ್ಪೆಯಾಟದ ರೂಪವಾಗಿದೆ. ದಟ್ಟವಾಗಿ ಬೆಳೆದ ಹುಲ್ಲಿನ ಹಾಸಿಗೆಯಿರುವೆಡೆಗಳಲ್ಲಿ ಮಕ್ಕಳು ಈ ರೀತಿ ಉರುಳುವಾಟ ಆಡುವರು.

೧೪. ಕಲ್ಲುಗೆದಿಯುವಾಟ

ಮೊದಲು ಆಟ ಆರಂಭಿಸುವವರಿಗೆ ಭಾಗವಹಿಸಿದ ಮಕ್ಕಳೆಲ್ಲ ಸಮವಾಗಿ ಎಣಿಸಿ ಕೊಟ್ಟ ಕಲ್ಲುಗಳನ್ನು ನೆಲದ ಮೇಲೆ ಚೆಲ್ಲಿ ಒಂದು ಕಲ್ಲಿನಿಂದ ಇನ್ನೊಂದು ಕಲ್ಲಿಗೆ ತಾಕುವಂತೆ ತನ್ನ ಬಲಗೈ ಹೆಬ್ಬೆರಳಿನ ಸಹಾಯದಿಂದ ತಳ್ಳಿ ಹೊಡೆಯಬೇಕು. ಕಲ್ಲಿಗೆ ಕಲ್ಲು ತಾಕಿದರೆ ಆ ಕಲ್ಲು ಅವರಿಗೆ ಸೇರುತ್ತದೆ. ಎಷ್ಟು ಕಲ್ಲುಗಳನ್ನು ಹೊಡೆವರೋ ಅಷ್ಟು ಅವರಿಗೆ ಸೇರುತ್ತವೆ. ಕಲ್ಲಿಗೆ ಕಲ್ಲು ತಾಕದಿದ್ದರೆ ಕೈಗೆ ಕಲ್ಲು ಉಸುಬಿ (ತಾಕಿ) ದರೆ ಹೋದಂತೆ. ಹೆಚ್ಚು ಕಲ್ಲು ಸಂಪಾದಿಸಿದವರು ಗೆದ್ದಂತೆ.

೧೫. ಗೂಪತಿಯಾಟ

ಈ ಆಟಕ್ಕೆ ಮೂರು ಮಕ್ಕಳಾದರೆ ಸಾಕು. ಇಬ್ಬರು ತಮ್ಮ ಎರಡು ಕೈಗಳನ್ನು ಒಬ್ಬರ ಕೈಗೆ ಇನ್ನೊಬ್ಬರು ಕೊಂಡಿಯಂತೆ ಸೇರಿಸಿಕೊಂಡು ಮಂಟಪದಂತೆ ಮಾಡಿ ಅದರ ಮೇಲೆ ಇನ್ನೊಂದು ಮಗುವನ್ನು ಕೂರಿಸಿಕೊಂಡು ಕುಣಿಯುತ್ತ

ಗಣೇಶ ಬಂದ
ಕಾಯಿ ಕಡುಬು ತಿಂದ

ದೊಡ್ ಕೆರೇಲಿ ಬಿದ್ದ
ಚಿಕ್ ಕೆರೇಲಿ ಎದ್ದ

ಎಂದು ಹಾಡಿಕೊಂಡು ಕುಣಿದು ಆ ಮಗುವನ್ನು ದಪ್ಪೆಂದು ಕೆಳಗೆ ಇಳಿಸುವರು. ಗೌರಿ ಗಣೇಶ ಹಬ್ಬದಲ್ಲಿ ಗಣಪತಿಯನ್ನು ಹೊತ್ತುಕೊಂಡೋಗಿ ಕೆರೆಯಲ್ಲಿ ವಿಸರ್ಜಿಸುವ ದೃಶ್ಯ ಈ ಆಟದಲ್ಲಿ ಕಂಡುಬರುತ್ತದೆ.

೧೬. ಬಸ್ಸಿನಾಟ

ಗುಂಪಾಗಿ ಸೇರಿ ಆಡುವ ಮಕ್ಕಳ ಈ ಆಟಕ್ಕೆ ಒಂದು ಹಗ್ಗ ಸಿಕ್ಕಿದರೆ ಸಾಕು. ಹಗ್ಗದ ಎರಡು ತುದಿಯನ್ನು ಒಂದಕ್ಕೊಂದು ಸೇರಿಸಿ ಕಟ್ಟಿ ಬಸ್ಸಾಗಿ ಮಾಡಿಕೊಳ್ಳುವರು. ಒಂದು ತುದಿಯಲ್ಲಿ ಡ್ರೈವರ್, ಇನ್ನೊಂದು ತುದಿಯಲ್ಲಿ ಕಂಡೆಕ್ಟರ್ ಇದ್ದು ಅವನು ಮೈಸೂರು, ಬೆಂಗಳೂರು, ಮದ್ರಾಸ್ ಹೀಗೆ ಊರಿನ ಹೆಸರನ್ನು ಕೂಗುವನು. ಪ್ರಯಾಣಿಕರಂತೆ ಮಕ್ಕಳು ಅದರೊಳಗೆ ಸೇರಿಕೊಳ್ಳುವರು. ಕಾಗದದ ಚೂರೊಂದನ್ನು ದುಡ್ಡೆಂದು ಕೊಟ್ಟು, ಎಲ್ಲೋ ಒಂದು ಕಡೆ ಇಳಿದುಕೊಳ್ಳುವರು. ಸರ್ಕಾರಿ ಬಸ್ಸು ಹಾಗೂ ಬಸ್ಸಿನ ಡ್ರೈವರ್ ಕಂಡೆಕ್ಟರ್ ಇವರುಗಳನ್ನು ಸೂಕ್ಷ್ಮವಾಗಿ ಗಮನಿಸಿದ ಮಕ್ಕಳು ಅದನ್ನು ತಮ್ಮ ಆಟದ ಮೂಲಕ ವ್ಯಕ್ತಪಡಿಸುವರು.

೧೭. ಸ್ಕೂಲಾಟ

ಈ ಆಟದಲ್ಲಿ ಶಾಲೆಯೊಂದರ ಚಿತ್ರಣ ಕಂಡುಬರುತ್ತದೆ. ಶಾಲೆಯಲ್ಲಿನ ಗುರುಗಳು, ಶಿಷ್ಯರು ಹಾಗೂ ಶಾಲೆಯ ಪ್ರತಿನಿಧಿ ಇಷ್ಟು ಜನ ಅಲ್ಲಿರುತ್ತಾರೆ. ಗುರುಗಳು ಪಾಠ ಮಾಡಿ ಪ್ರಶ್ನೆ ಕೇಳಿದರೆ, ಗುರುಗಳಿಲ್ಲದ ಸಮಯದಲ್ಲಿ ಮಾನಿಟರ್ ಆದವನು ಮಕ್ಕಳನ್ನು ಗಲಾಟೆ ಮಾಡದಂತೆ ನೋಡಿಕೊಳ್ಳುವನು. ಮಕ್ಕಳು ಗಲಾಟೆ ಮಾಡಿದ್ದೇ ಆದರೆ ಗುರುಗಳಿಗೆ ಹೇಳಿ ಶಿಕ್ಷೆ ವಿಧಿಸುವನು. ಇವೆಲ್ಲವೂ ಅನುಕರಣೆಯ ಮೂಲಕ ಆಡುವಂತಹ ಆಟಗಳು.

೧೮. ಮದುವೆಯಾಟ

ಎಲ್ಲಾ ಆಟಗಳಿಗಿಂತ ವಿಶಿಷ್ಟವಾದ ಆಟವಿದು. ಮಾನವನ ಬದುಕಿನ ಮಹತ್ತರ ಘಟ್ಟವೆಂದರೆ ಮದುವೆ. ಮಕ್ಕಳು ಮದುವೆಯನ್ನು ಕೂಡ ತಮ್ಮ ಆಟದ ಮೂಲಕ ವ್ಯಕ್ತಪಡಿಸುವ ರೀತಿ ಭಿನ್ನವಾದದ್ದು. ಚಾಚೂ ತಪ್ಪದೆ ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದರೆ ಮದುವೆ ಚಿತ್ರಣವನ್ನು ತಮ್ಮ ಆಟದಲ್ಲಿ ತೋರಿಸುವರು. ಮದುವೆಗೆ ಬೇಕಾದ ಎಲ್ಲ ಸಾಮಾನುಗಳನ್ನು ತಮ್ಮ ಆಟಿಕೆಗಳ ಮೂಲಕವೇ ಸಿದ್ಧಪಡಿಸಿಕೊಳ್ಳುವರು. ಕಲ್ಲು, ಮಣ್ಣು, ತೆಂಗಿನ ಚಿಪ್ಪು, ಹೂವು, ಮರದ ಟೊಂಗೆ, ಹಳೆ ಸೀರೆಯ ಸೆರಗು, ಅಕ್ಕಿಕಾಳು ಎಲ್ಲವೂ ಮದುವೆಯ ಸಾಮಾನುಗಳಾಗಿರುತ್ತವೆ. ಆಟದಲ್ಲಿ ಗಂಡು ಹೆಣ್ಣು ಮಕ್ಕಳೆಲ್ಲ ಪಾಲ್ಗೊಳ್ಳುವರು. ವಧು-ವರರನ್ನು ಕಲ್ಲಿನಲ್ಲಿ ಮಾಡುವರು. ಗಂಡು ಹೆಣ್ಣಿನ ತಂದೆ, ತಾಯಿಯ ಸ್ಥಾನವನ್ನು ಮಕ್ಕಳೇ ತುಂಬುವರು. ಮದುವೆ ಸಂದರ್ಭದಲ್ಲಿನ ನಂಬಿಕೆ ಸಂಪ್ರದಾಯಗಳನ್ನು ಮಕ್ಕಳು ಚಾಚೂ ತಪ್ಪದೆ ಪಾಲಿಸುವರು.

೧೯. ಕಪ್ಪೆಯಾಟ

ಹಸಿ ಮರಳು ಮತ್ತು ಮಣ್ಣಿನಲ್ಲಿ ತಮ್ಮ ಪಾದವನ್ನು ನುಗ್ಗಿಸಿ ಪಾದದ ಮೇಲೆ ಮಣ್ಣು/

ಮರಳನ್ನು ಹಾಕಿ ಸುತ್ತಮುತ್ತ ಚೆನ್ನಾಗಿ ಮೆತ್ತುವರು. 'ಕಪ್ಪೆ ಕಪ್ಪೆ ಕಾಲು ಬಿಡು' ಎನ್ನುತ್ತ ಮೆಲ್ಲನೆ ಪಾದವನ್ನು ಹೊರಗೆ ತೆಗೆಯುವರು. ಅದು ಗೂಡಿನಂತೆ ನಿಲ್ಲುತ್ತದೆ. ಯಾರು ಹೆಚ್ಚು ಗೂಡುಗಳನ್ನು ಕಟ್ಟುವರೋ ಅವರು ಗೆದ್ದಂತೆ.

೨೦. ಬೇಸಾಯ ಉಳುವಾಟ

ಮಕ್ಕಳು ತಮ್ಮ ಜೊತೆಗಾರರ ಕೈಗೆ ದಾರಕಟ್ಟಿಕೊಂಡು ಎತ್ತುಗಳನ್ನಾಗಿ ಮಾಡಿಕೊಂಡು ಬೇಸಾಯ ಉಳುವಂತೆ ನಟಿಸುವರು. ಈ ಆಟದಲ್ಲಿ ಕಳೆ ತೆಗೆಯುವುದು, ಬಿತ್ತುವುದು, ಕೊಯ್ಲು ಮಾಡುವುದು, ಹೊರುವುದು ಮುಂತಾದ ದೃಶ್ಯಾವಳಿಗಳು ಕಂಡುಬರುತ್ತವೆ. ಕೋಲು ಕಡ್ಡಿಗಳನ್ನೇ ಉಪಕರಣಗಳನ್ನಾಗಿ ಮಾಡಿಕೊಳ್ಳುವ ಜಾಣಾಕ್ಷತೆ ಇವರಿಗಿದೆ. ಈ ಆಟದಲ್ಲಿ ಕೃಷಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳು ಅಭಿವ್ಯಕ್ತಿಗೊಳ್ಳುತ್ತವೆ. ಮನೆಯ ಹಿರಿಯರು ಮಾಡುವ ಕೆಲಸಗಳನ್ನು ಗಮನಿಸಿದ ಮಕ್ಕಳು ಚಾಚೂ ತಪ್ಪದೆ ಎಲ್ಲವನ್ನು ಅನುಕರಣೆ ಮಾಡುವರು.

೨೧. ಏಡಿ ಬಿಲ್ಲೆ (ರಾಜ ರಾಣಿಯಾಟ)

ಮಕ್ಕಳೆಲ್ಲ ಒಂದೆಡೆ ಕುಳಿತು ನಾಣ್ಯವನ್ನು ಮೇಲೆಸೆಯುವರು. ನಾಣ್ಯ ನೆಲದ ಮೇಲೆ ಬಿದ್ದಕೂಡಲೇ ಕೈಯಿಂದ ಮುಚ್ಚಿಕೊಂಡು ರಾಜನಾ? ರಾಣಿನಾ? ಎಂದು ಎದುರು ಪಾರ್ಟಿಗೆ ಕೇಳಿದಾಗ ಸರಿ ಉತ್ತರ ಹೇಳಿದರೆ ಆಟ ಮುಂದಿನ ಸ್ಪರ್ಧೆಗೆ ಹೋಗುತ್ತದೆ. ತಪ್ಪು ಹೇಳಿದರೆ ಅವನೇ ಆಟ ಮುಂದುವರಿಸಬೇಕು.

೨೨. ಒಂಟೆತ್ತಿನ ಗಾಡಿ ಆಟ

ಈ ಆಟಕ್ಕೆ ಎರಡು ಮಕ್ಕಳಿದ್ದರೆ ಸಾಕು. ಒಬ್ಬ ತನ್ನ ಎರಡು ಕೈಗಳನ್ನು ಹಿಂದೆ ಹಾಕಿ ಕೈಯೊಳಗೆ ಕೈ ಸೇರಿಸಿ (ಗೂಡಿನಂತೆ) ಹೆಣೆದುಕೊಳ್ಳುವನು. ಅದರ ಮೇಲೆ ಇನ್ನೊಬ್ಬ ತನ್ನ ಒಂಟಿ ಕಾಲನ್ನು ಇಟ್ಟು, ತನ್ನ ಎರಡು ಕೈಗಳನ್ನು ಅವನ ಮೇಲಿಟ್ಟು ಕುಂಟುತ್ತಾ ಒಂದೇ ಕಾಲಿನಲ್ಲಿ ನಡೆದುಕೊಂಡು ಹೋಗುವನು. ಒಬ್ಬರಾದನಂತರ ಇನ್ನೊಬ್ಬರು ಆಟ ಮುಂದುವರೆಸುತ್ತಾರೆ. ಒಂಟೆತ್ತಿನ ಗಾಡಿಯನ್ನು ಅನುಕರಿಸಿದ ಆಟ ಇದಾಗಿದೆ.

೨೩. ಗುಬ್ಬಚ್ಚಿ ಕೂರಿಸುವ ಆಟ

ಮಕ್ಕಳೆಲ್ಲ ಒಂದೆಡೆ ಕುಳಿತು ಆಟವಾಡುವ ಸಂದರ್ಭದಲ್ಲಿ ಅಥವಾ ಕುಳಿತು ಕಬ್ಬು ತಿನ್ನುವಾಗ, ಕಡ್ಲೆಕಾಯಿ ಸಿಪ್ಪೆ ಬಿಡಿಸುವಂತಹ ಸಂದರ್ಭದಲ್ಲಿ ಈ ಆಟ ಕಂಡು ಬರುತ್ತದೆ. ಯಾರಾದರೊಬ್ಬ ಪಕ್ಕದಲ್ಲಿರುವವರಿಗೆ ಗೊತ್ತಾಗದಂತೆ ಮೆಲ್ಲನೆ ಸಿಪ್ಪೆಯನ್ನು (ಕಬ್ಬು, ಕಡ್ಲೆಕಾಯಿ ಇತ್ಯಾದಿ) ತಲೆಯ ಮೇಲಿಟ್ಟು ಗೊತ್ತಿಲ್ಲದವನಂತೆ ಸುಮ್ಮನೆ ಕುಳಿತುಕೊಳ್ಳುವನು. ಅದನ್ನು ಕಂಡ ಇತರ ಮಕ್ಕಳು,

ಅಲ್ಲೊಬ್ಬರ ತಲೆ ಮ್ಯಾಲೆ
ಗುಬ್ಬಚ್ಚಿ ಕುಳಿತಿದೆ
ಕಬ್ಬು ತಿನ್ನುವ ಮಕ್ಕಳೆ
ಯಾರೂ ಹೇಳಬೇಡಿ

ಎಂಬುದಾಗಿ ಆಡಿಕೊಂಡು ರೇಗಿಸುತ್ತ ಕುಣಿಯುವರು. ಆಗ ಎಲ್ಲರೂ ತಲೆ ಮೇಲೆ ಮುಟ್ಟಿ ನೋಡಿಕೊಳ್ಳುವರು. ಸಿಪ್ಪೆ ಹಾಕಿಸಿಕೊಂಡವನು ಉಳಿದವರನ್ನು ಹೊಡೆಯಲು ಅಟ್ಟಿಸಿಕೊಂಡು ಹೋಗುವನು. ಹೀಗೆ ತಮಾಷೆಗಾಗಿ ಒಬ್ಬರ ತಲೆ ಮೇಲೆ ಇನ್ನೊಬ್ಬರು ಹಾಕಿ ರೇಗಿಸುವುದೇ ಈ ಆಟ.

೨೪. ನಿಂತರ್ ಕುಂತರ್ (ನಿಂತವರು, ಕುಳಿತವರು) ಹಿಡಿಯುವಾಟ

ಮಕ್ಕಳು ಒಂದೆಡೆ ಕುಳಿತು ಆಟದಲ್ಲಿ ಮಗ್ನರಾಗಿದ್ದಂತಹ ಸಂದರ್ಭದಲ್ಲಿ ಯಾರಾದರೊಬ್ಬರು ಮಕ್ಕಳ ಹೆಸರಿಡಿದು ಕರೆದು ಅಲ್ನೋಡು ನಿಮ್ಮಪ್ಪ, ನಿಮ್ಮವ್ವ ಬರ್‍ತಿದ್ದಾರೆ ಅಂತ ಸುಳ್ಳೇಳಿ ಅವರ ಗಮನ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುವರು. ನಿಜವೆಂದು ತಿಳಿದ ಮಕ್ಕಳು (ಹಿಂದಿರು) ಬರುವ ದಾರಿಗೆ ಹೋಗಿ ನೋಡಿದಾಗ ನಿರಾಶೆಯಿಂದ ಹಿಂತಿರುಗುವುದನ್ನು ಕಂಡ ಉಳಿದ ಮಕ್ಕಳೆಲ್ಲ "ಸತ್ತ ಮುಕ್ಕ ಸಂತೆಗೆ ಹೋಗಿ ಬರಿ ಕೈಲಿ ಬರ್‍ತಿದೆ" ಎಂದು ರೇಗಿಸಿ ಗೋಳು ಹುಯ್ದುಕೊಳ್ಳುವರು. ಸಿಟ್ಟು ಬಂದು ಹೊಡೆಯಲು ಹೋದಾಗ ಮಕ್ಕಳೆಲ್ಲ ಸಿಗದಂತೆ ಓಡುವರು. ಹೊಡೆಯಲು ಓಡಿಸಿಕೊಂಡು ಬಂದವನಿಗೆ ' ನಿಂತರ ಕುಂತರ ' ಎಂದು ಕೇಳುವರು. ನಿಂತರು ಎಂದರೆ ನಿಂತಿರುವವಳು ಜನರನ್ನು ಮುಟ್ಟಬೇಕು. ಕುಂತರು ಎಂದರೆ ಕುಳಿತ ಆರು ಜನರನ್ನು ಮುಟ್ಟಬೇಕು. ನಿಂತವರು ಎಂದರೆ ನಿಂತಿರುವವರನ್ನು ಮುಟ್ಟಲು ಓಡಿ ಹೋದಾಗ ಅವರು ಕೆಳಕ್ಕೆ ಕುಳಿತು ಬಿಡುವರು. ಬೇರೆಡೆಗೆ ಹೋದಾಗ 'ನಿಂತು ನಿಂತು ಸಾಕಾಯ್ತು ಹಿಡಿಯೋರೆ ದಿಕ್ಕಿಲ್ಲ' ಎಂದು ರೇಗಿಸಿಕೊಂಡು ಆಟ ಆಡುವರು. ಅಂದುಕೊಂಡಷ್ಟು ಜನರನ್ನು ಮುಟ್ಟಲು ಆಗದಿದ್ದಾಗ,

ಸೋತ ಮುಖ ಸೋರೆಕಾಯಿ
ನಮ್ಮಿತ್ಲಗೆ ಒಂದು ಈರೇಕಾಯಿ
ಹೆದರ ಮುಖ ಬಿದರು ದೊಣ್ಣೆ
ಕಾರೇ ಗುತ್ತೀಲಿ ಮಗ ಹಾಕ್ಕೊಂಡು
ಪಿಯ್ಯೋ.... ಪಿಯ್ಯೋ

ಎಂದು ಸತಾಯಿಸುವರು. ಸೋಲನ್ನು ಒಪ್ಪಿಕೊಳ್ಳಲು ತಯಾರಿಲ್ಲದ ಮಕ್ಕಳು ಹೇಗೋ ಅಷ್ಟು ಜನರನ್ನು ಮುಟ್ಟಿ ಜಯಗಳಿಸುವರು.

೨೫. ಅದ್ಲು ಬದ್ಲು ಅವರೆಕಾಯಿ

ಕಣ್ಣೇ ಮುಚ್ಚೇ ಆಟದ ಇನ್ನೊಂದು ರೂಪವಿದು. ಇಲ್ಲೂ ಕೂಡ ಅಜ್ಜಿ ಇರುತ್ತಾಳೆ. ಕೈ ಚಪ್ಪಾಳೆ ಹಾಕಿ ಹಿಡಿಯುವವರನ್ನು ನೇಮಿಸುವರು. ಇವರಿಗೆ ಕಳ್ಳ ಕಳ್ಳಿ ಎನ್ನುವರು.

ಮಕ್ಕಳೆಲ್ಲ ಮುಂದೆ ಸಾಲಾಗಿ ನಿಲ್ಲುವರು. ಅಜ್ಜಿ ಕಳ್ಳ ಕಳ್ಳಿಯ ಕಣ್ಣು ಮುಚ್ಚುವಳು. ಕಳ್ಳಿಯ ಬಲಗೈನ ತೋರು ಬೆರಳಿಡಿದು ಮಕ್ಕಳನ್ನು ಉದ್ದೇಶಿಸಿ 'ಅದ್ಲು ಬದ್ಲು ಅವರೆ ಕಾಯಿ' ಎಂದು ಹೇಳುತ್ತಾ ಸ್ಥಳ ಬದಲಾಯಿಸಿಕೊಳ್ಳಲು ಸೂಚನೆ ನೀಡುವಳು. ಮಕ್ಕಳೆಲ್ಲ ಜಾಗ ಬದಲಾಯಿಸಿ ನಿಲ್ಲುವರು. ಪುನಃ ಒಬ್ಬೊಬ್ಬರ ಕಡೆಗೂ ತೋರಿಸುತ್ತಾ ' ಅವರ್‍ನ ಬಿಟ್ಟು

ಇವರ್ನ ಬಿಟ್ಟು ಅವರ್‍ಯಾರು ' ಎಂಬ ಪ್ರಶ್ನೆ ಕೇಳುವಳು. ತೋರಿಸಿದವರ ಹೆಸರನ್ನು ಸರಿಯಾಗಿ ಹೇಳಿದರೆ ಅವರೇ ಕಳ್ಳಿಯಾಗಬೇಕಾಗುತ್ತದೆ. ಸರಿಯಾಗಿ ತೋರಿಸದಿದ್ದಲ್ಲಿ ತಾನೇ ಕಣ್ಣು ಮುಚ್ಚಿಸಿಕೊಳ್ಳಬೇಕು. ಕಣ್ಣೇಮುಚ್ಚೇ ಹೇಳುವುದಕ್ಕಿಂತ ಅಚ್ಚೊ, ಮುಚ್ಚೊ ಎಂದು ಅಜ್ಜಿ ಕಳ್ಳಿಗೆ ಕೇಳುವಳು. ಅಚ್ಚು ಎಂದರೆ ಆರು ಆಟಗಳಲ್ಲಿ ಮುಚ್ಚು ಎಂದರೆ ಮೂರು ಆಟಗಳಲ್ಲಿ ಅವಳೇ ಕಳ್ಳಿಯಾಗುತ್ತಾಳೆ. ಆ ವೇಳೆಯಲ್ಲಿ ಬೇರೆಯವರನ್ನು ಮುಟ್ಟಿದರೂ ಅವರು ಕಳ್ಳರಾಗುವುದಿಲ್ಲ. ಅಜ್ಜಿ ಕಣ್ಣು ಮುಚ್ಚಿ,

ಕಣ್ಣೆ ಮುಚ್ಚೆ ಲಾಲಿ
ಕಣ್ಣು ಕಪ್ಪು ಲಾಲಿ
ಒಂಡೆ ಗುಮ್ಮ
ಗಣಪತಿ ರಾಜ
ಕಾಹ... ಕೂಹೂ....

ಎಂದು ಹೇಳಿ ಕಣ್ಣು ಬಿಡುವಳು. ಬಚ್ಚಿಟ್ಟುಕೊಂಡಿದ್ದ ಮಕ್ಕಳೆಲ್ಲಾ ಓಡಿ ಬಂದು ಅಜ್ಜಿ ಮುಟ್ಟಿದೆ, ಅಜ್ಜಿ ಮುಟ್ಟಿದೆ ಎಂದು ಕೂಗಾಡುವರು. ಕಳ್ಳಿಗೆ ಸಿಕ್ಕಿದವರೇ ಮುಂದಿನ ಆಟಕ್ಕೆ ಕಳ್ಳಿಯಾಗಬೇಕಾಗುತ್ತದೆ.

೨೬. ಇಟ್ಟನಬಾಡ್ಪ ಆಟ

ಈ ಆಟದಲ್ಲಿ ಇಬ್ಬರು ಮಾತ್ರ ಕಂಡು ಬರುತ್ತಾರೆ. ಒಬ್ಬನು/ಒಬ್ಬಳು ತನ್ನ ಎರಡು ಬೊಗಸೆಯಲ್ಲಿ ಮರಳು ಅಥವಾ ಮಣ್ಣನ್ನು ತುಂಬಿಕೊಂಡು ಒಂದು ಕಡ್ಡಿ ಸಿಕ್ಕಿಸಿಕೊಂಡು, ಕಣ್ಣುಗಳನ್ನು ಮುಚ್ಚಿಸಿಕೊಂಡು ಎಲ್ಲೆಲ್ಲೋ ಸುತ್ತಿಸಿಕೊಂಡು ಕೊನೆಗೆ ಒಂದು ಸ್ಥಳಕ್ಕೆ ಬಂದು ಸೇರುವರು. ಹಾಗೆ ಬರುವಾಗ ಕಣ್ಣು ಮುಚ್ಚಿಸಿಕೊಂಡವಳು /ನು ಇಟ್ಟನ ಎಂದು ಕೇಳಿದರೆ ಕಣ್ಣು ಮುಚ್ಚಿದವಳು/ನು ಬೇಡ ಎನ್ನುವನು. ಉದ್ದಕ್ಕೂ ಹೀಗೆ ಕೇಳಿಕೊಂಡು ಬರುವಳು. ಕೊನೆಯಲ್ಲಿ ಮಣ್ಣನ್ನು ಕೆಳಗಿಡುವಂತೆ ಹೇಳುವಳು/ನು. ವಾಪಸ್ಸು ಹಿಂದಿರುಗಿದಾಗ ಕೈ ತೊಳೆಯಲೆ ? ಎಂದು ಕೇಳಿದಾಗ ಬೇಡ ಎನ್ನುವರು. ಮೊದಲಿನ ಜಾಗಕ್ಕೆ ತಲುಪಿದ ನಂತರ ಕಣ್ಣು ಬಿಟ್ಟು ಕೈ ತೊಳೆಯುವಂತೆ ಹೇಳುವಳು. ಕೈ ತೊಳೆದಂತೆ ನಟನೆ ಮಾಡಿ ಇಟ್ಟಿದ ಮಣ್ಣು ಕಡ್ಡಿಯನ್ನು ಹುಡುಕಬೇಕು. ಹುಡುಕದಿದ್ದರೆ ಸೋತಂತೆ, ಹುಡುಕಿದರೆ ಗೆದ್ದಂತೆ. ಮಕ್ಕಳ ಸ್ಮರಣಶಕ್ತಿಯನ್ನು ಪರೀಕ್ಷಿಸಲಾಗುವುದು.

೨೭. ಕೋಲಾಟ (ಸಗಣಿ, ಮಣ್ಣೆನಾಟ)

ಗಂಡು ಹೆಣ್ಣು ಮಕ್ಕಳೆಲ್ಲ ಸೇರಿ ಆಡುವರು. ಮೂರು ನಾಲ್ಕು ಅಡಿ ಉದ್ದದ ಕೋಲಾದರೆ ಸಾಕು. ಚಪ್ಪಾಳೆ ಹಾಕಿ ಹಿಡಿಯುವವನನ್ನು ನೇಮಿಸುವರು. ಮೂರು ವೃತ್ತ ಬರೆದು ಮೂರು ಕಲ್ಲುಗಳನ್ನಿಡುವರು. ವೃತ್ತದ ಪಕ್ಕ ಒಂದು ಅಡ್ಡಗೆರೆಯನ್ನು ಬರೆದು ಅದರ ಮೇಲೆ ಹಿಡಿಯುವವನು ಮುಖ ತಿರುಗಿಸಿ ತನ್ನ ಕೋಲನ್ನು ಎರಡು ಕೈಗಳಿಂದ ಮೇಲೆತ್ತಿ ನಿಲ್ಲಬೇಕು. ಹಿಂದಿನಿಂದ ಯಾರಾದರೊಬ್ಬರು ಬಂದು ಆ ಕೋಲನ್ನು ಹಾರಿಸುವನು. ಆಗ ಕೋಲು ಎಲ್ಲೊ ಒಂದು ಕಡೆ ಹೋಗಿ ಬೀಳುವುದು. ಕಲ್ಲುಗಳನ್ನೆಲ್ಲ ಒಂದೆಡೆಗೆ ಕೂಡಿ ಹಾಕಿ ಹಿಡಿಯಲು ಓಡಿ ಬರುವನು.

ಆಗ ಉಳಿದವರು ಮೊದಲೇ ನಿರ್ಧರಿಸಿದಂತೆ ತಮ್ಮ ಕೋಲನ್ನು ಸಗಣಿ/ಕಲ್ಲಿನ ಮೇಲಿಟ್ಟು ನಿಲ್ಲುವರು. ಆಕಸ್ಮಿಕವಾಗಿ ನೆಲದ ಮೇಲೆ ಕೋಲಿಟ್ಟಾಗ ಕಳ್ಳ/ಕಳ್ಳಿಗೆ ಸಿಕ್ಕಿದರೆ ಔಟಾದಂತೆ. ಯಾರನ್ನು ಔಟ್ ಮಾಡದಿದ್ದರೆ ಕೋಲು ಇರುವಲ್ಲಿಂದ ಕಲ್ಲು ಇರುವಲ್ಲಿಗೆ ಒಂಟಿ ಕಾಲಿನಲ್ಲಿ ಕುಂಟಿಕೊಂಡು ಬರಬೇಕು. ಪುನಃ ಆಟ ಮೊದಲಿನಿಂದ ಆರಂಭವಾಗುತ್ತದೆ.

೨೮. ಚಂದಮಾಮನಾಟ

ಬೆಳದಿಂಗಳಿನಲ್ಲಿ ಮಕ್ಕಳೆಲ್ಲ ವಿಶಾಲವಾದ ಅಂಗಳಕ್ಕೆ ಬಂದು ಸೇರಿದಾಗ ತಿಳಿಯಾದ ಆಕಾಶದಲ್ಲಿ ಹೊಳೆಯುವ ಚಂದ್ರನನ್ನು ಕಂಡು ಸಂತೋಷದಲ್ಲಿ ಕುಣಿದು ಕುಪ್ಪಳಿಸುವ ಮಕ್ಕಳಿಗೆ ಚಂದ್ರನನ್ನು ಕಂಡರೆ ಬಲು ಪ್ರೀತಿ : ಓಡುವ ಮೋಡಗಳ ನಡುವೆ ಚಲಿಸಿದಂತೆ ಭಾಸವಾಗುವ ಚಂದ್ರನಿಗೆ ಮಕ್ಕಳು ಹಲವಾರು ಪ್ರಶ್ನೆಗಳನ್ನು ಹಾಕುವರು. ಚಂದ್ರನನ್ನು ಹಿಡಿಯುವ ತವಕ, ಮಾತಾಡುವ ಆಸೆ. ಆದರೆ ಚಂದ್ರ ಕೈಗೆ ಸಿಗಲಾರನೆಂಬ ನಿರಾಶೆ. ಆಕಾಶದಲ್ಲಿರುವ ಚಂದ್ರನಿಗೆ ಭೂಮಿ ಮೇಲೆ ನಿಂತು ಕೇಳುವ ಪ್ರಶ್ನೆಗಳಿವು. ಪ್ರಶ್ನೆ ಉತ್ತರ ಎರಡನ್ನೂ ಮಕ್ಕಳೇ ಹೇಳುವುದನ್ನು ನೋಡಬಹುದು.

ಚಂದಮಾಮ ಚಂದಮಾಮ ಎಲ್ಲಿಗೆ ಹೋಗ್ತಿಯಾ?
ಮಣ್ಣು ತರೋಕೆ.
ಮಣ್ಣೇಕೆ ?
ಕುಡಿಕೆ ಮಾಡೋಕೆ
ಕುಡಿಕೆ ಯಾತ್ಕೇ?
ದುಡ್ಡು ತುಂಬೋಕೆ
ದುಡ್ಡೇಕೆ?
ಹಸು ತರೋಕೆ
ಹಸು ಯಾತ್ಕೇ?
ಕರು ಹಾಕೋಕೆ
ಕರು ಯಾತ್ಕೆ?
ಸಗಣಿ ಹಾಕೋಕೆ
ಸಗಣಿ ಯಾತ್ಕೆ?
ಮನೆ ಸಾರಿಸೋಕೆ
ಮನೆ ಯಾತ್ಕೆ?
ಮಗನ ಮದುವೆ ಮಾಡೋಕೆ.

ಹೀಗೆ ಮಕ್ಕಳು ಆಡಿಕೊಂಡು ಕುಣಿಯುವುವು.

೨೯. ಗೌಡ ಗೌಡ ಕುಂಬಳ ಕಾಯಿ ಕೊಡು

ಈ ಆಟದಲ್ಲಿ ಮಕ್ಕಳೆಲ್ಲ ವೃತ್ತಾಕಾರವಾಗಿ ಕುಳಿತುಕೊಳ್ಳುವರು. ಮಕ್ಕಳೇ ಇಲ್ಲಿ

ಕುಂಬಳಕಾಯಿ. ಹೊಲದ ಒಡೆಯನಾದ ಗೌಡ ಕುಳಿತು ಕುಂಬಳ ಕಾಯಿಗೆ ಕಾವಲಿರುವನು. ಅಲ್ಲಿಗೆ ಒಬ್ಬ ಕುಂಬಳ ಕಾಯಿ ಕೊಳ್ಳಲು ಬರುವನು. 'ಗೌಡ ಗೌಡ ಕುಂಬಳ ಕಾಯಿಕೊಡು 'ಎಂದು ಕೇಳುವನು. ಅದಕ್ಕೆ ಪ್ರತಿಯಾಗಿ ಈಗಿನ್ನು ಬೀಜ ಹಾಕಿ ನೀರು ಹಾಕಿದ್ದೀನಿ ಒಂದು ತಿಂಗಳು ಬಿಟ್ಟು ಬಾ ಎಂದೇಳಿ ಕಳುಹಿಸುವನು. ಪುನಃ ಬಂದು 'ಗೌಡ ಗೌಡ ಕುಂಬಳ ಕಾಯಿ ಕೊಡು' ಎಂದು ಕೇಳುವನು. ಅವನು ಒಂದೊಂದು ಸಾರಿ ಬಂದು ಕೇಳಿದಾಗಲೂ ಈಚಾಗಿದೆ, ಕಾಯಾಗಿದೆ, ಇನ್ನೂ ಬಲಿತಿಲ್ಲ. ಏನಾದರೊಂದು ನೆಪ ಹೇಳಿ ಕಳುಹಿಸುವನು. ಮತ್ತೊಮ್ಮೆ ಬಂದು ಕೇಳಿದಾಗ ನಿನಗೆ ಬೇಕಾಗಿದ್ದನ್ನು ಕುಯ್ದುಕೊಂಡೋಗು ಎಂದು ಹೇಳಿದಾಗ ಎಲ್ಲವನ್ನೂ ಮುಟ್ಟಿ ಮುಟ್ಟಿ ನೋಡಿ, ಇದು ಕಾಯಾಗಿದೆ. ಹುಳುಕಾಗಿದೆ ಇತ್ಯಾದಿ ನೆಪ ಹೇಳಿ ತನಗೆ ಬೇಕಾದುದ್ದನ್ನು ಆರಿಸಿ ಕುಯ್ದುಕೊಂಡು ಹೋಗುವನು. ಹೀಗೆ ಒಂದೊಂದು ಸಾರಿ ಬಂದಾಗಲೂ ಒಂದೊಂದಂತೆ ಖಾಲಿ ಮಾಡುವನು. ಅಲ್ಲಿಗೆ ಒಂದು ಸುತ್ತಿನ ಆಟ ಮುಕ್ತಾಯವಾಗುತ್ತದೆ. ಬೇಕಾದರೆ ಪುನಃ ಆಟ ಮುಂದುವರಿಸುವರು.

ಮೇಲೆ ಕಾಣಿಸಿರುವ ಮಕ್ಕಳ ಆಟಗಳನ್ನು ಗಮನಿಸಿದಾಗ ಕೆಲವು ಮುಖ್ಯಾಂಶಗಳು ಗಮನಕ್ಕೆ ಬರುತ್ತವೆ. ಮಕ್ಕಳ ಆಟಗಳೆಲ್ಲವು ಮನೆಯಲ್ಲಿ ಹಿರಿಯರು ಮಾಡುವ ಕೆಲಸದ ಅನುಕರಣೆಯಾಗಿ ಕಂಡುಬರುತ್ತವೆ. ದಿನ ನಿತ್ಯದ ಬದುಕಿನಲ್ಲಿ ಮಾಡುವ ಕೆಲಸ, ನಡೆಯುವ ಘಟನೆಗಳೆಲ್ಲ ಮಕ್ಕಳ ಆಟಕ್ಕೆ ವಿಷಯ ವಸ್ತುಗಳಾಗಿವೆ. ಇದರಿಂದ ಮಕ್ಕಳ ಸೂಕ್ಷ್ಮ ಮನಸ್ಸು, ಗ್ರಹಣಶಕ್ತಿ, ಅನುಕರಣ ಮನೋಭಾವ ಎಲ್ಲವೂ ವ್ಯಕ್ತವಾಗಿವೆ.

ಕೆಲವೊಮ್ಮೆ ಮಕ್ಕಳ ಆಟಗಳಲ್ಲಿ ಲಿಂಗ ತಾರತಮ್ಯತೆಯನ್ನು ಕಾಣಬಹುದು. ಗೋಲಿ, ಬುಗುರಿ, ಮರಕೋತಿ, ಲಗೋರಿಯಂತಹ ಆಟಗಳಲ್ಲಿ ಗಂಡು ಮಕ್ಕಳು ಮಾತ್ರ ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಎಂಥೆಂಥ ಆಟಗಳಲ್ಲಿ ಭಾಗಿಗಳಾಗಬೇಕೆಂಬುದನ್ನು ತಂದೆ ತಾಯಿ ಅಥವಾ ಹಿರಿಯರೇ ನಿರ್ಧರಿಸಿಬಿಡುತ್ತಾರೆ. ಆಕಸ್ಮಿಕವಾಗಿ ಗಂಡು ಮಕ್ಕಳ ಆಟಗಳಲ್ಲಿ ಹೆಣ್ಣು ಮಕ್ಕಳು, ಹೆಣ್ಣು ಮಕ್ಕಳಾಡುವ ಆಟಗಳಲ್ಲಿ ಗಂಡು ಮಕ್ಕಳು ಭಾಗಿಗಳಾಗಿದ್ದದ್ದು ಕಂಡುಬಂದರೆ, ಹೆಣ್ಣು ಮಕ್ಕಳಿಗೆ 'ಗಂಡು ಬೀರಿ' ಎಂತಲೂ 'ಗಂಡು ಮಕ್ಕಳಿಗೆ' ' ಹೆಣ್ಣುಗ ' ಎಂಬ ಬಿರುದುಗಳನ್ನು ನೀಡುವರು ಹಾಗೂ ಅಂತಹವರನ್ನು ನೋಡುವ, ಉಪಚರಿಸುವ ದೃಷ್ಟಿ ಕೂಡ ಬದಲಾಗುತ್ತದೆ. ಮರಹತ್ತುವ, ಕುಣಿಯುವ, ನೆಗೆಯುವ, ಓಡಾಡುವ ಆಟಗಳೆಲ್ಲ ಗಂಡಿಗೆ; ಭಯಭಕ್ತಿ ನಯ ವಿನಯದಿಂದ ಒಂದೆಡೆ ಕುಳಿತು ಗಂಭೀರವಾಗಿ ಆಡುವ ಆಟಗಳು ಹೆಣ್ಣು ಮಕ್ಕಳಿಗೆಂದು ನಿರ್ಣಯಿಸಿಬಿಟ್ಟಿರುವರು.

ಮಕ್ಕಳಿಗೆ ಆಟಗಳ ಜೊತೆಯಲ್ಲಿಯೇ ಮುಂದೆ ಮಾಡಬೇಕಾಗಿರುವ ಕೆಲಸವನ್ನು ಸಹಾ ಪರಿಚಯಿಸುವರು. ಕೆಲವೊಂದು ಆಟಗಳಲ್ಲಿ ಹೆಣ್ಣು ಮಕ್ಕಳು ಪಾಲ್ಗೊಳ್ಳದಂತೆ ತಂದೆ ತಾಯಿಗಳೇ ನಿಷೇಧಿಸುವರು. ತಾಯಿ ಮಾಡುವ ಕೆಲಸವನ್ನು ಹೆಣ್ಣು ಮಕ್ಕಳು, ತಂದೆ ಮಾಡುವ ಕೆಲಸಗಳನ್ನು ಗಂಡು ಮಕ್ಕಳು ತಮಗರಿವಿಲ್ಲದಂತೆ ಅನುಸರಿಸಿಕೊಂಡು ಬಂದಿರುವುದರಿಂದ ಈ ರೀತಿಯ ಭಿನ್ನತೆಗಳು ಕಂಡುಬಂದಿರಬಹುದು. ಲಿಂಗಾಧಾರಿತ ಕೆಲಸಗಳ ಅನುಕರಣೆಯೇ ಇದಕ್ಕೆ ಕಾರಣವಾಗಿದೆ ಎಂದರೆ

ತಪ್ಪಾಗಲಾರದು.

ಬದುಕಿನ ಅಪಾರ ಅನುಭವದಿಂದ ಹುಟ್ಟಿಕೊಂಡಂತಹ ಈ ಆಟಗಳು ನಿಸರ್ಗಜನ್ಯವಾದವು. ಇವು ಬದುಕಿನ ಇನ್ನೊಂದು ಮುಖವನ್ನು ತೆರೆದಿಡುತ್ತವೆ. ಪ್ರಕೃತಿಯನ್ನೇ ಅವಲಂಬಿಸಿರುವ ಈ ಆಟಗಳು ನೊಂದ ಮನಸ್ಸಿಗೆ ಶಾಂತಿ, ನೆಮ್ಮದಿ ನೀಡುತ್ತವೆ. ಆಟಗಳಿಂದ ಮಕ್ಕಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯಾಗುವುದರ ಜೊತೆಗೆ ನೀತಿ, ನಿಯಮ, ಯುಕ್ತಿ, ಶಕ್ತಿ ಕಲಿಸುತ್ತದೆ. ಸೂಕ್ಷ್ಮತೆ, ಚತುರತೆ, ಚುರುಕುತನ ಹೆಚ್ಚುತ್ತದೆ. ಸ್ನೇಹ ಸಹಕಾರ ಬೆಳೆದು ದ್ವೇಷ ಅಸೂಯೆ ಸ್ವಾರ್ಥಗಳು ದೂರ ಸರಿಯುತ್ತವೆ. ಏಕಾಗ್ರತೆ, ಜವಾಬ್ದಾರಿ, ಶಿಸ್ತು ಸಂಯಮ ಬೆಳೆಯುತ್ತವೆ. ಹೇಡಿತನ, ಸೋಮಾರಿತನ ದೂರವಾಗಿ ಕ್ರಿಯಾಶೀಲತೆ ಉಂಟಾಗುತ್ತದೆ. ಬೇರೆ ಬೇರೆ ಗುಣಗಳಿರುವ ಮಕ್ಕಳೊಂದಿಗೆ ಬೆರೆಯುವುದರಿಂದ ಗುಣನಡತೆಗಳ ಪರಿಚಯವಾಗುತ್ತವೆ. ಮನಸ್ಸಿಗೆ ಸಂತೋಷ ಉಲ್ಲಾಸಗಳು ದೊರೆಯುತ್ತದೆ. ಧೈರ್ಯ, ಸಾಹಸ, ಸಹಾಯ, ಸ್ಪರ್ಧಾತ್ಮಕ ಮನೋಭಾವ ಬೆಳೆಸಿಕೊಳ್ಳಲು ಉತ್ತೇಜನ ನೀಡುತ್ತದೆ.

ಗುರಿ ಸಾಧನೆಯೇ ಆಟದ ಮುಖ್ಯ ಉದ್ದೇಶವಾಗಿರುವುದರಿಂದ, ಮುಂದಿನ ಹೋರಾಟದ ಬದುಕಿಗೆ ತಮ್ಮನ್ನು ಧೈರ್ಯವಾಗಿ ತೆರೆದುಕೊಳ್ಳಬಲ್ಲರು. ಆಟದಲ್ಲಿ ಅನುಭವಿಸುವ ಸೋಲು ಗೆಲುವುಗಳ ಅನುಭವದಿಂದಾಗಿ ನಿಜ ಬದುಕಿನಲ್ಲಿ ಏನೇ ಬಂದರೂ ಸಹಜವಾಗಿ ಸ್ವೀಕರಿಸುವ ಮನೋಭಾವ ಬೆಳೆಯುತ್ತದೆ. ಎಲ್ಲ ರೀತಿಯ ಗುಣ ಸ್ವಭಾವ ಅರಿತ ಮಕ್ಕಳು ಮುಂದೆ ಕೂಡಿ ಬಾಳುವೆ ಮಾಡಬಲ್ಲರು. ಮೇಲು ಕೀಳು ಮನೋಭಾವ ತೊರೆದು, ಕೊಡುಕೊಳ್ಳುವಿಕೆ ಮನೋಭಾವ ಬೆಳೆಸಿಕೊಳ್ಳುವರು. ಆಟಗಳಿಂದ ಅಂಗವಿಕಲತೆ, ನಿಶ್ಶಕ್ತಿ ದಪ್ಪ ಹಾಗೂ ಕುಬ್ಜತೆಗಳನ್ನು ತಪ್ಪಿಸಬಹುದು.

ಮಕ್ಕಳ ಆಟಗಳಲ್ಲಿ ಸುಳ್ಳು, ಮೋಸ ವಂಚನೆಗಳಿರುವುದಿಲ್ಲ. ದ್ವೇಷ ಅಸೂಯೆ, ಭೇದ ಭಾವಗಳಿರುವುದಿಲ್ಲ. ಮೇಲು ಕೀಳರಿಮೆ, ಕೋಪ ತಾಪಗಳಿಗೆ ಜಾಗವಿಲ್ಲ. ಆಟಗಳಿಂದ ಬದುಕಿಗೆ ಬೇಕಾದ ಆದರ್ಶ ಮೌಲ್ಯಗಳನ್ನು ಕಲಿಯಬಹುದು. ಮನಸ್ಸಿಗೆ ಮನರಂಜನೆ ಒದಗಿಸುವುದರಿಂದ ನೆಮ್ಮದಿ ಶಾಂತಿ ಲಭಿಸುತ್ತದೆ.

ಮನೆ ಕಾವಲಿಗೆಂದೋ, ಹಸುಗೂಸು ನೋಡಿಕೊಳ್ಳಲೆಂದೋ, ದವಸ ಧಾನ್ಯಗಳ ಕಾವಲಿ ಗೆಂದೋ ಮನೆಯಲ್ಲಿ ಬಿಟ್ಟು ಹೋದ ಮಕ್ಕಳೆಲ್ಲ ಒಂದೆಡೆ ಸೇರಿ ಆಟದ ಲೋಕಕ್ಕೆ ಪ್ರವೇಶಿಸಿದರೆ ಮುಗಿಯಿತು. ಅವರು ವಾಪಸ್ಸು ಬರಲೊಲ್ಲರು. ಮಗು ಹಸಿವಿನಿಂದ ಅತ್ತರೂ, ದನಕರುಗಳು ದವಸಧಾನ್ಯ ತಿಂದರೂ, ನಾಯಿ ಮನೆಗೆ ನುಗ್ಗಿ ಇದ್ದ ಮುದ್ದೆನೆಲ್ಲ ತಿಂದು ಮಡಿಕೆ ಹೊಡೆದು ಪಾತ್ರೆ ಉರುಳಿಸಿದರೂ ಪರಿವಿಲ್ಲದೆ ಆಟದಲ್ಲಿ ತಲ್ಲೀನರಾಗುತ್ತಿದ್ದರು. ಹೊರಗೆ ಹೋದ ತಂದೆ ತಾಯಿ ಮನೆಗೆ ಬಂದು ಆಗಿರುವ ಅನಾಹುತಗಳನ್ನು ನೋಡಿ ನಾಲ್ಕೇಟು ಕೊಟ್ಟಾಗಲೇ ಏನಾಗಿದೆ ಎಂಬುದರ ಅರಿವಾಗುತ್ತಿತ್ತು. ಇಷ್ಟೊಂದು ಆಳಕ್ಕೆ ಕೊಂಡೊಯ್ದು ಮಕ್ಕಳನ್ನು ಮಂತ್ರ ಮುಗ್ಧರನ್ನಾಗಿಸುತ್ತಿದ್ದ ಜನಪದ ಆಟಗಳು ಇಂದು ನಾಗರಿಕತೆಯ ಬಿರುಗಾಳಿಗೆ ತೂರಿ ಹೋಗುತ್ತಿವೆ ಎಂದರೆ ಮನಸ್ಸಿಗೆ ಖೇದವಾಗುತ್ತದೆ. ಗೋಲಿ, ಬುಗರಿ, ಚಿಣ್ಣಿದಾಂಡುಗಳೆಲ್ಲ ತಿಪ್ಪೆ ಸೇರುತ್ತಿವೆ. ಇಂದು ಸಮೂಹ

ಮಾಧ್ಯಮಗಳ ಹಾವಳಿಯಿಂದ ಈ ಆಟಗಳೆಲ್ಲ ಮರೆಯಾಗುತ್ತಿವೆ. ದೂರದರ್ಶನದಲ್ಲಿ ಭಿತ್ತರಗೊಳ್ಳುವ ಜಾಹಿರಾತುಗಳು ಮಕ್ಕಳನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಪ್ರತಿ ಹಳ್ಳಿ ಹಳ್ಳಿಗೂ ದೂರದರ್ಶನ ಪಾದಾರ್ಪಣೆಯಾಗಿರುವ ಕಾರಣ 'ಆಯ್ಕೊಂಡ್ ತಿನ್ನೋ ಕೋಳಿ ಕಾಲ್ಮುರ್ದು ಮೂಲೇಲಿ ಕೂರ್ಸಿದ್ಹಾಂಗೆ 'ಎನ್ನುವ ಗಾದೆ ಮಾತಿನಂತೆ ಸ್ವತಂತ್ರ ಪಕ್ಷಿಗಳಂತೆ ಆಡಿ ಕುಣಿಯುತ್ತಿದ್ದ ಮಕ್ಕಳಿಂದು ಮನೆಯಿಂದ ಹೊರಗೆ ಬಾರದೆ ನಿಷ್ಕ್ರಿಯರಾಗಿ ಮೂಲೆ ಹಿಡಿಯುತ್ತಿದ್ದಾರೆ.

ನಾಗರಿಕತೆಗೆ ಅನುಗುಣವಾಗಿ ಹೊಸ ಹೊಸ ಆಟಗಳು ಬಂದು ಸೇರುತ್ತಿರುವುದರಿಂದ ಖರ್ಚಿಲ್ಲದೆ ಸುಲಭವಾಗಿ ಮನಸ್ಸಿಗೆ ಶಾಂತಿ ನೆಮ್ಮದಿ ಹಾಗೂ ಮನರಂಜನೆ ನೀಡುತ್ತಿದ್ದ ಮಕ್ಕಳ ಜನಪದ ಆಟಗಳ ಬಗೆಗೆ ನಾವಿಂದು ಹೆಚ್ಚಿನ ಒಲವು ಮೂಡಿಸಿ, ಆಟಗಳನ್ನು ಆಡುವಂತೆ ಮಕ್ಕಳಿಗೆ ಪ್ರೋತ್ಸಾಹಿಸಿದರೆ ನಶಿಸಿ ಹೋಗುತ್ತಿರುವ ಈ ಆಟಗಳು ಮತ್ತೇ ಚಿಗುರೊಡೆಯಬಹುದು ಎಂಬುದರಲ್ಲಿ ಸಂದೇಹವಿಲ್ಲ.

ಪರಾಮರ್ಶನ ಗ್ರಂಥಗಳು

೧. ಡಾ. ಅಂಬಳಿಕೆ ಹಿರಿಯಣ್ಣ, ಜಾನಪದ : ಕೆಲವು ಅಧ್ಯಯನಗಳು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೪.

೨. ಎಚ್.ಜೆ. ಲಕ್ಕಪ್ಪಗೌಡ (ಸಂ). ಮಲ್ಲಿಗೆ ಮೊಗ್ಗು ಸುರಿದಾವೆ. ಚೈತ್ರಶ್ರೀ ೯೩, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ, ೧೯೯೩.

೩. ಸುಶೀಲಾ ಸೊಂಡೂರು, ಕರ್ನಾಟಕ ಗ್ರಾಮೀಣ ಮಕ್ಕಳ ಆಟಗಳು, ಜಿ.ಕೆ. ಅನಂತರಾಮ್, ೫ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು ೧೯೮೨.

೪. ಕನ್ನಡ ವಿಷಯ ವಿಶ್ವಕೋಶ, ಸಂಪುಟ ೨, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

*   *   *   *   *

ಕೆ.ಸಂ. ೭೭೫೭-ಎಂ.ಯು.ಪಿ.ಎಂ.-೩೦೦ ಪ್ರತಿಗಳು-೧೫.೭.೨೦೦೩